# ನೇಸರು
## ತಿಂಗಳೋಲೆ

₹ 5/-

Nesaru Tingalole Vol XXXV - 2 February 2017

PAGES 48



ಕನ್ನಡಿಗ, ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಾಧೀಶ
ಜಸ್ಟೀಸ್ ಬಿ.ಎನ್. ಶ್ರೀಕೃಷ್ಣ

ಮೈಸೂರು ಅಸೋಸಿಯೇಷನ್ ಮುಂಬೈ
**The Mysore Association, Bombay**
393, Bhau Daji Road, Matunga, Mumbai - 400 019.
Tel. : 2402 4647, 2403 7065, 2401 0574
Email : mysoreassociation.mumbai@gmail.com

# ಕಾರಂತರು ಬದುಕನ್ನೇ ಪ್ರಯೋಗಶಾಲೆಯನ್ನಾಗಿಸಿದವರು– ಡಾ.ಬಿ.ಎ.ವಿವೇಕ ರೈ




ಕಾರಂತರ ಮಾತುಗಳು ಯಾವತ್ತೂ ತೋರಿಕೆಯದ್ದಾಗಿರಲಿಲ್ಲ. ಅವರಾಡುವ ಪ್ರತಿ ಮಾತುಗಳೂ ಮನದಾಳದವುಗಳು. ಕಾರಂತರು ಬದುಕನ್ನೇ ಪ್ರಯೋಗಶಾಲೆಯನ್ನಾಗಿಸಿದವರು. ಅವರ ಸೂಕ್ಷ್ಮಗ್ರಹಿಕೆ ತುಂಬಾ ಚೆನ್ನಾಗಿತ್ತು. ಸಣ್ಣ ಸಣ್ಣ ವಿಷಯಗಳಲ್ಲಿ ಅವರಿಗೆ ಆಸಕ್ತಿ ಇತ್ತು. ಕಾರಂತರ ಜ್ಞಾನ, ಅನುಭವದಿಂದ, ಓದಿನಿಂದ ಒಡನಾಟದಿಂದ ಬಂದದ್ದು. ಮಕ್ಕಳ ಬೆಳವಣಿಗೆಯ ಕುರಿತು ಅವರಿಗೆ ವಿಶೇಷ ಕಾಳಜಿಯಿತ್ತು. ಇವರು ರಚಿಸಿದ 'ಬಾಲ ಪ್ರಪಂಚ, ಮತ್ತು ವಿಜ್ಞಾನ ಪ್ರಪಂಚ' ಒಂದು ವಿಶ್ವವಿದ್ಯಾಲಯ ಮಾಡಬಹುದಾದ ಕೆಲಸ. ಕಾರಂತರಲ್ಲಿ ಮಗುವಿನಂತಹ ಮುಗ್ದ ಹೃದಯವಿತ್ತು. ಅಧ್ಯಯನದಲ್ಲಿರುವ ಅವರ ನಿಷ್ಠೆ, ಅವರ ಜೀವನೋತ್ಸಾಹ ಎಲ್ಲರಿಗೂ ಮಾದರಿಯಾದುದು. ಕಾರಂತರ ಬರಹಗಳಲ್ಲಿ ದಾರ್ಶನಿಕ ವ್ಯಂಗ್ಯವಿತ್ತು. ಅದು ಇಡೀ ಜಗತ್ತನ್ನು ಯಾರು ಬಹಳ ಪ್ರೀತಿಯಿಂದ ನೋಡುತ್ತಾರೋ ಅಂತಹವರಿಗೆ ಸಾಧ್ಯವಾಗುತ್ತದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳು, ಖ್ಯಾತ ಸಾಹಿತಿ ಡಾ.ಬಿ.ಎ.ವಿವೇಕ ರೈ ಅವರು ಅಭಿಪ್ರಾಯಪಟ್ಟರು.

ಅವರು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಜೊತೆಗೂಡಿ ಮೈಸೂರು ಅಸೋಸಿಯೇಷನ್ ಆಚರಿಸುವ ಬಂಗಾರ ಹಬ್ಬ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಮಾತನಾಡುತ್ತಿದ್ದರು. ಅವರು ಮುಂದುವರಿಸುತ್ತಾ ಸಾಹಿತ್ಯ ಎಂದರೆ ಅದಕ್ಕೆ ಪೂರಕವಾದ ವಿಷಯಗಳನ್ನು ನೀಡುವುದು, ಜ್ಞಾನ ಎನ್ನುವಾಗ ವಿಜ್ಞಾನ, ಸಾಹಿತ್ಯ, ಕಲೆಗಳು ಒಂದಕ್ಕೊಂದು ಸಮನ್ವಯವಾಗಬೇಕು. ಕಲಾವಿದತನ ಎಂದರೆ ಅದು ಒಂದು ಮಿದುಳಿನಿಂದ ಗ್ರಹಿಸುವುದು, ಇನ್ನೊಂದು ಅದನ್ನು ಅನುಭವಿಸುವುದು. ತಮ್ಮ ಅನುಭವಗಳ ಮುಂದೆ ಯಾವ ಸಿದ್ಧಾಂತವೂ ಲೆಕ್ಕಕ್ಕೇ ಇಲ್ಲದ್ದು ಎಂಬುದನ್ನು ಅರಿತು ಬಾಳಿದವರು ಕಾರಂತರು. ಅವರ ಗೀತ ನಾಟಕಗಳಲ್ಲಿ ಜಾನಪದ ಶೈಲಿಯನ್ನು ಕಾಣಬಹುದು. ನಮ್ಮ ಅರಿವಿಗೆ ಎಲ್ಲೂ ಬೇರುಗಳಿರಬಾರದು ಎಂಬ ಪಾಠವನ್ನು ಕಲಿಸಿದವರು ಕಾರಂತರು. ಅವರ ಕಾದಂಬರಿಗಳಲ್ಲಿ ಕಾಲ್ಪನಿಕಕ್ಕಿಂತಲೂ ನೇರವಾಗಿ ಬದುಕಿನ ಚಿತ್ರಗಳನ್ನು ಕಾಣಬಹುದು. ತಮ್ಮ ಕೃತಿಗಳ ಮುಖಾಂತರ ಯಕ್ಷಗಾನಕ್ಕೆ ಒಂದು ಶಾಸ್ತ್ರವಿದೆ ಎಂದು ಕಾರಂತರು ತೋರಿಸಿಕೊಟ್ಟರು ಎಂದು "ಶತಮಾನದ ಹಿನ್ನೆಲೆಯಲ್ಲಿ ಶಿವರಾಮ ಕಾರಂತರು" ಎಂಬ ವಿಷಯದ ಕುರಿತು ಉಪನ್ಯಾಸವನ್ನು ನೀಡಿದ ಡಾ.ಬಿ.ಎ.ವಿವೇಕ ರೈ ಅವರು ಕಾರಂತರ ಜೀವನ ಶೈಲಿಯಿಂದ ಹಿಡಿದು ಅವರ ಬರಹ, ನಡೆನುಡಿಗಳ ಬಗ್ಗೆ ಹೃದ್ಯವಾಗಿ ಸಭಿಕರ ಮುಂದೆ ತೆರೆದಿಟ್ಟರು.

ಎರಡನೇ ದಿನ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ 'ಜರ್ಮನಿಯ ಒಳಗಿಂದ– ರಂಗಭೂಮಿ ಮತ್ತು ಸಂಸ್ಕೃತಿ' ಎಂಬ ವಿಷಯದ ಕುರಿತು ಮಾತನಾಡಿದ ಡಾ. ಬಿ.ಎ.ವಿವೇಕ ರೈ ಅವರು ಜರ್ಮನಿಯಲ್ಲಿ ಸಾಮಾನ್ಯ ಹಳ್ಳಿಯ ಹವ್ಯಾಸಿ ತಂಡಗಳೂ ಮನಮುಟ್ಟುವಂತೆ ನಾಟಕ ಅಭಿನಯಿಸುತ್ತಾರೆ. ಅಲ್ಲಿ ದೊರೆತ ಹಸ್ತಪ್ರತಿ ಮತ್ತು ವಿಭಿನ್ನವಾದ ರಂಗಭೂಮಿಯ ಮುಖಾಂತರ ಜರ್ಮನಿಯನ್ನು ಒಬ್ಬ ಪ್ರವಾಸಿಗನಾಗಿ ನೋಡುವುದಕ್ಕಿಂತ ವಿಭಿನ್ನ ದೃಷ್ಟಿಕೋನದಿಂದ ನೋಡುವುದು ಸಾಧ್ಯವಾಯಿತು. ಜರ್ಮನಿಯ ಕರಕುಶಲ ವಸ್ತುಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗುತ್ತದೆ. ಜರ್ಮನಿಯ ಮಹಿಳೆಯರು ಶ್ರಮಜೀವಿಗಳು. ಅಲ್ಲಿ ನಾವು ಮುಕ್ತವಾದ ಮತ್ತು ಪ್ರೀತಿಯ ಕುಟುಂಬ ಜೀವನವನ್ನು ಕಾಣಬಹುದು. ಅವರು ಮಾಡುವ ಪ್ರತಿಯೊಂದು ಕಾರ್ಯವನ್ನು ಪ್ರಾಮಾಣಿಕವಾಗಿ ಮತ್ತು ನಿಷ್ಠೆಯಿಂದ ಮಾಡುತ್ತಾರೆ. ಜರ್ಮನಿಯವರು ರಂಗಭೂಮಿಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾರೆ. ಪ್ರಾಚೀನ ನಾಟಕಗಳನ್ನು ಆಧುನಿಕವಾಗಿ ಬೆಳೆಸಿಕೊಳ್ಳುವ ಕ್ರಮ ಅಲ್ಲಿದೆ. ಅವರು ರಂಗಭೂಮಿಯ ಮೂಲಕ ಸ್ವವಿಮರ್ಶೆ ಮಾಡಿಕೊಂಡಿರುವುದನ್ನು ನೋಡಬಹುದು ಎಂದು ಅವರು ಅಭಿಪ್ರಾಯ ಪಟ್ಟರು.




ಪ್ರಾಸ್ತಾವಿಕವಾಗಿ ಮಾತನಾಡಿದ ಡಾ.ಜಿ.ಎನ್ ಉಪಾಧ್ಯ ಅವರು ವಿವೇಕ ರೈ ಅವರು ವಿದ್ವತ್ ಪರಂಪರೆಯನ್ನು ಸೃಷ್ಟಿಸಿದ ಹಿರಿಯ ಚೇತನ. ಇವರು ಸಾಂಸ್ಕೃತಿಕ ವಿದ್ಯಮಾನಕ್ಕೆ ಹೊಸ ಆಯಾಮವನ್ನು ತಂದವರು. ಸರಳ ಸಜ್ಜನಿಕೆಗೆ ಹೆಸರುವಾಸಿಯಾದ ಡಾ.ಬಿ.ಎ.ವಿವೇಕ ರೈ ಅವರು ರಾಷ್ಟ್ರ, ಅಂತರಾಷ್ಟ್ರದ ಮಟ್ಟದಲ್ಲಿ ತಮ್ಮ ಸಂಶೋಧನಾತ್ಮಕ ಕಾರ್ಯಗಳನ್ನು ಮಾಡಿದವರು. ಮೈಸೂರು ಅಸೋಸಿಯೇಷನ್ನಿನ ಬಂಗಾರ ಹಬ್ಬ ದತ್ತಿ ಉಪನ್ಯಾಸ ಮಾಲಿಕೆಯಲ್ಲಿ ಇದುವರೆಗೂ ಹಲವಾರು ಪ್ರತಿಷ್ಠಿತ ಸಾಹಿತಿಗಳನ್ನು ಅಹ್ವಾನಿಸಿ ಈ ದತ್ತಿ ಉಪನ್ಯಾಸಕ್ಕೆ ಚಾರಿತ್ರಿಕ ಮಹತ್ವ ಸಿಗುವಂತೆ ಮಾಡಿರುವುದು ಶ್ಲಾಘನೀಯ ಅಂಶ ಎಂದು ನುಡಿದರು. ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಡಾ.ವ್ಯಾಸರಾವ್ ನಿಂಜೂರು, ಡಾ. ಮಂಜುನಾಥ್, ಮಂಜುನಾಥಯ್ಯ, ದಯಾನಂದ ಪೂಜಾರಿ, ಶ್ಯಾಮಲಾ ಮಾಧವ್ ಮೊದಲಾದವರು ಪಾಲ್ಗೊಂಡರು. ಮೈಸೂರು ಅಸೋಸಿಯೇಷನ್ನಿನ ನೇಸರು ಮಾಸ ಪತ್ರಿಕೆಯ ಸಂಪಾದಕಿಯಾಗಿ ಆಯ್ಕೆಯಾದ ಡಾ. ಜ್ಯೋತಿ ಸತೀಶ್ ಅವರನ್ನು ಗೌರವಿಸಲಾಯಿತು. ಶ್ರೀಮತಿ ಸುಶೀಲಾ ದೇವಾಡಿಗ ಅವರ ಸ್ವಾಗತ ಗೀತೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಕನ್ನಡ ವಿಭಾಗದ ಸಂಶೋಧನ ಸಹಾಯಕರಾದ ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ಅತಿಥಿಗಳನ್ನು ಪರಿಚಯಿಸಿ ಕಾರ್ಯಕ್ರಮ ನಿರೂಪಿಸಿದರು. ಮೈಸೂರು ಅಸೋಸಿಯೇಷನ್ನಿನ ಕಾರ್ಯಕಾರಿ ಸಮಿತಿಯ ಸದಸ್ಯರಾದ ನಾರಾಯಣ ನವಿಲೇಕರ್ ಅವರು ಧನ್ಯವಾದ ಅರ್ಪಿಸಿದರು.

ವರದಿ : ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎಸ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.
*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

*ಸಂಪಾದಕೀಯ*

# ನೇಸರು
## ತಿಂಗಳೋಲೆ

**ಸಂಪುಟ 35** **ಫೆಬ್ರವರಿ 2017** **ಸಂಚಿಕೆ 1**

ಸಮುದಾಯದ ವ್ಯಕ್ತಿತ್ವ ನಿರ್ಮಾಣಕ್ಕಾಗಿ ಸಂಘ ಸಂಸ್ಥೆಗಳು ಪೂರಕ ವಾತಾವರಣ ಕಲ್ಪಿಸುತ್ತವೆ. ಇಂದು ಯುವಜನಾಂಗವು ರಾಷ್ಟ್ರದ ಶಕ್ತಿಯಾಗಿ ಪರಿವರ್ತಿತವಾಗಬೇಕಾದರೆ ಸಮಾಜದಲ್ಲಿ ಸಂಘ ಸಂಸ್ಥೆಗಳ ಪಾತ್ರ ಮಹತ್ವಪೂರ್ಣವಾದುದು. ಇಂದು ಸರಕಾರ ಮಾಡದ ಕೆಲಸಗಳನ್ನು ಸಂಘಸಂಸ್ಥೆಗಳು ಮಾಡುತ್ತಿವೆ. ಸಂಘ ಸಂಸ್ಥೆಗಳು ಆರೋಗ್ಯವಂತ ಸಮಾಜ ನಿರ್ಮಾಣಕ್ಕಾಗಿ ನಿಸ್ವಾರ್ಥ ಸೇವೆ ಮಾಡುತ್ತಿವೆ. ಸಂಘ ಸಂಸ್ಥೆಗಳು ವರ್ಗ ಸಂಘರ್ಷಕ್ಕೆ ಅವಕಾಶ ನೀಡದೆ, ಸಮಾಜದ ಏಳಿಗೆಗೆ ಶ್ರಮಿಸಿ, ರಾಷ್ಟ್ರ ಕಟ್ಟುವ ಕೆಲಸ ಮಾಡಬೇಕು. ಇದರಿಂದ ಸಂಘ ಸಂಸ್ಥೆಗಳಿಗೂ ಬೆಲೆ ಬರುತ್ತದೆ. ಆಯಾ ಸಮುದಾಯವರು ತಾವು ಕಟ್ಟಿ ಬೆಳೆಸಿದ ಸಂಘ ಸಂಸ್ಥೆಯನ್ನು ಮೇಲೆಕ್ಕೆ ತರುವುದರೊಂದಿಗೆ ಎಲ್ಲರೂ ಮೇಲೆ ಬರುವುದಲ್ಲದೆ ದೇಶಕ್ಕೂ ಕೊಡುಗೆ ನೀಡಿದಂತಾಗುತ್ತದೆ. ಸಂಘಗಳನ್ನು ಹುಟ್ಟು ಹಾಕುವುದು ಸುಲಭ. ಆದರೆ ಅದರಲ್ಲಿ ಅಧಿಕಾರಕ್ಕಾಗಿ ಕಿತ್ತಾಡಿದರೆ ಸಂಘ ಉಳಿಯೋದಿಲ್ಲ. ಒಂದು ಸಂಘವನ್ನು ಮುನ್ನಡೆಸುವಾಗ ಸಹನಶೀಲತೆ ಮುಖ್ಯವಾಗಿರಬೇಕು. ಸಂಘ ಸಂಸ್ಥೆಗಳು ಸಮಾಜದ ಏಳಿಗೆಗೆ ಶ್ರಮಿಸಬೇಕು.

ಇಂತಹ ಮಹತ್ವದ ಧ್ಯೇಯೋದ್ದೇಶದೊಂದಿಗೆ ಹುಟ್ಟಿಕೊಂಡ ಸಂಸ್ಥೆಗಳಲ್ಲಿ ಮುಂಬೈಯ ಪ್ರತಿಷ್ಠಿತ ಸಂಘ ಸಂಸ್ಥೆಗಳಲ್ಲಿ ಒಂದಾದ ಮೈಸೂರು ಅಸೋಸಿಯೇಷನ್ ಕೂಡ ಒಂದು. ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿ ಹಾಗೂ ನಾಡು ನುಡಿಯ ಕಾರ್ಯಕ್ಕೆ ಮೈಸೂರು ಅಸೋಸಿಯೇಷನ್ ಟೊಂಕ ಕಟ್ಟಿ ನಿಂತಿದೆ. ಕನ್ನಡದ ಬಗ್ಗೆ ಕಾಳಜಿ ಹಾಗೂ ಅಭಿಮಾನ ಮುಡಿಸುವ ಕಾರ್ಯದಲ್ಲಿ ತನ್ನನ್ನು ಸದಾ ನಿರತವಾಗಿಸಿಕೊಂಡಿದೆ. ನಿಸ್ವಾರ್ಥ ಕೊಡುಗೆಯಿಂದ ಉನ್ನತ ಮಟ್ಟಕ್ಕೆ ಏರಲು ಸಾಧ್ಯ ಎನ್ನುವುದಕ್ಕೆ ಮೈಸೂರು ಅಸೋಸಿಯೇಷನ್ ಮಾದರಿಯಾಗಿದೆ ಎಂದರೆ ತಪ್ಪಾಗಲಾರದು. ಮೈಸೂರು ಅಸೋಸಿಯೇಷ ಕನ್ನಡಿಗರ ಪರ ಕಾಳಜಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಸಾಮಾಜಿಕ ಸ್ವಾಸ್ಥ್ಯವನ್ನು ಉತ್ತಮಗೊಳಿಸುವಲ್ಲಿ ತನ್ನದೇ ಆದ ದೇಣಿಗೆಯನ್ನು ನೀಡುತ್ತಾ ಬಂದಿದೆ ಎಂದರೆ ಉತ್ಪ್ರೇಕ್ಷೆಯಾಗಲಾರದು.

ಮೈಸೂರು ಅಸೋಸಿಯೇಷನ್ ಕಳೆದ 90ವರ್ಷಗಳಲ್ಲಿ ರಂಗಭೂಮಿ, ಸಂಗೀತ, ಕಲೆ, ಸಾಹಿತ್ಯ ಹೀಗೆ ವಿಭಿನ್ನ ನೆಲೆಗಳಲ್ಲಿ ಅಪೂರ್ವವಾದ ಸಾಧನೆಯನ್ನು ಮಾಡುತ್ತಾ ಬಂದಿದೆ. ಹೊರನಾಡಿನಲ್ಲಿರುವ ಈ ಸಂಸ್ಥೆ ಒಂದು ರೀತಿಯಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರದ ಸಾಂಸ್ಕೃತಿಕ ಸೇತುವೆಯಾಗಿ ಕೆಲಸ ಮಾಡುತ್ತಿದೆ. ಮುಂಬೈಯ ಇತರ ಕನ್ನಡಪರ ಸಂಘಸಂಸ್ಥೆಗಳೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದೆ. ಅದೇ ರೀತಿಯಲ್ಲಿ ಕನ್ನಡದ ತೇರನ್ನು ಎಳೆಯುತ್ತಾ, ಕನ್ನಡಪರ ಕೈಂಕರ್ಯದಲ್ಲಿ ತನ್ನನ್ನು ಸದಾ ತೊಡಗಿಸಿಕೊಂಡ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದೊಂದಿಗೆ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಮೈಸೂರು ಅಸೋಸಿಯೇಷನ್ ತನ್ನ ಬಂಗಾರ ಹಬ್ಬದ ಸವಿನೆನಪಿಗಾಗಿ ಹಮ್ಮಿಕೊಂಡ ಈ ದತ್ತಿ ಉಪನ್ಯಾಸಕ್ಕೆ ಈಗ ಸುಮಾರು ಮೂವತ್ತೈದರ ಹರೆಯ. ಪ್ರತಿವರ್ಷ ತಪ್ಪದೇ ಆಚರಿಸಲಾಗುವ ಈ ದತ್ತಿ ಉಪನ್ಯಾಸಕ್ಕೆ ನಾಡಿನ ಅನೇಕ ವಿದ್ವಾಂಸರು ಬಂದು ಉಪನ್ಯಾಸ ನೀಡಿದ್ದು ಹೆಮ್ಮೆಯ ವಿಷಯ. ಶಿವರಾಮ ಕಾರಂತ, ಕೀರ್ತಿನಾಥ ಕುರ್ತುಕೋಟಿ, ಯು. ಆರ್. ಅನಂತಮೂರ್ತಿ, ಹಾಮಾನಾಯಕ್, ಚಂದ್ರಶೇಖರ್ ಕಂಬಾರ, ಎಂ.ಎಂ. ಕಲ್ಬುರ್ಗಿ, ಜಿ.ಎಸ್.ಶಿವರುದ್ರಪ್ಪ, ಚಿದಾನಂದ ಮೂರ್ತಿ, ಎಚ್. ಎಸ್. ವೆಂಕಟೇಶ್‌ಮೂರ್ತಿ, ಚೆನ್ನವೀರ ಕಣವಿ, ವಿವೇಕ ರೈ, ನಿಸಾರ್ ಅಹಮದ್, ನರಹಳ್ಳಿ ಬಾಲಸುಬ್ರಹ್ಮಣ್ಯ, ಎಚ್. ಎಸ್. ರಾಘವೇಂದ್ರ ರಾವ್, ಜಯಂತ ಕಾಯ್ಕಿಣಿ ಮೊದಲಾದ ಸಾಹಿತಿಗಳು ಈ ಉಪನ್ಯಾಸ ಮಾಲಿಕೆಯಲ್ಲಿ ತಮ್ಮ ವಿದ್ವತ್ಪೂರ್ಣ ಉಪನ್ಯಾಸವನ್ನು ನೀಡಿದ್ದಾರೆ. ಈ ವರ್ಷದ ದತ್ತಿ ಉಪನ್ಯಾಸದಲ್ಲಿ ಸುಪ್ರಿಂಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾದ ಜಸ್ಟೀಸ್ ಬಿ. ಎನ್. ಶ್ರೀಕೃಷ್ಣ ಇವರು ಉಪನ್ಯಾಸಕರಾಗಿ ಭಾಗವಹಿಸಲಿದ್ದಾರೆ. ಮೈಸೂರು ಅಸೋಸಿಯೇಷನ್ ಮತ್ತು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಜಂಟಿಯಾಗಿ ನಡೆಸಿಕೊಂಡು ಬರುತ್ತಿರುವ ಈ ದತ್ತಿಉಪನ್ಯಾಸ ಮಾಲಿಕೆಗೆ 35ವರ್ಷ ತುಂಬುತ್ತಿರುವುದರಿಂದ, ಈ ಪ್ರಯುಕ್ತ ಹಳೆಯ ಸವಿನೆನಪುಗಳನ್ನು ಮತ್ತೊಮ್ಮೆ ಸಿಂಹಾವಲೋಕನ ಮಾಡುವ ದೃಷ್ಟಿಯಿಂದ ಮೈಸೂರು ಅಸೋಸಿಯೇಷನ್ ತನ್ನ ಮುಖವಾಣಿ ನೇಸರುವಿನ ವಿಶೇಷ ಸಂಚಿಕೆಯನ್ನು ಹೊರ ತರುತ್ತಿದೆ. ಮೈಸೂರು ಅಸೋಸಿಯೇಷನ್‌ಗೆ ಎಲ್ಲ ರೀತಿಯ ಶುಭಗಳಿರಲಿ ಎಂದು ಮನಸಾ ಹಾರೈಸುತ್ತೇನೆ.

– ಡಾ. ಜ್ಯೋತಿ ಸತೀಶ್

# ಅಸೋಸಿಯೇಷನ್ ಮತ್ತು ಕನ್ನಡ ಪರಿಚಾರಿಕೆ


ಕರ್ನಾಟಕದ ರಾಜಧಾನಿ ಬೆಂಗಳೂರನ್ನು ಬಿಟ್ಟರೆ ಅತಿ ಹೆಚ್ಚು ಕನ್ನಡಿಗರಿರುವ ನಗರ ಮುಂಬೈ. ಮುಂಬೈ ಮಹಾನಗರ ಹಾಗೂ ಆಸುಪಾಸಿನಲ್ಲಿ ಇಪ್ಪತ್ತು ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಕನ್ನಡಿಗರು ನೆಲೆಸಿದ್ದಾರೆ. ಮುಂಬೈ ಕನ್ನಡಿಗರದು ಸಾಂಘಿಕ ಚಟುವಟಿಕೆಯಲ್ಲಿ ಎತ್ತಿದ ಕೈ. ಮುಂಬೈಯಲ್ಲಿ ಇಂದಿಗೂ ನೂರಾರು ಕನ್ನಡ ಸಂಘ ಸಂಸ್ಥೆಗಳು ಕ್ರಿಯಾಶೀಲವಾಗಿದ್ದು ಈ ವಾಣಿಜ್ಯ ನಗರಿಯಲ್ಲಿ ಕನ್ನಡದ ತೇರನೆಳೆಯುವ ಕಾಯಕದಲ್ಲಿ ನಿರತವಾಗಿವೆ.

ಮುಂಬೈನ ಪ್ರತಿಷ್ಠಿತ ಕನ್ನಡ ಸಂಘ ಸಂಸ್ಥೆಗಳಲ್ಲಿ ಮೈಸೂರು ಅಸೋಸಿಯೇಷನ್ ಮುಂಚೂಣಿಯಲ್ಲಿದೆ. ಈ ಸಂಸ್ಥೆಗೆ ಈಗ 90ರ ಸಂಭ್ರಮ. ಮೈಸೂರು ಅಸೋಸಿಯೇಷನ್ ಕಳೆದ ಒಂಭತ್ತು ದಶಕಗಳಲ್ಲಿ ಅಪೂರ್ವ ಸಾಧನೆಗೈದಿದೆ. ಮಾತುಂಗಾದ ಹೃದಯಭಾಗದಲ್ಲಿ ತನ್ನದೇ ಆದ ಸ್ವಂತ ಸುಸಜ್ಜಿತ ನಿವೇಶನ್, ಕಟ್ಟಡ, ವಾತಾನುಕೂಲಿತ ಅಡಿಟೋರಿಯಂ (300 ಆಸನಗಳಿರುವ ಅಪರೂಪದ ರಂಗಭೂಮಿ), ವಾಚನಾಲಯ, ಕ್ಯಾಂಟೀನ್ ಎರಡು ಸೊಗಸಾದ ಕಿರು ಸಭಾಗೃಹಗಳು ಹೀಗೆ ಒಂದು ಸುಂದರ ಸುಸಜ್ಜಿತ ಭವ್ಯ ಸಂಸ್ಥೆ ಮೈಸೂರು ಅಸೋಸಿಯೇಷನ್ ಎಂದರೆ ತಪ್ಪಾಗದು. ಮುಂಬೈ ಕನ್ನಡಿಗರ ಅಸ್ಮಿತೆಯ ಸಾಕ್ಷೀಪ್ರಜ್ಞೆ ಮೈಸೂರು ಅಸೋಸಿಯೇಷನ್. ಅದು ಕಳೆದ 90 ವರ್ಷಗಳಿಂದ ಕನ್ನಡ ನಾಡು, ನುಡಿ ಸಾಹಿತ್ಯ ಸಂಸ್ಕೃತಿಯ ಬಲವರ್ಧನೆಗೆ ಶ್ರಮಿಸುತ್ತಾ ಬಂದಿದೆ. ವಡಾಲದಲ್ಲಿರುವ ಎನ್‌ಎಕ್‌ಇಎಸ್ ಸಂಸ್ಥೆಯ ಅಭಿವೃದ್ಧಿಯಲ್ಲೂ ಅಸೋಸಿಯೇಷನ್ ಮಹತ್ವದ ಜವಾಬ್ದಾರಿಯನ್ನು ಹೊಂದಿದೆ.

**ರಂಗಚಟುವಟಿಕೆ:–**

ಮೈಸೂರು ಅಸೋಸಿಯೇಷನ್ ಸುರುವಾತಿನಲ್ಲಿ ರಂಗಭೂಮಿ ಚಟುವಟಿಕೆಗೆ ಆದ್ಯತೆ ನೀಡಿದ್ದು ಗೊತ್ತಾಗುತ್ತದೆ. 1927–28ರ ಸಾಲಿನಲ್ಲಿ ಅದು ನಾಟಕವನ್ನು ಸಾದರ ಪಡಿಸಿದ ಸಂಗತಿ ದಾಖಲಾಗಿದೆ. ಮೈಸೂರು ಅಸೋಸಿಯೇಷನ್‌ನ ಇತಿಹಾಸದ ಕುರಿತು, ಅದರ ಸಾಧನೆಯ ಬಗೆಗೆ ಹಿರಿಯ ಸಂಶೋಧಕರಾದ ಡಾ.ಲೀಲಾ ಅವರು ಮಹತ್ವ ಶೋಧ ಲೇಖನವನ್ನೇ ಬರೆದಿದ್ದಾರೆ. ಅಸೋಸಿಯೇಷನ್ ಅಸ್ತಿತ್ವಕ್ಕೆ ಬಂದ ಬಗೆಯನ್ನು ಅವರು ಹೀಗೆ ದಾಖಲಿಸಿದ್ದಾರೆ.

"ಮೈಸೂರು ಅಸೋಸಿಯೇಷನ್ ಉದಯವಾದದ್ದು(1925) ಮುಂಬಯಿನ ಗಿರಿಗಾಮ್‌ನ ಒಂದು ಚಿಕ್ಕ ಕೊಠಡಿಯಲ್ಲಿ ಒಂದು ಭಾನುವಾರ ಸಂಜೆ ಐದು ಜನ ವೃತ್ತಿನಿರತರು ಮೈಸೂರಿನವರು; ಕೃಷ್ಣಪ್ಪ, ಹೆಚ್.ಐಯಂಗಾರ್, ಚಿದಂಬರರಾವ್, ಎಂ.ಎಸ್.ನಾರಾಯಣ ರಾವ್ ಮತ್ತು ಬಿ.ಎನ್.ಐಯಂಗಾರ್ ಮುಂಬೈ ಗಿರಿಗಾಂವ್‌ನಲ್ಲಿ ಸೇರಿ ಪ್ರತಿ ಭಾನುವಾರ ತಾವು ಕೂಡಬೇಕೆಂದೂ, ಇದರಿಂದ ಮನಸ್ಸು ವಿಕಾಸ ಹೊಂದುವುದೆಂದೂ ಮತ್ತು ಇದು ಒಂದು ಸಾರ್ವಜನಿಕ ವೇದಿಕೆಗೆ ಅಸ್ತಿಭಾರವೆಂದೂ ಪ್ರಾರಂಭಿಸಿದರು. ಆದರೆ ಕಾಲಕ್ರಮೇಣ ಸದಸ್ಯರ ಸಂಖ್ಯೆ ಸಾಕಷ್ಟು ಹೆಚ್ಚಿ ಗಿರಿಗಾಮ್‌ನಲ್ಲಿ ಜಾಗ ಸಾಕಾಗದೆ ಮಾತುಂಗಾದಲ್ಲಿರುವ ನೆಪ್ಪು ಗಾರ್ಡನ್ ಬಳಿ ಇರುವ ವಲಜಿಬಾಯಿ ಹಾಲಿನಲ್ಲಿ ಬಾಡಿಗೆಗೆ ತೆಗೆದುಕೊಂಡು ತಮ್ಮ ಚಟುವಟಿಕೆಯನ್ನು ಮುಂದುವರಿಸಿದರು. ಇದಕ್ಕೆಲ್ಲಾ ಒಬ್ಬ ಮುಖ್ಯಸ್ಥ ಮತ್ತು ಜವಾಬ್ದಾರಿ ಹೊರುವ ವ್ಯಕ್ತಿ ಬೇಕೆಂದು ಮನಗಂಡು ಆಗ ಮುಂಬೈನಲ್ಲಿ ಹೆಸರುಮಾಡಿದ್ದ ದಿವಾನ್ ಬಹದ್ದೂರ್ ಕೆ.ರಾಮಸ್ವಾಮಿಯವರು ತಮ್ಮ ಒಪ್ಪಿಗೆಯನ್ನು ತಕ್ಷಣ ಕೊಟ್ಟರು. ಮೈಸೂರು ಅಸೋಸಿಯೇಷನ್ ಉದಯವಾದದ್ದು(ಈಜಭ 26, 1926) ವಿದ್ಯುಕ್ತವಾಗಿ ಪ್ರೊ.ಎನ್.ಎಸ್.ಸುಬ್ಬರಾಯರಿಂದ (ಆಗ ಎನ್.ಎಸ್.ಸುಬ್ಬರಾಯರು ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಚಾನ್ಸಿಲರ್ ಆಗಿದ್ದರು.) ಎಚಿಟಿ 9, 1927 ಆರಂಭಿಸಲ್ಪಟ್ಟಿತು. 1960 ಸೊಸೈಟಿ ರಿಜಿಸ್ಟ್ರೇಷನ್ ಆಯಿತು. ಕ.ರಾಮಸ್ವಾಮಿಗಳು ಪ್ರೆಸಿಡೆಂಟರಾಗಿಯೂ, ಚಂದ್ರಶೇಖರ ಶರ್ಮ ಮೊದಲನೆ ಸೆಕ್ರೆಟರಿಯಾಗಿ ಕಾರ್ಯಸ್ತರಾದರು".



ಡಾ. ಜಿ. ಎನ್. ಉಪಾಧ್ಯ
ಮುಖ್ಯಸ್ಥರು
ಕನ್ನಡ ವಿಭಾಗ,ಮುಂಬೈ ವಿಶ್ವವಿದ್ಯಾಲಯ

ಮೈಸೂರು ಅಸೋಸಿಯೇಶನ್ ಇಂದು ರಂಗಭೂಮಿ ಸಂಗೀತ, ಕಲೆ, ಸಾಹಿತ್ಯ ಸಂಸ್ಕೃತಿ ಹೀಗೆ ವಿಭಿನ್ನ ನೆಲೆಗಳಲ್ಲಿ ಕರ್ನಾಟಕ ಮಹಾರಾಷ್ಟ್ರಗಳ ನಡುವಿನ ಸಾಂಸ್ಕೃತಿಕ ರಾಯಭಾರಿ ಯಾಗಿ ಕೆಲಸ ಮಾಡುತ್ತಿದೆ. ಅಸೋಸಿಯೇಷನ್‌ನ ಸಾಧನೆಯನ್ನು ಗುರುತಿಸಿ ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದ್ದು ಈಗ ಇತಿಹಾಸ.

ಮೈಸೂರು ಅಸೋಸಿಯೇಷನ್ ನಲ್ಲಿ ಒಳ್ಳೆಯ ಗ್ರಂಥಾಲಯವಿದ್ದು ಮೌಲಿಕ ಪುಸ್ತಕಗಳ ಸಂಗ್ರಹವಿದೆ. ಅಸೋಸಿಯೇಷನ್ ಕಳೆದ ಮೂರು ದಶಕಗಳಿಂದ ತನ್ನದೇ ಆದ ಮುಖವಾಣಿ 'ನೇಸರು' ಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿರುವುದು ಉಲ್ಲೇಖನೀಯ ಅಂಶ. ಅಸೋಸಿಯೇಶನ್ ಅನೇಕ ರಾಷ್ಟ್ರಮಟ್ಟದ ನಾಟಕೋತ್ಸವಗಳನ್ನು ಆಯೋಜಿಸಿದ್ದು ಸ್ಮರಣೀಯ ಅಂಶ. ಮಾಸ್ತಿ ಸಾಹಿತ್ಯ ಉತ್ಸವ, ತೇಜಸ್ವಿ ಸಾಹಿತ್ಯ ಉತ್ಸವ, ಡಿವಿಜಿ ಸಂಸ್ಮರಣೆ ಶ್ರೀರಂಗ ಸಂಸ್ಮರಣೆ ಮೊದಲಾದ ಮಹತ್ವದ ವಿಚಾರ ಸಂಕಿರಣಗಳನ್ನು ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಸಹಯೋಗದಲ್ಲಿ ನಡೆಸಿದೆ ಎಂಬುದು ಅಭಿಮಾನದ ಸಂಗತಿ. ಕರ್ನಾಟಕ ಸರಕಾರದ ಕನ್ನಡ ಪುಸ್ತಕ ಪ್ರಾಧಿಕಾರ ತನ್ನ ಮಳಿಗೆಯನ್ನು ಮುಂಬೈಯಲ್ಲಿ ತೆರೆಯಲು ಮೈಸೂರು ಅಸೋಸಿಯೇಶನ್ ಸಹಕಾರ ಕೇಳಿದ್ದು ಹೆಮ್ಮೆಯ ವಿಷಯ.

**ದತ್ತಿ ಉಪನ್ಯಾಸ ಮಾಲಿಕೆ:–**

ಮೈಸೂರು ಅಸೋಸಿಯೇಶನ್ ಕಳೆದ ಮೂರುವರೆ ದಶಕಗಳಿಂದ ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಜೊತೆಗೂಡಿ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸುತ್ತಾ ಬಂದಿದೆ. ಅಸೋಸಿಯೇಷನ್ ತನ್ನ ಬಂಗಾರ ಹಬ್ಬದ ನೆನಪಿಗೆ ಮುಂಬೈ ವಿಶ್ವವಿದ್ಯಾಲಯದಲ್ಲಿ ದೊಡ್ಡ ಮೊತ್ತದ ದತ್ತಿ ನಿಧಿಯೊಂದನ್ನು ಸ್ಥಾಪಿಸಿದ್ದು ಇದರ ಬಡ್ಡಿ ಹಣದಲ್ಲಿ ಪ್ರತಿವರ್ಷ ತಪ್ಪದೆ ಜಂಟಿಯಾಗಿ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಉಪನ್ಯಾಸ ಮಾಲಿಕೆ ಈಗ ಮುಂಬೈಯಲ್ಲಿ ಮನೆಮಾತಾಗಿದೆ. ಈ ಮಾಲಿಕೆಯಲ್ಲಿ ಶಿವರಾಮ ಕಾರಂತ, ಕೀರ್ತಿನಾಥ ಕುರ್ತುಕೋಟಿ, ಯು.ಆರ್.ಅನಂತಮೂರ್ತಿ, ಹಾಮಾನಾಯಕ್, ಚಂದ್ರಶೇಖರ ಕಂಬಾರ, ಎಂ.ಎಂ.ಕಲಬುರ್ಗಿ, ಜಿ.ಎಸ್.ಶಿವರುದ್ರಪ್ಪ, ಚಿದಾನಂದ ಮೂರ್ತಿ, ಎಚ್.ಎಸ್.ವೆಂಕಟೇಶಮೂರ್ತಿ, ಚನ್ನವೀರಕಣವಿ, ವಿವೇಕ ರೈ, ನಿಸಾರ್ ಅಹಮದ್, ನರಹಳ್ಳಿ, ಕಾಯ್ಕಿಣಿ ಮೊದಲಾದ ಸಾಹಿತಿಗಳು ಸಾಧಕರು ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡಿದ್ದಾರೆ.

ಈ ಮಾಲಿಕೆಯಲ್ಲಿ ಉಪನ್ಯಾಸ ನೀಡಿದ ಅನೇಕ ವಿದ್ವಾಂಸರು ತಮ್ಮ ವಿಚಾರಧಾರೆಯನ್ನು ಲೇಖನರೂಪದಲ್ಲಿ ತಂದಿರುವುದು ಗಮನೀಯ ಅಂಶ. ಮೈಸೂರು ಅಸೋಸಿಯೇಷನ್ ಕ್ರಿಯಾಶೀಲತೆಗೆ, ಅಧ್ಭುತ ಸಾಧನೆಗೆ ಅನೇಕರು ಶ್ರಮಿಸಿದ್ದಾರೆ. ಅವರ ಸಾಧನೆ ಸಾರ್ಥಕವಾಗಿದೆ. ಕಳೆದ ಮೂರು ದಶಕಗಳಿಂದ ಈ ಸಂಸ್ಥೆಯ ಏಳಿಗೆಗೆ ಶ್ರಮಿಸುತ್ತಿರುವ ಡಾ. ಮಂಜುನಾಥ್, ಮಂಜುನಾಥಯ್ಯ ಅವರ ಸಾಧನೆ ಎಲ್ಲರಿಗೂ ಅನುಕರಣೀಯ ಅಂಶ. ಮೈಸೂರು ಅಸೋಸಿಯೇಷನ್ ಶತಮಾನೋತ್ಸವದತ್ತ ದಾಪುಗಾಲು ಹಾಕುತ್ತಿದೆ. ಅಸೋಸಿಯೇಷನ್ ಇನ್ನಷ್ಟು ಸಾಧನೆ ಮಾಡುವಂತಾಗಲಿ ಎಂದು ಮನಸಾ ಹಾರೈಸುವೆ.

# ನಿವೃತ್ತ ನ್ಯಾಯಮೂರ್ತಿ ಬಿ. ಎನ್. ಶ್ರೀಕೃಷ್ಣ ಅವರೊಂದಿಗೆ ಸಂದರ್ಶನ

ನ್ಯಾಯಮೂರ್ತಿ ಬಿ.ಎನ್.ಶ್ರೀ ಕೃಷ್ಣ ಅವರು 1992/93ರಲ್ಲಿ ನಡೆದ ಮುಂಬಯಿ ದಂಗೆಯ ಬಗ್ಗೆ ಕೊಟ್ಟ – ಶ್ರೀ ಕೃಷ್ಣ ವಿಚಾರಣಾ ಆಯೋಗ ವರದಿಗಾಗಿ ಮುಂಬಯಿ ಮಾತ್ರವಲ್ಲ ದೇಶ ವಿದೇಶಗಳಲ್ಲಿ ಪ್ರಸಿದ್ಧರಾದವರು. ವಿಚಾರಣಾ ಆಯೋಗಗಳ ವರದಿ ಹೀಗಿರಬೇಕು– ಎನ್ನುವ ಮಾದರಿಯನ್ನು ಈ ವರದಿ ತೋರಿಸಿಕೊಟ್ಟಿತು. ಶ್ರೀಕೃಷ್ಣ ಅವರು ಹಲವಾರು ಪ್ರಾಮುಖ್ಯ ಆಯೋಗಗಳ ಅಧ್ಯಕ್ಷರಾಗಿ ದೇಶದ ಸೇವೆ ಸಲ್ಲಿಸಿದ್ದಾರೆ.

ಜನವರಿ 27 ಮತ್ತು 28 ,2017ರಂದು ಮೈಸೂರು ಅಸೋಸಿಯೇಶನ್ನಲ್ಲಿ ನ್ಯಾಯಮೂರ್ತಿ ಶ್ರೀಕೃಷ್ಣ ಅವರಿಂದ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ . ಈ ಸಂದರ್ಭದಲ್ಲಿ ಜಸ್ಟಿಸ್ ಶ್ರೀಕೃಷ್ಣ ಅವರೊಂದಿಗೆ ವೈ. ವಿ. ಮಧುಸೂದನ ರಾವ್ ಮತ್ತು ಕೆ.ಎಸ್ ರಾವ್ ಅವರು ಮಾಡಿದ ಸಂದರ್ಶನ:

**ವೈ.ವಿ :** ತಮ್ಮ ಬಗ್ಗೆ ಅಂತರ್ಜಾಲದಲ್ಲಿ, ವಿಕಿಪೀಡಿಯದಲ್ಲಿ ಮಾಹಿತಿಗಳು ಸಾಕಷ್ಟು ದೊರೆಯುತ್ತವೆ. ಆದರೆ ನಿಮ್ಮ ಸ್ವಂತದ ಅಭಿಪ್ರಾಯಗಳು, ನಂಬಿಕೆಗಳು, ಮೌಲ್ಯಗಳ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನವನ್ನು ಈ ಸಂದರ್ಶನದ ಮೂಲಕ ತಿಳಿಯುವುದಕ್ಕಾಗಿ ಕೆಲವು ಪ್ರಶ್ನೆಗಳನ್ನು ನಿಮ್ಮ ಮುಂದಿಡುತ್ತೇವೆ. ನಿಮ್ಮ ಹುಟ್ಟು ಬೆಂಗಳೂರಲ್ಲಿ ಆಯಿತು. ಆರಂಭದ ವಿದ್ಯಾಭ್ಯಾಸವೂ ಅಲ್ಲೇ ಆಯಿತಾ ಸರ್?

**ಶ್ರೀಕೃಷ್ಣ:** ಹುಟ್ಟಿದ್ದು ಬೆಂಗಳೂರಲ್ಲೆ. ಮೂರು ತಿಂಗಳ ಕೂಸಿದ್ದಾಗಲೇ ಮುಂಬಯಿಗೆ ಕರೆತಂದರು. ನಮ್ಮ ತಂದೆಯವರು ಇಲ್ಲಿಯೇ ಮುಂಬಯಿ ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿದ್ದರು.

**ವೈ.ವಿ.:** ಮುಂಬಯಿಯಲ್ಲಿದ್ದು ತಮಗೆ ಕನ್ನಡದ ನಿಕಟ ಸಂಪರ್ಕ ಹೇಗಾಯಿತು?

**ಶ್ರೀಕೃಷ್ಣ:** ಹೊರನಾಡ ಕನ್ನಡಿಗರಿಗೆ ತಮ್ಮ ಭಾಷೆ, ಸಂಸ್ಕೃತಿಯ ಪರಿಚಯ ಇರಬೇಕು ಎಂದು ಶ್ರೀ ಅರ್.ವಿ.ಮೂರ್ತಿ ಅವರು ವಡಾಲಾದಲ್ಲಿ ಎನ್.ಕೆ.ಇ.ಎಸ್. ವಿದ್ಯಾ ಸಂಸ್ಥೆಯನ್ನು ಪ್ರಾರಂಭಿಸಿದರು. ಆಗ, ನನ್ನ ಮಕ್ಕಳನ್ನೇ ಮೊದಲು ಕಳಿಸುತ್ತೇನೆ ಎಂದು ತಂದೆಯವರು ನನ್ನನ್ನು, ತಮ್ಮಂದಿರನ್ನು ಇದೇ ಶಾಲೆಗೆ ಸೇರಿಸಿದರು. ಅಣ್ಣಂದಿರನ್ನು ಮಾತ್ರ ಎಸ್.ಐ.ಇ.ಎಸ್ ಗೆ ಕಳಿಸಿದ್ದರು. ಆಗ ಕನ್ನಡ ಶಾಲೆ ಇರಲಿಲ್ಲ.

**ವೈ.ವಿ :** ತಮ್ಮ ಮುಂದಿನ ವಿದ್ಯಾಭ್ಯಾಸ ಎಲ್ಲಿ ನಡೆಯಿತು?

**ಶ್ರೀಕೃಷ್ಣ:** ಎನ್.ಕೆ.ಇ.ಎಸ್ ನಲ್ಲಿ 11ನೆ ತರಗತಿವರೆಗಿತ್ತು. ಆಮೇಲೆ ಎಲಿಫೆನ್‌ಸ್ಟಿನ್ ಕಾಲೇಜಿನಲ್ಲಿ ಬಿ.ಎಸ್ಸಿ ವರೆಗೆ ಓದಿದೆ. ಮುಂದೆ ಸರಕಾರಿ ಲಾ ಕಾಲೇಜಿನಲ್ಲಿ ಎಲ್.ಎಲ್.ಬಿ. ಮಾಡಿದೆ. ವಕೀಲ ವೃತ್ತಿಯಲ್ಲಿದ್ದಾಗಲೇ ಎಲ್.ಎಲ್.ಎಮ್. ಮಾಡಿದೆ. ಆಗ ಇದಕ್ಕೆ ಅನುಕೂಲತೆ ಇತ್ತು. ಈಗ ಏನೇನೋ ಮಾಡಿದ್ದಾರೆ.

**ವೈ.ವಿ:** ಈ ಮಧ್ಯೆ ನೀವು ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಮೈಸೂರು ವಿಶ್ವ ವಿದ್ಯಾಲಯದಿಂದ ಪಡೆದಿರಿ. ಅದು ಹೇಗೆ ಸಾಧ್ಯವಾಯಿತು?

**ಶ್ರೀಕೃಷ್ಣ:** ನನಗೆ ಭಾಷೆಗಳನ್ನು ಕಲಿಯುವುದೆಂದರೆ ತುಂಬಾ ಆಸಕ್ತಿ. ನನ್ನ ಮನೆಯಾಕೆ ಸಾಹಿತ್ಯದಲ್ಲಿ ಎಮ್.ಎ. ಮಾಡುವುದಕ್ಕೆ ಮೈಸೂರು ವಿಶ್ವವಿದ್ಯಾಲಯದ distance learning ನ ಕೈಪಿಡಿಯನ್ನು ತರಿಸಿದಾಗ ನಾನೂ ಯಾಕೆ ಸಂಸ್ಕೃತದಲ್ಲಿ ಎಮ್. ಎ. ಮಾಡಬಾರದು ಎಂದು ಯೋಚಿಸಿದೆ. ಆಗ ಮಾವುಲಿ ಗೋಪಾಲಾಚಾರ್ಯರು ಮಾಟುಂಗಾದಲ್ಲೇ ಇರುತ್ತಿದ್ದರು. ಅವರಿಂದ ಪಾಠ ಹೇಳಿಸಿಕೊಂಡೆ. ಮೈಸೂರಿಗೆ ಹೋಗಿ ಪರೀಕ್ಷೆಗಳನ್ನು ಬರೆದೆ. ನನ್ನ ಪತ್ನಿ ಸಾಹಿತ್ಯದಲ್ಲಿ ನಾನು ಸಂಸ್ಕೃತದಲ್ಲಿ ಎಮ್.ಎ ಮಾಡಿದೆವು.

**ವೈ.ವಿ.:** ಸಂಸ್ಕೃತದಲ್ಲಿ ಆ ಮೇಲೂ ವೇದ, ಶಾಸ್ತ್ರ, ಪುರಾಣಗಳ ಅಭ್ಯಾಸ ಮುಂದುವರಿಸಿದಿರಾ?

**ಶ್ರೀಕೃಷ್ಣ:** ಆಸಕ್ತಿ ಇತ್ತು. ಸಮಯ ಸಿಗಲಿಲ್ಲ. ಈಗಲೂ ಮುಂದೆ ಓದಬೇಕೆಂದಿದ್ದೇನೆ. ನಮ್ಮ ತಾತ ಮುತ್ತಾತರೆಲ್ಲ ಸಂಸ್ಕೃತ ವಿದ್ವಾಂಸರು. ಮನೆಯಲ್ಲಿ ಅದೇ ಪರಿಸರ ಇತ್ತು.

**ವೈ.ವಿ. :** ಉರ್ದು ಭಾಷೆಯಲ್ಲೂ ನೀವು ಡಿಪ್ಲೊಮಾ ಮಾಡಿದ್ದೀರಲ್ಲ?

**ಶ್ರೀಕೃಷ್ಣ:** ನಾನು ಆಯೋಗದ ಕೆಲಸ ಮಾಡುವಾಗ ಅನೇಕ ಉರ್ದು ಕಾಗದ ಪತ್ರಗಳನ್ನು ಅಭ್ಯಾಸ ಮಾಡಬೇಕಾಯಿತು. ಆ ಭಾಷೆಯ ಲಿಪಿ ಕಷ್ಟ. ಬಲದಿಂದ ಎಡಕ್ಕೆ ಬರೆಯಬೇಕು, ಓದಬೇಕು. ಮುಂಬಯಿಯ ಮುಖ್ಯ ಖಾಜಿಯವರು ಉರ್ದು ಭಾಷೆಯ ತರಗತಿಯನ್ನು ಸೈಂಟ್ ಕ್ಸೇವಿಯಸ್ ಕಾಲೇಜಿನಲ್ಲಿ ನಡೆಸುತ್ತಿದ್ದರು . ನನ್ನನ್ನೂ ಸೇರಿಕೋ ಅಂದರು. ಮೂರು ವರ್ಷ ತರಗತಿಗೆ ಹೋದೆ, ಐದು ಪರೀಕ್ಷೆಗಳನ್ನು ಬರೆದೆ. ಡಿಪ್ಲೊಮಾ ಕೊಟ್ಟರು. ಇದರಿಂದ ಬರಿಯೋದು ಓದೋದು ಸುಲಭವಾಯಿತು.

**ವೈ.ವಿ. :** ಮುಂದೆ ಕೊರಾನ್, ಶರಿಯಾಗಳ ಅಭ್ಯಾಸ ಮಾಡಿದ್ದೀರಾ?

**ಶ್ರೀಕೃಷ್ಣ:** ಅರೇಬಿಕ್ ಕಲಿತು ಕೊರಾನ್ ಅಭ್ಯಾಸ ಮಾಡಬೇಕು ಎನ್ನುವ ಇಚ್ಛೆ ಇತ್ತು .ಆಸಕ್ತಿ ಇದೆ, ಸಮಯ ಸಿಕ್ತಾ ಇಲ್ಲ.

**ವೈ.ವಿ:** ತಮಗೆ ಹತ್ತು ಭಾಷೆಗಳಲ್ಲಿ ಪ್ರಭುತ್ವ ಇದೆ , ಯಾವೆಲ್ಲ ಭಾಷೆಗಳು. ಅದು ಹೇಗೆ ಸಾಧ್ಯವಾಯಿತು?

**ಶ್ರೀಕೃಷ್ಣ:** ಆಸಕ್ತಿ ಇದ್ದದ್ದರಿಂದ ಕಲಿತೆ. ಕನ್ನಡ ,ತಮಿಳು, ಮಲೆಯಾಳಂ,ತೆಲುಗು, ಹಿಂದಿ, ಮರಾಠಿ, ಸಂಸ್ಕೃತ, ಇಂಗ್ಲಿಷ್ ,ಉರ್ದು,ಆಯಿತಲ್ಲ ಒಂಭತ್ತು. ಬೆಂಗಾಲಿಯನ್ನೂ ಕಲಿತಿದ್ದೇನೆ. 1962ರಲ್ಲಿ youth exchange ಕಾರ್ಯಕ್ರಮದಲ್ಲಿ ರಶ್ಯಾಕ್ಕೆ ಹೋಗಿದ್ದೆ. ಆ ಭಾಷೆ ಬರುತ್ತಿರಲಿಲ್ಲ. ಆ ಮೇಲೆ Indo Soviet Cultural Society ಅವರು ನಡೆಸುತ್ತಿದ್ದ ರಶ್ಯನ್ ಭಾಷೆಯ ತರಗತಿಗೆ ಹೋದೆ. ಐದು ಪರೀಕ್ಷೆಗಳಲ್ಲೂ ಪ್ರಥಮ ಸ್ಥಾನದಲ್ಲಿ ತೇರ್ಗಡೆಹೊಂದಿದೆ. ಸ್ಕಾಲರ್ಶಿಪ್ ಕೊಡುತ್ತೇವೆ , ಬಾ ಅಂತ ಕರೆದರು . ಬೇಕಿಲ್ಲಾಂತ ಬಿಟ್ಟುಬಿಟ್ಟೆ.

**ವೈ.ವಿ. :** ನಿಮ್ಮ ವೃತ್ತಿ ಜೀವನದ ಪ್ರಾರಂಭ ಮತ್ತು ಬೆಳವಣಿಗೆಯ ಬಗ್ಗ್ಗೆ ಸ್ವಲ್ಪ ಹೇಳ್ತೀರಾ?

**ಶ್ರೀಕೃಷ್ಣ:** 1962ರಲ್ಲಿ ಲೇಬರ್ ಕೋರ್ಟಿನಲ್ಲಿ ನನ್ನ ವಕೀಲ ವೃತ್ತಿಯನ್ನು ಆರಂಭಿಸಿದೆ.ನಮ್ಮ ತಂದೆಯವರು ಲೇಬರ್ ಮತ್ತು ಇಂಡಸ್ಟ್ರಿಯಲ್ ವಕೀಲರು. ಆ ಮೇಲೆ ಮುಂಬಯಿ ಉಚ್ಚ ನ್ಯಾಯಾಲಯದ ವಕೀಲನಾದೆ.1880ರಲ್ಲಿ ಮುಂಬಯಿ ಉಚ್ಚನ್ಯಾಯಾಲಯದ ನ್ಯಾಯಾಧೀಶನಾಗಿ ನಿಯುಕ್ತನಾದೆ. 2001ರಲ್ಲಿ ಕೇರಳ ಉಚ್ಚನ್ಯಾಯಾಲಯದ ಮುಖ್ಯನ್ಯಾಯಾಧೀಶನಾದೆ, 2002ರಲ್ಲಿ ಸರ್ವೋಚ್ಚನ್ಯಾಯಾಲಯದ ನ್ಯಾಯಾಧೀಶನಾಗಿ 2006ರಲ್ಲಿ ನಿವೃತ್ತಿ ಹೊಂದಿದೆ.

**ವೈ.ವಿ:** ನಿಮ್ಮ ವೃತ್ತಿ ಜೀವನದಲ್ಲಿ ನಿಮಗೆ ತೃಪ್ತಿಕೊಟ್ಟ ದಾವೆಗಳು, ತೀರ್ಪುಗಳು ಯಾವುವು?ಹಲವಾರು ಇರಬಹುದು್, ಒಂದೋ ಎರಡೋ ಹೇಳಬಹುದೇ?

**✍ ಮಧುಸೂದನ್ ರಾವ್ ಮತ್ತು ಕೆ. ಎಸ್. ರಾವ್**

**ಶ್ರೀಕೃಷ್ಣ:** ನಾನು ವಕೀಲನಾಗಿದ್ದಾಗ, ಒಂದು ದಿನ ಸಂಜೆ ಒಬ್ಬ ನನ್ನಲ್ಲಿಗೆ ಪೆಚ್ಚು ಮೋರೆ ಹಾಕಿಕೊಂಡು ಬಂದ. ಯಾವುದೋ ಕಂಪೆನಿಯಲ್ಲಿ ಶೀಘ್ರ ಲಿಪಿಕಾರನಾಗಿದ್ದನಂತೆ. ಸರಿಯಾದ ಕಾರಣ ಇಲ್ಲದೆ ಅವನನ್ನು ಕೆಲಸದಿಂದ ತೆಗೆದು ಹಾಕಿದರಂತೆ. ತನ್ನ ಹತ್ತಿರ ಫೀಸ್ ಕೊಡುವಷ್ಟು ಹಣವೂ ಇಲ್ಲ ಅಂದ. ಪರವಾಯಿಲ್ಲ ಬಿಡು ಎಂದೆ. ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿದೆ. ನನ್ನ ಎದುರು ನಾಲ್ಕು ಘಟಾನುಘಟಿಗಳು, ನಾರಿಮನ್, ಸೋಲಿ ಸೊರಬ್ಜಿ ಮುಂತಾದವರಿದ್ದರು.ನಾನು ಆಗ ಚಿಕ್ಕವ. 21 ಯಾ 22 ವರ್ಷದವನಿರಬೇಕು. ನ್ಯಾಯಾಧೀಶ ಒಳ್ಳೆಯವನಿದ್ದ. ನನ್ನ ಕಕ್ಷಿಗಾರನ ಪರವಾಗಿಯೇ ತೀರ್ಪು ಕೊಟ್ಟರು. ಆ ಮನುಷ್ಯ ಒಂದು ಚಿಕ್ಕ ಪೇಡೆ ಡಬ್ಬ ಹಿಡಿದುಕೊಂಡು ಬಂದ. ಇದು ಬೇಕಿರಲಿಲ್ಲಪ್ಪ, ನೀನು ತಂದಿದ್ದಿ ಅಂತ ತೆಗೆದುಕೊಳ್ತೀನಿ ಅಂದೆ.ಈಗಲೂ ಒಮ್ಮೊಮ್ಮೆ ಸಿಕ್ತಾನೆ ಇಲ್ಲಿಯೇ. ಇದು ನನಗೆ ತುಂಬ ಸಂತೋಷ ಮತ್ತು ತೃಪ್ತಿಯನ್ನು ಕೊಟ್ಟ ಪ್ರಕರಣ.ಟಾಟಾ ,ಬಿರ್ಲಾ ; ಯಾಕೆ ಮುಂಬಯಿಯ ಎಲ್ಲಾ ಉದ್ಯೋಗಪತಿಗಳ ಕೆಲಸಾನೂ ನಾನು ಮಾಡಿದ್ದೇನೆ. ಯಾವ ಮನುಷ್ಯನ ಹತ್ತಿರ ಏನೂ ಇಲ್ಲ, ಅವನಿಗೆ ಸಹಾಯ ಮಾಡಬೇಕು. ಒಂದು ವಿಷಯ ಹೇಳ್ತೇನೆ, ನಿಮಗೆ ಗೊತ್ತಿಲ್ಲದಿರಬಹುದು. ಇಂಗ್ಲೆಂಡಿನಲ್ಲಿ ಬ್ಯಾರಿಷ್ಟರುಗಳಿಗೆ ಅವರ ಗೌನ್ ನ ಹಿಂದೆ ರೆಕ್ಕೆ ತರಾನೆ , ಒಂದು ಸಣ್ಣ ಕಿಸೆ ಇರುತ್ತಿತ್ತು. ಕಕ್ಷಿದಾರರು ವಕೀಲರಿಗೆ ಗೊತ್ತಾಗದ ಹಾಗೆ ತಮ್ಮಿಚ್ಛೆ ಪ್ರಕಾರ ಒಂದು ಚಿನ್ನದ ಸೊವೆರಿನ್ ಅದಕ್ಕೆ ಹಾಕುತ್ತಿದ್ದರು. ಬ್ಯಾರಿಷ್ಟರು ಸ್ವತಃ ದುಡ್ಡು ಕೇಳುತ್ತಿರಲಿಲ್ಲ.ಈಗಲೂ ಬ್ಯಾರಿಷ್ಟರ್‌ಗಳ ,ವಕೀಲರುಗಳ ಕೋಟುಗಳಲ್ಲಿ ಈ ವ್ಯವಸ್ಥೆ ಇದೆ, ಅದರ ಅರ್ಥ ಮಾತ್ರ ಹೆಚ್ಚಿನವರಿಗೆ ಗೊತ್ತಿರಲಿಕ್ಕಿಲ್ಲ. ವಕೀಲನಾದವ ದೇಶದ ಸೇವೆ ಮಾಡಬೇಕಾದವನು. ಅದು ಒಂದು noble profession(ಉದಾತ್ತ ವೃತ್ತಿ) ಎನಿಸಿದೆ. ಪ್ರಪಂಚದಲ್ಲಿ (divinity,church) ಆಧ್ಯಾತ್ಮಿಕ , ವೈದ್ಯಕೀಯ ಮತ್ತು ವಕೀಲಿ ವೃತ್ತಿಗಳು ಉದಾತ್ತ ವೃತ್ತಿಗಳೆಂದು (noble profession) ಪರಿಗಣಿಸಲ್ಪಟ್ಟಿವೆ. ಇವರು ವೃತ್ತಿ ಶುಲ್ಕ (Fee) ತೆಗೆದುಕೊಳ್ಳುವ ಹಾಗಿಲ್ಲ .ಈಗ ಮುಖ ನೋಡುವ ಮೊದಲು ಇಂತಿಷ್ಟು ಹಣ ಕೊಡಿ ಎನ್ನುವ ಹಾಗಾಗಿದೆ, ಅದೂ ಕರಿದ್ರವ್ಯ – ಆದಾಯ ತೆರಿಗೆಯನ್ನು ಅದಕ್ಕೆ ಕೊಡೋದೂ ಇಲ್ಲ.

ವೈ.ವಿ. : ನಿಮಗೆ ಸವಾಲಾಗಿ (challenge) ಯಾವುದೇ ಪ್ರಕರಣಗಳು ಎದುರಾಗಿವೆಯಾ?

**ಶ್ರೀಕೃಷ್ಣ:** ನಾನು ಹೆಚ್ಚು ಕೊಲೆ ಇತ್ಯಾದಿ ಕ್ರಿಮಿನಲ್ ಮೊಕದ್ದಮೆಗಳನ್ನು ವಹಿಸಿಕೊಂಡವನಲ್ಲ. ಸರ್ವೋಚ್ಚ ನ್ಯಾಯಾಲಯದಲ್ಲಿ ಮೊದಲ ಸಲ ನ್ಯಾಯಾಧೀಶನಾಗಿ ಕುಳಿತಾಗ ಗಲ್ಲು ಶಿಕ್ಷೆ ಅಮಾನವೀಯವೇ? ಎನ್ನುವ ವಾದ ವಿವಾದಗಳೆದ್ದವು. ಇದನ್ನು ತೀರ್ಮಾನಿಸುವಾಗ ನನಗೆ ಸಂಕಷ್ಟ ಎದುರಾಯಿತು. ನಾನು ತಪ್ಪಿದರೆ? ಎನ್ನುವ ಯೋಚನೆ. ಚೆನ್ನಾಗಿ ಓದಿಕೊಂಡು, ಅಭ್ಯಾಸ ಮಾಡಿ ,ಹಿಂದಿನ ತೀರ್ಪುಗಳನ್ನು ತಿಳಿದುಕೊಂಡು ಇದು ಮಾಡಬೇಕೆ ಮಾಡಬೇಡವೇ ಎನ್ನುವುದರ ನಿಷ್ಕರ್ಷೆ ಮಾಡಿದೆ.ಕೊನೆಗೆ ಇದು ನನ್ನ ಕರ್ತವ್ಯ,ನ್ಯಾಯಾಧೀಶನಾಗಿ ಈ ಸ್ಥಾನದಲ್ಲಿ ಕುಳಿತಿರುವಾಗ ಈ ತಪ್ಪಿಗೆ ಈ ದಂಡ ಅಂತ ಕಾನೂನು ಹೇಳಿದೆ, ಅದರ ಆಧಾರದಲ್ಲಿ ನಾವು ತೀರ್ಪು ಕೊಡಬೇಕು . ಪಾರ್ಲಿಮೆಂಟು ಕಾನೂನನ್ನು ಬದಲಿಸಿದರೆ ನಾವು ಅದನ್ನು ಅನುಕರಿಸಬೇಕಷ್ಟೆ.

**ಕೆ.ಎಸ್.ರಾವ್:** ಆಧ್ಯಾತ್ಮದ ಹಿನ್ನೆಲೆ ಈ ತೀರ್ಪು ಕೊಡುವಾಗ ನಿಮಗೆ ಸಹಾಯಕಾರಿಯಾಯಿತಾ?

**ಶ್ರೀಕೃಷ್ಣ:** ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಏನು ಹೇಳಿದ? ನನ್ನ ಅಜ್ಜ, ಆಚಾರ್ಯರು ,ಅಣ್ಣ ತಮ್ಮಂದಿರು – ಅವರನ್ನೆಲ್ಲ ನಾನು ಕೊಲೆ ಮಾಡಬೇಕು , ಅದು ಹೇಗೆ ಸಾಧ್ಯ ಎಂದು ಅರ್ಜುನ ಕೇಳಿದಾಗ , ಅದು ನಿನ್ನ ಕರ್ತವ್ಯ ಅಂದ ಕೃಷ್ಣ. ಆಧ್ಯಾತ್ಮ ನಮಗೆ ಇಂತಹ ಸಂದರ್ಭದಲ್ಲಿ ಸ್ಥೈರ್ಯ,ಧೈರ್ಯ ಕೊಡುತ್ತದೆ.

**ವೈ. ವಿ:** ನಿಮಗೆ ಅತೃಪ್ತಿಕೊಟ್ಟ ತೀರ್ಮಾನಗಳು ಇವೆಯಾ?

ಶ್ರೀಕೃಷ್ಣ: ತೀರ್ಮಾನ ಕೊಡುವ ಮೊದಲು ಕಕ್ಷಿಗಾರರು ಏನೆಲ್ಲ ಹೇಳುತ್ತಾರೆ ಎಂದು ಕೂಲಂಕುಷವಾಗಿ ಕೇಳಿ ,ಯೋಚನೆ ಮಾಡಬೇಕಾಗುತ್ತದೆ.ಹಿಂದಿನವರು ಈ ವಿಷಯದಲ್ಲಿ ಏನು ಹೇಳಿದರು,ವಿಚಾರ ಮಾಡಬೇಕು .ಕಟ್ಟ ಕಡೆಗೆ ಮನಸ್ಸು ಗಟ್ಟಿ ಮಾಡಬೇಕು .ಒಮ್ಮೆ ತೀರ್ಪು ಕೊಟ್ಟ ಮೇಲೆ ನಾನು ಆ ಬಗ್ಗೆ ವಿಚಾರ ಮಾಡುವುದಿಲ್ಲ. ಬೇರೆ ಜನರು ಮಾಡಲಿ, ಬಿಡಲಿ , ನಾನು ಆ ವಿಷಯದಲ್ಲಿ ತಲೆ ಕೆಡಿಸಿಕೊಳ್ಳುವುದಿಲ್ಲ.

**ಕೆ.ಎಸ್:** ಒಮ್ಮೆ ನಿಮ್ಮಿಂದ ತುಂಬಾ ಸಿಟ್ಟಿನ ಹೇಳಿಕೆ ಬಂದಿತ್ತು, ಮುಂಬಯಿಗೆ ನೀರು ಸರಬರಾಜು ನಿಲ್ಲಿಸುತ್ತೇವೆ ಎಂದು ಮುನಿಸಿಪಲ್ ಕೆಲಸಗಾರರಿಂದ ಬೆದರಿಕೆ ಬಂದಾಗ.

**ಶ್ರೀಕೃಷ್ಣ:** ನಿಜ ನಿಜ. ಶರದ್ ರಾವ್ ಅಂತ ಯೂನಿಯನ್ ಲೀಡರ್ ತುಂಬಾ ಬಲಶಾಲಿ. ಬೋನಸ್ ಕೊಡೋದಿಲ್ಲ ಎನ್ನುವ ಪ್ರಕರಣ ಮುಂಬಯಿ ಉಚ್ಚ ನ್ಯಾಯಾಲಯಕ್ಕೆ ಬಂತು. ಏನಾದರೂ ಒಂದು ತೀರ್ಮಾನಕ್ಕೆ ಬನ್ನಿ , ಎಷ್ಟು ಕೊಡೋದಿಕ್ಕೆ ಸಾಧ್ಯ ಏನು ಅಂತ ಇತ್ಯರ್ಥ ಮಾಡಿ ಎಂದೆ. ನಾಳೆಯಿಂದಲೇ ಮುಷ್ಕರ ಹೂಡುತ್ತೇವೆ, ನೀರು ಸರಬರಾಜು ನಿಲ್ಲಿಸುತ್ತೇವೆ ಎಂದು ಶರದ್ ರಾವ್ ಹೇಳಿದಾಗ– ನೋಡಿ, ನೀವು ಹಾಗೆ ಮಾಡಿದರೆ ನಾನು ಸೇನೆಯನ್ನು ಕರೆಸುತ್ತೇನೆ, ಅವರಿಂದ ವ್ಯವಸ್ಥೆ ಮಾಡಿಸುತ್ತೇನೆ. ಈ ಬಗ್ಗೆ ಅಗತ್ಯ ಸೇವಾ ಕಾಯಿದೆಯ (Essential services act) ಪ್ರಕಾರ ಸುಗ್ರೀವಾಜ್ಞೆ ಹೊರಡಿಸುವಂತೆ ತೀರ್ಪು ಕೊಡುತ್ತೇನೆ , ನಿಮ್ಮನ್ನು ಸೆರೆಯಲ್ಲಿರಿಸಿ ನಗರಪಾಲಿಕೆ ನಡೆಸುವಂತೆ ಮಾಡುತ್ತೇನೆ ಎಂದಾಗ ಸುಮ್ಮನಾದರು.ಅದು ಶುದ್ಧ ಅಧಿಕ ಪ್ರಸಂಗ. ಒಬ್ಬ ಮನುಷ್ಯ ಇಷ್ಟೊಂದು ಜನರಿಗೆ ಅಗತ್ಯವಾದ ನೀರು ಸರಬರಾಜು ನಿಲ್ಲಿಸುವುದನ್ನು ಹೇಗೆ ಸಹಿಸುವುದು ಸಾಧ್ಯ?

**ವೈ.ವಿ:** ವಿವಾದಾತ್ಮಕ ತೀರ್ಪುಗಳನ್ನು ನೀವು ಕೊಟ್ಟಿದ್ದೀರಾ?

**ಶ್ರೀಕೃಷ್ಣ:** 1992/93ರ ಮುಂಬಯಿ ದಂಗೆಯ ಬಗ್ಗೆ ನಡೆಸಿದ ಆಯೋಗದ ವರದಿಯೇ ತುಂಬಾ ವಿವಾದಾತ್ಮಕವೆನಿಸಿತು. ಶಿವ ಸೇನೆಯವರು ಆಡಳಿತಕ್ಕೆ ಬಂದ ಮೇಲೆ ವರದಿ ಸಲ್ಲಿಸುವುದು ತಡವಾಯಿತು ಎಂದು ನೆವನ ಹೇಳಿ ವರದಿಯನ್ನು ತಳ್ಳಿ ಹಾಕಿದರು. ಆದರೆ ಕೇಂದ್ರದಲ್ಲಿ ವಾಜಪೇಯಿ ಸರಕಾರ ಆಡಳಿತದಲ್ಲಿದ್ದು ವರದಿ ಸೂಚಿಸಿದ ಪರಿಹಾರಗಳನ್ನು ಅನುಷ್ಠಾನಕ್ಕೆ ತರಲು ಒತ್ತಾಯ ಹೇರಿದಾಗ ಮತ್ತಷ್ಟು ವಿಷಯಗಳನ್ನು ಶಿವ ಸೇನಾ ಸರಕಾರ ಉಲ್ಲೇಖಿಸಿತು. ಕೊನೆಗೆ 1998ರಲ್ಲಿ ವರದಿ ಸಲಿಸ್ಲಿದರೂ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ.

**ವೈ. ವಿ.:** ಈ ಆಯೋಗದ ವರದಿ ನಿಮಗೆ ತೃಪ್ತಿ ಕೊಟ್ಟಿದೆಯಾ?

**ಶ್ರೀಕೃಷ್ಣ:** ವಿಚಾರಣಾ ಆಯೋಗ ಹ್ಯಾಗೆ ಕೆಲಸಮಾಡಬೇಕಪ್ಪಾ ಅನ್ನುವ ಪ್ರಶ್ನೆಗೆ ಶ್ರೀಕೃಷ್ಣ ಆಯೋಗದ ವರದಿಯೇ ಒಂದು ಮಾದರಿ ಆಗಿದೆ. ಸಿಕ್ಕಿದ ಎಲ್ಲಾ ಆಧಾರಗಳನ್ನು ಕೂಲಂಕುಷವಾಗಿ ವಿಚಾರಮಾಡಿದ್ದೇನೆ. ವಿಚಾರಣೆಯ ಸಮಯದಲ್ಲಿ ಯಾರದ್ದೇ ಹೆಸರು, ಬಾಳಾ ಸಾಹೇಬ್ ಠಾಕ್ರೆಯವರದ್ದೇ ಆಗಲಿ ಮುಂದೆ ಬಂದರೆ ಅದನ್ನು ಹೇಳುವುದಕ್ಕೆ ನಾನು ಹಿಂಜರಿದವನಲ್ಲ. ದೂರದರ್ಶನದ ಸಂದರ್ಶನದಲ್ಲಿ ಬಾಳಾಸಾಹೇಬರನ್ನು ವರದಿಯ ಬಗ್ಗೆ ಕೇಳಿದಾಗ ನಿಷ್ಪ್ರಯೋಜಕ, ಹಿಂದೂದ್ವೇಷಿ ಎಂದರು. ವರದಿಯನ್ನು ಓದಿದ್ದೀರಾ ಎಂದು ಕೇಳಿದಾಗ ಅದರ ಅಗತ್ಯ ಇಲ್ಲ ಎಂದರು. ಸಾಮ್ನಾದಲ್ಲಿ ಲೇಖನವನ್ನು ಬರೆದರು– ಈ ಮನುಷ್ಯನನ್ನು ಪಾಕಿಸ್ತಾನಕ್ಕೆ ರವಾನಿಸಬೇಕು,

"ನಿಶಾನೆ ಪಾಕಿಸ್ತಾನ್" ಕೊಡಬೇಕು ಅಂತ ಬರೆದರು. ನಾನು ಇಲ್ಲೇ ಉಳಕೊಂಡೆ.

**ವೈ.ವಿ:** ತಾವು ವಹಿಸಿಕೊಂಡ ಮುಖ್ಯ ಆಯೋಗಗಳು ಯಾವುವು?

**ಶ್ರೀಕೃಷ್ಣ:** ಮುಂಬಯಿ ದಂಗೆ, Sixth pay commission, ತೆಲಂಗಾಣಾ ಆಂಧ್ರ ರಾಜ್ಯವಿಭಜನೆ, ಮದ್ರಾಸ್ ಉಚ್ಚ ನ್ಯಾಯಾಲಯದ ದಂಗೆ, Financial sector Legislative Reforms Commissions, ಮುಖ್ಯವಾದವು. ಈಗ ಮತ್ತೊಂದಿದೆ. ಒಂದೆರಡು ದಿವಸಗಳಲ್ಲಿ ತಿಳಿಯುತ್ತದೆ.

**ವೈ.ವಿ:** ರಾಜಕೀಯ ಪಕ್ಷಗಳೊಂದಿಗೆ ವ್ಯವಹಾರ ಮಾಡುವಾಗ ನಿಮಗೆ ಹ್ಯಾಗನಿಸುತ್ತದೆ?

**ಶ್ರೀಕೃಷ್ಣ:** ಯಾವ ಪಕ್ಷ ಆಡಳಿತಕ್ಕೆ ಬಂದರೂ ನಮಗೆ ಅದರಿಂದ ಏನೂ ವ್ಯತ್ಯಾಸ ಆಗೋಲ್ಲ. ನಮ್ಮ ಅಜ್ಜಿ ಒಂದು ಗಾದೆ ಹೇಳುತ್ತಿದ್ದರು – ರಾಮ ರಾಜ್ಯ ಆಳಿದರೂ ಒಂದೇ , ರಾವಣ ರಾಜ್ಯ ಆಳಿದರೂ ಒಂದೇ, ಕುಡಿಯೋದು ಆರು ಕಾಸು ಮಜ್ಜಿಗೆ ಅಷ್ಟೆ.

**ವೈ.ವಿ :** ಈ ಆಯೋಗಗಳಿಂದಾಗಿ ನಿಮಗೆ ಏನಾದರೂ ಬೆದರಿಕೆಗಳು ಬಂದಿವೆಯೇ?

**ಶ್ರೀಕೃಷ್ಣ:** ಹೆದರಿದವರನ್ನು ಹೆದರಿಸ್ತಾರೆ. ನಾನು ಯಾರಿಗೂ ಹೆದರಿದವನಲ್ಲ. ಆಯೋಗದ ಕೆಲಸ ಮುಗಿಸಿದ ಮೇಲೆ ನಾನು ನ್ಯಾಯಾಧೀಶನಾಗಿ ಕೆಲಸ ಮಾಡುವಾಗ ಶಿವಸೇನೆಯಿಂದ ನನ್ನಲ್ಲಿಗೆ ಒಂದು ಅಪೀಲು ಬಂದಿತ್ತು. ವಿಧಾನ ಸಭೆಯಲ್ಲಿ ಧ್ವನಿಗ್ರಹಣ ಯಂತ್ರವನ್ನು ಸಭಾಪತಿಯಮೇಲೆ ಬಿಸಾಡಿದ್ದಕ್ಕೆ 16 ಜನ ಸಂಸದರನ್ನು ಅಮಾನತುಗೊಳಿಸಿದ ಪ್ರಕರಣ. ನಾನು ಶಿವಸೇನೆಗೆ ಕೇಳಿದೆ– ನಾನು ಈ ಅಪೀಲನ್ನು ವಿಚಾರಿಸಬಹುದಾ ಅಂತ ನಿಮ್ಮ ಸುಪ್ರಮೋವನ್ನು ಕೇಳಿ ಒಂದು ವಾರದ ಕಳೆದು ಬನ್ನಿ ಎಂದು. ಈ ಪ್ರಕರಣ ನನ್ನ ಕೋರ್ಟಲ್ಲಿ ಅಲ್ಲದೆ ಬೇರೆ ಎಲ್ಲಿಯೂ ನಡೆಯಲಿಕ್ಕಿಲ್ಲ ಎಂದರಂತೆ ಬಾಳಾಸಾಹೇಬ್.

**ವೈ. ವಿ:** ನಿಮ್ಮ ಸಂಸಾರ ಜೀವನದ ಬಗ್ಗೆ ಹೇಳಿ ಸರ್.

**ಶ್ರೀಕೃಷ್ಣ:** ನನಗೆ ಇಬ್ಬರು ಹುಡುಗಿಯರು. ಒಬ್ಬಳು ಮದುವೆಯಾಗಿ ಲಂಡನ್ ನಲ್ಲಿದ್ದಾಳೆ. ಅವಳು ಹಿರಿಯ ವೈದ್ಯೆ.ಕಿರಿಯವಳು ಮದುವೆಯಾಗಿ ಇಲ್ಲೇ ವಕೀಲ ವೃತ್ತಿ ನಡೆಸುತ್ತಿದ್ದಾಳೆ. ನನ್ನ ಹೆಂಡತಿ ಪಿ.ಎಚ್.ಡಿ ಮಾಡಿದ್ದಾಳೆ.

**ವೈ.ವಿ :** ಮತ, ಧರ್ಮಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಶ್ರೀಕೃಷ್ಣ:** ಮನುಷ್ಯನಾದವನಿಗೆ ಜೀವನದಲ್ಲಿ ಮೌಲ್ಯಗಳು ಬೇಕಲ್ಲ? ನಮಗೆ ಚಿಕ್ಕ ವಯಸ್ಸಿನಿಂದಲೇ ಮೌಲ್ಯಗಳನ್ನು ಹೇಳಿಕೊಟ್ಟಿದ್ದಾರೆ. ಗುರು ಹಿರಿಯರನ್ನು ಕಂಡಾಗ ನಮಸ್ಕಾರ ಮಾಡಬೇಕು, ವಿದ್ವಾಂಸರನ್ನು ಸತ್ಕರಿಸಬೇಕು, ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕು – ಎಲ್ಲ ಧರ್ಮಗಳೂ ಇವನ್ನೇ ಹೇಳುತ್ತವಲ್ಲ? ಇದೇ ಸಂಸ್ಕಾರ ತಾನೆ? ಈಗ ಇದೆಲ್ಲ ಎಷ್ಟೋ ಕಡಮೆ ಆಗಿದೆ,ಇಲ್ಲ ಎಂದರೂ ಸರಿಯೆ.

**ವೈ.ವಿ:** ಈಗ ಸಾಮಾನ್ಯ ನಾಗರಿಕ ಕಾನೂನು . ಒಂದು ಬಿಸಿ ಚರ್ಚೆಯ ವಿಷಯವಾಗಿದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಶ್ರೀಕೃಷ್ಣ:** ನಮ್ಮ ದೇಶದಲ್ಲಿ ಈಗ ಏನಾಗಿದೆ– ನಾಲ್ಕೋ ಐದೋ ಪ್ರಾಮುಖ್ಯ ಮತಗಳಿದ್ದಾವೆ. ಕ್ರಿಶ್ಚಿಯನ್, ಮುಸ್ಲಿಮ್. ಸಿಖ್, ಬೌದ್ಧ, ಜೈನ, ಪಾರಸಿ. ಪ್ರತಿಯೊಬ್ಬರಿಗೂ ತಾವು ಹಿಂದು ಅಲ್ಲ ಎನ್ನುವುದಕ್ಕೆ ಹೆಮ್ಮೆ ಎನಿಸುತ್ತದೆ. ಬ್ರಿಟಿಷರ ಕಾಲದಲ್ಲಿ ಮುಸ್ಲಿಂ, ಕ್ರಿಶ್ಚಿಯನ್ ಬಿಟ್ಟರೆ ಮತ್ತೆಲ್ಲರೂ ಹಿಂದುಗಳೇ, ಕಲ್ಕತ್ತಾದಲ್ಲಿ ಒಂದು ಪ್ರಕರಣ ದಾಖಲಾಯಿತು. ರಾಮಕೃಷ್ಣ ಮಿಶನ್ ಅವರು ತಾವು ಹಿಂದು ಅಲ್ಲ ಎಂದು. ಇದೆಲ್ಲ ಅಲ್ಪ ಸಂಖ್ಯಾಕರಿಗೆ ಸಿಗುವ ಲಾಭಗಳಿಗಾಗಿ ನಡೆಯುವ ವಿದ್ಯಮಾನಗಳು. ನಮ್ಮ ಸಂವಿಧಾನವನ್ನು ತಯಾರಿಸುವಾಗ ಎಲ್ಲ ಕಾನೂನುಗಳೂ ಮೂಲಭೂತ ಹಕ್ಕುಗಳಿಗೆ ವ್ಯತಿರಿಕ್ತವಾಗಿದ್ದವು. ನ್ಯಾಯಾಲಯದ ತೀರ್ಪುಗಳು ಮಾತ್ರ ಮೂಲಭೂತ ಹಕ್ಕುಗಳಿಗೆ ಅನುಗುಣವಾಗಿಯೇ ಇದ್ದವು. ಆದರೆ ಈ ತೀರ್ಪುಗಳು ವೈಯಕ್ತಿಕ ಕಾನೂನುಗಳಿಗೆ ಲಾಗು ಆಗುವುದಿಲ್ಲ. ಆದ್ದರಿಂದ ಸಾಮಾನ್ಯ ನಾಗರಿಕ ಕಾನೂನನ್ನು ತರುವುದು ತುಂಬ ಕಷ್ಟದ ಕೆಲಸ. ಸರಕಾರ ಧೈರ್ಯಮಾಡಿ ಕಾನೂನನ್ನು ಬದಲಾಯಿಸಬೇಕು. ಹಿಂದೂ ಕಾಯಿದೆ ಕಾನೂನುಗಳು ಅನೇಕ ಬದಲಾವಣೆಗಳನ್ನು ಕಂಡಿವೆ. ಮೊದಲು ಅದಕ್ಕೂ ಆಕ್ಷೇಪ ಇತ್ತು. ಡಾ. ರಾಜೇಂದ್ರ ಪ್ರಸಾದ್ ಅಂತವರೇ ಆಕ್ಷೇಪಿಸಿದ್ದರು. ಈಗ ಆಕ್ಷೇಪಗಳೇ ಇಲ್ಲವಾಗಿವೆ. ಬೇರೆ ಮತಗಳ ಕಾನೂನಗಳೂ ಬದಲಾಗಬೇಕು .ಮಾಡುವವರು ಯಾರು ಎನ್ನುವುದು ಪ್ರಶ್ನೆ. ಹೀಗೇನೇ ಮೀಸಲಾತಿಯ ಬಗ್ಗೆಯೂ ಬದಲಾವಣೆಗಳ ಆವಶ್ಯಕತೆಗಳಿವೆ.

**ವೈ.ವಿ :** ಕೊನೆಯ ಪ್ರಶ್ನೆ. ಆಯೋಗದ ವರದಿಗಳಲ್ಲದೆ ತಮ್ಮ ಬೇರೆ ಪುಸ್ತಕಗಳೇನಾದರೂ ಪ್ರಕಟ ಆಗಿವೆಯಾ?

**ಶ್ರೀಕೃಷ್ಣ:** ನನ್ನ ಹಲವಾರು ಲೇಖನಗಳು ಪ್ರಕಟವಾಗಿವೆ. ಕಾನೂನಿನ ಪತ್ರಿಕೆಗಳಲ್ಲಿ, ಪುಸ್ತಕಗಳಲ್ಲಿ .

**ವೈ.ವಿ. :** ತಾವು ನಮಗೆ ತಮ್ಮ 50 ನಿಮಿಷಗಳ ಅಮೂಲ್ಯ ಸಮಯವನ್ನು ಈ ಸಂದರ್ಶನಕ್ಕಾಗಿ ವ್ಯಯಿಸಿದಿರಿ. ತುಂಬ ಧನ್ಯವಾದಗಳು ಸರ್.

●






# ಡಾ. ಬಿ. ಎ. ವಿವೇಕ ರೈ ಅವರೊಂದಿಗೆ ಸಂದರ್ಶನ

ಅಂದು ಜನವರಿ 25 ಶನಿವಾರ. ಆ ದಿನ ಮೈಸೂರು ಅಸೋಸಿಯೇಷನ್ ಮುಂಬಯಿ ಮತ್ತು ಕನ್ನಡ ವಿಭಾಗವು ಎರಡು ದಿನದ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮಕ್ಕೆ ಕನ್ನಡ ವಿಶ್ವವಿದ್ಯಾಲಯ ಹಂಪಿ ಇಲ್ಲಿನ ಮಾಜಿ ಕುಲಪತಿಗಳಾಗಿರುವ, ನಾಡಿನ ಹಿರಿಯ ವಿದ್ವಾಂಸ ಡಾ. ವಿವೇಕ ರೈ ಅವರು ಆಗಮಿಸಿದ್ದರು. 'ಶತಮಾನದ ಹಿನ್ನೆಲೆಯಲ್ಲಿ ಶಿವರಾಮ ಕಾರಂತ' ಹಾಗೂ "ಜರ್ಮನಿಯ ಒಳಗಿನಿಂದ; ರಂಗಭೂಮಿ ಮತ್ತು ಸಂಸ್ಕೃತಿ" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

'ಶತಮಾನದ ಹಿನ್ನೆಲೆಯಲ್ಲಿ ಶಿವರಾಮ ಕಾರಂತ' ಹಾಗೂ 26ನೇ ಆದಿತ್ಯವಾರದಂದು ಬೆಳಿಗ್ಗೆ 11ರಿಂದ 1ರವರೆಗೆ ಡಾ.ಬಿ.ಎ ವಿವೇಕ ರೈ ಅವರು ಕಳೆದ 5 ದಶಕಗಳಿಗಿಂತಲೂ ಹೆಚ್ಚು ಕಾಲ ಅಧ್ಯಯನ, ಅಧ್ಯಾಪನ ಮತ್ತು ಸಂಶೋಧನೆಗಳ ಮೂಲಕ ಕರ್ನಾಟಕದಲ್ಲಿ ಕನ್ನಡವನ್ನು ಬೆಳೆಸಿದ ಹಿರಿಯ ವಿದ್ವಾಂಸರು. ವಿವೇಕ ರೈ ಅವರ ತಂದೆಯವರು, ಶಿವರಾಮ ಕಾರಂತರ ಶಿಷ್ಯ ಮತ್ತು ಪರಮ ಅಭಿಮಾನಿ. ಹೀಗೆ ತಂದೆಯ ಸಾಹಿತ್ಯದ ಒಲವು ಇವರಿಗೆ ಬಳುವಳಿಯಾಗಿ ಬಂದಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಡಾ. ವಿವೇಕ ರೈ ಅವರು ತಮ್ಮ ತಂದೆ ಮತ್ತು ಕಾರಂತರ ಅಭಯಹಸ್ತದಲ್ಲಿ ಸಾಹಿತಿಯಾಗಿ ರೂಪುಗೊಂಡರು.

ಕನ್ನಡ ಮತ್ತು ತುಳು ಭಾಷೆಯ ಬಗ್ಗೆ ದಣಿವರಿಯದ ಅಧ್ಯಯನ, ಅಧ್ಯಾಪನ, ಉಪನ್ಯಾಸ ಮತ್ತು ಕ್ಷೇತ್ರಕಾರ್ಯಾಧರಿತವಾದ ಸಂಶೋಧನೆ ನಡೆಸುತ್ತಾ ಬಂದಿರುವ ಡಾ.ಬಿ.ಎ.ವಿವೇಕ ರೈ ಅವರು ಕರ್ನಾಟಕ ಕಂಡ ಅಪೂರ್ವ ಸಂಸ್ಕೃತಿ ಚಿಂತಕರಲ್ಲಿ ಒಬ್ಬರು. ತಮ್ಮ ನೇರ ನಡೆ, ನುಡಿ ಮತ್ತು ಜಾತ್ಯಾತೀತ ನಿಲುವುಗಳಿಂದ ಹಾಗೂ ವೈವಿಧ್ಯಮಯ ಬರಹಗಳ ಮೂಲಕ ಅವರು ಕನ್ನಡದ ಆಂತರಿಕ ಶಕ್ತಿಯನ್ನು ಸಂವರ್ಧಿಸಿದ ರೀತಿ ಅನುಪಮವಾದುದು. ಕನ್ನಡ ಮತ್ತು ತುಳು ಭಾಷೆಯ ಸಂಪತ್ತನ್ನು ವಿಶ್ವಕ್ಕೆ ತಿಳಿಸಿ ಹೇಳಲು ಅವರು ಪಟ್ಟ ಶ್ರಮ ಚಾರಿತ್ರಿಕವಾದುದು. ಡಾ. ರೈ ಅವರ ಕೆಲವು ನಿಲುವುಗಳು ನಮ್ಮ ಅಧ್ಯಯನ ಮಾದರಿಗಳನ್ನೇ ಎಷ್ಟೋ ಬಾರಿ ಅಮೂಲಾಗ್ರವಾಗಿ ಬದಲಾಯಿಸಿವೆ.

ಡಾ.ಬಿ.ಎ ವಿವೇಕ ರೈ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿಗಳಾಗಿ, ಜರ್ಮನಿಯ ವ್ಯೂರ್ತ್ಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಇಂಡೋಲಜಿ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ, ಮಂಗಳೂರು ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಜಾಗತಿಕ ಮಟ್ಟದಲ್ಲಿ ಕನ್ನಡಕ್ಕೆ ನೆಲೆ ಬೆಲೆಯನ್ನು ತಂದು ಕೊಟ್ಟವರು. ಶೈಕ್ಷಣಿಕ ಕ್ಷೇತ್ರದಲ್ಲಿ ಇವರು ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ, ಕರ್ನಾಟಕ ಜಾನಪದ ಮತ್ತು .ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಇವರು ಮಾಡಿದ ಸೇವೆ ಅನುಪಮವಾದುದು.

ತುಳುಗಾದೆಗಳು, ತುಳು ಒಗ್ಗಟ್ಟುಗಳು, ತೌಳವ ಸಂಸ್ಕೃತಿ ಮೊದಲಾದ ಕೃತಿಗಳನ್ನು ರಚಿಸಿದ ಇವರು ತುಳು ಸಾಹಿತ್ಯಕ್ಕೆ ತಮ್ಮದೇ ಆದ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಅಲ್ಲದೆ ಭಾರತೀಯ ಪರಂಪರೆ ಮತ್ತು ಸಾಹಿತ್ಯದಲ್ಲಿ ಒಗಟು, ಗಿಳಿಸೂಚಿ, ಇರುಳು ಕಣ್ಣು, ಜರ್ಮನಿಯ ಒಳಗಿಂದ ಮೊದಲಾದ ಕೃತಿಗಳನ್ನು ಸಾಹಿತ್ಯ ಲೋಕದ ಮಡಿಲಿಗೆ ಅರ್ಪಿಸಿದ್ದಾರೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ತುಳು ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿ ಹೀಗೆ ಅನೇಕಾನೇಕ ಪ್ರಶಸ್ತಿಗಳು ಇವರ ಹಿರಿಮೆಗೆ ಸಂದ ಗರಿಮೆಯಾಗಿದೆ.



ಅಂದು ಡಾ. ವಿವೇಕ ರೈ ಅವರನ್ನು ಸಂದರ್ಶಿಸಲು ನಾನು ಮತ್ತು ಭವಾನಿ ಮೇಡಮ್ ಸುಮಾರು ಒಂದು ಐದು ಗಂಟೆಯ ಹೊತ್ತಿಗೆ ಡಾ. ವಿವೇಕ ರೈ ಅವರು ನೆಲೆ ನಿಂತಿರುವ ಅತಿಥಿ ಗೃಹಕ್ಕೆ ಹೋದೆವು. ಮನಸ್ಸಿನಲ್ಲಿ ಏನೋ ಒಂದು ರೀತಿಯ ಭಯ. ಎರಡು ವಿಶ್ವವಿದ್ಯಾಲಯಗಳ ಕುಲಪತಿಗಳು. ಹೇಗೆ ಮಾತನಾಡುವರೋ ಗೊತ್ತಿಲ್ಲ. ಅವರ ಕೊಠಡಿಯನ್ನು ಹೊಕ್ಕ ಕೂಡಲೇ ನಮಗೆ ಸಿಕ್ಕ ಆತ್ಮೀಯತೆಯ ಸ್ವಾಗತ ಮನದಲ್ಲಿ ಮನೆಮಾಡಿದ್ದ ಭಯವಲ್ಲ ಹೊರಟು ಹೋಯಿತು. ನೀಳ ಕಾಯ ಶರೀರ, ಗಂಭೀರವಾದರೂ ಮೊಗದಲ್ಲಿರುವ ಮುಗ್ಧತೆ ಎಲ್ಲರನ್ನೂ ಆಕರ್ಷಿಸುವಂತಿತ್ತು.

ನಾವು ಕೇಳಿದ ಪ್ರಶ್ನೆಗಳಿಗೆ ಸಮಾಧಾನದಿಂದ, ಬಹು ಆತ್ಮೀಯತೆಯಿಂದ ಉತ್ತರಿಸಿದರು. ಆ ದಿನ ಒಂದು ರೀತಿಯ ಸ್ನೇಹಪೂರ್ಣ ವಾತಾವರಣಕ್ಕೆ ಎಡೆ ಮಾಡಿಕೊಟ್ಟರು.

**ಪ್ರಶ್ನೆ :** ನಿಮಗೆ ಕನ್ನಡ ಸಾಹಿತ್ಯದಲ್ಲಿ ನಿಮಗೆ ಹೇಗೆ ಆಸಕ್ತಿ ಬೆಳೆಯಿತು. ಯಾರ ಪ್ರಭಾವ ನಿಮ್ಮ ಮೇಲಾಯಿತು?

**ವಿವೇಕ ರೈ :** ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಉಂಟಾಗಲು ಕಾರಣ ಮೊದಲನೆಯದಾಗಿ ನಮ್ಮ ತಂದೆ. ನಮ್ಮ ತಂದೆಯವರು ಸಣ್ಣ ಪ್ರಮಾಣದಲ್ಲಿ

✍ ಡಾ. ಜ್ಯೋತಿ ಸತೀಶ್

ಶಿಕ್ಷಕರಾಗಿದ್ದರು. ಅಗ್ರಹಾರ ಪುರಂದರ ರೈ ಅಂತ ಅವರ ಹೆಸರು. ಅವರು ಶಿವರಾಮ ಕಾರಂತರ ಶಿಷ್ಯರಾಗಿದ್ದರು. ಕಾರಂತರ ಮಕ್ಕಳ ಕೂಟದಲ್ಲಿ ಭಾಗವಹಿಸುತ್ತಿದ್ದರು. ಇದು ಸುಮಾರು 1936ರ ಕಾಲದ್ದು. ಕಾರಂತರ ಪ್ರಭಾವದಿಂದ ತಂದೆಯವರು ಆ ಕಾಲದ ಪತ್ರಿಕೆಗಳಿಗೆ ಕಥೆ, ಲೇಖನ, ಅಂಕಣಗಳನ್ನು ಬರೆಯುತ್ತಿದ್ದರು. ಹಾಗಾಗಿ ಮನೆಯಲ್ಲಿ ನಮಗೆ ಸಾಹಿತ್ಯದ ವಾತಾವರಣವಿತ್ತು. ನಮ್ಮ ತಾಯಿ ಕುಮಾರವ್ಯಾಸ ಭಾರತ, ಜೈಮಿನಿ ಭಾರತ ಎಲ್ಲ ವಾಚನ ಮಾಡುತ್ತಿದ್ದರು. ಆ ಕಾಲದಲ್ಲಿ ಹೆಚ್ಚಿನ ಶಿಕ್ಷಣವಿರಲಿಲ್ಲೊಅ. ಆದರೂ ಇದರ ಬಗ್ಗೆ ತಿಳಿದಿದ್ದರು. ನನಗೆ ಸಾಹಿತ್ಯದಲ್ಲಿ ಆಸಕ್ತಿ ಬರಲು ನನ್ನ ತಂದೆಯ ಪ್ರಭಾವವೇ ಕಾರಣ.

ಆದರೆ ಕನ್ನಡ ಎಂ.ಎ. ಮಾಡಬೇಕೆಂದು ಬಯಸಿದವನಲ್ಲ. ನಾನು ವಿಜ್ಞಾನ ಪದವೀಧರ. ಬಿ.ಎಸ್.ಸಿ (ಪಿ.ಸಿ.ಎಂ.) ಮಾಡಿದ್ದೇನೆ. ನಾನು ಆಕಸ್ಮಿಕವಾಗಿ ಕನ್ನಡ ಸಾಹಿತ್ಯಕ್ಕೆ ಬಂದೆ. ನನಗೆ ಎಂ.ಎಸ್.ಸಿ. ಫಿಸಿಕ್ಸ್ ಮಾಡಬೇಕೆಂದಿತ್ತು. ಆ ಕಾಲದಲ್ಲಿ ಮೈಸೂರು ವಿಶ್ವವಿದ್ಯಾಲಯದವರು ಮಂಗಳೂರಿನಲ್ಲಿ ಒಂದು ಪಿ.ಜಿ. ಸೆಂಟರ್ ತೆಗೆದರು. ಇದು ಸುಮಾರು 1968ರಲ್ಲಿ ನಡೆದ ಸಂಗತಿ. ಅಲ್ಲಿ ಅವರು ಕನ್ನಡ ಭಾಷೆಯಾಗಿ ಓದಿದವರು

60ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದವರಿಗೆ ಮೊದಲ ಪ್ರಾಶಸ್ತ್ಯ ನೀಡಿದ್ದರು. ನಾನು ಸುಮ್ಮನೆ ಅದಕ್ಕೆ ಅರ್ಜಿಯನ್ನು ಹಾಕಿದೆ. ಪರಮೇಶ್ವರ ಭಟ್ಟರು ಆಗ ಅಲ್ಲಿಗೆ ಪ್ರೊಫೆಸರ್ ಆಗಿ ಬಂದರು. ನನಗೆ ಸೀಟು ಸಿಕ್ಕಿತು. ಆಗ ಕನ್ನಡಕ್ಕೆ ನಾನು ಉತ್ಸಾಹದಿಂದ ಹೋದುದಲ್ಲ. ತಂದೆಯವರು ಹೋಗು ಅಂದರು ಅಲ್ಲದೆ ತಂದೆಯವರು ಕಾರಂತರ ಹತ್ತಿರ ಕೇಳಿದರು. ಕಾರಂತರು ಕೂಡ ಹೋಗಿ ಅಂತ ಹೇಳಿದರು. ಇಲ್ಲದಿದ್ದರೆ ಕನ್ನಡಕ್ಕೆ ಬರುವ ಯೋಚನೆಯೇ ಇರಲಿಲ್ಲ ನನಗೆ.

**ಪ್ರಶ್ನೆ:** ಜಾನಪದ ಸಾಹಿತ್ಯದಲ್ಲಿ ಅಭಿರುಚಿ ಹೇಗೆ ಬಂತು? ಅದರ ಬಗ್ಗೆ ನಮಗೆ ತಿಳಿಸಿಕೊಡುವಿರಾ?

**ವಿವೇಕ ರೈ :** ಜಾನಪದಲ್ಲಿ ಆಸಕ್ತಿ ಹುಟ್ಟಲು ಕಾರಣ ನಾನು ಹಳ್ಳಿಯಲ್ಲಿ ಹುಟ್ಟಿ ಬೆಳೆದವನು. ನಮ್ಮ ಹಳ್ಳಿಯಿಂದ ಕಾರಂತರ ಮನೆಗೆ ಸುಮಾರು ಒಂದು ಆರು ಮೈಲು ದೂರವಿತ್ತು. ಕಾರಂತರ ಮನೆಗೆ ಸಾಮಾನ್ಯ ತಂದೆಯವರು ಆಗಾಗ ಅಲ್ಲಿಗೆ ಹೋಗಿ ಬರುತ್ತಿದರು. ಕಾರಂತರಲ್ಲಿಗೆ ಯಾರಾದರೂ ಸಾಹಿತಿಗಳು ಬಂದರೆ ಮಾತನಾಡಲಿಕ್ಕೆ ಹೋಗುತ್ತಿದ್ದರು. ಹಾಗಾಗಿ ನಮಗೆ ಚಿಕ್ಕದಿಂದಲೂ ಸಂಪರ್ಕವಿತ್ತು. ಹಳ್ಳಿಯಲ್ಲಿದ್ದ ಕಾರಣ ನಮಗೆ ಸಣ್ಣ ಕೃಷಿಯಿತ್ತು. ಭತ್ತ, ಅಡಿಕೆ, ತೆಂಗು ಇವುಗಳು ಬೆಳೆಯುತ್ತಿದ್ದವು. ಕೃಷಿಯ ಜೊತೆಗೆ ಕೃಷಿಗೆ ಸಂಬಂಧಪಟ್ಟ ಹಾಡುಗಳನ್ನು ಕೇಳುತ್ತಿದ್ದೆವು. ಚಾಲ್ತಿಯಲ್ಲಿದ್ದ ಅನೇಕ ಆಚರಣೆಗಳು ಭೂತ ಕೋಲ ಇದೆಲ್ಲ ನಡೆಯುತ್ತಾ ಇತ್ತು. ಆದರೆ ಜಾನಪದದಲ್ಲಿ ನಾನೇನು ಅಧ್ಯಯನ ಮಾಡಬೇಕೆಂದು ನಿಶ್ಚಯ ಮಾಡಿದವನಲ್ಲ. ಎಂ.ಎ. ಮಾಡುತ್ತಿದ್ದಾಗ ಪ್ರೊ. ಪರಮೇಶ್ವರ ಭಟ್ಟರು ನನಗೆ 'ನಿಮ್ಮದು ತುಳು ಮಾತೃಭಾಷೆಯಾದುದರಿಂದ ಅದರ ಕಲೆಗಳ ಬಗ್ಗೆ ಸೆಮಿನಾರ್ ಮಾಡು' ಎಂದರು. ಹಾಗೆ ನಾನು ದಕ್ಷಿಣ ಜಾನಪದ ಕಲೆಗಳ ಬಗ್ಗೆ ಸೆಮಿನಾರ್ ಮಾಡಿದ್ದೆ. 1969ರಲ್ಲಿ ಎಂ.ಎ. ವಿದ್ಯಾರ್ಥಿಯಾಗಿದ್ದಾಗ ಮಂಗಳೂರಿನಲ್ಲಿ ಒಂದು ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ನಡೆಯಿತು. ಸಿಂಪಿ ಲಿಂಗಣ್ಣ, ಹಾಮಾನಾ, ಜವರೇಗೌಡರು, ನಾಗೇಗೌಡರು ಮೊದಲಾದ ಖ್ಯಾತ ಸಾಹಿತಿಗಳು ಭಾಗವಹಿಸಿದ್ದರು. ಅಲ್ಲಿಂದ ನಾನು ಎಂ.ಎ. ಮುಗಿಸಿದ ಮೇಲೆ ನನ್ನ ಅಧ್ಯಾಪಕರು ರಾಮೇಗೌಡರು 'ನಮ್ಮ ಗಾದೆಗಳು' ಎಂಬ ಪುಸ್ತಕ ಕೊಟ್ಟು ನೀವೇಕೆ ನಿಮ್ಮ ಮಾತೃಭಾಷೆಯ ಗಾದೆಗಳನ್ನು ಸಂಗ್ರಹ ಮಾಡಿ ಒಂದೆಡೆ ಕಲೆಹಾಕಬಾರದು ಎಂದು ಕೇಳಿದರು. ಅಲ್ಲಿಯವರೆಗೆ ಜಾನಪದ ಅಂದರೆ ಏನೂ ಅಂತ ಗೊತ್ತಿರಲಿಲ್ಲ. ಎಂ.ಎ. ಯಲ್ಲಿ ಶಾಸ್ತ್ರೀಯ ಜಾನಪದ ಓದಿದವನೂ ಅಲ್ಲ. ಎಂ.ಎ. ಯಲ್ಲಿ ಉಳಿದ ವಿಷಯಗಳೊಂದಿಗೆ ಪಂಪ, ವಚನಸಾಹಿತ್ಯ, ಲಲಿತಪ್ರಬಂಧ ನನ್ನ ವಿಶೇಷ ವಿಷಯಗಳಾಗಿದ್ದವು. ಅಕಾಡೆಮಿಕ್ ಆಗಿ ಜಾನಪದ ಓದಿದವನೂ ಅಲ್ಲ. ಅಲ್ಲಿಂದ ನಾನು ತುಳು ಗಾದೆಗಳನ್ನು ಕಲೆಹಾಕಲು ಶುರು ಮಾಡಿದೆ. 1971ರಲ್ಲಿ ಗಾದೆಗಳು ಅಂತ ನನ್ನ ಮೊದಲನೇ ಪುಸ್ತಕ ಪ್ರಕಟವಾಯಿತು. ಪರಮೇಶ್ವರ ಭಟ್ಟರು ಒಗಟುಗಳ ಬಗ್ಗೆ ಮಾಡಲು ಹೇಳಿದರು. ಆ ಪುಸ್ತಕವು 1971ರಲ್ಲಿ ಪ್ರಕಟವಾಯಿತು. ಆಮೇಲೆ ನಾನು ಪಿಎಚ್.ಡಿ ಮಾಡಲು ಹೋದೆ. ಆಗ ಮಂಗಳೂರು ವಿಶ್ವವಿದ್ಯಾಲಯ ಪ್ರಾರಂಭವಾಗಿರಲಿಲ್ಲ. ಮೈಸೂರು ವಿಶ್ವವಿದ್ಯಾಲಯವೇ ನಮಗೆಲ್ಲ ಇದ್ದಿದ್ದು. ಕನ್ನಡ ವಿಶ್ವವಿದ್ಯಾಲಯದಲ್ಲಿ ಹಾಮಾನಾ ನಿರ್ದೇಶಕರಾಗಿದ್ದರು. ಆಗ ನಮ್ಮಲ್ಲಿ ಗೈಡ್ ಯಾರೂ ಇಲ್ಲ. ನೀವೇ ಗೈಡ್ ಆಗಬೇಕೆಂದು ಹಾಮಾನಾ ಅವರಲ್ಲಿ ಕೇಳಿಕೊಂಡೆ. ಆಗ ಅವರು ತುಳು ಜಾನಪದಲ್ಲಿ ಪಿಎಚ್.ಡಿ ಮಾಡಲು ತಿಳಿಸಿದರು. ಪಿಎಚ್.ಡಿ ಅಧ್ಯಯನವನ್ನು 1972ಕ್ಕೆ ಶುರುಮಾಡಿ 1978ರಲ್ಲಿ ಮುಗಿಸಿದೆ. ಮೈಸೂರು ವಿಶ್ವವಿದ್ಯಾಲಯದಿಂದ ತುಳು ಜಾನಪದಕ್ಕೆ ಸಿಕ್ಕ ಮೊದಲನೇ ಅವಾರ್ಡ್ ಆಗಿತ್ತು ಅದು. ಆಮೇಲೆ ಪ್ರಾಜೆಕ್ಟ್‌ಗಳಲ್ಲಿ ಫಿನ್‌ಲ್ಯಾಂಡ್, ಅಮೇರಿಕಾ, ಇಂಗ್ಲೆಂಡ್‌ಗಳಲ್ಲಿ ಕೆಲಸ ಮಾಡಿದೆ. ಪಂಪನನ್ನು ನಾನು 25 ವರ್ಷ ಪಾಠ ಮಾಡಿದೆ. ಎಂ.ಎ. ಯಲ್ಲಿ ಜಾನಪದ ಪಾಠ ಮಾಡ್ತಾ ಇದ್ದೆ. ಆದರೆ ನನ್ನ ಆಸಕ್ತಿಯ ವಿಷಯ ಪ್ರಾಚೀನ ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆ. ಉಳಿದ ವಿಷಯಗಳನ್ನೂ ಕೂಡ ಪಾಠ ಮಾಡಿದ್ದೆ. ಇಲ್ಲ ಅಂತಲ್ಲ. 36ವರ್ಷ ಅಧ್ಯಾಪನ ವೃತ್ತಿ ಮಾಡಿದ್ದೇನೆ. 2004– 07ರಲ್ಲಿ ಹಂಪಿಯಲ್ಲಿ ವಿ.ಸಿ. ಯಾಗಿ ಆಯ್ಕೆಯಾದೆ. ಮಂಗಳೂರು ಮತ್ತು ಹಂಪಿ ಹೀಗೆ ಎರಡು ವಿಶ್ವವಿದ್ಯಾನಿಲಯಗಳಲ್ಲಿ ವಿ.ಸಿಯಾಗಿ ಕಾರ್ಯನಿರ್ವಹಿಸಿದೆ. ಹಾಗೆ ಎಲ್ಲೂ ಸಾಧ್ಯವಿಲ್ಲ. ಆದರೆ ನನ್ನ ಕೆಲಸದಿಂದ ಅವರು ತುಂಬ ಇಂಪ್ರೆಸ್ ಆಗಿದ್ದರಿಂದ ನನಗೆ ಈ ಸದಾವಕಾಶ ಸಿಕ್ಕಿತು.

**ಪ್ರಶ್ನೆ:** ಕನ್ನಡದ ಯಾವುದೇ ಪರಿಜ್ಞಾನ ಇಲ್ಲದ ಯುರೋಪಿಯನ್ನರಿಗಾಗಿ 'ಅಂತರಾಷ್ಟ್ರೀಯ ಕನ್ನಡ ಬೇಸಿಗೆ ಶಿಬಿರ'ವನ್ನು ಹಮ್ಮಿಕೊಳ್ಳುತ್ತಾ ಇದ್ದೀರಿ. ಇದರ ಬಗ್ಗೆ ವಿವರಿಸುವಿರಾ? ಅದರ ಬಗ್ಗೆ ವಿದೇಶಿಯರ ಪ್ರತಿಕ್ರಿಯೆ ಹೇಗಿತ್ತು?

**ವಿವೇಕ ರೈ :** 3 ವರ್ಷ ಜರ್ಮನ್‌ನಲ್ಲಿ ಅತಿಥಿ ಉಪನ್ಯಾಸಕನಾಗಿ ಕೆಲಸ ಮಾಡಿದೆ. ಆರು ತಿಂಗಳಲ್ಲಿ ನಮ್ಮಲ್ಲಿ ಕಲಿಯುವುದನ್ನು ಅವರು ಮೂರುವರೆ ತಿಂಗಳಿನಲ್ಲಿ ಕಲಿತಿದ್ದರು. ಆರ್ಮನ್ ಅವರಿಗೆ ಗ್ರಾಮರ್ ನಲ್ಲಿ ಪರಿಪೂರ್ಣತೆಯಿತ್ತು. ಜರ್ಮನಿಯ ವ್ಯೂರ್ಟ್ಸ್‌ಬುರ್ಗ್ ವಿಶ್ವವಿದ್ಯಾನಿಲಯದ ಇಂಡಾಲಜಿ ವಿಭಾಗದ ಆಶ್ರಯದಲ್ಲಿ 'ಅಂತಾರಾಷ್ಟ್ರೀಯ ಕನ್ನಡ ಬೇಸಗೆ ಶಿಬಿರ' ಸೆಪ್ಟಂಬರ್ ತಿಂಗಳಿನಲ್ಲಿ ನಡೆಯಿತು. ಕನ್ನಡದ ಯಾವುದೇ ಪರಿಜ್ಞಾನ ಇಲ್ಲದ ಯುರೋಪಿಯನ್ನರಿಗೆ ಪ್ರಾಥಮಿಕ ಹಂತದಲ್ಲಿ ಕನ್ನಡವನ್ನು ಮಾತನಾಡಲು, ಓದಲು ಮತ್ತು ಬರೆಯಲು ಕಲಿಸುವ ಎರಡು ವಾರಗಳ ತೀವ್ರ ಕಲಿಕೆಯ ಈ ಶಿಬಿರದಲ್ಲಿ ನಾನು ಮತ್ತು ಡಾ. ಕತ್ರಿನ್ ಬಿಂದರ್ ಅಧ್ಯಾಪಕರಾಗಿ ಕೆಲಸ ಮಾಡಿದೆವು. ಸಾರಾ ಮೆರ್ಕ್ಲೆ ಶಿಬಿರಾರ್ಥಿಗಳಿಗೆ ಕನ್ನಡದ ಅಕ್ಷರಾಭ್ಯಾಸದ ಜೊತೆಗೆ, ನಾವು ಮಾಡಿದ ಪಾಠಗಳಿಗೆ ಸಂಬಂಧಿಸಿದಂತೆ ಪೂರಕ ವ್ಯಾಸಂಗದ ಅಭ್ಯಾಸ ಮಾಡಿಸಿದರು. ಚಳಿಗಾಲದಲ್ಲೂ ಇಂತಹ ಎರಡು ಶಿಬಿರಗಳನ್ನು ನಡೆಸುತ್ತಿರುತ್ತೇವೆ. ಒಂದು ಬೆಂಗಳೂರಿನಲ್ಲಿ ಇನ್ನೊಂದು ಜರ್ಮನಿಯಲ್ಲಿ.

**ಪ್ರಶ್ನೆ:** ಕನ್ನಡ ಅಥವಾ ತುಳು ಜಾನಪದ ಸಾಹಿತ್ಯಕ್ಕಿರುವ ಅಡ್ಡಿ ಆತಂಕಗಳೇನು? ಇದರ ಬಗ್ಗೆ ಹೇಳುವಿರಾ?

**ವಿವೇಕ ರೈ :** ಜಾನಪದದ ವಿಶ್ವವಿದ್ಯಾಲಯ ಮಾಡಬೇಕು. ಈಗ ಸೌಲಭ್ಯಗಳು ಹೆಚ್ಚಿವೆ. ವಿಶ್ವವಿದ್ಯಾಲಯಗಳಿಗೆ ಗ್ರ್ಯಾಂಡ್ ಸಿಕ್ಕುತ್ತಾ ಇದೆ. ಕೆಲಸ ಮಾಡುವರಿಗೆ ಹಣದ ಕೊರತೆ ಇಲ್ಲ. ಅವಕಾಶಗಳು ಹೆಚ್ಚುತ್ತಿವೆ. ಇವತ್ತಿನ ಪೀಳಿಗೆಯು ಯಾವುದೇ ರಿಸ್ಕ್ ತೆಗೆದುಕೊಳ್ಳಲು ತಯಾರಿಲ್ಲ. ಕೆಲಸಕ್ಕಾಗಿ ಡಿಗ್ರಿ ಅಲ್ಲ. ತಿಳುವಳಿಕೆಗಾಗಿ ಒಂದು ಡಿಗ್ರಿ ಇರಬೇಕು. ಕನ್ನಡಕ್ಕಂತಲ್ಲ ಇತರ ವಿಷಯಗಳಿಗೂ ನೌಕರಿ ಸಮಸ್ಯೆ ಇಲ್ಲ.

**ಪ್ರಶ್ನೆ:** ಶಿವರಾಮ ಕಾರಂತರೊಂದಿಗಿನ ನಿಮ್ಮ ಒಡನಾಟ ಹೇಗಿತ್ತು? ಅವರೊಂದಿಗೆ ಕಳೆದ ಕ್ಷಣಗಳನ್ನು ಹಂಚಿಕೊಳ್ಳುವಿರಾ?

**ವಿವೇಕ ರೈ :** ತಂದೆಯ ಕಾರಣಕ್ಕಾಗಿ ನನಗೆ ಕಾರಂತರ ಒಡನಾಟ ಲಭಿಸಿತು. ಇನ್ನೂ ಹೇಳಬೇಕೆಂದರೆ ನನಗೆ ಹೆಸರು ಇಟ್ಟಿದ್ದೇ ಕಾರಂತರು. ತಂದೆ ವಿವೇಕಾನಂದ ಅಂತ ಹೇಳಿದರು. ಅದಕ್ಕೆ ಕಾರಂತರು ವಿವೇಕಾನಂದ ಬೇಡ. ವಿವೇಕ ಇದ್ದರೆ ಆನಂದ ತನ್ನಿಂದ ತಾನೇ ಬರುತ್ತದೆ. ಆ ಕಾಲದಲ್ಲಿಯೇ ಕಾರಂತರ ಹುಚ್ಚುಮನಸ್ಸಿನ ಹತ್ತು ಮುಖಗಳು, ಮೂಕಜ್ಜಿಯ ಕನಸುಗಳು ಕೃತಿಗಳೂ ಮನೆಯಲ್ಲಿ ಇದ್ದವು. ಲೀಲಾ ಕಾರಂತರು ಮತ್ತು ನಮ್ಮ ತಾಯಿ ಅಕ್ಕ ತಂಗಿಯರ ಹಾಗೆ ಇದ್ದಿದ್ದರು. ಕಾರಂತರು ಕುಟುಂಬದೊಂದಿಗೆ ಬಂದು ನಮ್ಮ ಜೊತೆಯಲ್ಲಿ ಇರುತ್ತಿದ್ದರು. ತಂದೆಯ ಕಾರಂತರ ಮನೆಯಿಂದ ಓದಲು ತರುತ್ತಿದ್ದ ಪುಸ್ತಕವನ್ನು ನಾನು ವಾಪಾಸು ಕೊಡಲು ಹೋಗುತ್ತಿದ್ದೆ. ಹೈಸ್ಕೂಲಿಗೆ ಪುತ್ತೂರಿಗೆ ಹೋದೆ. ಆಗ ಕಾರಂತರು ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದರು. ರಾಜರತ್ನಂ. ನಾ. ಕಸ್ತೂರಿ ಅವರು ಅಲ್ಲಿಗೆ ಬರುತ್ತಿದ್ದರು. ಕಾರಂತರಲ್ಲಿ ಭಯ ಭಕ್ತಿಯ ಭಾವವಿತ್ತು. ಕನ್ನಡ ಎಂ. ಎ. ಮಾಡುವ ಸಂದರ್ಭದಲ್ಲಿ ಕಾರಂತರಲ್ಲಿ ಕೇಳಲು ಹೋದೆ. ಕನ್ನಡ ಎಂ.ಎ. ಮಾಡು ಸಾಹಿತಿಯಾಗುವುದು ಬೇರೆ ಆದರೆ

ಸಂಸ್ಕಾರವಾದರೂ ಬರುತ್ತದೆ ಎಂದು ಹೇಳಿದರು. ಫಸ್ಟ್ ರ್‍ಯಾಂಕ್ ಬಂದಾಗ ಇತರ ಅಧ್ಯಯನವನ್ನು ಮಾಡುವಂತೆ ಪ್ರೇರೇಪಿಸಿದರು. ಅಂತ್ರಾಪೋಲಜಿ ಓದದೆ ಇದ್ದರೆ ಕಾರಂತರನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯ.

**ಪ್ರಶ್ನೆ:** ತುಳು ಜಾನಪದ ಸಾಹಿತ್ಯದ ಜೀವಂತಿಕೆಗ, ಅದರ ಲವಲವಿಕೆಗೆ ತಾವು ಕೊಟ್ಟ ಕೊಡುಗೆ ಅಪಾರವಾದುದು. ಈ ನಿಟ್ಟಿನಲ್ಲಿ ಇನ್ನು ಮುಂದೆ ಮಾಡಬೇಕಾಗಿರುವ ಸಂಶೋಧನೆಯ ಬಗ್ಗೆ ತಾವೇನಾದರೂ ಯೋಜನೆ ಹಾಕಿಕೊಂಡಿದ್ದೀರಾ?

**ವಿವೇಕ ರೈ :** ತುಳು ಜಾನಪದಲ್ಲಿ ಸಾಕಷ್ಟು ಕ್ಷೇತ್ರ ಕಾರ್ಯ ನಡೆಯಬೇಕಾಗಿದೆ. ದಾಖಲೀಕರಣ ಬಹಳ ತುರ್ತಾಗಿ ಮಾಡಬೇಕಾಗಿದೆ. ಹೊಸ ತಲೆಮಾರು ಇದರಲ್ಲಿ ಯಾವ ಆಸಕ್ತಿಯನ್ನು ತೋರಿಸುತ್ತಿಲ್ಲ. ಹಳೆಯ ತಲೆಮಾರುಗಳು ಮರೆಯಾಗುತ್ತಿವೆ.

**ಪ್ರಶ್ನೆ :** ಜರ್ಮನ್‌ನಲ್ಲಿ ಕನ್ನಡವನ್ನು ಕಟ್ಟುವ ಕಾಯಕದಲ್ಲಿ ತಮ್ಮನ್ನು ಯಾವ ರೀತಿ ತೊಡಗಿಸಿಕೊಂಡಿದ್ದೀರಿ.

**ವಿವೇಕ ರೈ :** ಜರ್ಮನಿಯರಿಗೆ ಭಾಷೆಯನ್ನು ಮೊದಲು ಕಲಿಸಿದೆ. ವಚನ, ಕುವೆಂಪು, ಅನಿಕೇತನ, ದಾಸರ ಕೀರ್ತನೆಗಳು, ಜನಪದ ಕಾವ್ಯಗಳನ್ನು ಓದಿಸುತ್ತಾ ಕನ್ನಡ ಭಾಷೆಯ ಜೊತೆಗೆ ಕನ್ನಡ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಅಭಿರುಚಿ ಹುಟ್ಟಿಸುವ ಪ್ರಯತ್ನ ಮಾಡಿದ್ದೆ.

**ಪ್ರಶ್ನೆ :** ಈವಾಗಿನ ಕನ್ನಡ ಸಾಹಿತ್ಯ ಅಥವಾ ಕನ್ನಡ ಭಾಷೆಯ ಬಗ್ಗೆ ನಿಮ್ಮ ನಿಲುವನ್ನು ವ್ಯಕ್ತಪಡಿಸುವಿರಾ?

**ವಿವೇಕ ರೈ :** ಕನ್ನಡ ಭಾಷೆ ನಶಿಸುತ್ತಿಲ್ಲ. ಬದಲಾಗುತ್ತ ಇದೆ. 6000 ಮಂದಿ ಬ್ಲಾಗ್ ಬರೆಯುತ್ತಿದ್ದರೆ, ಇಂಟರ್‌ನೆಟ್, ಅವಧಿ, ಆನ್‌ಲೈನ್ ಎಲ್ಲವೂ ಹೆಚ್ಚಾಗುತ್ತಾ ಇದೆ. ಕನ್ನಡ ವಿಕಿಪೀಡಿಯಾ, ಕಣಜದಲ್ಲಿ ಕನ್ನಡದ ಬಳಕೆ ಜಾಸ್ತಿಯಾಗುತ್ತಿದೆ. ಈಗಿನವರಿಗೆ ಹಳೆಗನ್ನಡದಲ್ಲಿ ಆಸಕ್ತಿ ಇಲ್ಲ. ಆದ್ದರಿಂದ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು ಅಷ್ಟೆ. ನಗರಗಳಲ್ಲಿ ಅನ್ಯಭಾಷೆಯ ಮಿಶ್ರಣ ಜಾಸ್ತಿಯಾಗುತ್ತಿದೆ. ಆದರೆ ಅನ್ಯ ಭಾಷೆ ಕಲಿಯುವುದರಲ್ಲಿ ಯಾವುದೇ ತಪ್ಪಿಲ್ಲ. ಜ್ಞಾನಕ್ಕಾಗಿ ಇನ್ನೊಂದು ಭಾಷೆಯನ್ನು ಕಲಿಯಬೇಕು. ಕನ್ನಡದ ಸಂದರ್ಭದಲ್ಲಿ ಆಳ ಸ್ವಲ್ಪ ಕಡಿಮೆ ಇದೆ. ಆದರೆ ಈಗ ಬರವಣಿಗೆ ಹೆಚ್ಚಾಗ್ತ ಇದೆ. ಆದರೆ ಅಧ್ಯಯನಶೀಲತೆ ಕಡಿಮೆಯಾಗಿದೆ.


**ಪ್ರಶ್ನೆ:** ಕನ್ನಡದಲ್ಲಿ ಸಂಶೋಧನೆಯಲ್ಲಿ ತೊಡಗಿಕೊಂಡಿರುವ ವಿದ್ಯಾರ್ಥಿಗಳಿಗೆ ನಿಮ್ಮ ಕಿವಿಮಾತು ಏನು?


**ವಿವೇಕ ರೈ :** ಮೊದಲು ವಿಷಯದ ಆಯ್ಕೆ ಬಹು ಮುಖ್ಯವಾದುದು. ಸಂಶೋಧನ ವಿದ್ಯಾರ್ಥಿಗಳು ವಿಷಯವನ್ನು ಆರಿಸುವ ಮೊದಲು ಅದರ ಬಗ್ಗೆ ಈಗಾಗಲೇ ಪೂರ್ಣವಾಗಿ ಏನೇನು ಕೆಲಸಗಳೇನಿದೆ ಅನ್ನೋದನ್ನು ತಿಳಿದುಕೊಳ್ಳಬೇಕು. ರಿಸರ್ಚ್ ಮೆಥಡೋಲಜಿ ಮತ್ತು ಯಥಾವತ್ತಾಗಿ ವಿಷಯದ ಮೇಲೆ ಅಧ್ಯಯನ ನಡೆಸಬೇಕು. ಸಾಮಾಗ್ರಿಗಳ ಸಂಗ್ರಹಣೆ ಮಾಡಬೇಕು. ಕ್ಷೇತ್ರ ಕಾರ್ಯ ಮಾಡಬೇಕು, ಹಳೆಯ ಗ್ರಂಥಾಲಯದಲ್ಲಿ ಇವರೆಗಿನ ಹೆಚ್ಚಿನ ಚರ್ಚೆಗಳು ಏನೇನು ಬಂದಿವೆ ಅನ್ನೋದನ್ನು ಅಧ್ಯಯನ ಮಾಡಬೇಕು. ಅಧ್ಯಯನದಲ್ಲಿ ಪರಿಪೂರ್ಣತೆ ಇರಬೇಕು. ಒಟ್ಟಿನಲ್ಲಿ ಸಂಶೋಧನ ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಶ್ರದ್ಧೆ, ನಿಷ್ಠೆ ಇರಬೇಕು.

ಒಟ್ಟಾರೆ ಡಾ. ಬಿ.ಎ. ವಿವೇಕ ರೈ ಅವರೊಂದಿಗೆ ಕಳೆದ ಸಂಜೆ ಅವಿಸ್ಮರಣೀಯದಾಗಿತ್ತು. ಹೀಗೆ ಡಾ. ವಿವೇಕ ರೈ ಅವರು ನಮ್ಮೊಂದಿಗೆ ಅವರ ಮನದಾಳದಲ್ಲಿ ಹುದುಗಿದ್ದ ವಿಚಾರಗಳನ್ನು ಹಂಚಿಕೊಂಡರು. ಬಹಳ ಹುರುಪಿನಿಂದಲೇ ವಿವೇಕ ರೈ ಅವರು ಇಲ್ಲಿಯ ಪ್ರಶ್ನೆಗಳಿಗೆ ಉತ್ತರಿಸಿದರು. ಅದನ್ನು ಇಲ್ಲಿ ಲೇಖನರೂಪದಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದೇನೆ.


●



ಹಂಪಾನಾ ಅವರ ಹಸ್ತಾಕ್ಷರ.



ವಿವೇಕ ರೈ ಅವರ ಹಸ್ತಾಕ್ಷರ.

# ಮೈಸೂರು ಅಸೋಸಿಯೇಶ್‌ನ ದತ್ತಿ ಉಪನ್ಯಾಸ ಮಾಲಿಕೆ
# (1982 – 2016)


**ಸುಮಾರು ಮೂವತ್ತನಾಲ್ಕು ವರ್ಷಗಳಿಂದ ಮೈಸೂರು ಅಸೋಸಿಯೇಶನ್ ಮತ್ತು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಜಂಟಿಯಾಗಿ ಹಮ್ಮಿಕೊಂಡು ಬರುತ್ತಿರುವ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಮಾಲಿಕೆಯಲ್ಲಿ ಇಲ್ಲಿಯವರೆಗೆ ಕನ್ನಡದ ದೊಡ್ಡ ದೊಡ್ಡ ಸಾಹಿತಿಗಳು ಪಾಲ್ಗೊಂಡು ಉಪನ್ಯಾಸವನ್ನು ನೀಡಿರುತ್ತಾರೆ. ಅವರ ವಿದ್ವತ್‌ಪೂರ್ಣ ಉಪನ್ಯಾಸವನ್ನು ಸಿಕ್ಕಿದಷ್ಟನ್ನು ಒಂದೆಡೆ ಕಲೆ ಹಾಕುವ ಮೂಲಕ ಮತ್ತೊಮ್ಮೆ ಅವರ ಮಾತುಗಳನ್ನು ಮೆಲುಕು ಹಾಕುವ ಪ್ರಯತ್ನವನ್ನು ಈ ಸಂಚಿಕೆಯ ಮೂಲಕ ಮಾಡುತ್ತಿದ್ದೇವೆ.**

**ಸಂ.**


## ದತ್ತಿ ಉಪನ್ಯಾಸ – ಜನವರಿ 1982

### ಡಾ. ಎಚ್. ಕೆ. ರಂಗನಾಥ್ ಅವರ ಉಪನ್ಯಾಸ

ಮೈಸೂರು ಅಸೋಸಿಯೇಶನ್ ತನ್ನ ಬಂಗಾರ ಹಬ್ಬದ ಆಚರಣೆಯ ಜ್ಞಾಪಕಾರ್ಥ ಏನಾದರೂ ಸಾರ್ಥಕವಾದದ್ದನ್ನು ಮಾಡಬೇಕೆಂದು ಬಯಸಿದಾಗ ಆಗಿನ ಮುಂಬಯಿ ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿದ್ದ ಪ್ರೊ. ಚಿದಂಬರ ದೀಕ್ಷಿತರ ಸಲಹೆಯ ಮೇರೆಗೆ ವಿಶ್ವ ವಿದ್ಯಾಲಯದಲ್ಲಿ ಉಪನ್ಯಾಸ ಕಾರ್ಯಕ್ರಮಕ್ಕಾಗಿ ಮೊಟ್ಟ ಮೊದಲ ದತ್ತಿಯನ್ನು ನೀಡಿ ಈ ಉಪನ್ಯಾಸ ಮಾಲೆಗೆ ಮೈಸೂರು ಅಸೋಸಿಯೇಶನ್ ಚಾಲನೆ ನೀಡಿತು. ಕಾರಣಾಂತರಗಳಿಂದ ಇದು 1976ರಲ್ಲಿ ಆರಂಭವಾಗದೆ 1982ರಲ್ಲಿ ಆರಂಭವಾಯಿತು.




ಈ ದತ್ತಿ ಉಪನ್ಯಾಸ ಮಾಲೆಯ ಮೊದಲ ಉಪನ್ಯಾಸಕಾರರಾಗಿ ಪ್ರೊ. ಎಚ್. ಕೆ. ರಂಗನಾಥ್ ಅವರು ಜನವರಿ 8, 1982 ರಂದು 'ಕನ್ನಡ ನಾಟಕ ಮತ್ತು ಕಲೆ' ಈ ವಿಷಯದ ಮೇಲೆ ಉಪನ್ಯಾಸ ನೀಡಿದರು. ಇದಕ್ಕಾಗಿ ಅಂದಿನ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ಪ್ರೊ. ರಾಮಜೋಶಿಯವರು ಮುಖ್ಯ ಅಥಿತಿಗಳಾಗಿ ಹಾಜರಿದ್ದರು ಮತ್ತು ಉಪನ್ಯಾಸ ಮಾಲೆಗೂ ಹಾಗೂ ಅಸೋಸಿಯೇಶನ್ ಏರ್ಪಡಿಸಿದ್ದ ಅಸೋಸಿಯೇಶನ್‌ನಲ್ಲಿ ನಡೆದ ನಾಟಕೋತ್ಸವಗಳ ಭಾವಚಿತ್ರದ ಪ್ರದರ್ಶನಕ್ಕೂ ಚಾಲನೆ ನೀಡಿದರು. ಶ್ರೀ. ಕೆ.







ಮಂಜುನಾಥಯ್ಯನವರು ಅಥಿತಿಗಳ ಹಾಗೂ ಉಪನ್ಯಾಸಕಾರರ ಪರಿಚಯ ಮಾಡಿಕೊಟ್ಟರು.

ಪ್ರೊ. ಎಚ್. ಕೆ. ರಂಗನಾಥ್ ಅವರು ಕನ್ನಡದಲ್ಲಿ ನಾಟಕಗಳು ಬೆಳೆದು ಬಂದ ಬಗೆ, ಅದಕ್ಕೆ ಪೂರಕವಾಗಿ ಸೇರಿಸಿಕೊಂಡ ಇತರ ಹಲವು ಬಗೆಯ ಜಾನಪದ ಕಲೆಗಳು ಮತ್ತು ನಾಟಕಗಳ ಇಂದಿನ ಸ್ಥಿತಿಗತಿಗಳ ಬಗ್ಗೆ ಬಹಳ ಸ್ವಾರಸ್ಯ ಪೂರ್ಣವಾಗಿ ಮೂರು ದಿನಗಳು ಉಪನ್ಯಾಸವಿತ್ತರು. ನಾಟಕಗಳ ಬಗ್ಗೆ ವಿಶೇಷ ಅಧ್ಯಯನ, ವಿಮರ್ಶೆಯಲ್ಲಿ ಪರಿಣಿತರಾದ, ರೇಡಿಯೋ ನಾಟಕಗಳಿಂದ ಬಹು ಪರಿಚಿತರಾಗಿದ್ದ ಇವರ ಮಾತುಗಳನ್ನು ಕೇಳಲು ನಾಟಕಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದುದು ಮಾತ್ರವಲ್ಲ, ಅವರೊಡನೆ ಸಂವಾದದಲ್ಲೂ ಭಾಗವಹಿಸಿ ಧನ್ಯರಾದರು.

# ದತ್ತಿ ಉಪನ್ಯಾಸ – ಮಾರ್ಚ್ 1983

### ಡಾ. ಕೀರ್ತಿನಾಥ್ ಕುರ್ತುಕೋಟಿಯವರ ಉಪನ್ಯಾಸ

ಮುಂಬಯಿಯ ಮೈಸೂರು ಅಸೋಸಿಯೇಷನ್ನಿನ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಮಾಲೆಯನ್ನು ಮುಂಬೈ ವಿಶ್ವವಿದ್ಯಾಲಯವು ಮೈಸೂರು ಅಸೋಸಿಯೇಷನ್ನಿನ ಜತೆಗೂಡಿ ಜನವರಿ 29, 30 ಹಾಗೂ 31 ರಂದು ಅಸೋಸಿಯೇಷನ್ನಿನ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

"ಬೇಂದ್ರೆಯವರ ಕಾವ್ಯಮುಖಗಳು" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಕನ್ನಡದ ಹೆಸರಾಂತ ವಿಮರ್ಶಕರಾದ ಪ್ರಾ. ಕೀರ್ತಿನಾಥ ಕುರ್ತುಕೋಟಿಯವರು ನಡೆಸಿಕೊಟ್ಟರು. ಮೂರು ದಿನಗಳು ನಡೆದ ಉಪನ್ಯಾಸ ಮಾಲೆಯಲ್ಲಿ ಶ್ರೀ ಕೀರ್ತಿನಾಥ ಕುರ್ತುಕೋಟಿಯವರು ಬೇಂದ್ರೆಯವರ ಕಾವ್ಯದ ಉಗಮ, ಭಾವಗೀತೆಗಳ ಚಿತ್ರಣ, ಬೃಹತ್‌ಗೀತೆಗಳ ಬಗ್ಗೆ ವಿಶ್ಲೇಷಣೆ ಮತ್ತು ಇತ್ತೀಚಿನ ಕವಿತೆಗಳ ಪರಿಚಯವನ್ನು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ತಿಳಿಯಪಡಿಸಿ ನೆರೆದಿದ್ದ ಸಭಿಕರಿಗೆ ಬೇಂದ್ರೆಯವರ ಕಾವ್ಯದ ಸೊಬಗು ಹಾಗೂ ಹಿರಿಮೆಯನ್ನು ವಿವರಿಸಿದರು.

ಪ್ರಾರಂಭದ ದಿನ ಪರಿಚಯ ಭಾಷಣವನ್ನು ಅಸೋಸಿಯೇಷನ್ನಿನ ಕಾರ್ಯದರ್ಶಿ ಶ್ರೀ. ಮಂಜುನಾಥಯ್ಯನವರು ಮಾಡಿದರು. ಉಪನ್ಯಾಸ ಮಾಲೆಯ ಉದ್ಘಾಟನೆಯನ್ನು ಅಸೋಸಿಯೇಷನ್ನಿನ ಹಿರಿಯ ಸದಸ್ಯರೂ ಮತ್ತು ಮಾಜಿ ಅಧ್ಯಕ್ಷರೂ ಆದ ಡಾ. ಸಿ. ನಂಜುಂಡಯ್ಯನವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಪ್ರೊ. ಚಿದಂಬರ ದೀಕ್ಷಿತರು ವಹಿಸಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಶ್ರೀಮತಿ ಸುಶೀಲಾ ಆಚಾರ್ಯರ ನಿರ್ದೇಶನದಲ್ಲಿ ಅಸೋಸಿಯೇಷನ್ನಿನ ಕಲಾವಿಭಾಗದವರು ಬೇಂದ್ರೆಯವರ ಪ್ರಮುಖ ಭಾವಗೀತೆಗಳನ್ನೊಳಗೊಂಡ "ಬೇಂದ್ರೆ ಹೊನಲು" ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಅಂದಿನ ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀ. ಮ. ಅ. ನಾ. ಪ್ರಸಾದವರು ಮಾಡಿದರು.


ಕಡೆಯ ದಿನದ ಕಾರ್ಯಕ್ರಮದ ಕೊನೆಯಲ್ಲಿ ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಹಕಾರದಿಂದ ಬೇಂದ್ರೆಯವರ ಬಗ್ಗೆ ಸ್ವಾರಸ್ಯಕರವಾದ ಸಾಕ್ಷ್ಯಚಿತ್ರವನ್ನು ತೋರಿಸಲಾಯಿತು. ಸ್ಥಳೀಯ ಕಲಾವಿದರಾದ ಶ್ರೀ. ಶಂಕರ ಗಾವಡೆಯವರು ರಂಗೋಲಿಯಲ್ಲಿ ಹಾಕಿದ ಬೇಂದ್ರೆಯವರ ಭಾವಚಿತ್ರ ಎಲ್ಲರನ್ನೂ ಆಕರ್ಷಿಸಿತು.

ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದವರೆಲ್ಲರಿಗೂ ಡಾ. ಮಂಜುನಾಥರು ಕೃತಜ್ಞತೆಗಳನ್ನು ಸಲ್ಲಿಸಿದರು.

"ಬೇಂದ್ರೆಯವರು ಧಾರವಾಡದ ಮಣ್ಣಿನಲ್ಲಿ ಹುಟ್ಟಿ ಬಂದ ಬಹು ದೊಡ್ಡ ಜೀವ" ಎಂಬ ಪ್ರಾ. ಚಿದಂಬರ ದೀಕ್ಷಿತರ ಮಾತು ಸತ್ಯ. ಧಾರವಾಡವನ್ನರಿತರೆ ಬೇಂದ್ರೆಯವರನ್ನರಿಯುವುದು ಸುಲಭವಾಗುತ್ತದೆ. ಇಂದಿಗೂ ಧಾರವಾಡ, ಜಾನಪದ ರೀತಿಯ ಜೊತೆಗೆ ಪಟ್ಟಣದ ಪರಿಷ್ಕಾರ ಪಡೆದ ಊರು. ಬೇಂದ್ರೆಯವರ ಕಾವ್ಯಭಾಷೆ ಜಾನಪದವಾಗಿದ್ದರೂ ಅವರ ಕಲೆ ಅತ್ಯಂತ ಪರಿಷ್ಕೃತ. ಬೇಂದ್ರೆಯವರ ಜೀವನದಲ್ಲಿ ಧಾರವಾಡದಿಂದಾಚೆಗೆ ವಾಸಿಸುವ ಸಂದರ್ಭ ಬಂದರೂ ಅವರು ಸಾಧಕೇರಿಗೆ ಮರಳಿ ಬರುವಾಗ ಅವರಿಗಾದ ಹಿಗ್ಗು ಅಷ್ಟಿಷ್ಟಲ್ಲ.

'ಬಾರೋ ಸಾಧನಕೇರಿಗೆ
ಮರಳಿ ನಿನ್ನ ಊರಿಗೆ
ಮಳೆಯು ಎಳೆಯುವ ತೇರಿಗೆ
ಹಸಿರು 'ಏರಿದೆ' ಏರಿಗೆ
ಹಸಿರು ಸೇರಿದೆ ಊರಿಗೆ
ಹಸಿರು ಚಾಚಿದೆ ದಾರಿಗೆ
ನಂದನದ ತುಣುಕೊಂದು ಬಿದ್ದಿದೆ
ನೋಟ ಸೇರದು ಯಾರಿಗೆ'

ಎನ್ನುತ್ತಾರೆ. ಇಂಥಾ ಸಾಧನಕೇರಿಯ ಸೌಂದರ್ಯವನ್ನು ನೋಡಲು ಮಲೆಯ ಮುಖವೇ ತಿರುಗಿದೆ ಎನ್ನುತ್ತಾರೆ. ಹಾಗೆಯೇ ಕರ್ನಾಟಕದ ಸಂಸ್ಕೃತಿಯ ದೊಡ್ಡ ಪಾಲು ಧಾರವಾಡಕ್ಕೆ ಸೇರಿದ್ದು, ಬೇಂದ್ರೆಯವರು ಚಿಕ್ಕಂದಿನಲ್ಲಿಯೇ ಶಾಂತಕವಿಗಳನ್ನು ಕಂಡಿದ್ದರು. ಅವರ ಮೇಲಿನ ಪ್ರೀತಿ "ಶಾಂತಕವಿಗಳ ವಿಶ್ರಾಂತಿ" ಎಂಬ ಶಾಂತಕವಿಗಳಿಗೆ ಪ್ರಿಯವಾದ ವಾರ್ಧಿಕ ಷಟ್ಪದಿಯ ಪದ್ಯದಲ್ಲಿ ಹೊಮ್ಮಿದೆ. ಶಾಂತಕವಿಗಳು ಕನ್ನಡ ನಾಟಕಕ್ಕಾಗಿ ದುಡಿದವರು. ಕನ್ನಡದ ಮಾಸ್ತರರಾದ ಇವರನ್ನು ನಾಟಕ ಆಡಿಸಬಾರದೆಂದು ಊರಿಂದೂರಿಗೆ ವರ್ಗ ಮಾಡುತ್ತಿದ್ದರು. ಗದುಗಿನಿಂದ ಹೊಂಬಳಕ್ಕೆ ಮಾಡಿದರೂ ಇವರು ನಾಟಕ ಬಿಡದೆ, ಹೊಡೆದಾಡಿ ಸಾಹಿತ್ಯ ಸಮ್ಮೇಳನಕ್ಕೆ ದುಡ್ಡು ಕೊಡಿಸಿದರು. ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನ ಧಾರವಾಡದಲ್ಲಿ ಜರುಗಿದಾಗ ಕವಿತೆಯನ್ನು ಓದುವ ಅವಕಾಶ ದೊರೆಯಲಿಲ್ಲ. ಇವರ 'ವಿದ್ಯಾರಣ್ಯ ಕೀರ್ತನೆ' ಆಲೂರರ 'ಗತವೈಭವ' ಮಾಡಿದ ಕೆಲಸ ಮಾಡಿತ್ತು. ಇವೆಲ್ಲ ಬೇಂದ್ರೆಯವರಿಗೆ ಗೊತ್ತಿತ್ತು. ಅಂತೆಯೇ 'ನಟ ತೆರೆಯ ಮರೆಯಾದ ಆಟ ತೀರಿಸಿಕೊಂಡು, ಭಟ ಸಮರದಿಂದ ತೆರಳಿದ ಅರಸನರಮನೆಗೆ, ಪಟು ಪಾಡುಗಾ ತುಟಿ ಮುಚ್ಚಿದನು ನಾಡು ನುಡಿಗಳ ಹಾಡುಗಳನ್ನು ಹಾಡಿ' ಎನ್ನುತ್ತಾರೆ. 'ಹಟದಿ ಕೀರ್ತನಕಾರ ಬೆವರನೊರಿಸಲು ಹಿಂದೆ ಸರಿದ ವಿಶ್ರಾಂತಿಗಾಗಿ'



ಎಂಬ ಸಾಲು ಈಗ ನಟ ಹೋದರೂ ಇನ್ನೊಂದು ಆಟಕ್ಕೆ ಬರುವ ಎಂಬ ಆಸೆ ಮೂಡಿಸುತ್ತದೆ.

'ಓದುವವರು ದಣಿಯಬಹುದು' ಕಾವ್ಯ ದಣಿಯುವುದಿಲ್ಲ. ಇಂಥ ಕವಿತೆ ಬೇಂದ್ರೆ ಬಹಳ ಬರೆದರು. 'ಪಾತರಗಿತ್ತಿ ಪಕ್ಕ' ಇಂಥ ಪದ್ಯ. ಉತ್ತರ ಕರ್ನಾಟಕದ ಹೂವುಗಳೆಲ್ಲ ಮುಗಿಯುವವರೆಗೆ ಅಡ್ಡಾಡುತ್ತದೆ ಈ ಚಾಂಚಲ್ಯದ ಪ್ರತೀಕ. ಕವಿ ಕೇಳ್ತಾನೆ, 'ಇನ್ನು ಎಲ್ಲಿಗೋಟ'? ಅದು ಉತ್ತರಿಸುತ್ತದೆ 'ನಂದನದ ತೋಟ' ಎಂದು. 'ಬೆಳದಿಂಗಳ ನೋಡಿ' ಎಂಬ ಲೋಕಪ್ರಿಯ ಪದ್ಯ ಒಂದು

ಮಂತ್ರ. ಅರ್ಥವಿಲ್ಲದಿದ್ದರೂ ಪರಿಣಾಮವಿದೆ. ಪಾರಿಜಾತದ ಹೂವನ್ನು ವರ್ಣಿಸುವಾಗ 'ಸಂಜೆಗಂಪು ಅದರ ಹಿಂದೆ, ಬೆಳದಿಂಗಳು ಅದರ ಮುಂದೆ' ಅಂದಿದ್ದಾರೆ. ದವನದ ಹುಣ್ಣಿಮೆ ಬಣ್ಣಿಸುವಾಗ 'ಹಣ್ಣಾದ ಬಿಸಿಲು ಬೆಳದಿಂಗಳಾಯಿತು' ಎಂದಿದ್ದಾರೆ. ದಿನವೆಲ್ಲಾ ಬೀಸಿಬಂದ ಗಾಳಿ ಗಿಡದ ಗೊನೆಗೆ ಕುಳಿತು ತೂಕಡಿಸುತ್ತದೆ; ಬೆಳದಿಂಗಳು ಗಾಳಿ ಎಂಬ ಹಕ್ಕಿಯ ತುಪ್ಪಳದ ಗೂಡು ಎನ್ನುತ್ತಾರೆ. ಇನ್ನೊಂಡಡೆ ಬಿತ್ತಿ ಮಳೆಯ ಬಗ್ಗೆ ಬರೆಯುತ್ತಾರೆ. ಹಳ್ಳಿಜನ ಪ್ರತಿ ನಕ್ಷತ್ರದ ಬಗ್ಗೆ ಕೂಡ ಒಂದೊಂದು ಮಾತು ಹೇಳುತ್ತಾರೆ. 'ಹುಬ್ಬಿ ಹುಬ್ಬ ಹಾರಿಸ್ತದ' ಮಿರಗ ಮಾಲಿ ಹಿಡಕೊಂಡ ಒರಗಾ; 'ಕುರುಡು ಬಿತ್ತಿ' ಕುರುಡು ಪ್ರೀತಿಯ ಹಾಂಗ ಕುರುಡು ಬಿತ್ತಿ ಮಳೆ ಬೀಳುತ್ತದೆ' ಅಂತಾರೆ. ಒಂದೆಡೆ ಮಳೆ ಬಿದ್ದರೆ ಇನ್ನೊಂದೆಡೆ ಬಿಸಿಲು.

ಬೇಂದ್ರೆಯವರ ಕೆಲವು ಪ್ರಣಯ ಕವಿತೆಗಳನ್ನು ನೋಡಬಹುದು. 'ಮೈಸೂರು ಮಲ್ಲಿಗೆ'ಯಲ್ಲಿ ನರಸಿಂಹಸ್ವಾಮಿಗಳು ನಾಗರಿಕ ಪ್ರಣಯವನ್ನು ಚೆನ್ನಾಗಿ ತೋರಿದ್ದರೆ, ಬೇಂದ್ರೆಯವರು 'ಕಾಮ ಕಸ್ತೂರಿ'ಯಲ್ಲಿ ಹಳ್ಳಿಯ ಜೀವನವನ್ನು ಮೈಗೂಡಿಸಿಕೊಂಡ ಕವಿತೆ ಬರೆದಿದ್ದಾರೆ. 'ಕಣ್ಣಿವಿ ತೆರೆದರೆ ಹುಣ್ಣಿವಿ ತೆರೆಧಾಂಗ' 'ನೇತ್ರ ಪಲ್ಲವಿಯಿಂದ ಸೂತ್ರಗೊಂಬಿ ಹಾಂಗ ಪಾತ್ರ ಕುಣಿಸ್ಯಾನ, ನಲುಮಿಯ ಜಾತ್ರಿ ಎನಿಸಿತ್ತ ಜನುಮವು' ಎನ್ನುವ ಪದ್ಯ.

'ಕವಳ ಮೆಲುವ ಬಾಯ ಹವಳ ತುಟಿ ಹಿಂಡುತ್ತ ನಿವಳ ನಿಂತಾಳ ನಿಲಿವಿಲಿ, ಗಿಣಿ ಹೇಳ ಇವಳ ಮನವೆಲ್ಲಿ ಇರಬಹುದು' ಇಲ್ಲಿ ಅದ್ಭುತ ಚಿತ್ರಕ ಶಕ್ತಿ ಕಾಣುತ್ತದೆ. ಹಾಗೆಯೇ ಪ್ರಣಯವನ್ನು ಬಿಚ್ಚಾಗಿ ಹೇಳುವ ರೀತಿ ಕೂಡ ಬೇಂದ್ರೆಯವರಲ್ಲಿ ಕಂಡು ಬರುತ್ತದೆ. 'ವಾರಿನೋಟ ಹಾರುತಿತ್ತೋ ಹೊಲಿಮ್ಯಾಗ, ಹೊಸ ಹರೆ ಈಸತಿತ್ತೋ ಹೊಳಿಯಾಗ' ಡನೆ ಕಾಳಿದಾಸರಲ್ಲಿ ಕಾಣುವ ಕರ್ಮ ಕೌಶಲ ಬೇಂದ್ರೆಯವರಲ್ಲಿ ಕಾಣುತದೆ. ಬೇಂದ್ರೆಯವರು ಕನಸಿಗರು, ಕನಸಿಗನಿಗೆ ಪುರಾಣದ ಕತೆಯಲ್ಲಿ ಎಳೆತವಿಲ್ಲ. ಮಜ್ನು ರೀತಿಯ ಪ್ರಣಯಬೇಕು ಅವನಿಗೆ.


'ನಾ ಕಂಡ ಬೆಳಕಿನ ಹಣ್ಣು, ನೀನು ನೀನಲ್ಲ ಚಿತ್ರದ ಹೆಣ್ಣು, ನನಗ್ಯಾಕ ಹುಬ್ಬಿನ ಡೊಂಕ, ಎದಿಗಳ ಬಿಂಕ, ಕಣ್ಣುಗಳ ಸುಂಕ, ನನ ಚಿತ್ತದಾಗಿನ ಚಿತ್ರಗಾರ, ಬರೆದಾನ ಚಿತ್ತಕ ಕಣ್ಣು, ನಾ ಕಂಡ ಬೆಳಕಿನ ಹೆಣ್ಣು' ಇಲ್ಲಿ ಸುಂಕ ಎಂಬ ಶಬ್ದ "itch" ಎಂಬರ್ಥದಲ್ಲಿ ಉಪಯೋಗಿಸಲಾಗಿದೆ. ಇನ್ನೊಬ್ಬ ಪ್ರಣಯದ ವ್ರತ ತೊಟ್ಟವ ಹೀಗೆ ಅನ್ನುತ್ತಾನೆ. 'ನಿನ ಸ್ಪರ್ಶ ಹರ್ಷದಾ ಚಿಲುಮಿ, ಅಲ್ಲಿ ನೀರಾಟವಾಡತದ ಒಲುವಿ' ಕಾವ್ಯರಸಿಕ ಅನ್ನುತ್ತಾನೆ. 'ಏನ್ಯೆತಿ ಸುಗ್ಗಿಯ ಹುರುಡ, ಯಾಕ ಉಳಿದೆಲ್ಲ ತಿಂಗಳ ಬರಡ' ವಸಂತ ಎಂದರೆ sophisticated ಶಬ್ದ ಆಗತ್ತದೆ ಅಂತ ಸುಗ್ಗಿ ಎಂಬ ಜಾನಪದ ಶಬ್ದ ಪ್ರಯೋಗ ಮಾಡಿ ಬೇಕಂತಲೆ debunk ಮಾಡಿ ಬಿಡ್ತಾರೆ. ಪ್ರಣಯಕ್ಕೂ ಅಮರತ್ವಕ್ಕೂ ಏನೋ ಸಂಬಂಧ ಬೇಂದ್ರೆ ಕಂಡಿದ್ದಾರೆ. ಅಮರತ್ವದ ಪರಿಭಾಷೆಯಲ್ಲಿ, ಪರಿಪ್ರೇಕ್ಷೆಯಲ್ಲಿ ಇಡೀ ಕವಿತೆ ಬರೆದಿದ್ದಾರೆ.

ಕಲ್ಪವೃಕ್ಷ ವೃಂದಾವನಗಳಲಿ
ಹೇಗೋ ಹೊಕ್ಕು ಬಂದೆ
ಅಲ್ಲ ಎಚ್ಚರವು ಅಲ್ಲ ನಿದ್ರೆಯೂ
ಏನೋ ಯೋಗದಿಂದ ಸುಳಿದೆ
ಅಲ್ಲಿಯೂ ನನ್ನ ಸಹಜ ಸಖಿ
ನೀನು ಹಿಂದೆ ಮುಂದೆ

ಸಹಜ ಎಂಬುವ ಮಾತು ಬೇಂದ್ರೆ ಮತ್ತೆ ಮತ್ತೆ ಉಪಯೋಗಿಸುತ್ತಾರೆ. ಜೊತೆಯಾಗಿ ಹುಟ್ಟಿ ಬಂದವಳು ಎಂಬರ್ಥದಲ್ಲಿ 'ಭೃಂಗದ ಬೆನ್ನೇರಿ ಬಂತು' ಪದ್ಯದಲ್ಲಿ 'ಮಸೆದ ಗಾಳಿ ಪಕ್ಕ ಪಡೆಯುತ್ತಿತ್ತು ಸಹಜಪ್ರಾಸ' ಅನ್ನುತ್ತಾರೆ.



ಪ್ರತಿಯೊಬ್ಬನಿಗೂ ಸಹಜ ಸಖಿ ಇರಬೇಕು, ಎಷ್ಟೋ ಸಲ ಸಿಕ್ಕಿರುವುದಿಲ್ಲ. ತಾವು ಕಂಡ ಸುಖದ ಬಗ್ಗೆ ಹೇಳುತ್ತಾ 'ಭೋಗದಲ್ಲಿ ಕಾಲ ಸುಪ್ತವಾಗಿತ್ತು. ಈ ತೋಳಿನಲ್ಲಿ ಹೋಳು ಮೈ ಇತ್ತು, ಕತ್ತಲಲ್ಲಿ ಕಣ್ಣಾಗಿ ನೋಡುತ್ತಿದೆ ನೂರು ಇಂದ್ರರಂತೆ ಬೆಳಕು, ನಾಯಿ ಮೈಮೂಸಿ ಬರುತಲಿದೆ. ಶುಕ್ರ ಚಂದ್ರರಂತೆ' ಸರಮಾ ಎಂಬ ದೇವಲೋಕದ ನಾಯಿ ಅದು ಬೆಳಕು intuitionದ ಸಂಕೇತ, ಶುಕ್ರ ಚಂದ್ರ ಯುತಿ ಪ್ರಣಯಕ್ಕೆ ಯೋಗ್ಯ ಸಮಯ. ತಾವು ಕಂಡ ಅನುಭವ ಸೂಚ್ಯವಾಗಿ ವರ್ಣಿಸುತ್ತಾರೆ. 'ಜೇನುನೊಣಗಳೊಳು ಹಾವಭಾವಗಳು ಇನಿಯ ಜಿನುಗುತಿಹವು'. ದೇವಲೋಕದಲ್ಲಿ ಎಲ್ಲರಿಗೂ ನಾಲ್ಕು ಕೈಗಳು, ಪ್ರಣಯಗಳಿಗೂ ನಾಲ್ಕು ಕೈಗಳು ಇರುತ್ತವೆ. ನಾವು ಆಸೆ ಮಾಡಿದ್ದೇ ಆದರೆ ಅದುವೆ ಸ್ವರ್ಗ. 'ಬಯಕೆ ಮಾಡದಲೆ, ಬಯಸಿದೊಡವೆಯೂ ಕೈಗೂಡುತಿತ್ತು. ಇದೇ ಸ್ವರ್ಗ ಸುಖ ಪಡೆದ ಬದುಕನೇ ಬಯಸುತಿದ್ದೆವೋ' ಎನ್ನುವಂತೆ ಇತ್ತು. ಇಲ್ಲಿ desire ಮತ್ತು fulfillment ಗಳ ನಡುವೆ ಭೇದ ಕಾಣುತ್ತಿಲ್ಲ. ಮರ್ತ್ಯಲೋಕದಲ್ಲಿ ಈ ಅಮರ ಅನುಭವ ಬಹಳ ಕಾಲ ಉಳಿಯುವುದಿಲ್ಲ. ಕೊನೆಗೆ ಇದೆಲ್ಲ ಕನಸಿನಂತೆ ನಡೆದು ಹೋಗಿ ವಾಸ್ತವ ಪ್ರಪಂಚಕ್ಕೆ ಕವಿ ಬರುತ್ತರೆ. 'ನೋಡುತ್ತಿರಲು ಒಳಗಣ್ಣಿನಿದಿರು, ನೀ ಹೇಗೋ ರಾಧೆಯಾದೆ, ಕೇಳುತಿರಲು ಒಳಗಿವಿಯ ಕೊಳಲು, ನನ್ನೊಳಗೆ ಮಾಯವಾದೆ, ನಾನು ನೀನೋ ನೀ ನಾನೋ, ಏನೋ ಎನುತೆ ನುತಲೆಚ್ಚರಾದೆ' ಎಂದು ಕವಿತೆ ಮುಗಿಸುತ್ತಾರೆ.



| DATE | NAME | ADDRESS | REMARK |
| --- | --- | --- | --- |
| 9.1.1984 | [illegible] | [illegible] | [illegible] |


ಅಸೋಸಿಯೇಶನ್‌ಗೆ ಭೇಟಿ ಕೊಟ್ಟ ಶಿವರಾಮ ಕಾರಂತರು ಸಂದರ್ಶಕರ ಡೈರಿಯಲ್ಲಿ ಬರೆದ ಹಸ್ತಾಕ್ಷರ.

# ದತ್ತಿ ಉಪನ್ಯಾಸ – ಜನವರಿ 1984

## ಡಾ. ಶಿವರಾಮ ಕಾರಂತರ ಉಪನ್ಯಾಸ

ಈಗ ಹಲವಾರು ವರ್ಷಗಳಿಂದ ಮೈಸೂರು ಅಸೋಸಿಯೇಷನ್, ತನ್ನ ಬಂಗಾರ ಹಬ್ಬದ ನೆನಪಿನ ದತ್ತಿ ಉಪನ್ಯಾಸ ಮಾಲೆಯ ಸರಣಿಯನ್ನು ಮುಂಬೈ ವಿಶ್ವವಿದ್ಯಾನಿಲಯದ ಜೊತೆಯಲ್ಲಿ ನಡಿಸಿಕೊಂಡು ಬರುತ್ತಿದೆ. ಈ ವರ್ಷ ಈ ಕಾರ್ಯಕ್ರಮದ ಅಂಗವಾಗಿ ಜನವರಿ 7, 8 ಮತ್ತು 9 ರಂದು ಡಾ। ಶಿವರಾಮ ಕಾರಂತರಿಂದ 'ಜಾನಪದ ಕಲೆ ಮತ್ತು ಸಾಹಿತ್ಯ'ದ ಬಗ್ಗೆ ಉಪನ್ಯಾಸಮಾಲೆಯನ್ನು ಏರ್ಪಡಿಸಲಾಗಿತ್ತು. ಜನವರಿ 7 ರಂದು ಸಂಜೆ 7.15 ಕ್ಕೆ ಸಭೆಯ ಅಧ್ಯಕ್ಷರಾದ ಕೆ. ಕೆ. ಹೆಬ್ಬಾರರು ಮಾತನಾಡಿ ಉಪನ್ಯಾಸ ಮಾಲೆಯ ಉದ್ಘಾಟನೆಯನ್ನು ಮಾಡಿದರು. ಜಾನಪದ ಕಲೆಯಲ್ಲಿ ಸಂಗೀತವನ್ನು ಮುಖ್ಯ ವಿಷಯವನ್ನಾಗಿಟ್ಟುಕೊಂಡು ಡಾ। ಕಾರಂತರು ಮಾತನಾಡಿ ನೆರೆದಿದ್ದ ಅಭಿಮಾನಿಗಳನ್ನು ಸಂತೋಷಗೊಳಿಸಿದರು. ಜನವರಿ 8 ರಂದು ಬೆಳಿಗ್ಗೆ ಡಾ। ಕಾರಂತರು ಜಾನಪದ ನೃತ್ಯದ ಬಗ್ಗೆ ಸ್ವಾರಸ್ಯವಾಗಿ ಮಾತನಾಡಿ ಹಾಸ್ಯದ ಹೊನಲನ್ನು ಹರಿಸಿದರು. ಉಪನ್ಯಾಸಕ್ಕಿಂತ ಮೊದಲು ಮೈಸೂರು ಅಸೋಸಿಯೇಶ್‌ನ ಕಲಾವಿದರು ನಡೆಸಿಕೊಟ್ಟ "ಕನ್ನಡ ಜಾನಪದ ಗೀತೆ"ಗಳ ಕಾರ್ಯಕ್ರಮ ನೆರೆದ ಜನರ ಮೆಚ್ಚುಗೆ ಪಡೆಯಿತು. ಅಂದಿನ ಸಭೆಯ ಅಧ್ಯಕ್ಷತೆಯನ್ನು ಶ್ರೀ. ಎ. ನಾಗಭೂಷಣ ರಾವ್ ವಹಿಸಿದ್ದರು.

ಡಾ। ಕಾರಂತರ ಮೂರನೆಯ ಹಾಗೂ ಕೊನೆಯ ಉಪನ್ಯಾಸ ಸೋಮವಾರ ಜನವರಿ 9 ರಂದು ಸಂಜೆ 7.15 ಕ್ಕೆ ಪ್ರಾರಂಭವಾಯಿತು. ಜಾನಪದ ಕಲೆಯಲ್ಲಿ ಮುಖ್ಯವಾಗಿ ನಾಟಕದ ಬಗ್ಗೆ ಡಾ। ಕಾರಂತರ ವಿಚಾರ ಧಾರೆಯನ್ನು ಕೇಳುವ ಅವಕಾಶ ಸಭಿಕರಿಗೆ ದೊರೆಯಿತು. ಅಂದಿನ ಸಭೆಯ ಅಧ್ಯಕ್ಷರಾದ ಚಿದಂಬರ ದೀಕ್ಷಿತರ ಭಾಷಣದೊಂದಿಗೆ 3 ದಿನಗಳ ಕಾರ್ಯಕ್ರಮ ಮುಕ್ತಾಯವಾಯಿತು.



**ಜಾನಪದ ಗೀತೆಗಳು:**

1945–50 ರಲ್ಲಿ ದೇವೇಂದ್ರ ಸತ್ಯಾರ್ಥಿ ಮುಂತಾದವರು ಜಾನಪದ ಗೀತೆಗಳನ್ನು ಸಂಗ್ರಹ ಮಾಡಿದ್ದಾರೆ. ಈಗ ಯೂನಿವರ್ಸಿಟಿಯವರು ಅದನ್ನು ಒಂದು ವಿಷಯವನ್ನಾಗಿಟ್ಟಿರುವುದರಿಂದ ಇದರ ಸಂಗ್ರಹ ಹೆಚ್ಚಾಗಿದೆ. ಇದರ ಅಭ್ಯಾಸ ಮಾಡುವವರಲ್ಲಿ ಒಂದು ದೃಷ್ಟಿಯವರು ಜನರು ಸಾಮಾಜಿಕದ ಸುಖ ದುಃಖಗಳನ್ನು ಹೇಗೆ ತೋಡಿಕೊಂಡಿದ್ದಾರೆ, ಬಡತನ, ಅತ್ತೆ ಸೊಸೆಯನ್ನು ನೋಡಿಕೊಳ್ಳುವ ವಿಷಯಕ್ಕೆ ಹೆಚ್ಚು ಪ್ರಾಧಾನ್ಯ ಕೊಟ್ಟರೆ ಇನ್ನೊಂದು ದೃಷ್ಟಿಯವರು, ಯಾವ ಜನ ಇದನ್ನು ಯಾವ ರೀತಿಯಲ್ಲಿ ತೋಡಿಕೊಂಡಿದ್ದಾರೆ, ಅವರ ಪ್ರಪಂಚ ಯಾವುದು ಎಂಬುದಕ್ಕೆ ಪ್ರಾದಾನ್ಯ ಕೊಟ್ಟಿದ್ದಾರೆ.

ರಾಗದ ದೃಷ್ಟಿಯಿಂದ ನೋಡಿದರೆ, ಜಾನಪದ ಗೀತೆಗಳನ್ನು ಒಂದೆರಡು ರಾಗಗಳಲ್ಲಿ ಮಾತ್ರ ಹಾಡುತ್ತಾರೆ. ಆದರೆ ಅವು ಲಯಬದ್ಧವಾಗಿರುತ್ತವೆ. ಅನೇಕ ರೀತಿಯ ಉದ್ದೇಶಗಳಿಂದ ಹಾಡುಗಳು ರೂಪಗೊಳ್ಳುತ್ತವೆ. ದುಃಖವನ್ನು ತೋಡಿಕೊಳ್ಳಲು, ಮಗುವನ್ನು ಮಲಗಿಸಲು, ಬೇಸರದ ಕೆಲಸ ಮಾಡುವಾಗ ಹಾಡುತ್ತಾರೆ. ಪಲ್ಲಕಿಯನ್ನು ಹೊರುವವರು ಪ್ರಯಾಣದ ಆಯಾಸವನ್ನು ತೀರಿಸಿಕೊಳ್ಳಲು ಹೆಜ್ಜೆ ಗತಿಗೆ ಸರಿಯಾಗಿ "ಹಾಬ . . . ಹೋ" ಎಂದು ಹಾಡುತ್ತಾರೆ. ಇದೇ ರೀತಿ ಗದ್ದೆಗೆ ನೀರು ಹಾಕುವಾಗ ನೀರಿನ ಲೆಕ್ಕ ಮುಖ್ಯವಾದ್ದರಿಂದ "ಒಂದಾಲೊಂದು– ಒಂದಾಲೆರಡು, ಒಂದಾಲೆರಡು – ಎರಡಾಲ್ ಮೂರು" ಎಂದು ಹಾಡುತ್ತಾರೆ. ಇದರಲ್ಲಿ, ಅವರ ಧ್ವನಿ ನೀರಿನ ಓಲಾಟಕ್ಕೆ ಸರಿಯಾಗಿರುತ್ತೆ. ರಾಗದ ಸ್ವರೂಪ, ಅವರ ಮೈ ಬಳಕುವ ರೀತಿ ಮತ್ತು ಉಸಿರಾಟದ ಮೇಲೆ ಹೊಂದಿಕೊಂಡಿದೆ. ಬತ್ತ ಕುಟ್ಟುವ ಹಾಡುಗಳು ಬಹಳಷ್ಟಿವೆ. ಭಾರವಾದ ಒನಕೆಯಿಂದ ಬತ್ತ ಕುಟ್ಟುತ್ತಾ "ಹಾಂ – ಹಾಂ" ಎಂದು ಹಾಡುವಾಗ, ಅವರ ಉಸಿರಾಟಕ್ಕೂ, ಧ್ವನಿಗೂ ಮೇಳವಾಗುವುದು. ಈ ಎಲ್ಲಾ ಹಾಡುಗಳ ಧಾಟಿಯು ಒಂದೇ ರೀತಿಯಾಗಿರುತ್ತದೆ. ಇಲ್ಲಿ ಸಾಹಿತ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇಲ್ಲ.

ಕೊಡಗಿನಲ್ಲಿ ನೂಲು ತೆಗೆಯುವಾಗ ಹಾಡುವ "ಬೆನ್ನ ತೂಗಿ ಮೈ ಮನ ಬಾಗಿ ಸಾಗಿ ಬಾರೋ ಬಣ್ಣದ ನೂಲೇ" ಎಂಬುವ ಹಾಡು ಉಳಿದುಕೊಂಡಿದೆ. ಮದುವೆಗಳಲಿ ಶೋಭಾನೆ ಹಾಡು, ವಯ್ಯಾರಕ್ಕಾಗಿ ಹಾಡುವ ಹಾಡುಗಳು ಬಹಳಷ್ಟಿವೆ. ಉತ್ತರ ಕರ್ನಾಟಕದ ಲಾವಣಿಗಳಲ್ಲಿ ಭಾವಪೂರಿತವಾದ ವಿವಿಧ ತರಂಗಗಳನ್ನು ನಾವು ನೋಡುತ್ತೇವೆ. ಹಲಸಂಗಿ ಹಳ್ಳಿಯಲ್ಲಿ ಕೃಷ್ಣಾಷ್ಟಮಿಯ ದಿನ. ಕೃಷ್ಣನನ್ನು ಹುಡುಕುವ ಹಾಡನ್ನು ಹಾಡುತ್ತಾರೆ. "ಗೋಕುಲಾಷ್ಟಮಿಯ ದಿನ ಹುಡುಕುತ್ತಾರೆ ಕೃಷ್ಣನಾ . . . . ಇಯಾ . . . " ಎಂಬ ಈ ಹಾಡಿನಲ್ಲಿ 64 ಸಾಲುಗಳಿವೆ. ಇದರ ಸಾಹಿತ್ಯ, ಲಯ ಮತ್ತು ಧಾಟಿ ತುಂಬಾ ಚೆನ್ನಾಗಿರುತ್ತದೆ.

ಜಾನಪದ ಯಾವ ಕಲೆಯನ್ನೇ ನೋಡಿದರೂ ಬಹಳ ದಿವ್ಯವಾಗಿದೆ ಎಂಬ ಕುರುಡು ಅಭಿಮಾನವನ್ನು ಬಿಟ್ಟು, ಅದರ ಉದ್ದೇಶವೇನು, ಅದನ್ನು ಈ ಕಲೆ ಎಷ್ಟರ ಮಟ್ಟಿಗೆ ಸಾರ್ಥಕ ಮಾಡಿದೆ ಎಂಬುದನ್ನು ನೋಡಬೇಕು. ಜಾನಪದ ಗೀತೆಗಳನ್ನು ಹೀಗೆ ಹಾಡಬೇಕೆಂದು ರಚಿಸಲಿಲ್ಲ. ಮನಸ್ಸಿನ ಸುಖ, ದುಃಖ , ಕೋಪ ಎಲ್ಲವೂ ತಾನಾಗೇ ಹೊರ ಬಂದಾಗ, ಒಂದು ಪಲ್ಲವಿ ಹುಟ್ಟುತ್ತದೆ. ಇದರ ಆಕಾರ ಸರಳವಾದದ್ದು, ಸ್ಥೂಲವಾದದ್ದು ಮತ್ತು ಭಾವಪೂರ್ಣವಾದದ್ದು. ಈ ಹಾಡುಗಳು ಮುಂದೆ, ನೃತ್ಯಕ್ಕೆ ನಾಟಕಕ್ಕೆ ಬಹಳ ಸಹಾಯ ಮಾಡಿವೆ.

**ಜಾನಪದ ನೃತ್ಯ ಅಥವಾ ಕುಣಿತ:**

ಜಾನಪದ ಕುಣಿತವನ್ನು ಸ್ಥೂಲವಾಗಿ ನಾವು ತೆಗೆದುಕೊಂಡರೆ, ಸಾಮಾಜಿಕವಾಗಿ ಸಂತೋಷಕ್ಕೆ ಕುಣಿಯುವುದು ಒಂದಾದರೆ, ಮತ್ತೊಂದು ವಿಶಿಷ್ಟವಾದ ಉದ್ದೇಶಕ್ಕೆ ಕುಣಿಯುವುದು. ಈ ತರಹದ ಕುಣಿತ ಆದಿವಾಸಿಗಳ ಕಾಲದಿಂದ ವಿಪರೀತವಾಗಿ ಬೆಳೆದುಕೊಂಡು ಬಂದಿದೆ. ಕರಾವಳಿ ಪ್ರದೇಶಗಳಲ್ಲಿ ದೆವ್ವ ಮತ್ತು ದೇವತೆಗಳನ್ನು ಒಲಿಸಲು ಬೇಕಾದಷ್ಟು ತರಹದ ಕುಣಿತಗಳಿವೆ. ಇವೆಲ್ಲಾ ಸ್ಥಳೀಕವಾದದ್ದು. ಅವರ ಪೂಜೆಗಳಲ್ಲಿ ಕುಣಿತ ಬಹಳ ಪ್ರಧಾನವಾದದ್ದು. ಕುಣಿತದ ಜೊತೆ ಯವಾಗಲೂ ಒಂದು ವಾದ್ಯ ಮತ್ತು ಹಾಡು ಇದ್ದೇ ಇರುತ್ತದೆ. ಆ ಹಾಡು ಪೂಜೆಯ ಉದ್ದೇಶವೇನು ಎಂಬುದನ್ನು ತೋರಿಸುತ್ತದೆ. ಕುಣಿತಕ್ಕೆ ತಾಳದ ಗತಿ ಮುಖ್ಯವಾದದ್ದು. ವೇಷ ಭೂಷಣದಿಂದ ಅದು ಯಾವ ಭೂತದ ಪೂಜೆ ಎಂದು ಗೊತ್ತಾಗುವುದು.

ನಮ್ಮಲ್ಲಿ ಅಬ್ರಾಹ್ಮಣವರ್ಗದ ಪೂಜೆಗಳಲ್ಲಿ ಕುಣಿತ ಒಂದು ಅಂಗವಾಗಿರುತ್ತದೆ. ಮೇಲಿನವರ ಪೂಜೆಗಳಲ್ಲಿ ಭಜನೆ ಮಾಡುವಾಗ ಕುಣಿತವನ್ನು ಕಾಣಬಹುದು. ಮಳೆಗಾಲದ ನಂತರ ಕರಾವಳಿ ಪ್ರದೇಶಗಳಲ್ಲಿ ಸಂತೋಷವಾಗಿ ಹೆಂಗಸರು, ಗಂಡಸರು ಎಲ್ಲರೂ ಕುಣಿಯುತ್ತಾರೆ. ಹಬ್ಬ ಹರಿದಿನಗಳಲ್ಲಿ ಎಲ್ಲಾ ಕೃಷಿಕರ್ಮಕ್ಕೂ

ಅನುಕೂಲವಾಗುವಂತಹ, ಕುಣಿತಗಳನ್ನು ನಾವು ಕಾಣುತ್ತೇವೆ. ನಮ್ಮ ದೇಶ ಕೃಷಿ ಪ್ರಧಾನವಾದ್ದರಿಂದ, ಅದಕ್ಕೆ ಸಂಬಂಧಪಟ್ಟ ಎತ್ತು, ಎಮ್ಮೆ, ಕೋಣಗಳಿಗೆ ಬರುವ ರೋಗಗಳನ್ನು ಹೋಗಲಾಡಿಸಲು ಪೂಜೆಯನ್ನು ಏರ್ಪಡಿಸುತ್ತಾರೆ. ಇಂತಹ ಪೂಜೆಗಳಲ್ಲಿ ನಾವು ಕುಣಿತವನ್ನು ಕಾಣಬಹುದು. ಹಿಂದಿನ ಕಾಲದಿಂದಲೂ, ಕಾಡುಹಂದಿಯು, ಬೇಸಾಯ ಮಾಡುವವರಿಗೆ ಒಂದು ದೊಡ್ಡ ಶತ್ರು. ಆ ಹಂದಿಯನ್ನು ಆರಾಧನೆ ಮಾಡಿಕೊಂಡು, ಒಲಿಸುವ ಒಂದು ಸಂಪ್ರದಾಯವಿದೆ. ಆ ಹಂದಿಯನ್ನು ಬೇಟೆಯಾಡಲು ಹೋಗುವಾಗ ಎಲ್ಲರೂ "ಓಬೀರಾಯನ ಓಲಗವು" ಎಂಬ ಹಾಡನ್ನು ಹಾಡಿಕೊಂಡು ಕುಣಿಯುತ್ತಾ ಹೋಗುತ್ತಾರೆ. ಆ ಹಾಡಿನಲ್ಲಿ ತಿರುಪತಿ ದೇವರಿಗೆ, ಮಂಜುನಾಥ ದೇವರಿಗೆ ಕಾಣಿಕೆ ಕೊಟ್ಟಿದ್ದು, ಜನ ಜೀವನದಲ್ಲಿ ಏನೇನು ಮಾರ್ಪಾಡಾಗಿದೆಯೋ, ಅವೆಲ್ಲವನ್ನು ನಾವು ಕಾಣುತ್ತೇವೆ. ಕಾಡು ಹಂದಿಯನ್ನು 'ಪಂಜುವರಳಿ ಭೂತ' ಎಂದು ದಕ್ಷಿಣ ಕನ್ನಡದವರು ಕರೆಯುತ್ತಾರೆ. ಇದಕ್ಕೆ ಸುಮಾರು 200–300 ವರ್ಷದ ಇತಿಹಾಸವಿದ್ದ ಹಾಗೆ ಕಾಣುತ್ತೆ. ಈ ಭೂತದ ಪೂಜೆ ಬಹಳ ಮುಖ್ಯವಾದದ್ದು. ಎಲ್ಲಾ ಉತ್ಸವಗಳಲ್ಲಿ ಇದರ ಕಥಾನಕ ಹೇಳಿಕೊಂಡು ಬಂದಿದ್ದಾರೆ. ಪಂಜುವರಳಿ ಭೂತಕ್ಕೆ ಒಳ್ಳೆ ಎತ್ತು, ಎಮ್ಮೆ, ಕೋಣದ ಮೇಲೆ ಕಣ್ಣು ಜಾಸ್ತಿ. ಈ ಎಲ್ಲಾ ಭೂತದ ಕತೆಯು ಪ್ರಾಣಿಗಳ ಕಾಯಿಲೆಗಳ ಸಂಬಂಧಪಟ್ಟವು. ಇನ್ನೂ ಕೆಲವು ಸ್ಥಳೀಕ ಭೂತಗಳಿವೆ. ಸಮುದ್ರಕ್ಕೆ ಯಾರೋ ಒಬ್ಬ ಮುಸಲ್ಮಾನರು ಹೋಗಿ ಸತ್ತವನ ಭೂತಕ್ಕೆ 'ಬಬ್ಬರಿಯಾ' ಎಂದು ಕರೆಯುತ್ತಾರೆ. ಈ ಭೂತವು ಜನರಿಗೆ ಬರುವಂತಹ ಪೀಡೆ. ಹೀಗಾದಾಗ ದೇವತೆಗಳಿಗೆ ಮೊರೆ ಹೊಕ್ಕು ಪ್ರಾರ್ಥಿಸುತ್ತಾರೆ. ಆಗ 8–10 ಮಂದಿ ಕೋಲುಗಳನ್ನು ಇಟ್ಟುಕೊಂಡು 'ಸಿದ್ಧಿವಿನಾಯಕ' ಎಂಬ ಹಾಡನ್ನು ಹಾಡುತ್ತಾ ಆವೇಶದಿಂದ ಕುಣಿಯುತ್ತಾರೆ. ಅವರು ಕುಣಿಯುವ ವೈವಿಧ್ಯ, ಅವರ ಮೈ ಬಳುಕಾಟ, ಕೋಲಿನ ಬಡಿತದ ರೀತಿ, ಗತ್ತು ಎಲ್ಲವನ್ನೂ ನಾವು ಗಮನಿಸಬೇಕು. ಕೇರಳದಲ್ಲಿ ಈ ರೀತಿಯ ಕುಣಿತ ಜಾಸ್ತಿ. ಆದಿವಾಸಿಗಳಲ್ಲೂ ಸಹ ಹೀಗೆ 10–20 ಮಂದಿ ಸೇರಿ ಕುಣಿಯುವುದು ರೂಢಿಯಲ್ಲಿದೆ. ಈ ಸರಳವಾದ ನೃತ್ಯ ಶೈಲಿಯಿಂದ ಈಗಿನ ನೃತ್ಯವು ಬೆಳೆದು ಬಂದಿದೆ ಎಂದು ಹೇಳಬಹುದು. 'ನಾಗಮಂಡಲ'ದ ಕುಣಿತ ಕೋಟಿ ಚೆನ್ನಯ್ಯನ ಕುಣಿತಗಳಲ್ಲಿ ನಾವು ಅಭಿನಯವನ್ನು ಕಾಣುತ್ತೇವೆ. ಅದು ಪೂಜೆಯಾಗಿರುವುದರಿಂದ, ಚಮತ್ಕಾರ ಹೆಚ್ಚಾಗಿರುವುದಿಲ್ಲ. ಈ ತರಹದ ಕುಣಿತದಲ್ಲಿ, ಕಲಾವಿದರು ಯಾವ ಉದ್ದೇಶಕ್ಕಾಗಿ ಕುಣಿಯುತ್ತಾರೋ ಆ ಉದ್ದೇಶ ಪೂರೈಸುವವರೆಗೆ ಕುಣಿಯುತ್ತಾರೆ. ಅದರ ವಸ್ತು ಮತ್ತು ಪದ ಸಂಪತ್ತು ಮುಖ್ಯವಾದದ್ದು. ಜಾನಪದದ ಮೂಲ ವಸ್ತು ಹೇಗೆ ಹುಟ್ಟಿ, ಬೆಳೆಯಿತೆಂಬುದನ್ನು ನಾವು ತಿಳಿದುಕೊಳ್ಳಬೇಕು. ಬೇರೆ ಬೇರೆ ದೇಶಗಳ ಜಾನಪದ ಕಲೆಯನ್ನು ಅನುಕರಣೆ ಮಾಡದೆ, ಪ್ರೇರಣೆಯಾಗಿ ಉಪಯೋಗಿಸಬೇಕು.

**ಜಾನಪದ ನಾಟಕ:**

ನಾವು ಎರಡು ಮೂರು ಮಾಧ್ಯಮಗಳನ್ನು ತೆಗೆದುಕೊಂಡು, ನಮ್ಮ ರಂಗಭೂಮಿಯನ್ನು ಹೆಣೆದುಕೊಂಡು ಬಂದಿದ್ದೇವೆ. ಇದರಲ್ಲಿ ಗದ್ಯ, ಪದ್ಯ, ಸಂಗೀತ, ಕುಣಿತ ಮತ್ತು ವೇಷಭೂಷಣ ಎಲ್ಲವೂ ಇವೆ. ಇಂತಹ ರಂಗಭೂಮಿ, ಭಾಸ ಅಥವಾ ಕಾಳಿದಾಸನ ಕಾಲದಿಂದ ಹುಟ್ಟಿ ಬಂದಿರಬೇಕು. ಸಂಸ್ಕೃತದ "ಮಿತ್ರವಿಂದ ಗೋವಿಂದ" ನಾಟಕದ ಅನುವಾದ ಬಿಟ್ಟರೆ ಬಹಳ ದಿನಗಳಿಂದಲೂ, ಕನ್ನಡದಲ್ಲಿ ನಾಟಕಗಳೇ ಇಲ್ಲವೆಂದು ಕೆಲವರು ಹೇಳುತ್ತಾರೆ. ಯಕ್ಷಗಾನವು ಬಹಳ ಪ್ರಬುದ್ಧವಾದ ಒಂದು ನಾಟಕದ ರೂಪ. ಅದಕ್ಕೆ ಮೊದಲಿನಿಂದಲೂ, ನಮ್ಮಲ್ಲಿ ಅನೇಕ ನಾಟಕಗಳು ಹುಟ್ಟಿವೆ. ಅವುಗಳಿಗೆ 200–300 ವರ್ಷದ ಪೂರ್ವ ಇತಿಹಾಸವಿದೆ.

ನಾಟಕವು ಒಂದು ನೀಳವಾದ ಕವನ, ಸಾಹಿತ್ಯರೂಪದಿಂದ ಬಂದ ಕತೆ. ಒಬ್ಬರ ಬಾಯಿಂದ ಕೇಳಿ, ಇನ್ನೊಬ್ಬರು ಅದನ್ನು ನೆನಪಿಗೆ ತೆಗೆದುಕೊಂಡು ಬರೆದ ಕತೆ ಇರಬಹುದು. ಹರಿಕಥೆಯು ನಮ್ಮಲ್ಲಿ ಮೊದಲಿನಿಂದಲೂ ಬೆಳೆದು ಬಂದಿದೆ. ದಾಸರು ಲೋಕದ ಧರ್ಮದ ಉದ್ಧಾರಕ್ಕಾಗಿ ಕತೆಯನ್ನು ಹೇಳುತ್ತಾ, ತತ್ವ ಭೋಧೆಯ ಪೀಠಿಕೆಯನ್ನು ಹಾಕುತ್ತಾರೆ. ಇದರಲ್ಲಿ ಗದ್ಯ ಮತ್ತು ಪದ್ಯದ ಭಾಗವಿದೆ. ಕತೆಯಲ್ಲಿ ಬರುವ ಪಾತ್ರಗಳನ್ನು ಗದ್ಯ ರೂಪದಲ್ಲೂ ಕತೆಯನ್ನು ಪದ್ಯ ರೂಪದಲ್ಲೂ ಆಡುತ್ತಾರೆ. ಇದನ್ನು ನಾವು ನಾಟಕವೆಂದು ಎಣಿಸುವುದಿಲ್ಲ. ಕರ್ನಾಟಕದಲ್ಲಿ ಬಹಳ ಹಿಂದಿನ ಕಾಲದಿಂದಲೂ ಗದ್ಯ, ಪದ್ಯ, ಕುಣಿತದ ಸಮ್ಮಿಲನದ ನಾಟಕಗಳಿವೆ. ಉತ್ತರ ಕರ್ನಾಟಕದಲ್ಲಿ ಬಹಳ ಹಿಂದಿನ ದಾಸರಾಟ ಮತ್ತು ಕಿನ್ನರಿ ಜೋಗಿಗಳ ಕತೆ ಬಹಳ ಮುಖ್ಯವಾದದ್ದು. ಇವುಗಳಲ್ಲಿ ವೇಷ ಭೂಷಣದ ಅಂಗವೊಂದನ್ನು ಬಿಟ್ಟರೆ, ನಾಟಕಕ್ಕೆ ಬೇಕಾದ ಎಲ್ಲಾ ಅಂಶಗಳನ್ನು ನಾವು ಕಾಣಬಹುದು. ಪಾತ್ರಗಳ ಕಲ್ಪನೆ ಬರುವುದಕ್ಕೆ ವೇಷ ಭೂಷಣಗಳನ್ನು ರಂಗಭೂಮಿಗೆ ತಂದಿದ್ದಾರೆ. 1924–25 ರಲ್ಲಿ 'ಪಾರಿಜಾತ'ದಂಥ ನಾಟಕಗಳು ಉತ್ತರ ಕರ್ನಾಟಕದಲ್ಲಿ ಹುಟ್ಟಿಕೊಂಡವು . ಇದರಲ್ಲಿ ಪಾತ್ರಗಳ ಕಲ್ಪನೆಯಿದೆ ಗದ್ಯ, ಹಾಡುಗಾರಿಕೆ, ವಾದ್ಯ ಸಂಗೀತ ಎಲ್ಲವನ್ನೂ ಕಾಣುತ್ತೇವೆ. ಅತಿ ಅನಾದಿ ಕಾಲದಿಂದ ಮುದ್ರಣಗೊಂಡ ಕರ್ನಾಟಕ ಛಾಯೆ ಹಾಡುಗಳು ಇಲ್ಲಿ ಕಂಡುಬರುತ್ತದೆ. 'ಶಶಿಕಲಾ ಪರಿಣಯ', 'ಭೋಜ ಪ್ರಬಂಧ', 'ವಿವೇಕ ವಿಜಯ' ಇವುಗಳೆಲ್ಲವು ಬಹಳ ಹಳೆಯ ನಾಟಕಗಳು. ವರದಾಚಾರ್ಯರ ನಾಟಕಗಳಲ್ಲಿ ಕಂದ ಪದ್ಯಗಳನ್ನು ಬೇರೆ ಬೇರೆ ರಾಗಗಳಲ್ಲಿ ಭಾವದಿಂದ ಹಾಡುತ್ತಿದ್ದರು. ಕವಿಗಳಿಂದ ರಚಿತವಾದ ಹೊಸ ರೀತಿಯ ಕವನಗಳನ್ನು ಅವರ ನಾಟಕಗಳಲ್ಲಿ ನೋಡಬಹುದು. ಇದರಲ್ಲಿ ಗಂಡಸರೇ ಹೆಣ್ಣು ಪಾತ್ರಗಳನ್ನು ಮಾಡುತ್ತಿದ್ದರು.

ಬಿಜಾಪುರದ ಗಡಿಯಲ್ಲಿ ಆಗುತ್ತಿದ್ದ ನಾಟಕಗಳಲಿ ತತ್ವ ಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಿದ್ದರು. ಇದರ ಜೊತೆಯಲ್ಲೇ 'ಸಂಗ್ಯಾ ಬಾಳ್ಯಾ' ಆಟದಲ್ಲಿ, ಶೃಂಗಾರ ರಸವನ್ನು ಅವರು ಬೆಳಸಿಕೊಂಡು ಬಂದರು. ಇದಕ್ಕೆಲ್ಲ 'ಸಣ್ಣಾಟ' ಎಂದು ಹೇಳಬಹುದು. ಇದರಲ್ಲಿ ಎಲ್ಲಾ ಪಾತ್ರಗಳು ರಂಗಸ್ಥಳದಲ್ಲಿ ಬರುವುದಿಲ್ಲ. ಇದಾದ ಮೇಲೆ 'ದೊಡ್ಡಾಟ' ಹುಟ್ಟಿಕೊಂಡಿತು. ಇದರಲ್ಲಿ ಎಲ್ಲ ಪಾತ್ರಗಳು ರಂಗಸ್ಥಳದ ಮೇಲೆ ಬರುತ್ತಾರೆ. ಕೆಳಗೊಂದು, ಮೇಲೊಂದು ರಂಗಸ್ಥಳವನ್ನು ನಾವು ಇಲ್ಲಿ ಕಾಣುತ್ತೇವೆ. ದೊಡ್ಡಾಟದಲ್ಲಿ ಮಾತುಗಳು ಬಹಳ ಉದ್ದವಾಗಿರುತ್ತದೆ ಮತ್ತು ಅದರಲ್ಲಿ ಅಭಿನಯಕ್ಕೆ ಹೆಚ್ಚು ಪ್ರಾಮುಖ್ಯತೆ ಇಲ್ಲ. ಅವರು ಪರದೆ ಮತ್ತು ವೇಷದ system ತಂದರು.

ಉತ್ತರ ಕರ್ನಾಟಕದಲ್ಲಿ ತೊಗಲು ಗೊಂಬೆಯಾಟ ಮತ್ತು ಗೊಂಬೆಯಾಟ ಹುಟ್ಟಿಕೊಂಡಿತು. ಅದರಲ್ಲಿ ಬರುವ ಹಾಡಿನ ಧಾಟಿಗೂ ಯಕ್ಷಗಾನದ ಹಾಡಿನ ಧಾಟಿಗೂ ತುಂಬಾ ಸಂಪರ್ಕವಿದೆ. ತೊಗಲು ಗೊಂಬೆಯಾಟದಲ್ಲಿ ಗೊಂಬೆಗಳನ್ನು ತೋರಿಸುತ್ತಾ ಕತೆಗಳನ್ನು ಹೇಳಿಕೊಂಡು ಬರುತ್ತಾರೆ. ಸೂತ್ರದ ಗೊಂಬೆಯಾಟದಲ್ಲಿ, ಗೊಂಬೆಗಳನ್ನು ಆಡಿಸಿ, ಕುಣಿಸುತ್ತಾರೆ.

ಯಕ್ಷಗಾನದಲ್ಲಿ ಹಾಡು, ಶೃತಿ ಬದ್ಧವಾದ ಗದ್ಯ ಇರುತ್ತದೆ. ಯಕ್ಷಗಾನದಲ್ಲಿ ಹಾಡನ್ನು ಎಲ್ಲಾ ರಸಗಳಿಗೂ ಒದಗುವ ರೀತಿಯಲ್ಲಿ ಬಳಸಿಕೊಂಡು ಬಂದಿದ್ದಾರೆ. 300–400 ವರ್ಷಗಳ ಓಲೆಗಳಿಂದ, ಯಕ್ಷಗಾನದಲ್ಲಿ 150 ಕ್ಕಿಂತಲೂ ಹೆಚ್ಚು ರಾಗಗಳನ್ನು ಉಪಯೋಗಿಸುತ್ತಿದ್ದರೆಂದು ನಮಗೆ ತಿಳಿದಿದೆ. ಆದರೆ ಇಂದು ರಂಭೂಮಿಯಲ್ಲಿ ಅಷ್ಟು ರಾಗಗಳನ್ನು ನಾವು ಕಾಣುವುದಿಲ್ಲ. ಹೆಚ್ಚೆಂದರೆ 25–30 ರಾಗಗಳನ್ನು ಬಳಸುವರು. ಇದರಲ್ಲಿ ಹೆಚ್ಚಾಗಿ ಯುದ್ಧಕ್ಕೆ ಸಂಬಂಧಪಟ್ಟ ಕತೆಗಳಿರುವುದರಿಂದ ಮಾತಿನಲ್ಲಿ ಪರಾಕ್ರಮ ಜಾಸ್ತಿ.

ಕಲೆ ಬೆಳೆಯಬೇಕಾದರೆ, ಅದರ ಅರ್ಥ ಮತ್ತು ಸ್ಥಾನವನ್ನು ನಾವು ತಿಳಿಯಬೇಕು ಎಲ್ಲಿಯತನಕ ನಮ್ಮ ನಾಟಕ ಸೃಷ್ಟಿಗೆ ಬರಗಾಲ ಇರುತ್ತದೆಯೋ, ಅಲ್ಲಿಯವರೆಗೆ ನಮ್ಮ ರಂಗಭೂಮಿ ಶ್ರೀಮಂತವಾಗುವುದಿಲ್ಲ. ಒಳ್ಳೆಯ ನಾಟಕಗಳನ್ನು ಬರೆಯುವ ಶಕ್ತಿಯುಳ್ಳ ವ್ಯಕ್ತಿ ರಂಗಭೂಮಿಗೆ ಬಂದರೆ, ರಂಗಭೂಮಿ ಬೆಳೆಯುತ್ತದೆ.

# ದತ್ತಿ ಉಪನ್ಯಾಸ – ಜನವರಿ 1985

## ಡಾ. ಆದ್ಯರಂಗಾಚಾರ್ಯ (ಶ್ರೀರಂಗ) ಉಪನ್ಯಾಸ

ಮೈಸೂರು ಅಸೋಸಿಯೇಷನ್ ಹಾಗೂ ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಕೂಡಿ ಜನವರಿ ತಿಂಗಳ 5 ಮತ್ತು 6 ನೇ ತಾರೀಖಿನಂದು ಅಸೋಸಿಯೇಷನ್ನಿನ ಸಭಾಂಗಣದಲ್ಲಿ ಎರಡು ದಿನಗಳ ಉಪನ್ಯಾಸ ಮಾಲೆಯನ್ನು ಏರ್ಪಡಿಸಿದ್ದೆವು. ಈ ಸಂದರ್ಭದಲ್ಲಿ ಹೆಸರಾಂತ ರಂಗನಾಟಕಕಾರ ದಿವಂಗತ ಆದ್ಯ ರಂಗಾಚಾರ್ಯ (ಶ್ರೀರಂಗ)ರು ಉಪನ್ಯಾಸಮಾಲೆಗೆಂದೇ ಬರೆದ "ಭಾರತೀಯ ರಂಗಭೂಮಿಯ ಪರಂಪರೆ ಮತ್ತು ಕನ್ನಡದಲ್ಲಿ ಅದರ ಮಾರ್ಪೊಳಪು" ಮುಖ್ಯವಾದದ್ದು. ಇದನ್ನು ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಶ್ರೀ. ಎಸ್. ಕೆ. ಹಾವನೂರರು ಓದಿದರು. ಕನ್ನಡ ನಾಟಕಗಳ ಉಗಮದ ಕುರಿತು ಬರೆಯಲಾದ ಈ ಉಪನ್ಯಾಸದಲ್ಲಿ ಶ್ರೀರಂಗರು ಕನ್ನಡ ನಾಟಕಗಳು ಗ್ರೀಕ್ ನಾಟಕಗಳಿಂದ ಪ್ರಭಾವಿತವಾದುದೆವೆಂಬ ವಾದವನ್ನು ಅಲ್ಲಗಳೆದು, ಕನ್ನಡ ನಾಟಕಗಳಿಗೆ ತಮ್ಮದೇ ಆದ ಸಂಪ್ರದಾಯ, ಪ್ರಂಪರೆಗಳಿವೆಯೆಂದು ಖಂಡಿತವಾಗಿ ನುಡಿದಿದ್ದಾರೆ. ತಾ॥ 5 ರಂದು ನಡೆದ ಈ ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದಿಂದ ಇತ್ತೀಚೆಗೆ ನಿವೃತ್ತರಾದ ಪ್ರೊ॥ ಚಿದಂಬರ ದೀಕ್ಷಿತರು ಅಧ್ಯಕ್ಷತೆ ವಹಿಸಿದ್ದರು. ಸಂಜೆ 7 ಘಂಟೆಗೆ ಕರ್ನಾಟಕ ಥಿಯೇಟರ್ಸ್ ಅವರು ಪ್ರದರ್ಶಿಸಿದ ಶ್ರೀರಂಗರ "ಯಮನ ಸೋಲು" ನಾಟಕದಲ್ಲಿ ಶ್ರೀಯುತರಾದ ಅನಂತ ಗೂಡೂರು, ಡಾ॥ ತಿಕೋರ್ಡ್ಕರ್, ಜಾಗೀರ್‌ದಾರ್ ಹಾಗೂ ಕು॥ ರೇಖಾರಾವ್ ನಟಿಸಿದರು.



ಎರಡನೆಯ ದಿನವನ್ನು "ಶ್ರೀರಂಗ ಸ್ಮರಣೆ'ಯ ದಿನವನ್ನಾಗಿ ಆಚರಿಸಲಾಯಿತು. ರಂಗಭೂಮಿಯ ಹಾಗೂ ಚಿತ್ರರಂಗದ ಖ್ಯಾತ ನಟ ನಿರ್ದೇಶಕ ಶ್ರೀ. ಗಿರೀಶ್ ಕಾರ್ನಾಡ್ ಅವರು ಅಧ್ಯಕ್ಷರಾಗಿದ್ದರು. ಈ ದಿನದಂದು ಮಾತನಾಡಿದವರಲ್ಲಿ ಶ್ರೀರಂಗರ ಬಹುತೇಕ ಎಲ್ಲಾ ನಾಟಕಗಳನ್ನು ಪ್ರದರ್ಶಿಸಿರುವ ಮುಂಬಯಿಯ ಕರ್ನಾಟಕ್ ಥಿಯೇಟರ್ಸ್‌ನ ನಟ ನಿರ್ದೇಶಕ ಶ್ರೀ. ವಿ. ಬಿ. ದೇಶಪಾಂಡೆಯವರೂ ಒಬ್ಬರು. ಈ ನಾಟಕಗಳು ಓದುವುದಕ್ಕಿಂತ ಪ್ರದರ್ಶಿಸಿದರೆ ಹೆಚ್ಚು ಪ್ರಭಾವಶಾಲಿ. ಶ್ರೀರಂಗರಿಂದ ರಚಿತವಾದ ಸುಮಾರು 42 ನೀಳ್ನಾಟಕಗಳಲ್ಲಿ ಸುಮಾರು 12 ಸಾಮಾಜಿಕ ಹಾಗೂ ಶೈಕ್ಷಣಿಕವೆಂದೂ, ನಾಲ್ಕಾರು ರಾಜಕೀಯ ವಿಡಂಬನೆಗಳೆಂದೂ ಪರಿಗಣಿಸಬಹುದು. ಶ್ರೀರಂಗರ ಪ್ರತಿಯೊಂದು ನಾಟಕವೂ ಮಾನವೀಯ ಮೌಲ್ಯಗಳಿಂದ ಕೂಡಿದ್ದೆಂದು ಹೇಳಲ್ಪಟ್ಟಿದೆ.

ಶ್ರೀರಂಗರ ನಾಟಕಗಳ ವಸ್ತು ವಿಷಯಗಳ ಕುರಿತು ಮಾತನಾಡಿದ ಪ್ರೊ॥ ಚಿದಂಬರ ದೀಕ್ಷಿತರು ಅವರ ಒಂದೊಂದು ನಾಟಕವೂ ಮತ್ತೊಂದಕ್ಕಿಂತ ವಿಶಿಷ್ಟವೆಂದು ತಿಳಿಸಿದರು. ಅವುಗಳಲ್ಲಿ ಬಹುತೇಕ ನಾಟಕಗಳು ರಂಗಪ್ರಯೋಗಕ್ಕೆ ಕ್ಲಿಷ್ಟವೆಂತಲೂ, ಅರ್ಥಮಾಡಿಕೊಳ್ಳಲು ಪ್ರಯಾಸವೆಂದೂ ಪರಿಗಣಿತವಾಗಿದೆಯೆಂದು ಹೇಳಿದರು. ಕರ್ನಾಟಕದಲ್ಲಿನ ಹವ್ಯಾಸಿ ಹಾಗೂ ವೃತ್ತಿನಿರತ ನಾಟಕ ಸಂಸ್ಥೆಗಳಿಗಿಂತ ಮುಂಬೈ ಕನ್ನಡಿಗರು ಅದರಲ್ಲಿಯೂ ಮುಂಬಯಿಯ ಕರ್ನಾಟಕ ಥಿಯೇಟರ್ಸ್ ಅವರು ಶ್ರೀರಂಗರ ನಾಟಕಗಳಲ್ಲಿ ಹೆಚ್ಚು ಆಸಕ್ತಿ ತೋರಿದ್ದಾರೆಂದು ನುಡಿದರು.

ಪ್ರಖ್ಯಾತ ಹಿಂದಿ ರಂಗನಾಟಕಕಾರರೂ, ನಟ–ತಯಾರಕರೂ, ಶ್ರೀರಂಗರ ನಾಲ್ಕು ಕನ್ನಡ ನಾಟಕಗಳನ್ನು ಹಿಂದಿಗೆ ರೂಪಾಂತರಿಸಿ ಖ್ಯಾತನಾಮರಾಗಿರುವವರೂ ಆದ ಶ್ರೀ ಸತ್ಯದೇವ್ ದಂಬೆ ಅವರು ಶ್ರೀರಂಗರು ಅಸಾಧಾರಣ ಪ್ರತಿಭಾಶಾಲಿಗಳೆಂದೂ, ಅವರಂತಹ ನಾಟಕಕಾರರನ್ನು ತಾವು ಇತರ ಭಾಷೆಗಳಲ್ಲಿಯೂ ಕಂಡಿಲ್ಲವೆಂದೂ ಬಣ್ಣಿಸಿದರು. ಉಪನ್ಯಾಸಮಾಲೆಯನ್ನು ಮುಕ್ತಾಯಗೊಳಿಸುತ್ತಾ ಶ್ರೀ ಗಿರೀಶ್ ಕಾರ್ನಾಡರೂ ತಾವು ಈ ಸಮಾರಂಭದಲ್ಲಿ ಭಾಗವಹಿಸ್ದುದು ಒಂದು ಗೌರವವೆಂದು ಭಾವಿಸುವುದಾಗಿ ಹೇಳಿದರು. ತಾವು ಶ್ರೀರಂಗರನ್ನು ಕೇವಲ ಹಲವು ಬಾರಿ ಭೆಟ್ಟಿಯಾಗಿದ್ದರೂ, ಅವರಲ್ಲಿನ ನೈಜ ನಾಟಕಕಾರನಿಂದ ತಾವು ಗಾಢವಾಗಿ ಪ್ರಭಾವಿತರಾದವರೆಂದು ತಿಳಿಸಿದರು. ಇನ್ನು ಮುಂದೆ ಶ್ರೀರಂಗರ ಲಬ್ಧವಾಗಿರುವ ನಾಟಕಗಳನ್ನು ಪ್ರದರ್ಶಿಸಿ, ಉಳಿಸಿಕೊಂಡೂ ಬರಬೇಕೆಂದು ನುಡಿದರು.

ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ನಾಗಭೂಷಣರಾಯರು ಶ್ರೀರಂಗರ ಪುತ್ರಿಯಾದ ಶ್ರೀಮತಿ ಉಷಾ ದೇಸಾಯಿಯವರಿಗೆ ಪುಷ್ಪಗುಚ್ಛವನ್ನೂ, ಗೌರವ ಧನವನ್ನೂ ನೀಡಿದರು. ಆದ್ಯ ರಂಗಾಚಾರ್ಯರ ಪತ್ನಿ ಶ್ರೀಮತಿ ಶಾರದಾಬಾಯಿಯವರೂ ಇಲ್ಲಿ ಆಗಮಿಸಿದ್ದರು. ಶ್ರೀ. ಎಸ್. ಕೆ. ಹಾವನೂರರು ಸಮಾರಂಭದಲ್ಲಿ ಭಾಗವಹಿಸಿದ್ದವರನ್ನು ವಂದಿಸಿದರು.

## ದತ್ತಿ ಉಪನ್ಯಾಸ – ಮಾರ್ಚ್ 1986


### ಪ್ರಾ. ದೇ. ಜವರೇಗೌಡರ ಉಪನ್ಯಾಸ

ಮೈಸೂರು ಅಸೋಸಿಯೇಷನ್ ಮತ್ತು ಕನ್ನಡ ಅಧ್ಯಯನ ವಿಭಾಗ ಮುಂಬೈ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ನೆನಪಿನ ದತ್ತಿ ಉಪನ್ಯಾಸಗಳ ಐದನೆಯ ಮಾಲೆಯಲ್ಲಿ ಮಾರ್ಚ್ 22 ಮತ್ತು 23 ರಂದು, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ಪ್ರಾ. ದೇ. ಜವರೇಗೌಡರು "ಸ್ಥಳನಾಮಗಳು ಕರ್ನಾಟಕವನ್ನು ಅನುಲಕ್ಷಿಸಿ" ಎಂಬ ವಿಷಯದ ಮೇಲೆ ಎರಡು ಉಪನ್ಯಾಸಗಳನ್ನಿತ್ತರು.

ತಮ್ಮ ಸಂಶೋಧನೆಗಳನ್ನು ಮುಂದಿಡುತ್ತಾ ಎಷ್ಟೋ ಬಾರಿ ಬಾಯಿಗೆ ತಾಕಲಾದ ಮೂಲದ ಹೆಸರುಗಳ ಗುರುತಿಸಲಾರದಷ್ಟು ಮಾರ್ಪಾಡಾಗಿರುತ್ತದೆ ಎಂದು ತಿಳಿಸಿದರು. ಮೂಲದ ಹೆಸರುಗಳು ಮೊದಲು ಆ ಸ್ಥಳದಲ್ಲಿ ಒಕ್ಕಲಾದ ಜನರ ಕಸಬು, ಹವ್ಯಾಸ ಅವರ ಹಿಂದಿನ ನೆಲೆ, ಇವುಗಳ ಮೇಲೆ ಅವಲಂಬಿಸಿರುತ್ತವೆ. ಹೆಚ್ಚಿನಾಂಶ ಊರು ನಿಂತ ಮೇಲೆ ಅಲ್ಲಿಗೆ ದೇವರು ಬರುತ್ತದೆ ಮತ್ತು ದೇವರಿಗೆ ಊರಿನ ಹೆಸರು ನಿಲ್ಲುತ್ತದೆ ದೇವರ ಹೆಸರೇ ಊರಿಗೆ ಬರುವುದು ಬಹು ಕಡಿಮೆ ಎಂದು ನುಡಿದರು.

ಸಂಸ್ಕೃತೀಕರಣದಿಂದ ಅನೇಕ ಮೂಲ ಹೆಸರುಗಳೇ ಅಳಿದು ಹೋಗಿರುವುದನ್ನು ಅವರು ಗುರುತಿಸಿದರು ಆದರೂ ಕೂಡಾ ಪರರು ಹೊರೆಸಿದ ಹೆಸರುಗಳು ಉಳಿಯದೆ ನಾಡು ಹೆಸರುಗಳೇ ಉಳಿಯುವುದೆಂದು ಹೇಳಿದರು. ಅನೇಕ ಹಳ್ಳಿಗಳ ಮತ್ತು ಊರುಗಳ ಹೆಸರಿನ ಹಿಂದೆ ಇರುವ ಜಾನಪದ ಕತೆಗಳನ್ನೂ ಅವುಗಳ ಹೆಸರಿಗಳಿಗಿರುವ ನಂಟನ್ನು ಎತ್ತಿ ತೋರಿಸಿ, ಹಲವು ಬಾರಿ ಈ ಜಾನಪದ ಕತೆಗಳನ್ನು ಬೇಕೆಂದೇ ಕಟ್ಟಲಾಗುತ್ತದೆ ಎಂದರು. ಹೆಚ್ಚಿನ ಕತೆಗಳಲ್ಲಿ ರಾಮಾಯಣದ ಸಂಬಂಧವನ್ನು ಕಲ್ಪಿಸಿ ಸ್ಥಳದ ಮಹಿಮೆಯನ್ನು ಹೆಚ್ಚು ಮಾಡುವ ಪ್ರಯತ್ನವೇ ಕಂಡುಬರುತ್ತದೆ ಎಂದರು.

ಎರಡೂ ದಿನಗಳ ಈ ಉಪನ್ಯಾಸಗಳಲ್ಲಿ ಇನ್ನೂ ಹೆಚ್ಚು ಆಳವಾಗಿ ವಿಷಯದಲ್ಲಿ ಸಂಷೋಧನೆ ನಡೆಯಬೇಕಾದುದು ಎದ್ದು ಕಾಣುತ್ತಿತ್ತು. ಆದರೂ ಈ ವಿಷಯದಲ್ಲಿ ಪ್ರಾ. ಜವರೇಗೌಡರು ಸಂಶೋಧನೆಯನ್ನು ಪ್ರಾರಂಭಿಸಿರುವುದು ಸಂತೋಷದ ಸಂಗತಿ. ಅವರಿಗೆ ಮುಂಬಯಿಯ ಕನ್ನಡಿಗರ ಪರವಾಗಿ ವಂದನೆಗಳು



ಅಸೋಸಿಯೇಶನ್‌ಗೆ ಭೇಟಿ ಕೊಟ್ಟ ಪ್ರಾ. ದೇ. ಜವರೇಗೌಡರು ಸಂದರ್ಶಕರ ಡೈರಿಯಲ್ಲಿ ಬರೆದ ಹಸ್ತಾಕ್ಷರ

## ದತ್ತಿ ಉಪನ್ಯಾಸ – ಮಾರ್ಚ್ 1988

### ಡಾ. ಚಂದ್ರಶೇಖರ ಕಂಬಾರ್‌ರ ಉಪನ್ಯಾಸ

ಮೈಸೂರು ಅಸೋಸಿಯೇಷನ್ ಬಂಗಾರ ಹಬ ದತ್ತಿ ಉಪನ್ಯಾಸಗಳ ಅಂಗವಾಗಿ ಮುಂಬೈ ವಿಶ್ವವಿದ್ಯಾನಿಲಯ ಹಾಗೂ ಮೈಸೂರು ಅಸೋಸಿಯೇಷನ್ನಿನ ಜಂಟಿ ಆಶ್ರಯದಲ್ಲಿ ಮಾರ್ಚ್ 5, 6 ಹಾಗೂ 7 ರಂದು ಮೈಸೂರು ಅಸೋಸಿಯೇಷನ್ನಿನ ಸಭಾಗಾರದಲ್ಲಿ ಡಾ। ಚಂದ್ರಶೇಖರ್ ಕಂಬಾರರು "ಪರಂಪರೆ ಹಾಗೂ ಇಂದಿನ ರಂಗಭೂಮಿ" ಎಂಬ ವಿಷಯದ ಮೇಲೆ ಬಹಳ ಸುಂದರವಾಗಿಯೂ, ಸರಳವಾಗಿಯೂ ಮತ್ತು ಅರ್ಥಪೂರ್ಣವಾಗಿಯೂ ಮಾತನಾಡಿದರು.

ಪರಂರಾಗತವಾಗಿ ನಾಟಕ ಕಲೆಯು ಬೆಳೆದು ಬಂದ ರೀತಿಯನ್ನು ವಿವರಿಸುತ್ತಾ ಜಾನಪದ ಕಲೆಯೇ ಎಲ್ಲಕ್ಕೂ ಮೂಲವಾದುದೆಂದೂ, ಅದು ದೇವಿಯ ಅಥವಾ ಊರ ದೇವತೆಯ ಆರಾಧನೆಯಲ್ಲಿ ವ್ಯಕ್ತಗೊಳ್ಳುತ್ತಿದ್ದವೆಂದೂ ತಿಳಿಸಿದರು. ಹೆಚ್ಚಾಗಿ ಉತ್ತರ ಕರ್ನಾಟಕದ ಕಡೆ ಮಾರಿ ಜಾತ್ರೆಯಲ್ಲಿ ಈಗಲೂ ಕಂಡು ಬರುವ ಆರಾಧನಾ ಕ್ರಮದಲ್ಲಿ ಹಾಗೂ ಸಣ್ಣಾಟ, ದೊಡ್ಡಾಟ ಹಾಗೂ ಬಯಲಾಟಗಳ ಲಕ್ಷಣಗಳಲಿ ಬಹಳಷ್ಟು ಸಾಮ್ಯವಿರುವುದನ್ನು ಕಾಣಬಹುದೆಂದೂ ತಿಳಿಸಿದರು. ಹಾಗೆಯೇ ಸಣ್ಣಾಟ, ದೊಡ್ಡಾಟ ಮತ್ತು ಬಯಲಾಟಗಳಲ್ಲಿ



ಕಂಡುಬರುವ ವ್ಯತ್ಯಾಸಗಳು. ಬಯಲಾಟಗಳನ್ನು ಆಡುವ ನಟರಲ್ಲಿರಬೇಕಾದ ಮುಖ್ಯ ಸಾಮರ್ಥ್ಯಗಳು ಮುಂತಾದವನ್ನು ಉದಾಹರಣೆಗಳ ಸಹಿತ ವಿವರಿಸಿದರು. ಮುಖ್ಯವಾಗಿ ಬಯಲಾಟಗಳಿಗೆ ನಾವೇನು "ಸ್ಕ್ರಿಪ್ಟ್" ಅನ್ನುತ್ತೇವೆಯೋ ಅದು ಇರುವುದಿಲ್ಲವೆಂದೂ, ಕವಿಯೊಬ್ಬನ ಹಾಡಿನ ರೂಪದಲ್ಲಿದ್ದ ಕಥೆಯನ್ನು ನಟನೊಬ್ಬ ತನ್ನ ಸಾಮರ್ಥ್ಯದಿಂದಲೇ "ಡಯಲಾಗ್" ಆಗಿ ಮಾರ್ಪಡಿಸಿಕೊಂಡು ಆಡುತ್ತಾನೆಂದೂ, ಆ ನಟನೇ ಏಕಕಾಲದಲ್ಲಿ ನಾಟಕದ ಪಾತ್ರ ಹಾಗೂ ಪ್ರೇಕ್ಷಕ ಎರಡೂ ಆಗುತ್ತಾನೆಂದೂ ಸಹ ತಿಳಿಸಿದರು. ಬಯಲಾಟಗಳಿಗೆ ಪ್ರೇಕ್ಷಕ ಪ್ರತಿಕ್ರಿಯೆ, ಅನುಭೂತಿಗಳು ಮುಖ್ಯವಾಗಿದ್ದು, ಪ್ರೇಕ್ಷಕರು ಯಾವ ರೀತಿ ನಾಟಕಗಳಲ್ಲಿ ಒಂದಾಗಿ ಪ್ರತಿಕ್ರಿಯೆ ತೋರಿಸುತ್ತಾರೋ, ಅದೇ ರೀತಿಯಲ್ಲಿ ನಾಟಕಗಳು ಬೆಳೆಯುತ್ತಾ ಹೋಗುತ್ತಿವೆ. ಪ್ರೇಕ್ಷಕರ ಪ್ರತಿಕ್ರಿಯೆಗೆ ಅನುಗುಣವಾಗಿ ನಟನ ಪಾತ್ರವನ್ನು ವಿಸ್ತರಿಸುವುದು ಇಲ್ಲಿ ಮೊಟಕುಗೊಳಿಸುವುದು ಬಯಲಾಟದಲ್ಲಿ ಸೂತ್ರಧಾರಿಯ ಕೆಲಸ. ಪ್ರೇಕ್ಷಕರಲ್ಲಿ ಉತ್ಸಾಹ ಇಲ್ಲದೇ ಹೋದರೆ ನಟನ ಪಾತ್ರ ಕಳೆಗಟ್ಟದು ಎಂದೂ ತಿಳಿಸಿದರು. ನಮ್ಮ ಬಯಲಾಟಗಳು ಸಂಸ್ಕೃತ ನಾಟಕಗಳಿಗೆ ಸ್ಫೂರ್ತಿಯಾಗಿರಬಹುದೆಂದೂ ಒಂದು ಅಭಿಪ್ರಾಯವಿತ್ತರು. ಮುಂದೆ ಸಂಸ್ಕೃತ ನಾಟಕಗಳು ಹಾಗೂ

ಪಾಶ್ಚಾತ್ಯ ನಾಟಕಗಳ ಪ್ರಭಾವದಿಂದ ನಮ್ಮ ರಂಗಭೂಮಿಯಲ್ಲಿ ಕಂಡು ಬಂದ ಬದಲಾವಣೆಗಳು ಹೇಗೆ ಈ ಪರಂಪರಾಗತವಾದ ಕಲೆಯ ಅಳಿವಿಗೆ ಕಾರಣವಾಗುತ್ತಿದೆ ಎಂದು ತಿಳಿಸುತ್ತಾ ಈಗ ಹೊಸ ಬಗೆಯ ಯಕ್ಷಗಾನವನ್ನು ಬರೆದು ಆಡಿಸುವುದು ಎಷ್ಟು ಕಷ್ಟವೆಂಬುದನ್ನು ತಮ್ಮ "ಸಿರಿಸಂಪಿಗೆ"ಯ ಉದಾಹರಣೆಯ ಸಹಿತ ವಿವರಿಸಿದರು. ನಮ್ಮ ನಾಟಕಗಳ ಪರಂಪರೆಯನ್ನು ಉಳಿಸಿಕೊಳ್ಳಲು ಎಲ್ಲಾ ಬಗೆಯ ರಂಗಕಲಾವಿದರೂ ಹಾಗೂ ಪ್ರೇಕ್ಷಕರೂ ಸೇರಿ ಒಂದು ಮಾರ್ಗವನ್ನು ಕಂಡುಕೊಳ್ಳಬೇಕಾಗಿದೆ ಎಂದು ತಮ್ಮ ಉಪನ್ಯಾಸದ ಕೊನೆಗೆ ಒಂದು ಸೂಚನೆಯನ್ನಿತ್ತರು.

ಕೊನೆಯಲ್ಲಿ ಶ್ರೋತೃಗಳ ಕೋರಿಕೆಯ ಮೇರೆಗೆ ತಮ್ಮ "ಋಷ್ಯಶೃಂಗ' ಹಾಗೂ "ಸಿರಿಸಂಪಿಗೆ" ಯ ಹಾಡುಗಳನ್ನು ಹಾಡಿ ತಮ್ಮ ಸಂಶ್ರಾವ್ಯ ಕಂಠದಿಂದ ಸಭಿಕರನ್ನು ರಂಜಿಸಿದರು. ಮುಂಬೈ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಡಾ| ತಾಳ್ತಜೆ ವಸಂತ ಕುಮಾರರು ಸಮಾರಂಭವನ್ನು ಉದ್ಘಾಟಿಸಿದರು. ಪ್ರೊ| ಚಿದಂಬರ ದೀಕ್ಷಿತರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಅಸೋಸಿಯೇಷನ್ನಿನ ಪರವಾಗಿ ನಾಗೇಶ ಬೆಳವಾಡಿಯವರು ಸಮಾರಂಭದ ಮುಕ್ತಾಯಕ್ಕೆ ವಂದನಾರ್ಪಣೆಯನ್ನು ಮಾಡಿದರು.

## ದತ್ತಿ ಉಪನ್ಯಾಸ – ಮಾರ್ಚ್ 1989

### ಡಾ. ಸೂರ್ಯನಾಥ್ ಕಾಮತ್‌ರವರ ಉಪನ್ಯಾಸ

ಮುಂಬಯಿ ವಿಶ್ವವಿದ್ಯಾಲಯ ಹಾಗೂ ಮೈಸೂರು ಅಸೋಸಿಯೇಷನ್ ಸೇರಿ ನಡೆಸುವ ದತ್ತಿ ಉಪನ್ಯಾಸಮಾಲೆಯಲ್ಲಿ ಜನವರಿ 14, 15 ಮತ್ತು 16 ರಂದು ಸೂರ್ಯನಾಥ ಕಾಮತ್ ಅವರಿಂದ "ಭಾರತೀಯ ಪರಂಪರೆ ಸಂರಕ್ಷಣೆಗೆ ವಿಜಯನಗರದ ಕೊಡುಗೆ" ಎಂಬ ವಿಷಯವನ್ನು ಕುರಿತು ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು.

ಅತಿಥಿಗಳನ್ನು ಸ್ವಾಗತಿಸುತ್ತ ಅಸೋಸಿಯೇಷನ್ನಿನ ಕಾರ್ಯದರ್ಶಿಗಳಾದ ಶ್ರೀ| ನಾಗೇಶ ಬೆಳವಾಡಿಯವರು ಈ ಉಪನ್ಯಾಸಮಾಲೆಯಲ್ಲಿ ಡಾ| ಸೂರ್ಯನಾಥ ಕಾಮತ್‌ರ ಈ ಉಪನ್ಯಾಸ 7ನೆಯ ಉಪನ್ಯಾಸವೆಂದೂ, ಈ ಸರಣಿಯ ಮೂಲಕ ಮುಂಬಯಿನ ಸಾಹಿತ್ಯ ಮತ್ತು ಕಲಾ ಪ್ರೇಮಿಗಳಿಗೆ ಶ್ರೀ ಎಚ್. ಕೆ. ರಂಗನಾಥ್, ಡಾ| ಕೀರ್ತಿನಾಥ ಕುರ್ತುಕೋಟಿ, ಡಾ| ದೇ. ಜೆ. ಗೌಡರು. ಡಾ|




ದತ್ತಿ ಉಪನ್ಯಾಸ ಮಾಡುತ್ತಿರುವ ಡಾ|| ಸೂರ್ಯನಾಥ ಕಾಮತರೊಡನೆ ವೇದಿಕೆಯ ಮೇಲೆ ಕುಳಿತಿರುವವರು

ಚಂದ್ರಶೇಖರ್ ಕಂಬಾರ, ದಿ. ಶ್ರೀರಂಗರು ಮೊದಲಾದ ಪ್ರತಿಭಾವಂತ ಕನ್ನಡ ಸಾಹಿತಿಗಳ ಉಪನ್ಯಾಸವನ್ನು ಕೇಳುವ ಸದವಕಾಶ ದೊರಕಿದೆಯೆಂದೂ ತಿಳಿಸಿದರು.

ಡಾ| ಶ್ರೀನಿವಾಸ ಹಾವನೂರು ಡಾ| ಸೂರ್ಯನಾಥ ಕಾಮತ್‌ರವರ ಪರಿಚಯ ಮಾಡಿಕೊಡುತ್ತಾ ಅವರು ಶಿಕ್ಷಕರಾಗಿದ್ದರು. ಲೇಖಕರೂ ಮತ್ತು ಸಂಪಾದಕರೂ ಆಗಿದ್ದಾರೆಂದೂ ಸಂಶೋಧನೆಯ ರಂಗದಲ್ಲಿ ಬಹಳ ಉನ್ನತವಾದ ಕೆಲಸ ಮಾಡಿದ್ದಾರೆಂದೂ ತಿಳಿಸಿದರು. ಕರ್ನಾಟಕದಲ್ಲಿ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಇವರದೊಂದು ಬೃಹತ್ ಕೃತಿ. ಇತಿಹಾಸದ ಸಂಶೋಧನೆಯಲ್ಲಿ ತೀವ್ರ ಆಸಕ್ತಿ ಇರುವ ಇವರು ಕರ್ನಾಟಕ ಗೆಜೆಟಿಯರ್ಸ್‌ನ ನಿರ್ದೇಶಕರಾಗಿರುವದು ಬಹಳ ಸೂಕ್ತವಾಗಿದೆ ಎಂದರು.

ಅಂದಿನ ಕಾರ್ಯಕ್ರಮಕ್ಕೆ ಅಧ್ಯಕ್ಷರಾದ ಡಾ| ಡೇವಿಡ್‌ರವರು, ದೀಪವನ್ನು ಹಚ್ಚಿ ಉಪನ್ಯಾಸ ಮಾಲೆಯ ಉದ್ಘಾಟನೆ ಮಾಡಿದರು. ಇವರು ಮುಂಬೈನ ವಿಲ್ಸನ್ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರು ಹಾಗೂ ಮುಂಬೈನ ಪ್ರಮುಖ ಕನ್ನಡಿಗರು. ಡಾ| ಸೂರ್ಯನಾಥ ಕಾಮತ್‌ರವರು ತಮ್ಮ ಉಪನ್ಯಾಸದ ಮೊದಲನೆಯ ಭಾಗದಲ್ಲಿ ವಿಜಯನಗರದ ಸಾಮ್ರಾಜ್ಯವು ಧರ್ಮರಕ್ಷಣೆ ಹಾಗೂ ಪೋಷಣೆಗಾಗಿ ನಡೆಸಿದ ಅನೇಕ ಕಾರ್ಯಗಳ ಬಗ್ಗೆ ವಿಸ್ತಾರವಾಗಿ ಮಾತನಾಡಿದರು. ದೆಹಲಿಯ ಸುಲ್ತಾನರ ದಂಡ ಯಾತ್ರೆಗಳಿಂದ ಪರಂಪರಾಗತ ಧರ್ಮಕ್ಕೆ ಅಪಾಯ ಉಂಟಾದಾಗ, ಜನರು ಊರನ್ನು ಬಿಟ್ಟು ಗುಳೆ ಹೋಗಹತ್ತಿದರು. ಕಲೆ ಮತ್ತು ಸಾಹಿತ್ಯ ರಚನೆ ಸ್ಥಗಿತವಾಗಿದ್ದಿತು. ವಿಜಯನಗರದ ಅರಸರು ಮತ್ತು ಅವರ ಮಾಂಡಲೀಕರು ಕಲೆ ಮತ್ತು ಸಾಹಿತ್ಯದ ಬೆಳವಣಿಗೆಗೆ ನೆರವಾಗುವಂತಹ ವಾತಾವರಣವನ್ನು ತಮ್ಮ ರಾಜ್ಯದಲ್ಲಿ ಕಲ್ಪಿಸಿಕೊಟ್ಟರು ಮತ್ತು ಅದಕ್ಕಾಗಿ ಅನೇಕ ದತ್ತಿಗಳನ್ನು ಕೊಟ್ಟು ಧನಸಹಾಯ ಮಾಡಿದರು. ಅನೇಕ ದೇವಾಲಯಗಳನ್ನು ದುರಸ್ತಿ ಮಾಡಿ, ಅವುಗಳ ಪ್ರಾಕಾರವನ್ನು ವಿಸ್ತರಿಸಿ, ಮಂಟಪಗಳನ್ನು ಕಟ್ಟಿಸಿ ಅವುಗಳಲ್ಲಿ ಸಾಮಾಜಿಕ ಚಟುವಟಿಕೆಗಳು ಹೆಚ್ಚುವಂತೆ ಮಾಡಿದರು. ವಿಜಯನಗರದ ಕಾಲದಲ್ಲಿ ಪ್ರಾರಂಭವಾದ ದೇವಾಲಯಗಳ ಶೈಲಿ ಇಂದಿಗೂ ದಕ್ಷಿಣ ಭಾರತದಲ್ಲಿ ಉಳಿದಿದೆ ಎಂದರು.

ಎರಡನೆಯ ದಿನದ ಉಪನ್ಯಾಸಕ್ಕೆ ಪ್ರಾ. ಸುನೀತ ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಅಂದು ಡಾ| ಸೂರ್ಯನಾಥ ಕಾಮತ್‌ರವರು ವಿಜಯನಗರದಲ್ಲಿ ಭಾರತೀಯ ಧಾರ್ಮಿಕ ಸಾಹಿತ್ಯ ರಚನೆಯ ಬಗ್ಗೆ ಮಾತನಾಡಿದರು. ವಿಜಯನಗರದ ಅರಸರು ಎಲ್ಲಾ ಧರ್ಮ ಪಂಥಗಳಿಗೂ ಕೊಟ್ಟ ಸಮಾನಾವಕಾಶ, ಬೆಂಬಲ ಮತ್ತು ಪ್ರೋತ್ಸಾಹ, ಈ ಕಾಲದಲ್ಲಿ ಅನೇಕ ಬೃಹತ್ ಗ್ರಂಥಗಳ ರಚನೆಗಳ ನಿರ್ಮಾಣದಲ್ಲಿ ನೆರವಾಯಿತು. ಭಾರತದ ಅನೇಕ ಭಾಗಗಳಿಂದ ವಿದ್ವಾಂಸರು ವಿಜಯನಗರಕ್ಕೆ ಬಂದು ಸನ್ಮಾನಿತರಾದರು. ಧಾರ್ಮಿಕ ಗ್ರಂಥಗಳ ರಕ್ಷಣೆ ಹಾಗೂ ಅವುಗಳ ಅಧ್ಯಯನದ ಬಗ್ಗೆ ಜನರಲ್ಲಿ ಉತ್ಸಾಹವನ್ನು ಹೆಚ್ಚಿಸುವುದಕ್ಕಾಗಿ ವಿಜಯನಗರದ ಅರಸರು ವಿಶೇಷ ಕ್ರಮಗಳನ್ನು ಕೈಗೊಂಡರು ಎಂದು ತಿಳಿಸಿದರು.

ಮೂರನೆಯ ದಿನದ ಉಪನ್ಯಾಸ ಡಾ| ವಸಂತ ಕುಮಾರ ತಾಳ್ತಜೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಮತ್‌ರವರು ಕಲೆ, ಭಾಷೆ ಹಾಗೂ ಸಾಹಿತ್ಯಗಳಿಗೆ ವಿಜಯನಗರದ ರಾಜ್ಯದಲ್ಲಿ ದೊರೆತ ಪ್ರೋತ್ಸಾಹದ ಬಗ್ಗೆ ವಿವರಿಸಿದರು. ವಿದ್ಯಾರಣ್ಯ ಕಲೆನಾಥ, ರಾಮಮಾತ್ರ ಮತ್ತು ಲಕ್ಷ್ಮೀನಾರಾಯಣರು ಸಂಗೀತ ಶಾಸ್ತ್ರದ ಅನೇಕ ಗ್ರಂಥಗಳನ್ನು ರಚಿಸಿದ್ದರೂ, ಪುರಂದರದಾಸರು ಹಾಗೂ ತ್ಯಾಗರಾಜರು ಸಂಗೀತಕ್ಕೆ ಒಂದು ಪ್ರಾಯೋಗಿಕ ರೂಪ ಕೊಟ್ಟು ಈ ಕಲೆಯನ್ನು ಜನಪ್ರಿಯಗೊಳಿಸಿದರೆಂದರು. ದಕ್ಷಿಣ ಭಾರತದ ಎಲ್ಲಾ ಭಾಷೆಗಳಿಗೂ ವಿಜಯನಗರ ಅಪಾರ ಕೊಡುಗೆ ನೀಡಿದೆ. ವಿಜಯನಗರದ ನಂತರ ಅದರ ಮಾಂಡಲೀಕರಾಗಿದ್ದು ನಂತರ ಸ್ವತಂತ್ರ ರಾಜರಾದವರೂ ಕೂಡ ಕಲೆ ಮತ್ತು ಸಂಸ್ಕೃತಿಯ ಬಗ್ಗೆ ಅದೇ ಆಸಕ್ತಿ ವಹಿಸಿದ್ದರಿಂದ ಭಾರತದ ಪರಂಪರೆಯ ರಕ್ಷಣೆಗೆ ವಿಜಯನಗರದ ಕೊಡುಗೆ ಅಪಾರ ಎಂದು ತಿಳಿಸಿದರು.

ಉಪನ್ಯಾಸದ ನಂತರ ಶ್ರೋತೃಗಳು ಪ್ರಶ್ನೆಗಳನ್ನು ಕೇಳಲು ಅವಕಾಶವಿದ್ದಿತು. ಮೂರು ದಿನವೂ ಉಪನ್ಯಾಸದ ನಂತರ ನಡೆದ ಪ್ರಶ್ನೋತ್ತರಾವಳಿಯು, ಡಾ| ಸೂಯನಾಥ ಕಾಮತ್‌ರು ತಮ್ಮ ಉಪನ್ಯಾಸದಿಂದ ಜನರಲ್ಲಿ ಉಂಟುಮಾಡಿದ ಆಸಕ್ತಿ ಮತ್ತು ಕುತೂಹಲಕ್ಕೆ ಕುರುಹಾಗಿತ್ತು.

## ದತ್ತಿ ಉಪನ್ಯಾಸ – ಜನವರಿ 1991

### ಪ್ರೊ. ಜಿ. ಟಿ. ನಾರಾಯಣ ರಾವ್‌ರವರ ಉಪನ್ಯಾಸ

ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಜೊತೆಗಿನ ಮೈಸೂರು ಅಸೋಸಿಯೇಷನ್ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ ಮಾಲಿಕೆಯ ಈ ಬಾರಿಯ ಉಪನ್ಯಾಸಗಳು ಜನವರಿ 4, 5 ಮತ್ತು 6 ರಂದು ಅಸೋಸಿಯೇಷನ್ ಸಭಾಗೃಹದಲ್ಲಿ ನಡೆದವು. ಕನ್ನಡದಲ್ಲಿ ವೈಜ್ಞಾನಿಕ ಬರಹಗಳನ್ನು ನೀಡುವ ಕೆಲವೇ ಮಂದಿ ವಿದ್ವಾಂಸರಲ್ಲಿ ಪ್ರಮುಖರಾದ ಮೈಸೂರಿನ ಪ್ರೊ॥ ಜಿ. ಟಿ. ನಾರಾಯಣರಾವ್ ಅವರು ಈ ದಿನಗಳಲ್ಲಿ "ವಿಶ್ವವಿಕಾಸ" ಮತ್ತು "ವೈಜ್ಞಾನಿಕ ಮನೋಧರ್ಮ" ಎಂಬ ವಿಷಯಗಳ ಬಗೆಗೆ ಒಟ್ಟು ಮೂರು ಉಪನ್ಯಾಸಗಳನ್ನು ನೀಡಿದರು. ಅವುಗಳ ಸಾರಾಂಶ ಇಲ್ಲಿದೆ.


ವಿಶ್ವವಿಕಾಸ : ಮನುಷ್ಯ ನಕ್ಷತ್ರಗಳ ಬಗ್ಗೆ ಏನು ತಿಳಿದುಕೊಂಡಿದ್ದಾನೆ ಈ



ಪ್ರಶ್ನೆಯನ್ನು ಮುಂದಿಟ್ಟು, ಆಕಾಶದ ಬಗೆಗಿನ ಜ್ಞಾನದ ಅಧ್ಯಯನದ ಚರಿತ್ರೆ ಇತ್ಯಾದಿಗಳ ಕುರಿತ ಸ್ವಾರಸ್ಯವಾದ ಉಪನ್ಯಾಸಗಳಾಗಿತ್ತು ಅದು.

ಖಗೋಳ ವಿಜ್ಞಾನದ ನಮ್ಮ ಅರಿವಿನ ಕೊರತೆಗೆ ಮುಖ್ಯವಾಗಿ ಎರಡು ಕಾರಣಗಳು. ಒಂದು ಅಧ್ಯಯನದ ಪರಿಮಿತಿ ಮತ್ತು ಅದನ್ನು ಗ್ರಹಿಸುವ ನಮ್ಮ ಮಿತಿ. ಇನ್ನೊಂದು ನಮ್ಮ ಪರಂಪರೆಯ ನಂಬಿಕೆ. ಮೊದಲನೆಯದನ್ನು ಅರ್ಥೈಸಿಕೊಂಡು ಎರಡನೆಯದನ್ನು ಬಿಟ್ಟುಕೊಟ್ಟು ಈ ಕ್ಷೇತ್ರವನ್ನು ಪ್ರವೇಶಿಸುವ ಸಾಮಾನ್ಯನೊಬ್ಬನಿಗೆ ಎಲ್ಲೆಲ್ಲೂ ವಿಸ್ಮಯ. ಅಷ್ಟೇ ಕುತೂಹಲ. ಕ್ರಿ. ಶ. 2 ನೇ ಶತಮಾನದ ರೋಮನ್ ಚಿಂತಕ ಸೆನೆಕನೆಂದಂತೆ ವಿಶ್ವವೆನ್ನುವುದು ಒಂದು ಅಗಾಧವಾದ ವಿಸ್ಮಯದ ಪೆಟ್ಟಿಗೆ. ಅದು ಯಾವಾತನಿಗೂ ತನ್ನ ಎಲ್ಲ ವಿಸ್ಮಯಗಳನ್ನು ಹೊರಗೆಡುಹುವುದೇ ಇಲ್ಲ. ಕಾಲದಿಂದ ಕಾಲಕ್ಕೆ ಮನುಷ್ಯ ಆ ವಿಸ್ಮಯಗಳನ್ನು ಅರಿಯಲು ಸಮರ್ಥನಾದಾಗ ಅವನ ಯೋಗ್ಯತೆಯನ್ನು ಅನುಸರಿಸಿ ಅದು ಅದನ್ನು ಹೊರಗೆಡಹುತ್ತದೆ.

ಈ ವಿಶ್ವದಲ್ಲಿ ಅಸಂಖ್ಯ ಬ್ರಹ್ಮಾಂಡಗಳಿವೆ (Galaxy) ಅಸಂಖ್ಯ ನಕ್ಷತ್ರಗಳ ಸಮುದಾಯ ಒಂದು ಬ್ರಹ್ಮಾಂಡ. ಸೂರ್ಯನೂ ಸದಸ್ಯನಾಗಿರುವ ಬ್ರಹ್ಮಾಂಡಕ್ಕೆ 'ಆಕಾಶಗಂಗೆ' ಎಂದು ಹೆಸರು. ಇದರಲ್ಲಿ 400 ಮಿಲಿಯ ನಕ್ಷತ್ರಗಳಿವೆ. ಇಂತಹ ಬ್ರಹ್ಮಾಂಡಗಳು ಪ್ರಪಂಚದಲ್ಲಿ 1000 000 000 00 ಗಳಷ್ಟಿದೆ. ಹೀಗೆ ಗಣನೆಗಳು ಮುಂದುವರಿಯುತ್ತವೆ.




ಆಕಾಶದ ಬಗೆಗಿನ ಜ್ಞಾನದ ಅಧ್ಯಯನವನ್ನು ಮೂರು ರೀತಿಯಲ್ಲಿ ವಿಂಗಡಿಸಬಹುದು. (1) ದೃಗ್ಗೋಚಾರ ಖಗೋಳ ವಿಜ್ಞಾನ ಇದಕ್ಕೆ ಮಾನವನ ಪ್ರಾಚೀನತೆಯಷ್ಟೆ ದೊಡ್ಡ ಇತಿಹಾಸವಿದೆ. (2) ರೇಡಿಯೋ ಖಗೋಳ ವಿಜ್ಞಾನ. ಇದು 1930 ರಿಂದ ಆರಂಭವಾಯಿತು. (3) ಕ್ಷ–ಕಿರಣ ಖಗೋಳ ವಿಜ್ಞಾನ. ಇದು ಆಮೇಲಿನ ವೈಜ್ಞಾನಿಕ ಬೆಳವಣಿಗೆಯ ಫಲದಿಂದ ಬೆಳೆದು ಬಂತು.


ನಕ್ಷತ್ರಗಳು ಹೇಗುಂಟಾದವು? ಮನುಷ್ಯನ ಸೃಷ್ಟಿ ಹೇಗಾಯಿತು? ವಿಶ್ವವಿಕಾಸವನ್ನು ಅರಿಯುದೆಂದರೆ ಈ ಮೂಲಭೂತ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುವುದೇ ಆಗಿದೆ.

ನಕ್ಷತ್ರಗಳಿಗೂ ಚಲನೆಯಿದೆ. ಆಕಾಶವೂ ಚಲಿಸುತ್ತಿದೆ ಆದರೆ ಅವುಗಳ ಚಲನೆಗೆ ಅಗಾಧವಾದ ದೂರವಿದೆ. ಅದರ ಅರಿವಾಗಬೇಕಾದರೆ ಸಾವಿರಾರು ವರ್ಷಗಳ ಗಣನೆ ಅಗತ್ಯ. ಸಾಮಾನ್ಯ ದೃಷ್ಟಿಗೆ ಅದು ಸ್ಥಿರವಾಗಿಯೇ ಗೋಚರಿಸುತ್ತದೆ. ಸೂರ್ಯನಿಗೂ ಚಲನೆಯಿದೆ. ಸೂರ್ಯನು ನವಗ್ರಹಗಳು ಕ್ಷುದ್ರಗಳು ಧೂಮಕೇತುಗಳು ಇತ್ಯಾದಿ ತನ್ನ ಪರಿವಾರ ಸಮೇತ ಆಕಾಶ ಗಂಗೆಯ ಸುತ್ತಲೂ ಸುತ್ತುತ್ತಿರುತ್ತಾನೆ. ಅದು ಇನ್ನಾವುದರ ಸುತ್ತಲೋ ಸುತ್ತುತ್ತಾ ಇದೆ. ಇದು ಹೀಗೆ ಮುಂದುವರಿಯುವುದು. ಅದು ವಿಶ್ವದ ಗತಿಶೀಲತೆಯ ಮರ್ಮ.

ಗೋಚರ ನಕ್ಷತ್ರಗಳು ಮೂರು ತೆರನವು (1) ರಕ್ತದೈತ್ಯಗಳು (Red Giants) ಜ್ಯೇಷ್ಠ, ಆರ್ದ್ರ, ರೋಹಿಣಿ ಇತ್ಯಾದಿ. (2) ಸಾಧಾರಣ ನಕ್ಷತ್ರಗಳು (3) ಶ್ವೇತ ಕುಬ್ಜಗಳು. ಗಾತ್ರದಲ್ಲಿ ಚಿಕ್ಕಾದ, ಆದರೆ ಅತಿಶಯವಾದ ಉಷ್ಣತೆಯನ್ನು ಬೀರುವ ಶ್ವೇತ ಕುಬ್ಜಗಳು 1915ರ ನಂತರ ವಿಸ್ತೃತ ಪರೀಕ್ಷಣೆಗಳ ಫಲವಾಗಿ ಗೋಚರಿಸಿದವು.

ಬಲೂನು ಊದಿಕೊಂಡಾಗ ಅದರ ಚುಕ್ಕೆಗಳು ಹೇಗೆ ದೂರ ದೂರ ಸರಿಯುತ್ತವೆಯೋ ಅಂತೆಯೇ ವಿಶ್ವದಲ್ಲಿ ಎಲ್ಲವೂ ಎಲ್ಲದರಿಂದಲೂ ದೂರ ದೂರ ಸರಿಯುತ್ತಲೇ ಇರುತ್ತವೆ. ನಕ್ಷತ್ರಗಳೂ ಪ್ರರಸ್ಪರ ದೂರ ಸರಿಯುತ್ತವೆ. ಅರ್ಥಾತ್ ವಿಶ್ವ ವ್ಯಾಕೋಚಿಸುತ್ತದೆ. (Expanding Universe) ಇದು ಹಲವಾರು ಪ್ರತ್ಯಕ್ಷ ವೀಕ್ಷಣೆಗಳಿಂದ ರುಜುವಾತಾಗಿದೆ.

ಹೀಗಿರುವಾಗ, ವಿಶ್ವವು ವ್ಯಾಕೋಚನೆಗೊಳ್ಳುತ್ತಿದೆ ಎಂದಾಗ ಹಿಂದೆ ಒಂದು ಕಾಲದಲ್ಲಿ ಅದು ಸಂಕುಚಿತವಾಗಿದ್ದಿರಬೇಕಲ್ಲವೇ? ಎಂಬ ಪ್ರಶ್ನೆಯೆದ್ದು ಆ ಬಗ್ಗೆ ಸಂಶೋಧನೆಗಳು ನಡೆದವು. ಅಂತಹ ಗಣನೆಯ ಪ್ರಕಾರ 15,000



000 000 ವರ್ಷಗಳ ಹಿಂದೆ ವಿಶ್ವವು ಒಂದುಗೂಡಿಕೊಂಡ, ಅತಿ ಉಷ್ಣತೆಯ ಅತ್ಯಂತ ಭಾರದ ಒಂದು ಮೌದ್ದೆಯಂತಿತ್ತು. ಅದನ್ನು ಆದಿಮ ಬ್ರಹ್ಮಾಂಡವೆಂದು ಕರೆಯಲಾಗುತ್ತದೆ. ಪ್ರೋಟಾನ್, ನ್ಯೂಟ್ರೋನ್, ಇಲೆಕ್ಟ್ರೋನ್ ಮುಂತಾದ ಕಣಸಮುಚ್ಚಯವಾದ ಆ ಮುದ್ದೆ ತನ್ನ ಭಾರದಿಂದ ಅಸಂಖ್ಯ ಚೂರುಗಳಿಗೆ ಒಡೆಯಿತು. ಈ ಸಿಡಿತವನ್ನು 'ಮಹಾಭಜನೆ' ಎನ್ನುವರು. ಇಂಥ ಆದಿ ವಿಶ್ವದ ಚೂರುಗಳಿಗೆ ಆದಿ ನೀಹಾರಿಕೆಯೆಂದು ಹೆಸರು. ಇಂಥಾ ಆದಿ ನೀಹಾರಿಕೆಯ ಚಲನೆಗಳಿಂದ ಉಂಟಾಗುವ ಪ್ರಕ್ರಿಯೆಗಳಿಂದ ನಕ್ಷತ್ರಗಳು ಉತ್ಪನ್ನವಾಗುತ್ತವೆ. ಸೂರ್ಯನೂ ಹೀಗೆ ಹುಟ್ಟಿಕೊಂಡ ನಕ್ಷತ್ರ. ವಿಶ್ವವು ಇಂಥ ಅಗಾಧ ನಕ್ಷತ್ರಗಳ ತಾಣ.

ಕಾಲಾಂತರಗಳಲ್ಲಿ ಇಂಥ ನಕ್ಷತ್ರಗಳಲ್ಲಿ ವಿವಿಧ ಪ್ರಕ್ರಿಯೆಗಳಿಂದ ಸುಪರ್‌ನೋವಾ ಆಸ್ಫೋಟನೆ ನಡೆಯುತ್ತದೆ. ಒಂದು ಬ್ರಹ್ಮಾಂಡದಲ್ಲಿ ಒಂದು ಶತಮಾನದಲ್ಲಿ ಹಲವಾರು ಸಾವಿರ ಸುಪರ್ ನೋವಾಗಳಾಗುತ್ತದೆ.

ಈ ಬೆಳವಣಿಗೆಯ ಹಿನ್ನಲೆಯಲ್ಲಿ ಸುಮಾರು 5000 000 000 ವರ್ಷಗಳಷ್ಟು ಪ್ರಾಯವಾದ ಈ ಭೂಮಿಯಲ್ಲಿ ಕಾಲಾಂತರದಲ್ಲಿ ಜೀವಿಗಳು ಹುಟ್ಟಿಕೊಂಡವು. ಬಳಿಕ ವಿಕಾಸಚಕ್ರವಾಗಿ ಮಂಗನಿಂದ ಮಾನವನ ತನಕ ಬೆಳೆಯುತ್ತದೆ. ಅಂದರೆ ನೀವು ಹುಟ್ಟಿರುವುದು ಅಸಂಖ್ಯ ಸೂಪರ್‌ನೋವಾಗಳ ನಾಶದಿಂದ ಉಂಟಾದ ಧೂಳಿನ ಕಣಗಳಿಂದ.

ಹೀಗೆ ಆಕಾಶ ವಿಜ್ಞಾನವನ್ನು ಅಭ್ಯಾಸ ಮಾಡುವಾಗ ಮಾನವ ಒಂದು ಕ್ಷುದ್ರಕೀಟವಾಗಿ ಗೋಚರಿಸುವುದು. ಆದರೆ ವಿಶ್ವದ ಅಗಾಧ ಜ್ಞಾನವನ್ನು ಅರ್ಥಮಾಡಿಕೊಳ್ಳುವಂಥ ಸಾಮರ್ಥ್ಯ ಇಂದು ಆ ಕೀಟಕ್ಕಿದೆ. ಆ ಸಾಮರ್ಥ್ಯ ಎಲ್ಲರಲ್ಲೂ ಇದೆ. ಅದಕ್ಕೆ ಅವಕಾಶ ಒದಗಬೇಕು.

**ವೈಜ್ಞಾನಿಕ ಮನೋಧರ್ಮ**

"ವಿಜ್ಞಾನ"ವು ಇಂದು ವ್ಯಾಪಕ ಚಲಾವಣೆಯಲ್ಲಿರುವ ಒಂದು ಪದ. ಅದನ್ನು ಎಲ್ಲ ಕಡೆಗೂ ಸೇರಿಸುವ ಒಂದು ಚಟ ನಮ್ಮಲ್ಲಿ ಬೆಳೆದು ಬಂದಿದೆ. ಆಧ್ಯಾತ್ಮ ವಿಜ್ಞಾನ, ಸಮಾಜ ವಿಜ್ಞಾನ, ರಾಜಕೀಯ ವಿಜ್ಞಾನ ಇತ್ಯಾದಿ. ಹಾಗೆಯೇ ವೈಜ್ಞಾನಿಕ ಮನೋಧರ್ಮವೂ ಕೂಡ. ಅದನ್ನು ಬಳಸಿದರೆ ನಾವು ಪ್ರಗತಿಪರರೆಂದೋ, ಬಳಸದೇ ಇದ್ದರೆ ಓಬೀರಾಯನ ಕಾಲದವರೆಂದೋ ಗುರುತಿಸಿಕೊಳ್ಳುತ್ತೇವೆ. ಆದರೆ ವೈಜ್ಞಾನಿಕ ಮನೋಧರ್ಮವು ಆಳವಾಗಿ, ಐತಿಹಾಸಿಕವಾಗಿ ಬೆಳೆದು ಬಂದ ಬಗೆಯನ್ನು ಅರ್ಥಮಾಡಿಕೊಳ್ಳುವುದೊಂದೇ ಇದರ ಸರಿಯಾದ ಕ್ರಮ. ವೈಜ್ಞಾನಿಕ ಮನೋಧರ್ಮವೆಂದರೆ ವಿಜ್ಞಾನಿಯ ಮನೋಧರ್ಮವಲ್ಲ.

ಮನುಷ್ಯ ನಿಸರ್ಗದ ಕೂಸು, ನೈಸರ್ಗಿಕ ಬಲಗಳು ಸೃಷ್ಟಿಸಿದ ಒಂದು ಜೀವಂತ, ಯೋಚನೆ ಮಾಡಬಲ್ಲ, ಸಂವಹನ ಮಾಡಬಲ್ಲ ಯಂತ್ರ ಈ ವ್ಯಕ್ತಿ. ನೈಸರ್ಗಿಕ ಬಲದ ಮೇಲೆ ನಮ್ಮ ಯಾವ ವಿಧದ ಕೈವಾಡವೂ ನಡೆಯುವುದಿಲ್ಲ. ನಾವು ಅದರ ಅಂಶ. ಇದಲ್ಲದೆ ಕೆಲವು ಮಾನವಕೃತ ಬಲಗಳೂ ಮಾನವನನ್ನು ರೂಪಿಸುತ್ತವೆ. ಅವುಗಳಲ್ಲಿ ಧರ್ಮ ಮತ್ತು ಪ್ರಭುತ್ವಗಳು ಮುಖ್ಯವಾದವು.

ಧರ್ಮ ತೀರಾ ವ್ಯಕ್ತಿ ನಿಷ್ಠವಾದುದಾದರೆ ನಿಸರ್ಗ ವಸ್ತುನಿಷ್ಠ. ವಿಜ್ಞಾನವೆಂದರೆ ನಾವು ನಿಸರ್ಗದ ಜೊತೆ ಕಾರ್ಯ ಕಾರಣ ಅನ್ವೇಷಣ ದೃಷ್ಟಿಯಿಂದ ನಡೆಸುವ ಸಂವಾದ. ಹೀಗೆ ವಿಜ್ಞಾನ ಒಂದು ವಿಧವಾದ ಶ್ರದ್ಧೆ. ಶ್ರದ್ಧೆಯಿಲ್ಲದೆ ಬದುಕು ಇಲ್ಲ. ಅದು ರೂಢಿ ಮೂಲವಾಗಿದ್ದು ನಿಸರ್ಗವನ್ನು ಅವಲಂಬಿಸಿದೆ.

ನಿಸರ್ಗವನ್ನು ಕುರಿತಂತೆ ವಿಜ್ಞಾನವು ಪ್ರಮುಖವಾದ ಮೂರು ಶ್ರದ್ಧೆಗಳ ಆಧಾರದ ಮೇಲೆ ನಿಂತಿದೆ. ಅವುಗಳು (1) ವಿಶ್ವದಲ್ಲಿ ಒಂದು ಕ್ರಮಬದ್ಧಾತೆ ಇದೆ. (2) ಮನುಷ್ಯನ ಮತಿಗೆ ಈ ಕ್ರಮವನ್ನು ಗ್ರಹಿಸುವ ಅರ್ಥೈಸುವ, ಸಾಂಗೀಕರಿಸುವ, ಸಂವಹನ ನೀಡುವ ಸಾಮರ್ಥವಿದೆ. (3) ನಿಸರ್ಗವು ಬಹಳ ನವುರು, ಕೋಮಲ, ಸೂಕ್ಷ್ಮ, ಆದರೆ ಕಪಟಿಯಲ್ಲ. ಈ ಮೂರು ಶ್ರದ್ಧೆಗಳ ಆಧಾರಗಳ ಮೇಲೆಯೇ ವಿಜ್ಞಾನ ತನ್ನೆಲ್ಲ ಪ್ರಯೋಗಗಳನ್ನು ನಡೆಸಿವೆ. ಈ ಹಿನ್ನೆಲೆಯಲ್ಲೆ, ತನ್ನ ಎಲ್ಲ ಪ್ರಯೋಗಗಳಿಗೂ ಮಾನವ ಒಂದು ಕ್ರಮವನ್ನು ಕಂಡುಕೊಂಡಿದ್ದಾನೆ. ಅದನ್ನು ವೈಜ್ಞಾನಿಕ ವಿಧಾನವೆನ್ನುವರು. ಆ ಕ್ರಮವು ಮಾಹಿತಿಗಳ ಸಂಗ್ರಹಣೆ ವ್ಯವಸ್ಥಿತ ಅಳವಡಿಕೆ ರೂಪದ ಶೋಧನೆ, ನಿಸರ್ಗಕ್ಕೆ ಅನ್ವಯಿಸಿ ನೋಡುವಿಕೆ ಹೀಗೆ ಬೆಳೆಯುತ್ತದೆ. ಯಾವುದೇ ವೈಜ್ಞಾನಿಕ ಸಮಸ್ಯೆಯೂ ಈ ವಿಧಾನದಲ್ಲೇ ಒಂದು ಸಿದ್ಧಾಂತ ಬರುವವರೆಗೆ ಮುಂದುವರಿಯುತ್ತದೆ.

ಹೀಗೆಯೇ ವ್ಯವಸ್ಥಿತವಾಗಿ ಕೆಲಸವನ್ನು ಮಾಡುವುದಕ್ಕೆ ಕಾರ್ಯ ಕಾರಣ ಸಂಬಂಧ ರೂಪಿತ ದಿಶೆಯಲ್ಲಿ ಹೋಗುವಾಗ ನಮ್ಮ ಮನಸ್ಸಿಗೆ ಒಂದು ಸ್ಥಿತಿ ಬರುತ್ತದೆ. ಅಲ್ಲಿ ಮಾಡುವವನು ಯಾರು ಇತ್ಯಾದಿಗಳು ಗೌಣವಾಗಿ ಪ್ರಯೋಗ ಮಾತ್ರ ಮುಖ್ಯವಾಗುತ್ತದೆ. ಈ ಸ್ಥಿತಿಯೇ ವೈಜ್ಞಾನಿಕ ಮನೋಧರ್ಮ.

ಇದನ್ನು ಎಲ್ಲರಿಗೂ ಅರಿತುಕೊಳ್ಳಲು ಸಾಧ್ಯವಿದೆ. ಹೀಗೆ ಅರಿತುಕೊಂಡು, ರೂಢಿಸಿಕೊಂಡಾಗ ಜೀವನ ಸುಗಮವಾಗುತ್ತದೆ. ನಮ್ಮ ಮನಸ್ಸಿನೊಳಗೆ ಇರುವ ಸುಪ್ತ ಶಕ್ತಿ ಮತ್ತೆ ಮತ್ತೆ ಮೇಲೆ ವಿಕಾಸಕ್ಕೆ ಬಂದು ಅಪ್ಪರಮಟ್ಟಿಗೆ ಅವರಿಗೆ ಫಲಪ್ರದವಾಗುತ್ತದೆ.

ಆದರೆ ಪ್ರಭುತ್ವ ಮತ್ತು ಧರ್ಮ ನಮ್ಮನ್ನು ಹಿಡಿದು ಜಗ್ಗುತ್ತದೆ. ವಿಜ್ಞಾನ ಇದರ ಮಧ್ಯೆ ಸಿಕ್ಕಿ ಬಿಡುತ್ತದೆ. ಪಾರಮಾರ್ಥಿಕತೆ ಮತ್ತು ವಿಜ್ಞಾನ ವಿವೇಕವಾಗಿ ಹೋಗುವಾಗ ವೈಜ್ಞಾನಿಕ ಮನೋಧರ್ಮ ಅರ್ಥವಾಗುತ್ತದೆ. ಅದನ್ನು ಬಿಟ್ಟರೆ ಮನುಷ್ಯ ಬೆಳೆಯುವುದಿಲ್ಲ. ನಿಸರ್ಗವೇ ನಮಗೆ ಪ್ರೇರಣೆಗಳನ್ನು ಕೊಡುತ್ತಿದೆ. ನಾವು ಅದನ್ನು ಬಳಸಿಕೊಂಡರೆ ನಮ್ಮ ಮಾನಸಿಕ ದಿಗಂತ ವಿಸ್ತಾರವಾಗುತ್ತದೆ. ಜೀವನ ಉಲ್ಲಾಸವಾಗುತ್ತದೆ.

ಮೂರು ದಿನಗಳ ಈ ವಿಚಾರ ಪ್ರಚೋದಕ ಉಪನ್ಯಾಸ ಮಾಲೆಯ ಆರಂಭದಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಉಪಕುಲಗುರು ಡಾ. ಎಸ್. ಡಿ. ಕರ್ಣಿಕ್ ಅವರು ಉದ್ಘಾಟಿಸಿದರು. ಕೊನೆಯ ದಿನ ಪ್ರಾ. ಚಿದಂಬರ ದೀಕ್ಷಿತರು ಸಮರೋಪ ಭಾಷಣ ಮಾಡಿದರು. ಡಾ. ತಾಳ್ತಜೆ ವಸಂತ ಕುಮಾರರು ಸ್ವಾಗತಿಸಿ ಅಸೋಸಿಯೇಷನ್ ಕಾರ್ಯದರ್ಶಿ ಶ್ರೀ ಪ್ರಸಾದ್ ವಂದಿಸಿದರು.

# ದತ್ತಿ ಉಪನ್ಯಾಸ – ಜನವರಿ 1992

## ಡಾ. ಕೆ. ಕೃಷ್ಣಮೂರ್ತಿಯವರ ಉಪನ್ಯಾಸ

ತಮಿಳು ಸಂಸ್ಕೃತಗಳನ್ನು ಬಿಟ್ಟರೆ ಭಾರತೀಯ ಭಾಷೆಗಳಲ್ಲೆಲ್ಲ ಕನ್ನಡ ಸಾಹಿತ್ಯಕ್ಕೆ ಪ್ರಾಚೀನತೆಯಲ್ಲಿ ಹಾಗೂ ಶ್ರೀಮಂತಿಕೆಯಲ್ಲಿ ಹಿರಿಯ ಸ್ಥಾನಕ್ಕೆ ಕಾರಣ ಮುಖ್ಯವಾಗಿ ಅದರ ಶಬ್ದ ಸಮೃದ್ಧಿ, ವ್ಯಾಕರಣ ಶುದ್ಧಿ ಮತ್ತು ಛಂದೋಬದ್ಧ ಸಾಹಿತ್ಯ ಸಿದ್ಧಿ – ದ್ರಾವಿಡ ಮೂಲದ ಮೂಲ ಶಬ್ಧಗಳ ಜೊತೆಗೆ ಪ್ರಾಕೃತ, ಅಪಭ್ರಂಶಗಳ ಮೂಲದ ಶಬ್ದಗಳೂ ನೇರವಾಗಿ ಸಂಸ್ಕೃತದಿಂದ ಬಂದ ಶಬ್ದಗಳೂ ಸೇರಿ ಕನ್ನಡ ಶಬ್ದ ಭಂಡಾರವನ್ನು ಸಂಪದ್ಭರಿತವಾಗಿ ಮೂಡಿದೆ. ಈ ಮಾತೇ ಛಂದೋ ಬಂಧಗಳಿಗೂ ಅನ್ವಯಿಸುತ್ತದೆ. ಅಲಂಕಾರಾದಿ ಶಾಸ್ತ್ರ ವಿವೇಚನೆಗಳಿಗೂ ಅನ್ವಯಿಸುತ್ತದೆ. ವ್ಯಾಕರಣ, ಛಂದಸ್ಸು, ಅಲಂಕಾರ ಈ ಶಾಸ್ತ್ರಗಳಲ್ಲಿ ಪಾಂಡಿತ್ಯ ಗಳಿಸಿದವರಲ್ಲಿಯೇ ಪ್ರತಿಭಾವಂತರಾದ ಕೆಲವರು ಕಾವ್ಯ ರಚಏನೆಗೆ ಕೈ ಹಾಕುತ್ತಿದ್ದರು. ಸಾಂಪ್ರದಾಯಿಕ ರಾಜಕೀಯ ವ್ಯವಸ್ಥೆ, ಸಾಮಾಜಿಕ ನೀತಿ ಮೌಲ್ಯಗಳು, ದೈವ ಭಕ್ತಿ – ಈ ವರ್ತುಲವನ್ನ ತಿಕ್ರಮಿಸದೆ ಪೌರಾಣಿಕ, ರಾಮಾಯಣಾದಿ ಕಥಾ ಮೂಲವಾದ ಮಹಾಕಾವ್ಯಗಳ ರಚನೆ ಈ ಪಂಪಯುಗದ ಹಿರಿಮೆ. ಹೀಗಾಗಿ ಸಂಸ್ಕೃತ ಪಾಂಡಿತ್ಯವೇ ಕನ್ನಡ ಪಾಂಡಿತ್ಯದ ಅಡಿಗಲ್ಲೆನ್ನುವಂತಾಯಿತು. ಹತ್ತೊಂಬತ್ತನೆಯ ಶತಮಾನದಲ್ಲಿ ಆಧುನಿಕ ಯುಗ ತಲೆದೋರುವವರೆಗೆ ನಮ್ಮ ಇಡಿಯ ಕನ್ನಡ ಸಾಹಿತ್ಯವೇ ಸಂಸ್ಕೃತದ ಕಣ್ಬೆಳಕಿನಲ್ಲಿ ಒಮ್ಮೆ ಹೆಚ್ಚಾಗಿ ಒಮ್ಮೆ ಕಡಿಮೆಯಾಗಿ ಸಾಗಿದೆ. ಈ ಪರಂಪರೆಯ ಸಾಹಿತ್ಯದ ಕಡೆಯ ಪ್ರತಿನಿಧಿಗಳೇ ಬಸವಪ್ಪ ಶಾಸ್ತ್ರಿಗಳು – ಶಾಕುಂತಲದ ಅನುವಾದಕರು. ಪಂಡಿತರ ಪ್ರಶಂಸೆ ಮಾಡಿದ ಹಿಂದಿನ ಕವಿಯೇ ಇಲ್ಲ. ಬಸವಪ್ಪ ಶಾಸ್ತ್ರಿಗಳ ಒಂದು ಸಭ್ಯ ಹೀಗಿದೆ:

ಸಕ್ಕದಮಂ ಕನ್ನಡಮಂ ಸಕ್ಕಸಮಂ ತಿಳಿದ ವಿಬುಧರ್ಗರಿಯಲ್
ಸಕ್ಕರೆವೆರಸಿದ ಸವಿ ತಾನಕ್ಕುಂ ಸಕ್ಕದಮೆ ಬೆರೆದ ಕನ್ನಡ ಕಬ್ಬಂ

ಇವರ ಹಿಂದಿನವನಾದ ಷಡಕ್ಷರಿ (17 ನೆ ಶತಮಾನ) ಸಂಸ್ಕೃತ




ಕನ್ನಡವೆರಡರಲ್ಲೂ ಕಾವ್ಯ ಬರೆದು "ಉಭಯ ಕವಿತಾ ವಿಶಾರದ" ಎನ್ನಿಸಿದ್ದವನು. ಈ ಬಿರುದನ್ನು ಪಂಪ ನೃಪತುಂಗರವರೆಗಿನ ಎಲ್ಲ ಹಿಂದಿನವರಿಗೂ ಅನ್ವಯಿಸಬಹುದು. ಕವಿಗಳನ್ನು ಜನತೆಗೆ ಪರಿಚಯಿಸಲು ಇದೇ ಪಾಂಡಿತ್ಯದ ಗಮಕಿ–ವಾದಿ–ವಾಗ್ಮಿಗಳು ರಾಜ ಸಭೆಗಳಲಿ ಇರುತ್ತಿದ್ದರು. ಇಂತಹವರು ಒಮ್ಮೊಮ್ಮೆ ಟೀಕೆಗಳನ್ನು ಬರೆಯುತ್ತಿದ್ದರು. ಬರಿಯ ಸಂಸ್ಕೃತ – ಕನ್ನಡ ಕಾವ್ಯಗಳನ್ನೇ ಹತ್ತಾರು ವರ್ಷ ಅಧ್ಯಯನ ಮಾಡುವ ಈ ಪ್ರಾಚೀನ ಪರಂಪರೆ ಇಂದು ಲುಪ್ತ ಪ್ರಾಯವಾಗಿರುವುದು ಶೋಚನೀಯ. ಅವುಗಳ ಸ್ಥಾನದಲ್ಲಿ ಬೇರೆ ಶಿಕ್ಷಣ ವಿಷಯಗಳು ತುಂಬಿಕೊಂಡಿವೆ. ಷೇಕ್ಸ್‌ಪಿಯರ್, ಮಿಲ್ಟನ್ ಮುಂತಾದ ಪ್ರಾಚೀನ ಅಭಿಜಾತ ಕೃತಿಗಳ ಆಳವಾದ ಅಭ್ಯಾಸ ವಿದೇಶದ ವಿಶ್ವವಿದ್ಯಾಲಯಗಲಲ್ಲಿ ಇಂದೂ ನಿರಂತರವಾಗಿ ನಡೆಯುವುದನ್ನು ನೋಡುತ್ತೇವೆ. ನಮ್ಮಲ್ಲಿರುವ ಈ ಸಾವಿರಾರು ವರ್ಷಗಳ ಭವ್ಯ ಆಸ್ತಿಯನ್ನು ಅರಿತು ಸಂರಕ್ಷಿಸುವ ಕಾರ್ಯವನ್ನು ನಾವು ಕೈಬಿಟ್ಟರೆ ಸರಿಯೇ? ಪರಂಪರಾಗತ ಶಾಸ್ತ್ರಗಳನ್ನು ಪರಂಪರಾಕ್ರಮದಿಂದ ತಿಳಿಯಲು ಹಿಂಜರಿದರೆ ಸುಲಭೋಪಾಯಗಳೇನೂ ನೆರವಿಗೆ ಬರವು. ಕುರುಡನು ತಪ್ಪು ಹೆಜ್ಜೆಯಿಡುವಂತೆ ಆಜ್ಞರ ಅಪ್ರಯೋಗಗಳು ಭಾಷೆಯ ನೈರ್ಮಲ್ಯವನ್ನು ಹಾಳು ಮಾಡುತ್ತವೆ. ಒಂದೆರಡು ಉದಾಹರಣೆಗಳನ್ನು ನೋಡಿ:

ತಪ್ಪು : ಐಕ್ಯತೆ, ಪ್ರಾಮುಖ್ಯತೆ, ಪ್ರಾಧಾನ್ಯತೆ, ವೈದೃಶ್ಯ
ಸರಿ: ಐಕ್ಯ, ಪ್ರಾಮುಖ್ಯ, ಪ್ರಾಧಾನ್ಯ, ವೈಸಾದೃಶ್ಯ
ತಪ್ಪು: ಪ್ರಸ್ತಾಪಿಸು, ವಿದ್ವತ್ತು, ವಯಸ್ಕ, ಭಾರತೇಯ
ಸರಿ: ಪ್ರಸ್ತಾವಿಸು, ವಿದ್ವತ್ತೆ, ವಯಸ್ಥ, ಭಾರತೀಯ
ತಪ್ಪು: ಬೆಳಿಗ್ಗೆ
ಸರಿ: ಬೆಳಗ್ಗೆ

ಶಬ್ದ ಸಂಪತ್ತಿಗೆ ಉದಾಹರಣೆ;
ಮೋಡದ ಪರ್ಯಾಯ ಶಬ್ದಗಳು:

| | | | |
|---|---|---|---|
| ಪರೋ–ದ | –ಧರ | –ಭೃತ | – ಮುಚ |
| ನೀರ–ದ | ,, | ,, | ,, |
| ವಾರಿ–ದ | ,, | ,, | ,, |
| ಜಲ–ದ | ,, | ,, | ,, |
| ಸಲಿಲ–ದ | ,, | ,, | ,, |

ಇತ್ಯಾದಿ

| | | |
|---|---|---|
| ಕಮಲಕ್ಕೆ : | ಸರೋ–ಜ | ರುಹ |
| | ವಾರಿ– ಜ | ,, |
| | ಪಯೋ – ಜ | ,, |
| | ನೀರ–ಜ | ,, |
| | ಜಲ – ಜ | ,, |

ಸುಂದರಿಗೆ:

| | | |
|---|---|---|
| ಸರೋ – ಜಾಕ್ಷಿ | – ರುಜಾಕ್ಷಿ | –ನಯನೆ |
| ವಾರಿ – ಜಾಕ್ಷಿ | ,, | ,, |
| ಪಯೋ–ಜಾಕ್ಷಿ | ,, | ,, |
| ನೀರ – ಜಾಕ್ಷಿ | ,, | ,, |
| ಜಲ – ಜಾಕ್ಷಿ | ,, | ,, |

ಇವಲ್ಲದೆ ಸುದತಿ, ಸುಸ್ತನಿ ಇತ್ಯಾದಿ, ಹೀಗೆ ಒಬ್ಬ ಚೆಲುವೆಗೆ ನೂರಾರು ಶಬ್ದಗಳನ್ನು ಕವಿ ಬಳಸಬಹುದು. ಇದು ಭಾಷೆಯ ಅಕ್ಷಯ ಭಂಡಾರ.

ಕಾರ್ಮುಗಿಲು ಸಮಾಸದ ವಿಗ್ರಹ ಹೇಗೆ? ಕಾರ್–ಮುಗಿಲು ಎಂದು ಷಷ್ಠೀ ತತ್ಪುರುಷವೋ ಕರಿಯ+ಮುಗಿಲು ಎಂದು ವಿಶೇಷಣ ಪೂರ್ವ ಕರ್ಮಧಾರೆಯವೋ? ಷಷ್ಠೀ ತತ್ಪುರುಷವೆಂದು ಶಬ್ದಾನು ಶಾಸನದಲ್ಲಿದೆ. ಸ್ವರಾಂತವಾದಾಗ ಕರಿಯ+ಇರುಳು=ಕಾರಿರುಳು, ವ್ಯಂಜನಾಂತವಾದಾಗ ಕರಿಯ+ಕತ್ತಲೆ=ಕಗ್ಗತಲೆ. ಆಧುನಿಕ ವಿದ್ವಾಂಸರಿಗೂ ಇರುವ ಪರದಾಟ ತಪ್ಪಲು ಆಳವಾದ ವಿದ್ವತ್ತೆಯೊಂದೇ ಔಷಧ. ಸಂಸ್ಕೃತವೆಂದು ತಿರಸ್ಕರಿಸುವ ಅಪಾಯ ಭಾಷಾ ಶುದ್ಧಿಯ ಸಂಚಕಾರ.

'ಉಭಾವ ಪ್ಯಶ್ರುತ ಗ್ರಂಥೌ ಉಭಾ ವಪಿ ಜಡಾತ್ಮಕೌ
ಅಹೋ ಕಾಲಸ್ಯ ಮಾಹಾತ್ಮ್ಯಂ ತತ್ರೈಕಃ ಶಿಷ್ಯತಾಂ ಗತಃ' ಎನ್ನುವ ದುಸ್ಥಿತಿ ನಮ್ಮದು. ಈ ದುಸ್ಥಿತಿಗೆ ಇಂಗ್ಲೀಷ್ ಪಂಡಿತರನ್ನು ಕುರಿತ ಅತಿ ಗೌರವವೇ ಕಾರಣವೇನೋ! 'ಅಭಿಜ್ಞಾನ ಶಾಕುಂತಲ" ಶಬ್ದಕ್ಕೆ ಅಧ್ಯಾಹೃತ'

ಪದಗಳನ್ನು ಹೇಳಿ 'ಶಾಕ ಪಾರ್ಥವಾದಿ' ಜಾತಿಯ ಸಮಾಸವೆಂದು ವಿವರಿಸುವ Moiner William "ಶಾಕ=ಯುಗ; ಶಾಕಪ್ರಿಯ=ಯುಗಪ್ರಿಯ" ಎಂದು ಬರೆದರೆ ನಾವು ಒಪ್ಪಬಹುದೆ? "ಅನಾಹುತ ಪ್ರವಿಷ್ಟಸ್ಯ ದೃಷ್ಟಸ್ಯ ಕ್ರುದ್ಧ ಚಕ್ಷುಷಾ ಸ್ವಯವೇವೋ ಪವಿಷ್ಟಸ್ಯ ಬೋಜನಾನ್ಮರಣಮ್ ವರಂ' ಎಂಬ ಶುಭಾಷಿತದ ಕಡೆಯ ಮಾತನ್ನು "It is better to die than to feed one who enters uninvited" ಎಂದು A.B.Keith ಅನುವಾದಿಸಿದರೆ ನಾವು ಒಪ್ಪಬೇಕೆ? ಇಂಥದೇ ಅಚಾತುರ್ಯ ಅಥವಾ ಪ್ರಮಾದ ಪ್ರೊ. ಎಂ. ವಿ. ಸೀ. ಅವರ ಕವಿರಾಜ ಮಾರ್ಗದ ವಿವರಣೆಯಲ್ಲೂ ಬಂದಿದೆ. ಇದನ್ನು ತೋರಿಸಲು ನಾನೊಂದು ಗ್ರಂಥವನ್ನು ಬರೆಯಬೇಕಾಯಿತು. ಆದರೆ ವಿದ್ವಾಂಸರ ಬಿಚ್ಚು ಮಾತು ರಾಜಕಾರಣ ಸ್ಥಾನ ಭದ್ರರಿಗೆ ಕ್ಷುದ್ರ ಕುಹಕವೆನಿಸುವುದೇ ಹೆಚ್ಚು.

**ಉಪನ್ಯಾಸ 2 : ನಾಟಕ**

ಹಿಂದಿನ ಕನ್ನಡದಲ್ಲಿ ಸ್ವತಂತ್ರ ನಾಟಕಗಳೇ ಇಲ್ಲವೇಕೆ? ಎಂಬ ಪ್ರಶ್ನೆ ವಿದ್ವಾಂಸರನ್ನು ಕಾಡಿಸಿದೆ. ಸಂಸ್ಕೃತದಲ್ಲಿ ನಾಟಕಗಳಿದ್ದರೂ ಹೀಗೇಕೆ? "ಮಾಳವೀ ಮಾಧವ", "ಸುಭದ್ರಾಹರಣ", "ಪ್ರಬೋದ ಚಂದ್ರ" ಮುಂತಾದ ಅಲ್ಲೊಂದು ಇಲ್ಲೊಂದು ಹೆಸರುಗಳು ಬಂದರು ಅವು ನಮಗೆ ಉಳಿದು ಬಂದಿಲ್ಲ. 'ವಡ್ಡಾರಾಧನೆ'ಯಲ್ಲಿ "ಪಗರಣ" ವೆಂಬ ಹಾಸ್ಯ ನಾಟಕದ ಉಲ್ಲೇಖವೂ ಬರಿಯ ಉಲ್ಲೇಖವೇ ಆಗಿದೆ. ನಮ್ಮ ಮೊದಲ ನಾಟಕ ಶ್ರೀ ಹರ್ಷನ ರತ್ನಾವಳಿಯ ಅನುವಾದ ಚಿಕದೇವರಾಯನ ಕಾಲದ ತಿರುಮಲಾರ್ಯನದು. ಆ ಬಳಿಕವು ಅನೇಕ ಪಂಡಿತರು ಅನುವಾದಗಳಲ್ಲೇ ನಿರಿತರಾದರೆ ವಿನಾ ಸ್ವತಂತ್ರ ನಾಟಕಗಳನ್ನೇಕೆ ಬರೆಯಲಿಲ್ಲ? ಇದು ಸಾಹಿತ್ಯ ಚರಿತ್ರೆಯ ಒಂದು ಗಡುಚಾದ ಪ್ರಶ್ನೆ. ಹಾಗೆ ನೋಡಿದರೆ ಸಂಸ್ಕೃತದಲ್ಲಿ ನಾಟಕಗಳು ರಂಗ ಪ್ರಯೋಗಕ್ಕಾಗಿ ಮಾತ್ರ ಬರೆದಂಥವು ಕಡಿಮೆ, ಹೆಚ್ಚಿನವು ರಾಜಸ್ಥಾನಗಳಲ್ಲಿ ರಸಿಕರು ಓದಿ ಆನಂದಿಸಲೆಂದೇ ಬರೆದವೋ ಏನೋ ಎಂದು ಅನಿಸುತ್ತದೆ. ಅದರಲ್ಲಿ ದೃಷ್ಯಾಂಶಕ್ಕಿಂತ ಹೆಚ್ಚಿನ ಒತ್ತು ಶ್ರವ್ಯಾಂಶವಾದ ಕಾವ್ಯದ ಮೇಲೆಯೇ. ವಿವಿಧ ಛಂದೋ ಬಂಧನಗಳಲ್ಲಿರುವ ನೂರಾರು ವರ್ಣನಾ ಪದ್ಯಗಳು ಸಂಸ್ಕೃತ ನಾಟಕದ ವೈಶಿಷ್ಟ್ಯ. ಕನ್ನಡದಲ್ಲೂ ಹಿಂದಿನ ಶುಭಾಷಿತ ಹಾಗೂ ಅಲಂಕಾರ ಗ್ರಂಥಗಳಲ್ಲಿ ಇಂತಹ ಕೆಲವು ಮಾದರಿಗಳು ದೊರೆಯುತ್ತವೆ. ಉದಾಹರಣೆಗೆ ನಾಗವರ್ಮನ ಕಾವ್ಯಾಲೋಕನದ ಒಂದು ಪದ್ಯ ಉದಯನ ಪೂರ್ವ ಕಥೆಯ ಒಂದು ಮಾರ್ಮಿಕ ಸನ್ನಿವೇಶವನ್ನು ಕುರಿತದ್ದು ಹೀಗಿದೆ:

ಒರ್ವಳೆ ಪೆರ್ಮಗಳ ಬಗೆ ಪೊಡಿನ್ನೆಮಗೀಕೆಯ ಗಂಡು ಗೂಸು ತಾಂ
ಸರ್ವ ಕಲಾಗ್ದೆಪೆವೇನೂ ಸರಸ್ವತಿಗತ್ತ ಮತ್ತೆ ಪ
ನ್ನಿರ್ವರಲಗ್ಗಳಂ ಶ್ರುತದೊಳಾದೊಡ ಮೇನಿನಿಸೂನ ಮುಂಟು ಗಾಂ
ಧರ್ವ ಮನೊಂದುಮಂ ನೆರೆಯೆ ಕಲ್ಲಳೆ ಕಲ್ಪಿಪುದಂತರು ನೃಪಾ
(ಕಾವ್ಯಾವಲೋಕನ 1– 163)

ಇಲ್ಲಿ ವಾಸವದತ್ತೆಯ ತಂದೆ ಮಹಾಸೇನ ಕೈಸೆರೆಯಾಗಿರುವ ವತ್ಸರಾಜನಿಗೆ ವೀಣೆ ಶಿಕ್ಷಕನಾಗಬೇಕೆಂದು ವಿನಂತಿಸುವ ಈ ಸನ್ನಿವೇಶ ನಾಟಕದ್ದೆನಿಸುವುದೇ ಹೊರತು ಚಂಪೂ ಕಾವ್ಯದ್ದೆನಿಸದು. ಹೀಗೆಯೇ ಕಾಳಿದಾಸ

ಇವಳಂ ಶೃಂಗಾರ ಸಾರಂ ಕುಸುಮಶರನೆ ಮೇಣ್ ಮಾದಿದಂ ಪೊಲ್ಲ ಸತ್ಪ
ಲ್ಲವ ಪುಷ್ಪಂ ಮೇಣ್ ಬಸಂತಂ ಬಯಸಿ ಪಡೆದನೆತ್ತಂ ಸುಧಾ ಸಾರಮಂ ಸೂ
ಸುವ ಚಂದ್ರಂ ತಾನೆ ಮೇಣ್ ಪುಟ್ಟಿಸಿದನತಿ ಜದಂ ಛಾಂದಸಂ ಪದ್ಮಜಲ ನಿ
ಕ್ಕುವ ಮಲ್ಲಂ ಕರ್ತೃವಾದಂ ದಿನತಿಶಯಮಂ ತಾಳ್ವುದೇ ಕನ್ನೆಯಿಂದಂ ॥
ಕಾವ್ಯಾವಲೋಕನ 1–42)

ಹಾಗೆಯೇ ಕವಿರಾಜ ಮಾರ್ಗದಲ್ಲಿ ಬರುವ 'ಪರ್ಯಾಯೋಕ್ತ'ದ ಉದಾಹರಣೆಯೊಂದು ನಾಟಕದಲ್ಲಿ ಬರ್ಪ ವಿದಗ್ಧ ಸಖಿಯ ಮಾತಿನಂತಿದೆ.

ನೀಮಿರ್ವರು ಮನ್ನೆಗಮಿಂತೀ ಮಾಳ್ಕೆಯೊಳಿನಿಸು ಪೊಳ್ತು ನುಡಿವುತ್ತಿರಿಮಾ
ನಾವೋದ–ಕುಸುಮ–ಸಮಿತಿಯನಾ ಮರಗಳೊಳಾಯ್ದು ಕೊಯ್ದುಮಿಲ್ಲಿಗೆ
ಬರ್ಪೆಂ॥ (III 133)

ಹೀಗೆಯೇ ಇವೆ ಅವನು ಕೊಡುವ ಶೃಂಗಾರ ಕರುಣಾ ರಸಗಳ ಉದಾಹರಣೆಗಳದರೂ! (III–192–193).

'ಪತ್ತೀ ಪ್ರಮದ ಫಲಕರುಂ . . . . (II–36) ಎಂಬುದು 'ರತ್ನಾವಳಿ' ನಾಟಕದ ಸನ್ನಿವೇಶವನ್ನು ನೆನಪಿಸುತ್ತದೆ. ಆದರೂ ನಾಟಕಾಭಾವಕ್ಕೆ ಕಾರಣ ಹುಡುಕಿದರೆ ಶಾಂತರಸ ಪ್ರಿಯರಾದ ಜೈನ ಪ್ರಾಬಲ್ಯ ಮತ್ತು ನಾಟಕಗಳಲ್ಲಿ ಶಾಂತರಸಕ್ಕೆ ಭರತನ ಕಾಲದಿಂದ ಸ್ಥಾನವಿಲ್ಲದ್ದು ಕಾರಣಗಳಲ್ಲಿ ಕೆಲವಾಗಿರಬಹುದು. ಚಂಪೂ ಕಥೆಗಳಲ್ಲೇ ಶೃಂಗಾರ, ವೀರಾದ್ಭುತ ರಸಗಳನ್ನು ನಾಟಕೀಯ ಸಂವಾದ ಶೈಲಿಯಲ್ಲಿ ಮಹಾ ಕವಿಗಳು ಗರ್ಭೀಕರಿಸಿದ್ದು ಒಂದು ಕಾರಣವೆನ್ನಬಹುದು. ಕಾವ್ಯ ಗದ್ಯದಂತೆ ಆಡು ಗದ್ಯವೂ ಬೆರೆಯಲಿಲ್ಲ. ಜಾನಪದಕ್ಕೆ ಸೀಮಿತವಿತ್ತು.

ಚಂಪೂ ರಚನೆ ಹಿಂದಿನ ಪಂಡಿತರಿಗೆ ಬಿಟ್ಟು ಕೊಟ್ಟಂತೆ ತಮ್ಮ ಮರ್ಮವನ್ನು ಇಂದಿನ ಭಾಷಾಭ್ಯಾಸಿಗಳಿಗೆ ಬಿಡದಿರಲು ಒಂದು ಮುಖ್ಯ ಕಾರಣ– ಪ್ರಾಚೀನ ಛಂದೋ ಬಂಧಗಳ ಮೇಲೆ ಪ್ರಭುತ್ವ ಸಾಧಿಸದೆ ಇರುವುದೇ ಆಗಿದೆ. ಕಾವ್ಯಕ್ಕೆ ಪ್ರಾಸವಾಗಲಿ ಛಂದಸ್ ಆಗಲಿ ಅನಗತ್ಯವೆಂಬ ಹೊಸ ಕಾಲದಲ್ಲಿ ಅದರ ಸಂಪೂರ್ಣ ಪ್ರಭುತ್ವ ಸಾಧಿಸಿದ ಮಹನೀಯರ ಸಂಖ್ಯೆ ಕೇಶವ ಭಟ್ಟರಂತೆ ಬಹಳ ಸಣ್ಣದಾಗಿದೆ. ಸಂಸ್ಕೃತದಲ್ಲಿ ಸಾವಿರಾರು ಛಂದಸ್ಸುಗಳಿದ್ದರೂ ಕನ್ನಡಕ್ಕೆ ಆರು ಮಾತ್ರ ಖ್ಯಾತ ಕರ್ಣಾಟಕಗಳಾದವು. ಅದರಲ್ಲಿಯೂ ಕನ್ನಡದ ವಿಶೇಷತೆ ಮೂರರಲ್ಲಿ ಮಾತ್ರ – ಮತ್ತೇಭ, ಚಂದಕ ಮತ್ತು ಉತ್ಪಲ. ಇವನ್ನು ಬಿಟ್ಟರೆ ಎಲ್ಲಕ್ಕೂ ಕಂದ. ಇವುಗಳಲ್ಲಿ ವಾಗ್ವಿಭವೋನ್ನತಿಗಾಗಿ ಸಂಸ್ಕೃತ ಸಮಸ್ತ ಶೈಲಿ ಕಥಾ ನಿರೂಪಣೆಗೆ ಪ್ರಸನ್ನ ಕನ್ನಡ ಪದಗಳ ಅಸಮಾನ ಶೈಲಿ. ಸಾಮಾನ್ಯವಾಗಿ ಮಣಿಪ್ರವಾಳ – ಎರಚಿದರೆ ಮುತ್ತು ಹವಳಗಳ ಕೂಟದಂತೆ ಸುಂದರವಾದ ಸಂಮಿಶ್ರ ಶೈಲಿ – ಈ ಮೂರನ್ನು ಗುರುತಿಸಿ ಮೆಚ್ಚ ಬಲ್ಲಾತನೇ ಕನ್ನಡ ಪಂಡಿತ. ಬಿರುದಾವಳಿಯ ವೈಭವೋ ಪೇತ ಶೈಲಿ ಪಂಪ, ರನ್ನರ ಪದ್ಯಗಳೇ ಸಾಕ್ಷಿ:

ಕದಳೀ ಗರ್ಭ ಶ್ಯಾಮಂ
ಮೃದು ಕುಟಿಲ ಶಿರೋರುಹಂ ಸರೋರುಹ ವದನಂ।
ಮೃದು ಮಧ್ಯಮ ತನು ಹಿತಮಿತ
ಮೃದು ವಚನಂ ಲಲಿತ ಮಧುರ ಸುಂದರ ವೇಷಂ ॥ (ಪಂಪ)
ಪಂಪಂ ಧಾತ್ರೀ ವಳಯನಿ
ಳಿಂಪಂ ಚತುರರಂಗ ಬಳ ಭಯಂಕರಣಂ ನಿ।
ಷ್ಕಂಪಂ ಲಲಿತಾ ಲಂಕರ
ಣಂ ಪಂಚ ಶರೈಕ ರೂಪ ನಪಗತ ಪಾರಂ ॥ (ಪಂಪ)
ಕವಿ ಮುಖ ಚಂದ್ರಂ ಕವಿಚ
ಕ್ರವರ್ತಿ ಕವಿರಾಜಶೇಖರಂ ಕವಿರಾಜಂ।
ಕವಿಜನ ಚೂಡಾ ರತ್ನಂ
ಕವಿ ತಿಲಕಂ ಕವಿ ಚತುರ್ಮುಖಂ ಕವಿರತ್ನಂ ॥ – ರನ್ನ (ಅಜಿತ (ಖ–8)

ಕಾವ್ಯ ಗದ್ಯದಲ್ಲಿಯೂ ಹೀಗೆಯೇ" ಇದು ವಿವಿಧ – ವಿಬುಧ–ಜನವಿನುತ ಜಿನ ಪದಾಂಭೋಜ ವರ ಪ್ರಸಾದೋತ್ಪನ್ನ ಪ್ರಸನ್ನ ಗಂಭೀರ ವಚನ ರಚನ ಚತುರ ಕವಿತಾ ಗುಣಾರ್ಣವ ವಿರಚಿತಮಪ್ಪ ವಿಕ್ರಮಾರ್ಜುನ ವಿಜಯರೊಳ್"– ಈ ಶಬ್ದ ವೈಭವ ಮತ್ತೆಲ್ಲಿ ಸಿಗಬೇಕು? ಆದ್ದರಿಂದಲೆ ಇದು all time ಆದ great and good classical ಸಾಹಿತ್ಯ. "ಇದು ನಿಚ್ಚಂ ಪೊಸತರ್ಣವಂಬೊಲತಿ ಗಂಭೀರಂ ಕವಿತ್ವಂ" ಈ ಮಾರ್ಗದ ವಾಗ್–ವಿಜೃಂಭಣೆಗೆ ಪೂರಕವಾಗುತ್ತದೆ. ದೇಸಿಯ ಶಬ್ದವೃತ್ತಿ, ಹರಿಹರನಲ್ಲಿರುವಂತೆ:

ಪುಟ್ಟಿತು ಚಳಿ ಬಳೆದುದು ಚಳಿ
ಕೊಟ್ಟುದು ಚಳಿ ಕೊಂಡುದೆಲ್ಲಮಂ ಚಳಿಚಳಿಯೆಂ
ದುಟ್ಟುದು ಚಳಿ ತೊಟ್ಟುದು ಚಳಿ
ಮೆಟ್ಟಿತು ಚಳಿ ಮುಟ್ಟಿತೆಲ್ಲ ಚಳಿ ಪೊಸ ಚಳಿಯೊಳ್

(ಗಿರಿಜಾ ಕಲ್ಯಾಣ IX–82)

ಹಾಸ್ಯ ವಿಡಂಬನೆಗಳಿಗೂ ಈ ಛಂದಸ್ಸು ಬಗ್ಗುವಂತಿದೆ:

ಬಡವಾದಿರರಸ ಕಾಲೊಳ್
ನಡೆದಪಿರೊದ ನಾರುಮಿಲ್ಲ ಕದಲೆಗಳೇಂ ವಿಮ್ಮಡಿಯೊಳಗೆ?
ಪಡುವ ದೇಗುಲ ದಡೆಯಾವುದು?
ಕುಡದ ನಿಮಗಮೀಯೆಡರಾಯ್ತೇ ॥ (ಶ. ಮ. ದ. ಅಧಾಹೃತಿ)

ಹೀಗೆ ನವರಸಗಳ ಪ್ರತಿಪಾದನೆಗೂ ಅನುಕೂಲಿಸುವ ಕಲ್ಪತರು ಅಥವಾ ಕಾಮಧೇನುವಾದ ಕಂದವೃತ್ತದ ಚಂಪೂ ಶೈಲಿ ಇಂದು ನಮ್ಮ ವಿದ್ವತ್ತೆಗೆ ಸವಲು ಹಾಕುತ್ತಿದೆ. ಅವುಗಳನ್ನು ಬಿಟ್ಟ ನಾಟಕ ಕಾವ್ಯ ಶಾಸ್ತ್ರಾನು ಮತವಾದ ನಾಟಕವೆನಿಸದು. ಕಾಳಿದಾಸನ ಶಾಕುಂತಲದಲ್ಲಿ ಏಕೆ ರಂಗದ ಮೇಲೆ ಬಾರದ ರಾಣಿಯರು? ವಿಕ್ರಮೋರ್ವಶೀಯದಲ್ಲಿ ರಾಣಿ ಊರ್ವಶಿಯನ್ನೇ ರಾಜನಿಗೆ ಒಪ್ಪೊಸಿ ತಾನು ಹಿಂದೆ ಸರಿಯಲೇಕೆ? ಮಾಳವಿಕಾಗ್ನಿ ಮಿತ್ರದಲ್ಲಿ ತಪ್ಪು ಮಾಡಿ ರಾಣಿಯರ ಕಾಲಿಗೂ ಬೀಳುವ ನಾಯಕನೇಕೆ? ಇಷ್ಟಕ್ಕೂ ಸಮಂಜಸ ಉತ್ತರ ಭರತನಲ್ಲಿದೆ. ಅದರೆ ಇಂದಿನ ವಿದ್ವಜ್ಜನರಿಗೆ ಯಾರಿಗೂ ಓದಲು ಸಮಯವಿಲ್ಲ. ವಿದ್ವಾಂಸರ ನಿರ್ಲಕ್ಷ್ಯದಿಂದಾಗಿ ನಮ್ಮ ಸಾಹಿತ್ಯ ವಿಮರ್ಶೆ ಹಾಗು ಮೌಲ್ಯಗಳು ಹದಗೆಟ್ಟಿವೆ.

**ಉಪನ್ಯಾಸ 3: ಶಾಸ್ತ್ರ**

ಇಂದಿನ ಯಂತ್ರ ಯುಗಕ್ಕಿಂತ ಹಿಂದಿನ ಧಾರ್ಮಿಕ ಯುಗಗಳಲ್ಲೇ ಮಾನವಿಕ ಮೌಲ್ಯಗಳ ಸಾಕ್ಷಾತ್ಕಾರಕ್ಕೆ ಹೆಚ್ಚಿನ ವಿರಾಮ ವಿತ್ತೆನಿಸುತ್ತದೆ. ಆದ್ದರಿಂದಲೇ ಅಭಿಜಾತ ಲಲಿತ ಕಲೆಗಳೆಲ್ಲ ಊರ್ಜಿತವಾಗಿ ಅಜರಾಮರ ಅಭಿಜಾತ ಕೃತಿಗಳನ್ನಿತ್ತವು. ಇವಕ್ಕೆಲ್ಲ ಮೂಲಭೂತವಾಗಿ ಕಲಾ ತಂತ್ರಗಳನ್ನು ಕುರಿತ ನಿಯಮಾವಳಿಯಿರುತ್ತದಷ್ಟೆ. ಅದನ್ನೇ ವ್ಯವಸ್ಥಿತವಾಗಿ ರೂಪಿಸಿದಾಗ ಶಾಸ್ತ್ರಗಳಾಗುತ್ತವೆ. ಹೀಗೆಯೇ ಅಭಿಜಾತ ಸಾಹಿತ್ಯಕ್ಕೂ ಧ್ವನಿ ಮಾರ್ಗದ ರಸ ಪ್ರತಿಪಾದನೆ, ಅಲಂಕಾರಗಳಿಂದ ಸೌಂದರ್ಯ ಹಾಗು ಚಮತ್ಕಾರಗಳ ಸಂಪಾದನೆ – ಪ್ರಸನ್ನ ಗಂಭೀರ ಶೈಲಿಯ ಪ್ರೌಢಿಮೆ – ಇವುಗಳ ವರ್ಗೀಕೃತ ವಿವರಣೆ ಹಾಗೂ ಲಕ್ಷಣ – ಇದು ಅಲಂಕಾರ ಶಾಸ್ತ್ರದ ಕಾರ್ಯವ್ಯಾಪ್ತಿ. ಪಾಕಶಾಸ್ತ್ರ, ಕಾಮಶಾಸ್ತ್ರ, ಅಶ್ವಶಾಸ್ತ್ರ, ಗಜಶಿಕ್ಷೆ, ಅರ್ಥಶಾಸ್ತ್ರ, ಧರ್ಮಶಾಸ್ತ್ರ, ವೈದ್ಯಶಾಸ್ತ್ರ, ಜ್ಯೋತಿಷ್ಯ ಮುಂತಾಗಿ ಎಲ್ಲ ಶಾಸ್ತ್ರಗಳೂ ಸಂಸ್ಕೃತದಲ್ಲಿ ಪರಿಷ್ಕೃತವಾಗಿದ್ದುದರಿಂದ ಕನ್ನಡ ನಾಡಲ್ಲು ಅವೇ ಕಾಲದಿಂದ ಕಾಲಕ್ಕೆ ಗ್ರಂಥ ರೂಪಗಳಲ್ಲಿ ಆಳವಟ್ಟುದನ್ನು ಸಾಹಿತ್ಯ ಚರಿತ್ರೆಯಲ್ಲಿ ನೋಡುತ್ತೇವೆ. ಆದರೆ ಸಾಹಿತ್ಯಕ್ಕೆ ನೇರವಾಗಿ ಸಂಬಂಧಿಸ ತಕ್ಕದಾದ ವ್ಯಾಕರಣ, ಛಂದಸ್ಸುಗಳಂತೆ ಅಲಂಕಾರ ಶಾಸ್ತ್ರ ಮಾತ್ರ ನಮ್ಮ ಗಮನಕ್ಕೆ ಈಗ ಪ್ರಸಕ್ತ. ಕಾವ್ಯದ ಉದಾತ್ತ ಗುರಿ ಹರಿಹರ ಹೇಳುವಂತೆ:

ಪೊಸತಿದು ಪಾವನಮಿದು ರಂ
ಜಿಸುವ ಮಹಾನರ್ಘಮಿಂತಿದೆಂಬೀ ಜಸದಿಂ
ಸರ್ವತ್ವಾವ್ಯಂ ತಾಂ ರಾ
ಆಸಭೆ ಬ್ರಹ್ಮ ಸಭೆ ದೇವ ಸಭೆಗೆ ಸೆದಿರ್ಕುಂ ॥

(ಗಿರಿಜಾ I–15)

ಇಂದು ರಾಜ ಸಭೆಯಿಲ್ಲ. ಬ್ರಹ್ಮ ಸಭೆ ಗೊತ್ತಿಲ್ಲ, ದೇವ ಸಭೆ ದೂರವಾಯಿತು. ಇರುವುದೆಲ್ಲ ಅಪಂಡಿತರ ಸಭೆ. ಅವರಿಗೆ ಅಲಂಕಾರವೆಂದರೆ ಕಾಲ್ತೊಡಕು, ವರ್ಣನೆಯೆಂದರೆ ಮೈಚಳಿ. ಹೊಸ ಶಬ್ದವೆಂದರೆ ಕ್ಲೇಶ. ವಾಸ್ತವಿಕ ಜೀವನದ ನೀರಸ ಅಂಶಗಳ ವಿವರಗಳಿಗೆ ಮಾರು ಹೋಗುವ ನೂತನ ಅಭಿರುಚಿಗೂ ಶಾಶ್ವತ ಮೌಲ್ಯಗಳನ್ನು ಮಾತ್ರ ಮೆರೆಸಿ ಮೆಚ್ಚುವ ಅಭಿಜಾತ ಅಭಿರುಚಿಗೂ ಅಜಗಜಾಂತರ! ಅಲಂಕಾರಗಳು ಕಡ ತಂದ ಹೊರೆಗಳಲ್ಲ! ಕಾವ್ಯದ ಚೆಲುವೇರಿಸುವ ಅಂತರಂಗಗಳು ಎಂಬುದನ್ನರಿಯಲು ಕೆಲವು ಉದಾಹರಣೆಗಳನ್ನು ನೋಡಿ. ಒಂದಿಲ್ಲದೆ ಒಂದು ಚೆಂದಗಾಣದು ಎಂಬುದೇ '**ವಿನೋಕ್ತಿ**' ಅಲಂಕಾರದ ಲಕ್ಷಣ. ಇದನ್ನು ಸಮರ್ಥವಾಗಿ ಬಲಸಿರುವ ಕೆಲವು ಲಕ್ಷ್ಯಗಳನ್ನು ನೋಡಿ:

ವಿಧುವಿಲ್ಲದಿರುಳ್ ಕೆಲದೊಳ್
ವಧುವಿಲ್ಲದ ಲೀಲೆ ಮಧುರ ಮಧುವಿಲ್ಲದ ಪೂ
ದಧಿಯಿಲ್ಲ ದುಣಿಸದೇ ವುದೊ
ಬುಧರಿಲ್ಲದ ಸಭೆ ಸರಸ್ವತೀಮಣಿ ಹಾರಾ ॥

(ಕಾವ್ಯಾವಲೋಕನ I–41)

ಮದಮಿಲ್ಲ ದಿಭಂ ಮಧುವಿ
ಲ್ಲದ ಕುಸುಮಂ ಚಂದ್ರನಿಲ್ಲದಿರುಳಾರ್ಪಿ
ಲ್ಲದ ನೃಪತಿ ಕವಿತೆಯಿಲ್ಲದ
ವಿದಗ್ದತಾಗುಣ ಮದೇಂ ಮನಂಗೊಳಿಸುಗುಮೇ ॥

(ಕಾವ್ಯಾವಲೋಕನ I–426)

ಕಳಹಂಸಂ ಸುಳಿಯದ ಪೂ
ಗೊಳ ನಮ್ಮತ ಮರೀಚಿಯಿಲ್ಲದಂಬರ ಚಕ್ರಂ
ಕಳಚಂ ಸಂಚರಿಸದ ವನ
ವಳಯಂ ಸುತನಾದದಂಗಳಂ ರಂಜಕುಮೇ ॥

(ಜ.ವಿ II –66)

ನೀರಿಲ್ಲದಡೆಯ ಬೆಳಸುಂ
ಕ್ರೂರರ ಕಳೆಯುಂ ವಿವೇಕಿಯಲ್ಲದನರಸುಂ ।
ಸಾರಿ ಗುಣಮಿಲ್ಲದಾತನ
ಜಾರಿತ್ತ ಮುದೊಪ್ಪಲಾರವೆಂತುಂ ಕಡೆಯೊಳ್ ॥

(ಧರ್ಮಾಮೃತ – VII–53)

ನಾಯಕನಿಲ್ಲದ ರಣಮುಂ
ಮಾಯಾವಿಯ ಪರದು ಮಳಿಪನಪ್ಪನ ಧನಮುಂ
ನ್ಯಾಯ ಮಣಮಿಲ್ಲದವನ
ಶ್ರೀಯುಂ ನಿರ್ದಯನ ತಪಮುಮೇ ನೆಸೆದಪುದೇ ॥

(ಧರ್ಮಾಮೃತ – VII–53)

ಪತಿಯಳಿದ ಸತಿಯಿರವು ನಾಯಕ
ರತುನವಿಲ್ಲದ ಪದಕ ದೈವ
ಸ್ತುತಿ ಗಳಿಲ್ಲದ ಕಾವ್ಯ ರಚನಾ ಭಾವದಂದದಲಿ ॥

(ಕು.ವ್ಯಾ.ಭಾ. – VFII–18)

ಲೋಕ ನೀತಿಯ ಪ್ರಬೋಧನೆಗೆ ಒಂದು ಅಲಂಕಾರ ಹೇಗೆ ಸಹಕಾರಿಯೆನ್ನುವುದರ ದ್ಯೋತಕವಾಗಿ ಈ ಪದ್ಯಗಳಿವೆ. ಇದರಂತೆ ಸ್ತ್ರೀ ಸೌಂದರ್ಯದ ವರ್ಣನೆ ಪ್ರಸಕ್ತವಾದಾಗ ಉತ್ಪ್ರೇಕ್ಷೆ ಸಂದೇಹಾಲಂಕಾರಗಳು ಮಾಲೆ ಮಾಲೆಯಾಗಿ ವಿರಾಜಿಸುತ್ತವೆ:

1) (ದಮಯಂತಿ) : ಆರಿವಳು ವನಲಕ್ಷ್ಮಿಯೋ ಸುರ
ನಾರಿಯೋ ಮಾರಾಂಗನೆಯೋ ಮದ
ನಾರಿ ಸತಿಯೋ ಸರಸತಿಯೊ ಮೇಣಸುರ ಮಾನಿನಿಯೋ ॥

(ಕನಕದಾಸ)

2) (ರುಕ್ಮಿಣಿ): ಉರಗರಾಜ ಫಣಾ ಸಹಸ್ರ
ಸ್ಫುರಿತ ಮಧ್ಯೆ ಮಹಾ ಮಣಿಯೊ ದು
ರ್ಧರ ಮಹಾವೇ ತಾಲ ರಕ್ಷಿತದಾ ಮಹಾನಿಧಿಯೋ ॥
ಭರಿತ ಮೊದೋ ನೀಕ ಮಧ್ಯ
ಸ್ಫುರಿತ ಲಕ್ಷ್ಮಿಯೊ ದೈತ್ಯ ಹಸ್ತಾಂ
ತರಿತ ಸುಧೆಯೋ . . . . .॥

(ಕನ್ನಡ ಭಾಗವತ)

3) (ಕುಬ್ಜೆ) : ಧರೆಯೊಳೀಂದ್ರನ ರಂಭೆಯೋ ಕಿ
ನ್ನರ ವಧುವೊ ಗಂಧರ್ವೆಯೋ ಸಂ
ಚರಿಸುವುರ ಗಾಲಯವ ನುಳಿದಾ ನಾಗಕನ್ನಿಕೆಯೋ ॥

(ಕನ್ನಡ ಭಾಗವತ)

4) (ಚಂದ್ರ): ವರದಿ ಗಂಗನೆಯಿಟ್ಟ ಚಂದನ
ತಿಲಕವೋ ಮನ್ಮಥನ ರಾಣಿಯ
ಕರದಲಿಪ ಕನ್ನಡಿಂಯೊ ಮದನನ ಬಿರುದಿ
ನೊಡ್ಡಣವೋ ॥

(ಕು.ವ್ಯಾ.ಭಾ. – II–50)

ಅಲಂಕಾರಗಳ ದಿವ್ಯಲೋಕದಲ್ಲಿ ಅಚೇತನಗಳಿಗೆಲ್ಲ ಚೇತನತ್ವಾರೋಪ ಬಂದು ಅವು ಸಮಾಸೋಕ್ತಿಗಳಾಗುತ್ತವೆ. ವ್ಯಂಗ್ಯಾರ್ಥ ಪುಷ್ಠಿಯಿಂದ ಅಪ್ರಸ್ತುತ ಪ್ರಶಂಶೆಗಳೂ ಆಗಿ ಅಸ್ಯೋಕ್ತಿಯೆಂಬ ಹೊಸ ಸಾಹಿತ್ಯ ರೂಪದ ಬಾಗಿಲನ್ನೇ ತೆರೆಯುತ್ತವೆ. ಸ್ಥಾಲೀ ಪುಲಾಕ ನ್ಯಾಯದಿಂದ ಇಲ್ಲಿ ಕೆಲವೇ ಮಾತು ಹೇಳಿದ್ದಾಗಿದೆ. ವಿವರಗಳನ್ನು ಎಷ್ಟು ಆಸ್ಥೆಯಿಂದ ಅನುಶೀಲಿಸಿದರೆ ಅಷ್ಟು ಸುಲಭವಾಗಿ ಅಲಂಕಾರದ ಕಲ್ಪನಾ ಪ್ರಪಂಚದಲ್ಲಿ ನಾವೂ ಸಹಭಾಗಿಗಳಾಗಿ ಸಹಭೋಗಿಗಳೂ ಆಗಬಹುದು. ಮನುಷ್ಯನ ವಾಸ್ತವ ನೀರಸತೆಯ ತೆರೆಯನ್ನು ಸರಿಸಿ ದಿವ್ಯ ಸೌಂದರ್ಯದ ಪ್ರತಿಭೆಯನ್ನು ಸೂಸುವ ಮಹಾಸಾಧನವೇ ಪೂರ್ವದ ಅಭಿಜಾತ ಸಾಹಿತ್ಯವೆಂಬ ಜ್ಞಾನೋದಯ ಆಗ ನಮಗೆ ಉಂಟಾಗುತ್ತದೆ.

ಶಾಸ್ತ್ರೀಯ ಸಂಗೀತವಾಗಲಿ ಶಾಸ್ತ್ರೀಯ ಭರತ ನಾಟ್ಯವಾಗಲಿ ನಿಯಮ ಹಳೆಯದಿದ್ದರೂ ಕೊಡುವ ರಸೋಲ್ಲಾಸ ಹೊಸದಾಗಿರುವಂತೆ ಅಭಿಜಾತ ಕಾವ್ಯವೂ ಇದೆಯೆಂಬ ಮನವರಿಕೆ ನಮಗಾದಲ್ಲದೆ ಆ ಸಾಹಿತ್ಯಕ್ಕೂ ಉಳಿಗಾಲವಿಲ್ಲ. ಆ ವಿದ್ವಾಂಸರಿಗೂ ಬೆಲೆಯಿಲ್ಲ. ಮಾನವ ಜೀವನದಲ್ಲಿ ಕ್ಷಣಿಕ ವಿದ್ಯಮಾನಗಳಿಗೆ ಪರಮ ಮಹತ್ವ ಕೊಡುವ ನಮ್ಮ ಅವಿವೇಕ ತೊಲಗಿದರೆ ಶಾಶ್ವತ ಮೌಲ್ಯಗಳ ನೈಜ ಮಹತ್ವ ಅರಿವಿಗೆ ಬರುತ್ತದೆ .ಇಲ್ಲದಿದ್ದರೆ

"ಯೋ ಧ್ರುವಾಣಿ ಪರಿತ್ಯಜ್ಯ ಅಧ್ರುವಾಣಿ ನಿಷೇವತೇ ।
ಧ್ರುವಾಣಿ ತಸ್ಯ ನಶ್ಯನ್ತಿ ಅಧ್ರುವಂ ನಷ್ಟಮೇವ ಹಿ ॥

ಎಂದಂತೆ ಶಾಶ್ವತವಾದವನ್ನು ನಾವೇ ಬಿಟ್ಟು ಕೊಟೀರುತ್ತೇವೆ. ಅಶಾಶ್ವತವಾದವು ಸ್ವಾಭಾವಿಕವಾಗಿಯೇ ಮಾಯವಾಗಿರುತ್ತದೆ. ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಸಂಸ್ಕೃತದಿಂದ ಅನುವಾದ ಮಾಡಿಕೊಳ್ಳಬೇಕಾದ ಸಾಮಗ್ರಿ ಇನ್ನೂ ಬೇಕಾದಷ್ಟಿದೆ. ಈ ಒಂದು ಅನುವಾದ ಕ್ಷೇತ್ರದಲ್ಲಿಯೇ ಅದರೂ ಅನುಸ್ಯೂತವಾಗಿ ವ್ಯಾಕರಣ ಶುದ್ಧೀ, ಛಂದೋ ಬದ್ಧತೆ, ಪ್ರೌಢ ಶೈಲಿಗಳಿಗೆ ಪುರಸ್ಕಾರದ ಪರಂಪರೆ ಉಳಿದು ಬಂದಿದೆ. ನನ್ನಿಂದಲೂ ಈ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ಸಂದಿದೆ. ಇತರ ಹವ್ಯಾಸಗಳ ಹೊಡೆತದಲ್ಲಿ "ಅರ್ಧಂ ದಾನವ ವೈರಿಣಾ ಗಿರಿಜಯಾಪ್ಯರ್ಧಂ ಹರಸ್ಯಾದುತಂ" ಎಂಬಂತಾಗುವುದು ಬೇಡ. ನಿಜವಾದ ಪಂಡಿತನ ಕಾರ್ಯ ಕಾಲಾಂತರದಲ್ಲಾಗಲಿ ದೇಶಾಂತರದಲ್ಲಾಗಲಿ ಸಫಲವಾಗಿಯೇ ತೀರುವುದೆಂಬ ಆಶಾವಾದ ನಮ್ಮದಾಗಲಿ.

"ಕಸ್ಯಚಿ ದೇವ ಕದಾಚಿದ್ದಯಯಾ ವಿಷಯಂ ಸರಸ್ವತಿ ವಿದುಷಃ
ಘಟಯತಿ ಕಮಪಿ ತಮನ್ಯೋ ವ್ರಜತಿ ಜನೋ ಯೇನ ವೈದಗ್ದೀಮ್ ॥
(ಧನಂಜಯ)

ನನ್ನ ಅನುವಾದ:
ಸರಸತಿಯೆಂದೋ ದಯೆಯಿಂ
ದುರು ವಿಷಯವನೀ ವಳೊರ್ವ ವಿಬುಧನ ಕೃತಿಯೊಳೆ
ಪರಿಶೀಲಿಸಿ ಪೆರತೊರ್ವಂ
ವರ ಪಂಡಿತ ನೆನಿಸಿ ಮೆರೆವ ನೇನಚ್ಚರಿಯೋ ॥

ರೈಸ್, ಗೋವಿಂದ ಪೈ, ಬಿ.ಎಂ.ಶ್ರೀ. ಎ. ಆರ್. ಕೃಷ್ಣಶಾಸ್ತ್ರೀ, ಡಿ.ವಿ.ಜಿ,. ಡಿ. ಎಲ್. ಎನ್., ತೀ. ನಂ. ಶ್ರೀ. ಮುಂತಾದ ದಿಗ್ಗಜ ವಿದ್ವಾಂಸರ ಮಹಾಪರಂಪರೆಗೆ ಚ್ಯುತಿ ಬಾರದಿರಲಿ, ಅದು ತಮ್ಮಂತಹವರ ಆಸಕ್ತಿಯಿಂದ ಇತೋಪ್ಯತಿಶಯವಾಗಿ ಬೆಳೆದು ಬೆಳಗಲಿ ಎಂದು ಹಾರೈಸುತ್ತೇನೆ.


# ದತ್ತಿ ಉಪನ್ಯಾಸ – ಮಾರ್ಚ್ 1994

## ಡಾ. ಎಂ. ಎಂ. ಕಲಬುರ್ಗಿಯವರ ಉಪನ್ಯಾಸ

ಮನುಷ್ಯ ತನ್ನ ದೈನಂದಿನ ಜೀವನದ ಅತ್ಯಾವಶ್ಯಕವಾದ ಆಹಾರ ಹಾಗೂ ರಕ್ಷಣೆಯನ್ನು ಒದಗಿಸಿಕೊಳ್ಳಲು ಪೂರಕವಾಗುವಂಥ ಹಾಗೂ ಇದರಲ್ಲಿ ಅಡ್ಡಿಯಾಗುವಂಥ ಸಾಧನ ಅಥವಾ ಮೂಲಕ ಬಗ್ಗೆ ಬೆಳಿಸಿಕೊಂಡ ಭಯ ಹಾಗೂ ಕುತೂಹಲವೇ ದೇವರ ಸೃಷ್ಟಿಗೆ ಕಾರಣವಾಯಿತೆಂದು ಡಾ। ಎಂ. ಎಂ. ಕಲಬುರ್ಗಿಯವರು ತಮ್ಮ ಉಪನ್ಯಾಸದಲ್ಲಿ ಸ್ಪಷ್ಟಪಡಿಸಿದರು.

ಖ್ಯಾತ ಸಂಶೋಧಕರಾದ ಡಾ। ಎಂ. ಎಂ. ಕಲಬುರ್ಗಿಯವರು ಮೈಸೂರು ಅಸೋಸಿಯೇಷನ್ ಹಾಗೂ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದವರು ಸಂಯುಕ್ತವಾಗಿ ಆಯೋಜಿಸಿದ್ದ ಮೈಸೂರು ಅಸೋಸಿಯೇಷನ್ನಿನ ಬಂಗಾರ ಹಬ್ಬದ ದತ್ತಿ ಉಪನ್ಯಾಸದ ಅಂಗವಾಗಿ ಮಾರ್ಚ್ 19 ಮತ್ತು 20 ರಂದು "ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣ, ವಿನಾಶ ಮತ್ತು ನಿರಾಕರಣ" ಎಂಬ ವಿಷಯದ ಮೇಲೆ ಮೈಸೂರು ಅಸೋಸಿಯೇಷನ್ನಿನ ಸಭಾಗೃಹದಲ್ಲಿ ಉಪನ್ಯಾಸ ನೀಡಿದರು.

ಬೇಟೆಗೆ ಸಾಧನವಾದ ನಾಯಿ, ಕೃಷಿ ಪ್ರಧಾನವಾದ ನಂದಿ, ನಂದಿ



ವಾಹನನಾದ ಶಿವ ಆಹಾರದ ಅಪಹರಣಕ್ಕೆ ಕಾರಣವಾಗುವ ಗರುಡ ಹಾಗೂ ಗರುಡನ ಭಯದಿಂದ ವಿಷ್ಣು ಮುಂತಾಗಿ ದೇವರ ಸೃಷ್ಟಿಯಾಯಿತೆಂದೂ, ನಿಸರ್ಗದಿಂದ ರಕ್ಷಣೆಯ ದೃಷ್ಟಿಯಿಂದ ಸೂರ್ಯ ಭೂಮಿ, ವಾಯು ಮುಂತಾದವರ ಪೂಜೆ ಆರಂಭವಾಯಿತೆಂದೂ ಹೇಳುತ್ತಾ, ಈ ಭಯ ಭಕ್ತಿಗಳು ಮುಂದೆ ಆತ್ಮ ಮತ್ತು ಪರಮಾತ್ಮ ಎಂಬ ಒಳ ಹೊರಗಿನ ಭಾವವನ್ನು ಬೆಳೆಸಿ ಸ್ಥಾವರ ಲಿಂಗ, ಇಷ್ಟ ಲಿಂಗಗಳ ಸೃಷ್ಟಿಯಾಯಿತೆಂದು ತಿಳಿಸಿದರು. ಇದರಿಂದಾಗಿ ದೇವಾಲಯಗಳ ನಿರ್ಮಾಣವಾಗಿ ದೇವರು ಮತ್ತು ಭಕ್ತರಲ್ಲಿ ಸೇತುವೆಯಾಗಿ ಪುರೋಹಿತರ ಸೃಷ್ಟಿಯಾಯಿತೆಂದೂ ತಿಳಿಸಿದರು. ಶ್ರೀಮಂತರು, ವ್ಯಾಪಾರಿಗಳು, ರಾಜರುಗಳು ದೇವಾಲಯಗಳ ನಿರ್ಮಾಣಕ್ಕೆ ತೊಡಗಿದ್ದರಿಂದ ಭಾರಿ ಸಂಖ್ಯೆಯಲ್ಲಿ ದೇವಾಲಯಗಳ ನಿರ್ಮಾಣವಾಯಿತೆಂದೂ, ದೇವಾಲಯಗಳ ವೈಜ್ಞಾನಿಕ ಅಧ್ಯಯನವು ಮಾನಸಿಕ ವಿಕಾಸ ಹಾಗೂ ಸಾಮಾಜಿಕ ವಿಕಾಸದ ಅಧ್ಯಯನವಾಗುತ್ತದೆಂದೂ ಮೊದಲ ದಿನ ಉಪನ್ಯಾಸದಲ್ಲಿ ತಿಳಿಸಿದರು.

ಡಾ। ಕಲಬುರ್ಗಿಯವರು ತಮ್ಮ ಎರಡನೇ ದಿನದ ಉಪನ್ಯಾಸದಲ್ಲಿ ಶರಣರು ದೇವಾಲಯಗಳನ್ನೂ ಅರ್ಚಕರನ್ನೂ ನಿರಾಕರಿಸಲು ಕಾರಣವಾದ ಶೋಷಣೆಯ ವಿಷಯವಾಗಿ ಮಾತನಾಡಿದರು. ದೇವಾಲಯಗಳಲ್ಲಿ ಅರ್ಚಕರು ಅನೇಕ ಶಿಷ್ಟಾಚಾರಗಳನ್ನು ರೂಪಿಸಿಕೊಂಡು ಜನಗಳಲ್ಲಿದ್ದ ಅಜ್ಞಾನದ ಶೋಷಣೆ ನಡೆಸುತ್ತಿದ್ದುದ್ದನ್ನು ಕಂಡ ಶರಣರು, ದೇವರ ಪೂಜೆಗೆ ಅರ್ಚಕರ ಅಗತ್ಯವಿಲ್ಲವೆಂದೂ, ದೇವರ ಪೂಜೆ ವೈಯಕ್ತಿಕವಾಗಿರಬೇಕೆಂದೂ ಪ್ರತಿಪಾದಿಸಿದ್ದರೆಂದು ತಿಳಿಸಿದರು. ಈ ಸಾಹಿತ್ಯ ಚರ್ಚೆಯಲ್ಲಿ ಅನೇಕ ಪತ್ರಕರ್ತರೂ, ಸಾಹಿತಿಗಳೂ, ಪ್ರಾಧ್ಯಾಪಕರು, ವಿದ್ಯಾರ್ಥಿಗಳೂ ಹಾಗೂ ಇತರ ಸಾಹಿತ್ಯಾಸಕ್ತರು ಭಾಗವಹಿಸಿದ್ದರು.

## ದತ್ತಿ ಉಪನ್ಯಾಸ – ನವೆಂಬರ್ 1995

### ಡಾ. ಜಿ.ಎಸ್. ಶಿವರುದ್ರಪ್ಪರವರ ಉಪನ್ಯಾಸ

ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ ಹಾಗೂ ಮೈಸೂರು ಅಸೋಸಿಯೇಷನ್ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಮಾಲಿಕೆಯಲ್ಲಿ ಕುವೆಂಪು ಅವರ ರಾಮಾಯಣ ದರ್ಶನಂ, ಕುವೆಂಪು ಅವರ ವೈಚಾರಿಕತೆ ಎಂಬ ವಿಷಯಗಳ ಕುರಿತು ಡಾ। ಜಿ. ಎಸ್. ಎಸ್. ಅವರು ತಮ್ಮ ಉಪನ್ಯಾಸಗಳನ್ನು ನಡೆಸಿಕೊಟ್ಟರು.

'ಕಾವ್ಯವನ್ನು ಆರಾಧನೆ ಮಾಡುವುದರಿಂದ ನಿಜವಾದ ಕಾವ್ಯಕ್ಕೆ ಮನ್ನಣೆ ಸಿಕ್ಕಂತಾಗುವುದಿಲ್ಲ. ನಿಜವಾದ ಕಾವ್ಯದ ಆರಾಧನೆ ಓದಿನಿಂದಲೇ. ಕುವೆಂಪುರವರನ್ನು ಕನ್ನಡ ಸಾಹಿತ್ಯದ ಯಾವುದೇ ನಿರ್ದಿಷ್ಟ ಪ್ರಕಾರದಲ್ಲಿ ಎಣಿಸಿ ಗಣಿಸಿ ಹೇಳಲು ಸಾಧ್ಯವಿಲ್ಲ. ಕ್ಲಾಸಿಕ್ ಟೈಪ್ ಆಫ್ ಪ್ರೋಯೆಟ್ರಿ ಇದ್ದರೆ ಅದು ಕುವೆಂಪುರವರದ್ದು. ಮಹತ್ತದ ಅನುಭವ ಪ್ರಪಂಚವನ್ನು ಅನಾವರಣ ಮಾಡಿದ ಕವಿ. ಆದಕಾರಣ ಅವರನ್ನು ಸಮಗ್ರ ಸಾಹಿತಿ ಎಂದು ಕರೆಯುವುದು ಉಚಿತ. ಅವರ ಶ್ರೀ ರಾಮಾಯಣ ದರ್ಶನಂ ಓದದೇ ಉಳಿದರೆ ಒಂದು ಮಹಾಕೃತಿಯಿಂದ ಮಾತ್ರವಲ್ಲ ಒಂದು ಮಹತ್ತಾದ ಅನುಭವ ಪ್ರಪಂಚದಿಂದಲೂ ದೂರ ಉಳಿದು ಬಿಡುತ್ತೇವೆ. ಕುವೆಂಪು ಅವರು ರಾಮಾಯಣ ದರ್ಶನಂ ಅನ್ನು ಬರೆದುದಲ್ಲ ಬದುಕಿದರು' ಎಂದು ಅವರು ನುಡಿದರು.

ತಮ್ಮ ಕಾಲಮಾನದ ಅಗತ್ಯಕ್ಕೆ ತಕ್ಕ ಹಾಗೆ ಕನ್ನಡ ಕವಿಗಳು ಪ್ರಾಚೀನ ಕಾವ್ಯಗಳಿಗೆ ವ್ಯಾಖ್ಯಾನ ವಿವರಣೆಗಳನ್ನು ನೀಡಿದ್ದಾರೆ. ರಾಮಾಯಣದ ಕಥೆ ಭೌಗೋಳಿಕ ಸತ್ಯವಾಗಿ ಜನಮನದಲ್ಲಿ ನಿಂತಿದೆ. ಅದು ಪ್ರಾಚೀನವೂ ಅಲ್ಲ, ಅಪ್ರಸ್ತುತವೂ ಅಲ್ಲ, ಬದುಕಿಗೆ ಅವಿನಾಭಾವ ಸಂಬಂಧವನ್ನು ರೂಪಿಸಿಕೊಟ್ಟಿದೆ. ಆದ್ದರಿಂದ ಶ್ರೀ ರಾಮಾಯಣ ದರ್ಶನಂ ಒಂದು ಆಧುನಿಕ ಮಹಾಕಾವ್ಯವಾಗಿ ರೂಪುಗೊಂಡಿದೆ ಎಂದವರು ಹೇಳಿದರು.

ತಮ್ಮ ಎರಡನೆಯ ಉಪನ್ಯಾಸದಲ್ಲಿ ಕುವೆಂಪುರವರ ವೈಚಾರಿಕತೆಯ ಕುರಿತು ಮಾತನಾಡುತ್ತಾ ಆಧ್ಯಾತ್ಮ, ವಿಜ್ಞಾನಗಳಲ್ಲಿ ಅವರಿಗೆ ವಿಶ್ವಾಸವಿತ್ತು. ಮಾನವರ ಮಧ್ಯೆ ಗೋಡೆಗಳನ್ನೆತ್ತುವ ಅಂಧ ಶ್ರದ್ಧೆಯನ್ನವರು ಮುಲಾಜಿಲ್ಲದೆ ಖಂಡಿಸಿದರು. ವೈಚಾರಿಕವಾಗಿ ಅವರೊಬ್ಬ ಪ್ರಚಂಡ ಸಾಹಸಿ, ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಎಲ್ಲೂ ಅವರು ತಮ್ಮ ಆದರ್ಶಗಳನ್ನು ಗಾಳಿಗೆ ತೂರಿದವರಲ್ಲ. ಆದ್ದರಿಂದಲೇ ಕುವೆಂಪುರವರು ಈ ಶತಮಾನ ಕಂಡ ಮಹತ್ವಪೂರ್ಣ ಕವಿಗಳಲ್ಲಿ ಪ್ರಮುಖರಾಗುತ್ತಾರೆ ಎಂದು ಡಾ। ಜಿ. ಎಸ್. ಎಸ್. ಅವರು ಅಭಿಪ್ರಾಯ ಪಟ್ಟರು.

ಈ ಸಂದರ್ಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಕನ್ನಡ ವಿಭಾಗದ ಮುಖ್ಯಸ್ಥ ಡಾ। ತಾಳ್ತಜೆ ವಸಂತ ಕುಮಾರರವರು ಶ್ರೀ ಕುವೆಂಪುರವರು ಕನ್ನಡದ ಅನನ್ಯ ಕವಿಗಳಲ್ಲೊಬ್ಬರು. ಅವರ ವಿಜ್ಞಾನದ ದೃಷ್ಟಿಕೋನ, ಜೊತೆಗೆ ರಾಷ್ಟ್ರದ ಕುರಿತಾದ ಅಭಿಮಾನ ಇವನ್ನು ನಾವಿವತ್ತು ಆಳವಡಿಸಿಕೊಳ್ಳಬೇಕು ಎಂದು ನುಡಿದರು. ಶ್ರೀ ನಾಗೇಶ ಬೆಳವಾಡಿಯವರು ಅಸೋಸಿಯೇಷನ್ನಿನ ಚಟುವಟಿಕೆಗಳ ಕುರಿತು ಮಾತನಾಡಿದರು. ಪ್ರಾರಂಭದಲ್ಲಿ ಲಲಿತ ಬಾಲು ಅವರು ಸ್ವಾಗತ ಗೀತೆಯನ್ನು ಹಾಡಿದರು. ಶ್ರೀ ಉದಯ ಯು. ಅವರು ಅತಿಥಿಗಳನ್ನು ಪರಿಚಯಿಸಿದರು, ಶ್ರೀ ಗಣೇಶ ಉಪಾಧ್ಯ ಅವರು ವಂದಿಸಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ಸುಶೀಲಾ ಆಚಾರ್ಯ ಮತ್ತು ಬಳಗದವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಸಹ ಹಮ್ಮಿಕೊಳ್ಳಲಾಗಿತ್ತು.

## ದತ್ತಿ ಉಪನ್ಯಾಸ – ಮಾರ್ಚ್ 1998

### ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್‌ರವರ ಉಪನ್ಯಾಸ

ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಮತ್ತು ಮೈಸೂರು ಅಸೋಸಿಯೇಷನ್ ಮುಂಬಯಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಮೈಸೂರು ಅಸೋಸಿಯೇಷನ್ನಿನ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಮಾಲೆಯಲ್ಲಿ, ಮಾರ್ಚ್ ತಿಂಗಳ 14 ಮತ್ತು 15 ರಂದು ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ ಇವರಿಂದ ಎರಡು ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಖ್ಯಾತ ಕವಿಗಳೂ, ವಿಮರ್ಶಕರೂ ಮತ್ತು ಲೇಖಕರೂ ಆದ, ಇವರು 'ಕನ್ನಡ ಕಾವ್ಯದ ಎರಡು ಲೇಖನಗಳು"

1) ಅನುಭಾವ ಕವಿ ಶಿಶುನಾಳ ಷರೀಫ
2) ನವ್ಯ ಕವಿ ಎಂ. ಗೋಪಾಲಕೃಷ್ಣ ಅಡಿಗ

ಈ ಎರಡು ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ತಾ 14.03.1998 ರ ಸಂಜೆ 6.30 ರಿಂದ 7 ರವರೆಗೆ ಶ್ರೀಮತಿ ಸುಶೀಲಾ ಆಚಾರ್ಯ ಮತ್ತು ತಂಡದವರಿಂದ ಶ್ರೀ ಕುವೆಂಪು, ಡಾ. ಶಿವರುದ್ರಪ್ಪ, ಎನ್.ಎಸ್.ಲಕ್ಷ್ಮೀನಾರಾಯಣ



ಭಟ್ಟ ಹಾಗೂ ಶ್ರೀ ದುಗ್ಗಪ್ಪಯ್ಯ (ಬಾ ನಾಡಿ) ಇವರ ಕವಿತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಇದಾದ ನಂತರ ಅನುಭಾವ ಕವಿ ಶಿಶುನಾಳ ಷರೀಫರನ್ನು ಕುರಿತ ಉಪನ್ಯಾಸ ಪ್ರಾರಂಭವಾಯ್ತು.

ಶ್ರೀ ಲಕ್ಷ್ಮೀನಾರಾಯಣ ಭಟ್ಟರು ಶಿಶುನಾಳರ ಬಗ್ಗೆ ಆಳವಾಗಿ ಅಧ್ಯಯನ ನಡೆಸಿದ್ದಾರೆ. ಉತ್ತರ ಕರ್ನಾಟಕದಲ್ಲಿ ಹುಟ್ಟಿ ಆ ಪ್ರಾಂತ್ಯದಲ್ಲಿ ಮಾತ್ರ ಪರಿಚಿತರಾಗಿದ್ದ ಶಿಶುನಾಳಾಧೀಶರನ್ನು ಕನ್ನಡಿಗರಿಗೆ ಪರಿಚಯ ಮಾಡಿಸುವುದರ ಮೂಲಕ ಅತ್ಯಮೂಲ್ಯವಾದ ಕೊಡುಗೆಯನ್ನು ಕನ್ನಡಕ್ಕೆ ನೀಡಿದ್ದಾರೆ. ಇವರು ಶಿಶುನಾಳರ ಕೃತಿಗಳನ್ನು ಸಂಗ್ರಹಿಸಿರುವುದೇ ಅಲ್ಲದೆ ಕವಿತೆಗಳ ಕ್ಯಾಸೆಟ್ಟುಗಳನ್ನೂ ಸಹ ಹೊರತಂದಿದ್ದಾರೆ. ಇವರ ಮಿತ್ರವೃಂದ ಇವರನ್ನು ಅಭಿಮಾನದಿಂದ ಶಿಶುನಾಳ ಭಟ್ರು ಎಂದು ಹಾಸ್ಯ ಮಾಡುವಷ್ಟು ಅವರು ಶಿಶುನಾಳ ಸಾಹಿತ್ಯದಲ್ಲಿ ಆಳಕ್ಕೆ ಇಳಿದಿದ್ದಾರೆ. ಶಿಶುನಾಳರು ಮಹಮ್ಮದೀಯ ಧರ್ಮದಲ್ಲಿ ಹುಟ್ಟಿ ಗೋವಿಂದಾಚಾರ್ಯರಂತಹ ವೇದಾಧ್ಯಯನ ಸಂಪನ್ನರೂ ಶಕ್ತಿ (ದೇವಿ)ಯ ಆರಾಧಕರೂ, ಗುಣಗ್ರಾಹಿಗಳೂ ಆದ ಗುರುವಿನ ಮಡಿಲಿಗೆ ಬೀಳುತ್ತಾರೆ. ಬಾಲ್ಯದಿಂದಲೇ ಆಧ್ಯಾತ್ಮಿಕ ಒಲುವಿದ್ದ ಶಿಶುನಾಳರಿಗೆ ಸರಿಯಾದ ಮಾರ್ಗದರ್ಶನ

ದೊರೆತು ಇವರ ದೈವಭಕ್ತಿ ಹಾಗೂ ಕವಿತಾ ಸಾಮರ್ಥ್ಯ ಪರಿಪಕ್ವತೆಯನ್ನು ಪಡೆಯುತ್ತದೆ. ಗೋವಿಂದ ಭಟ್ಟರ ಮತ್ತು ಮಹಮ್ಮದೀಯ ಶಿಶುನಾಳರ ಸಂಬಂಧವನ್ನು ಸೈರಿಸದ ಸಂಪ್ರದಾಯ ಸಮಾಜದ ಜನ ಗೋವಿಂದ ಭಟ್ಟರಿಗೆ "ನಿನ್ನ ಶಿಶುನಾಳನಿಗೆ ಜನಿವಾರವನ್ನು ಹಾಕಿಬಿಡು" ಎಂದು ಕಟಕಿ ನುಡಿದಾಗ ವರ್ಣಾಶ್ರಮ ಧರ್ಮವನ್ನು ಮೆಟ್ಟಿನಿಂತ ಗೋವಿಂದ ಭಟ್ಟರು ಶಿಶುನಾಳರಿಗೆ ಯಜ್ಞೋಪವೀತ ಧಾರಣೆಯನ್ನು ಮಾಡಿಸುತ್ತಾರೆ. ಈ ಸನ್ನಿವೇಶವನ್ನು ಶಿಶುನಾಳರು ತಮ್ಮ ಒಂದು ಕೃತಿಯಲ್ಲಿ ಹೀಗೆ ಬರೆದಿದ್ದಾರೆ.

"ಹಾಕಿದ ಜನಿವಾರ ಸದ್ಗುರನಾಥ
ಹಾಕಿದ ಜನಿವಾರ
ಹಾಕಿದ ಜನಿವಾರ ನೂಕಿದ ಭವಭಾರ
ಲೋಕದಿ ಬ್ರಹ್ಮಜ್ಞಾನವ ನೀ ಪಡೆಯೆಂದು.

ತಮ್ಮ ಗುರುವಿನ ಬಗ್ಗೆ ಶಿಶುನಾಳರಿಗೆ ಎಂತಹ ಹೆಮ್ಮೆ ಎಂಬುದನ್ನು ಈ ರೀತಿ ತೋರಿಸಿದ್ದಾರೆ. "ಎಲ್ಲರಂತಲ್ಲ ನನ್ ಗಂಡ" ಎಂದಿದ್ದಾರೆ. "ಕಟಕಿ ನುಡಿಗೆ ಬಾಗದಿರುವನು. . ..ದಿಟ್ಟ!" ಎಂದು ತಮ್ಮ ಗುರುವಿನ ಧೀ:ಶಕ್ತಿಗೆ ಬೆರಗಾಗಿ ಹಾಡಿದ್ದಾರೆ. ಲಕ್ಷ್ಮೀನಾರಾಯಣ ಭಟ್ಟರು ಮಾತನಾಡುತ್ತಾ, ಶಿಶುನಾಳರು ಹೆಚ್ಚು ವಿದ್ಯಾವಂತರಲ್ಲ. ಆದರೆ ಅವರು ಪುರುಷ ಸೂಕ್ತ ಉಪನಿಷತ್ತಿನ ತಿರುಳನ್ನು ತಮ್ಮ ರಚನೆಗಳಲ್ಲಿ ಹಾಡಿರುವುದು ನೋಡಿದರೆ ಆಶ್ಚರ್ಯವಾಗದೆ ಇರದು ಎಂದರಲ್ಲದೇ ಭಾಷಣಕಾರರು, ಈ ಕವಿತೆಯನ್ನು ಉದಾಹರಿಸಿದರು.

"ಸಸ್ಯ ಶಾಸ್ತ್ರ ಓದದೆ ಫಲ ಕೊಡುತ್ತಿದೆ ಮರ. ಜೀವಶಾಸ್ತ್ರ ಓದದೆ ಮೊಟ್ಟೆ ಇಡುತ್ತದೆ ಖಗ ಸಸ್ಯಕ್ಕೆ ಸಸ್ಯಶಾಸ್ತ್ರಾಧ್ಯಯನ, ಖಗಕ್ಕೆ ಜೀವಶಾಸ್ತ್ರದ ಅಧ್ಯಯನ ತನ್ನ ಪ್ರಾಕೃತಿಕ ಜೀವನ ನಡೆಸಲು ಹೇಗೆ ಅವಶ್ಯಕವಿಲ್ಲವೋ ಹಾಗೆಯೇ ಶಿಶುನಾಳರು ಹುಟ್ಟುಕವಿ ಹಾಗೂ ಭಕ್ತರು. ಸಹಜವಾಗಿಯೇ ಅವರಿಗೆ ಈ ಗುಣಗಳು ಕರಗತವಾಗಿತ್ತು ಎಂದು ಅಭಿಪ್ರಾಯಪಟ್ಟರು. ಶಿಶುನಾಳರ ಕೆಲ ಕವಿತೆಗಳು ಗೂಢವಾದ ಅರ್ಥವನ್ನೊಳಗೊಂಡಿವೆ ಎನ್ನುತ್ತಾ ಈ ಕವಿತೆಯನ್ನು ಅರ್ಥೈಸಿದರು.

"ಕೋಡಗಿನ ಕೋಳಿ ನುಂಗಿತ್ತಾ ನೋಡವ್ವಾ ತಂಗಿ
ಆಡು ಆನೆಯ ನುಂಗಿ
ಗೋಡೆ ಸುಣ್ಣವ ನುಂಗಿ
ಆಡಲು ಬಂದಾ ಪಾತರಗಿತ್ತಿಯ ಮದ್ದಲೆ ನುಂಗಿತ್ತಾ ತಂಗಿ"

ಕೊನೆ ಚರಣದಲ್ಲಿ "ಗೋವಿಂದ ಗುರುವಿನ ಪಾದ ನನ್ನನ್ನೇ ನುಂಗಿತ್ತಾ" ಎಂದು ಹಾಡಿದ್ದಾರೆ. ಇದರಲ್ಲಿ ಕೋಡಗ ಎಂದರೆ ಮನಸ್ಸು (ಮರ್ಕಟವೆಂಬ ಮನ ಎಂಬ ನಾಣ್ನುಡಿಯಂತೆ) ಕೋಳಿ ಬೆಳಕಿನ ಸಂಕೇತ ಅಂದರೆ ಜ್ಞಾನದ ಸಂಕೇತ ಮನಸ್ಸಿನ ಅಹಂ ಅನ್ನು ಜ್ಞಾನದ ಕೋಳಿ ನುಂಗಿತ್ತು. ಎಲ್ಲವೂ ಅಸಾಧ್ಯವಾದದ್ದನ್ನೇ ಹೇಳುತ್ತಾ ಹೋಗಿ ತನ್ನ ಗುರುವಿನ ಪಾದ ಎಷ್ಟು ಸಣ್ಣದು ಅದರಲ್ಲಿ ತಲೆ ಇಟ್ಟ ತನ್ನ ಅಗಾಧವಾದ ಅಜ್ಞಾನ ಅಹಂಕಾರಗಳನ್ನು ಈ ಸಣ್ಣ ಪಾದ ನುಂಗಿ ನನ್ನನ್ನು ಉದ್ಧರಿಸಿತು ಎಂಬ ಭಾವದಲ್ಲಿ ಈ ಕವಿತೆ ಹಾಡಿದ್ದಾರೆಂದು ತಿಳಿಸಿದರು. ಅವರ 'ಚೇಳು ಕಡಿಯಿತು' ಎಂಬ ಕವಿತೆಯನ್ನು ವಿಶ್ಲೇಷಿಸುತ್ತಾ ಆ ದೇವರ ಮನೆಯ ಕತ್ತಲಿನಲ್ಲಿ ಕೂತಿತ್ತು. ಊರ್ಧ್ವ ಮುಖಕ್ಕೆ ಎತ್ತಿತ್ತು. ಅಂತಹ – ಕಡಿಯಿತು. ಈ ಕವಿತೆ ಶಿಶುನಾಳರು ಭಗವಂತ ಭಕ್ತನಿಗೆ ಜೀವನದಲ್ಲಿ ಜಾಗೃತಿಯನ್ನುಂಟು ಮಾಡಲೆಂದೇ ನೋವುಗಳನ್ನು ಕೊಡುತ್ತಾನೆ, ಆಗ ಎಚ್ಚೆತ್ತರೆ ಅವನ ಉದ್ಧಾರ ಆಗುತ್ತದೆ ಎಂದು – ಈ ಕವಿತೆ ಹಾಡಿದಂತಿದೆ ಎಂದು ವಿಶ್ಲೇಷಿಸಿದರು. ಶಿಶುನಾಳಾಧೀಶರ ಕವಿತೆಗಳಲ್ಲಿ ಅಧ್ಯಾತ್ಮಿಕತೆಯ ಹೊಳಪು ಹಾಸು ಹೊಕ್ಕಾಗಿದೆಯೆಂದೂ, ಇವರೊಬ್ಬ ಅನುಭಾವಿ ಕವಿ ಎಂದೂ ಪ್ರತಿಪಾಧಿಸಿದರು.

ತಾ 15.03.1998 ರ ಬೆಳಿಗ್ಗೆ ಶ್ರೀಯುತ ಲಕ್ಷ್ಮೀನಾರಾಯಣ ಭಟ್ಟರು "ನವ್ಯ ಕವಿ ಎಂ. ಗೋಪಾಲಕೃಷ್ಣ ಅಡಿಗ" ಎಂಬ ವಿಷಯದಲ್ಲಿ ಉಪನ್ಯಾಸ ನೀಡಿದರು. ಅಡಿಗರನ್ನು ಕುರಿತು ವಿಮರ್ಶಾಗ್ರಂಥವನ್ನೇ ಬರೆದಿರುವ ಶ್ರೀ ಲಕ್ಷ್ಮೀನಾರಾಯಣ ಭಟ್ಟರು ಅಡಿಗರ ಕವಿತೆಗಳನ್ನು ಅರ್ಥಮಾಡಿಕೊಂಡು ಅದರ ಬಗ್ಗೆ ಮಾತನಾಡಬೇಕಲ್ಲದೆ ಅರ್ಥಮಾಡಿಕೊಳ್ಳದೆ ಮಾತನಾಡುವುದು ಸರಿಯಲ್ಲ ಎಂಬುದನ್ನು ಜಿ. ಪಿ. ರಾಜರತ್ನಂರವರ ಕವನವನ್ನು ಉದಾಹರಿಸಿ ತಿಳಿಸಿದರು. "ಅರ್ಥ ಆಗಿ ಅಂಗಲ್ಲಾ ಇಂಗೆ ಅನ್ನೋರು ದೊಡ್ಡೋರು ಅರ್ಥ ಆಗ್ದೆ ಆಡೋದು ಚಂದ್ರನ್ಮಕ್ಕ್ ಉಗ್ದಂಗೆ"

ಅಡಿಗರ ಕವಿತೆಯಲ್ಲಿ ಓದುಗರು ಅವರವರ ಸಂಸ್ಕಾರಕ್ಕನುಗುಣವಾಗಿ ಅರ್ಥ ಕಾಣುತ್ತಾರೆ ಎಂಬುದು ಶ್ರೀ ಲಕ್ಷ್ಮೀ ನಾರಾಯಣ ಭಟ್ಟರ ಅಭಿಪ್ರಾಯ. ಅಡಿಗರು ಹಿಂದಿನ ಕಾವ್ಯಪರಂಪರೆಯ ಎಲ್ಲಾ ನಿಯಮಗಳನ್ನೂ ಮುರಿದು ಹೊಸ ಹಾದಿ ಹಿಡಿದಿದ್ದೇ ಇವರಿಗೂ ನವ್ಯ ಕವಿಯ ಸ್ಥಾನ ದೊರೆಯಿತು. ವಿ.ಕೃ.ಗೋಕಾಕರು ನವ್ಯ ಕವಿತೆಗೆ ಅಸ್ತಿ ಭಾರ ಹಾಕಿದರೆಂದೂ, ಅದನ್ನು ಬೆಳೆಸಿ ಒಂದು ಹೊಸ ಪರಂಪರೆಯನ್ನೇ ಸೃಷ್ಟಿಸಿದ ಕವಿ ಅಡಿಗರೆಂದು ತಿಳಿಸಿದರು. ಇವರು ಜನಸಾಮಾನ್ಯರಾಡುವ ಭಾಷಾ ಶಬ್ದಗಳನ್ನು ಬಳಸಿದರು. ಲಯ ಉಪಮಾನ, ಉಪಮೇಯ, ಹೊಸ ವಸ್ತು, ಹೊಸ ವಿಷಯ, ಹೀಗೆ ಈ ಕವಿ ನವ್ಯ ಕವಿಯೆಂದೇ ಪ್ರಸಿದ್ಧರಾದರು. ಅಡಿಗರ ಕವಿತೆಗಳನ್ನು ಅರ್ಥಮಾಡಿಕೊಳ್ಳಲು ಹೃದಯವಂತಿಕೆ ಬೇಕು ಎಂದು ಅಭಿಪ್ರಾಯಪಟ್ಟರು. ಉದಾ: "ಆನಂದಮಯ ಈ ಜಗ ಸೂರ್ಯೋದಯ ಚಂದ್ರೋದಯ. ಇದು ದೇವರ ದಯ" (ಇದು ಕವಿತೆಯ ಒಂದು ತುಣುಕು))

ಭೂತ: ಇದೊಂದು ಕವಿತೆ.

ವರ್ತಮಾನ ಪತ್ರಿಕೆಯಲ್ಲಿ ಬರೀ ಭೂತದ ಸುದ್ದಿ. ಭೂತ ವರ್ತಮಾನಕ್ಕೆ ಭವಿಷ್ಯಕ್ಕೆ ಪ್ರೇರಕ. ತುರ್ತು ಪರಿಸ್ಥಿತಿಯನ್ನು ಕುರಿತಂತೆ. ಈ ದಿಟಕವಿ ಬರೆದ ಈ ಕವಿತೆಯನ್ನು ಗಮನಿಸಿ ಶೀರ್ಷಿಕೆ "ನೆಹರು ನಿವೃತ್ತರಾಗುವುದಿಲ್ಲ" ಇನ್ನು ಭಯವಿಲ್ಲ ಗಾಳಿ ಯಥಾಪ್ರಕಾರ ಬೀಸುವುದು. ಕೋಳಿ ಯಥಾಪ್ರಕಾರ ಕೂಗುವುದು.

ಶೇಖಡ ಹತ್ತಕ್ಕೆ ಮೋಸವಿಲ್ಲ. 'ಇಂದಿಗೂ ಗಾಂಧಿ, ಹಾಗೂ ನೆಹರು ಶಬ್ದದ ಮೋಡಿ ಭಾರತೀಯರನ್ನು ಆವರಿಸಿರುವುದು ನಾವು ಕಾಣಬಹುದು. ಅಡಿಗರ 9 ಕಾವ್ಯ ಸಂಗ್ರಹ ಕೃತಿಗಳು ಹೊರಬಂದಿದೆ. ಇದರಲ್ಲಿ ಅತ್ಯಂತ ಶ್ರೇಷ್ಠವಾದದ್ದು 'ಭೂಮಿಗೀತ'. ಲಕ್ಷ್ಮೀನಾರಾಯಣ ಭಟ್ಟರು ಅಡಿಗರ ಬಗ್ಗೆ ಮಾತನಾಡುತ್ತಾ ಅಡಿಗರು ಭರತ ಖಂಡದ ಅತ್ಯಂತ ಶ್ರೇಷ್ಠ ಕವಿಗಳಲ್ಲಿ ಒಬ್ಬರೆಂದೂ, ಧೀ:ಶಕ್ತಿಯುಳ್ಳ ಕವಿ ಎಂದೂ, ಅಡಿಗರು ಭಾಷಾಭಿಮಾನದ ಭರದಲ್ಲಿ ರಾಷ್ಟ್ರಾಭಿಮಾನವನ್ನು ಎಂದೂ ತುಳಿಯಬಾರದೆಂದು ಅಭಿಪ್ರಾಯ ಪಟ್ಟಿರುವರೆಂದೂ, ಮನುಷ್ಯ ಸರಿಯಾಗಿದ್ದಲ್ಲಿ ರಾಷ್ಟ್ರ ಸರಿಯಾಗಿರುವುದೆಂಬ ಹೇಳಿಕೆ ಇವರದಾಗಿತ್ತೆಂದೂ ತಿಳಿಸಿದರು. ಅಡಿಗರ ಕವಿತೆಗಳು ಈ ಶತಮಾನದ ಅತ್ಯಂತ ಶ್ರೇಷ್ಠ ಕವಿತೆಗಳು ಮತ್ತು ಮಾನವನ ಜೀವನಕ್ಕೆ ಅತ್ಯಂತ ಹತ್ತಿರವಾಗಿರುವವು ಎಂದು ಅಭಿಪ್ರಾಯಪಟ್ಟರು.


ಮಧ್ಯಪ್ರದೇಶ ಸರ್ಕಾರ ಶ್ರೇಷ್ಠ ಕವಿಗಳ ಸನ್ಮಾನಾರ್ಥವಾಗಿ ಕಬೀರ್ ಪ್ರಶಸ್ತಿಯನ್ನು ಪ್ರಾರಂಭಮಾಡಿತು. ಪ್ರಾರಂಭವಾದ ವರ್ಷವೇ ಈ ಸನ್ಮಾನವನ್ನು ಅಡಿಗರಿಗೆ ಕೊಟ್ಟು ಸನ್ಮಾನಿಸಲಾಯ್ತು. ಇದು ಕನ್ನಡದ ಹಾಗೂ ಕನ್ನಡಿಗರ ಹೆಮ್ಮೆಯೇ ಸರಿ. ಮುಂಬಯಿ ವಿಶ್ವವಿದ್ಯಾಲಯ ಹಾಗೂ ಮೈಸೂರು ಅಸೋಸಿಯೇಷನ್ ಮುಂಬಯಿ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಮಾಲಿಕೆಯಲ್ಲಿ ಕನ್ನಡ ಕಾವ್ಯದ ಎರಡು ನೆಲೆಗಳ ಕುರಿತು ಮಾತನಾಡಿದರು. ಅಡಿಗರು ಸ್ವಂತಿಕೆಗೆ, ಸ್ವೋಪಜ್ಞತೆಗೆ ನಡೆಸಿದ ಹುಡುಕಾಟ ಗಮನಾರ್ಹವಾದುದು. ಈ ಎಲ್ಲಾ ಕಾರಣಗಳಿಂದ ಅಡಿಗರು ಕನ್ನಡದ ಕವಿಗಳಿಗಿಂತ ಭಿನ್ನರಾಗಿ ಕಾಣುತ್ತಾರೆ. ಈ ಶತಮಾನದಲ್ಲಿ ಆಗಿ ಹೋದ ಭಾರತದ ಪ್ರಮುಖ ಇತರ ಕವಿಗಳಲ್ಲಿ ಅಡಿಗರು ಒಬ್ಬರು ಎಂದವರು ಅಭಿಪ್ರಾಯಪಟ್ಟರು.

ಶಿಶುನಾಳ ಶರೀಫರ ಬದುಕು ಬರಹದ ಕುರಿತು ಮಾತನಾಡುತ್ತಾ,


ಶರೀಫರು ಭಾವೈಕ್ಯದ ವ್ಯಾಖ್ಯಾನದಂತಿದ್ದರು. ಹಿಂದೂ ಮುಸ್ಲಿಮ್ ಧರ್ಮದ ಸಾರ ಸತ್ವವನ್ನು ಮೈಗೂಡಿಸಿಕೊಂಡು ಬೆಳೆದರು. ಲೋಕ ಜೀವನದ ಎಲ್ಲಾ ಅಂಶಗಳೂ ಅವರ ಕಾವ್ಯಕ್ಕೆ ವಸ್ತುವಾದವು. ಅನುಭಾವದ ಅನಾವರಣ ಅವರ ಕಾವ್ಯದಲ್ಲಿ ಮೂರ್ತರೂಪ ಪಡೆದುಕೊಂಡಿವೆ. ಜಾತಿಮತದ ಗಡಿಗಳನ್ನು ದಾಟಿನಿಂತ ದೊಡ್ಡ ಮನಸ್ಸಿನ ವ್ಯಕ್ತಿ. ಸೃಷ್ಟಿ ಜೀವ ಪರಮಾತ್ಮರ ಸಂಬಂಧದ ಚಿಂತನೆ ಇಲ್ಲಿ ಗಾಢವಾಗಿ ಮೈತಾಳಿದೆ ಎಂದವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ। ತಾಳ್ತಜೆ ವಸಂತ ಕುಮಾರ್ ಮಾತನಾಡುತ್ತಾ ಶರೀಫರ ತತ್ವಪದಗಳನ್ನು ಅರ್ಥೈಸುವಾಗ ಅಂದಿನ ಐತಿಹಾಸಿಕ ಚೌಕಟ್ಟನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಅಡಿಗರ ಕಾವ್ಯದಲ್ಲಿ ಎದ್ದು ಕಾಣುವುದು ಸಮಕಾಲೀನ ಅಗತ್ಯಗಳ ಬಗ್ಗೆ ಅವರಿಗಿದ್ದ ವಿಶೇಷ ಆಸ್ಥೆ ಹಾಗೂ ಸಾಂಸ್ಕೃತಿಕ ಕಾಳಜಿ; ಆದ್ದರಿಂದಲೇ ಅವರ ಕಾವ್ಯ ನಮಗೆ ಪ್ರಸ್ತುತವಾಗುತ್ತದೆ ಎಂದು ನುಡಿದರು.

ಕಾರ್ಯಕ್ರಮದ ಆರಂಭದಲ್ಲಿ ಶ್ರೀಮತಿ ಸುಶೀಲಾ ಆಚಾರ್ಯ ಮತ್ತು ಬಳಗದವರು ಹಾಗೂ ಕನ್ನಡ ವಿಭಾಗದ ವಿದ್ಯಾರ್ಥಿ ಮಿತ್ರರು ಗೀತಗುಂಜನ ಕಾರ್ಯಕ್ರಮವನ್ನು ನಡಿಸಿಕೊಟ್ಟರು. ಶ್ರೀ ವಿನಾಯಕ ಜೋಶಿ ಅವರು ಅತಿಥಿಗಳನ್ನು ಪರಿಚಯಿಸಿದರು. ಜಿ. ಎನ್. ಉಪಾಧ್ಯರವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಶ್ರೀ ಪ್ರಸಾದ್ ಅವರು ಧನ್ಯವಾದಗೈದರು. ಮೈಸೂರು ಅಸೋಸಿಯೇಷನ್ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿಯವರು ಈ ಸಂದರ್ಭದಲ್ಲಿ ಹಾಜರಿದ್ದರು. ●



ಅಸೋಸಿಯೇಶನ್‌ಗೆ ಭೇಟಿ ಕೊಟ್ಟ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಸಂದರ್ಶಕರ ಡೈರಿಯಲ್ಲಿ ಬರೆದ ಹಸ್ತಾಕ್ಷರ





ಅಸೋಸಿಯೇಶನ್‌ಗೆ ಭೇಟಿ ಕೊಟ್ಟ ಎಂ. ಸೀತಾರಾಮಯ್ಯ ಅವರು ಸಂದರ್ಶಕರ ಡೈರಿಯಲ್ಲಿ ಬರೆದ ಹಸ್ತಾಕ್ಷರ

## ದತ್ತಿ ಉಪನ್ಯಾಸ – ಮಾರ್ಚ್ 1999

### ಯು. ಆರ್. ಅನಂತಮೂರ್ತಿಯವರ ಉಪನ್ಯಾಸ

"ನಿಜವಾದ ಸಂಸ್ಕೃತಿಯ ಸಾರ ಭಾರತೀಯ ಭಾಷೆಗಳಲ್ಲಿದೆ ನಾವು ಭಾಷಾವಲಯದ ಬದುಕು ಬದುಕುತ್ತಿದ್ದೇವೆ" ಎಂದು ಮೊದಲ ದಿನದ ಉಪನ್ಯಾಸ ಮಾಲೆ (1999) ಯನ್ನು ಆರಂಭ ಮಾಡಿದ ಜ್ಞಾನ ಪೀಠ ಪ್ರಶಸ್ತಿ



ವಿಜೇತ ಡಾ. ಯು. ಆರ್. ಅನಂತಮೂರ್ತಿಯವರು ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ ಮತ್ತು ಮೈಸೂರು ಅಸೋಸಿಯೇಷನ್‌ನ ಬಂಗಾರ ಹಬ್ಬದ ದತ್ತಿ ಉಪನ್ಯಾಸದ ಸಲುವಾಗಿ ವಡಾಲದ ಕನ್ನಡ ಶಾಲೆಯಲ್ಲಿ ತಾ.16 ಎಪ್ರಿಲ್ ರಂದು ಸಂಜೆ ಕನ್ನಡ ಸಂಸ್ಕೃತಿಯ ಬಗ್ಗೆ ಮಾತನಾಡುತ್ತಿದ್ದರು.

ನಮ್ಮ ಭಾರತೀಯ ಸಾಹಿತ್ಯದ ವಿಶಿಷ್ಟತೆಯನ್ನು ಗುರುತಿಸುತ್ತ ಇದು ಬಹಳ ಮೌಲಿಕವಾದ ಮೌಖಿಕ ಪರಂಪರೆಯನ್ನುಳ್ಳದ್ದು. ನಾವು ಉಳಿಸಿಕೊಂಡದ್ದನ್ನು ವಿಶ್ವದಲ್ಲಿ ಬೇರೆಯವರು ಉಳಿಸಿಕೊಂಡಿಲ್ಲ ಎಂದು ಅದರ ಸ್ಥಾನವನ್ನು ಸ್ಪಷ್ಟಪಡಿಸಿದರು. ಪಂಪ ಕುಮಾರವ್ಯಾಸನಂತಹವರು ಜನಮನದಲ್ಲಿ ಉಳಿದಿರುವುದೇ ಸಾಕ್ಷಿ ಎಂದೂ ಹೇಳಿದರು.

'ಕವಿ ರಾಜ ಮಾರ್ಗ'ದ ವಿಶಿಷ್ಠತೆಯನ್ನು ಹೇಳುತ್ತಾ, ಅದು ಒಂದು unique ಕೃತಿ ಎಂದು ಉದಾಹರಿಸಿದರು. ಯುರೋಪಿನಲ್ಲಿ cultural policy ಯಿಂದಾಗಿ ವಿದ್ಯಾರ್ಥಿಗಳು ಶೇಕ್ಸ್‌ಪಿಯರ್, ಛಾಸರ್‌ನ ಓದಿದರೆ, ಇಲ್ಲಿ ಅಂಥ ಒಂದು ವಾತಾವರಣ ಎಲ್ಲಿದೆ, ಸ್ವಂತ ಇಚ್ಛೆಯಿಂದಲೇ ಜನ ಪಂಪ, ರನ್ನರನ್ನು ಉಳಿಸಿಕೊಂಡಿದ್ದಾರೆ ಎಂದರು. ಕವಿರಾಜ ಮಾರ್ಗದ "ಕುರಿತೋದದೆಯುಂ" ಕಾವ್ಯ ಪ್ರಯೋಗ "ಪರಿಣಿತ ಮತಿಗಳ್" ಎನ್ನುವ ಮಾತಿಗೆ ಪೂರಕವಾಗಿ "Indian culture is passing through illiteracy" ಎಂದು ಹೇಳಿದರು.

'ಬದಲಾಗುತ್ತಿರುವ ಸಮಾಜವೇ ವಸ್ತುವಾಗಿ ಪಡೆದ ಸಂಚರಿಸುವ ಭಾಷೆಗಳಾದ ಸಂಸ್ಕೃತ, ಇಂಗ್ಲೀಷ್, ಹಿಂದೀ (ಪ್ರಭುತ್ವದ) ಭಾಷೆಯೊಂದಿಗೆ ಸಂಚರಿಸದಿರುವ ಕನ್ನಡ, ಕಾಲಕಾಲಕ್ಕೆ ಮಾಡಿಕೊಳ್ಳುತ್ತಿರುವ ಅನುಸಂಧಾನದಿಂದಲೇ ಗಟ್ಟಿಯಾಗಿ ಉಳಿದಿದೆ. ಲೇಖಕನ ಮನಸ್ಸು ಪ್ರಜ್ಞಾಪೂರ್ವಕ ನೆಲೆಯಲ್ಲಿ ಹೊರಗಿನ ಒತ್ತಡ, ಬದಲಾವಣೆಗಳಿಗೆ ಸ್ಪಂದಿಸಿದರೂ, ಅಪ್ರಜ್ಞಾಪೂರ್ವಕ್ಕೆ ಹಿನ್ನೆಲೆಯಲ್ಲಿ ಮುಗ್ಧ ಬೆಲೆಯುಳ್ಳ ಸಂಸ್ಕೃತಿಯ ಬೇರನ್ನು ಬಿಡಿಸಿಕೊಳ್ಳುವ 'regret' ಕೂಡ ಕಾಡುತ್ತದೆ ಎಂದರು.

ಪ್ರಜ್ಞಾವಲಯದಲ್ಲಿ ಬದಲಾವಣೆ ಅನಿವಾರ್ಯ, ಅಗತ್ಯವಾದರೂ ಹಳೆಯ ಮೌಲ್ಯದ ಜೊತೆಗೆ ನಡೆಯುವ ಘರ್ಷಣೆ ಕನ್ನಡದಲ್ಲಿ ದಟ್ಟವಾಗಿದೆ. ಇದು ಪಂಪನ ಕಾಲದಿಂದಲೂ ಹರಿದು ಬಂದಿರುವುದನ್ನು ಹೇಳುತ್ತಾ, ಕಾರಂತ, ಕುವೆಂಪು, ಮಾಸ್ತಿ, ಕೃಷ್ಣ ಆಲನಹಳ್ಳಿ ಇವರುಗಳ ಕೃತಿಗಳನ್ನು ಉದಾಹರಿಸಿದರು.

ಈ ಘರ್ಷಣೆ, ತಳಮಳದಿಂದಲೇ ಹೊಸ ಸಮಾಜ ಹುಟ್ಟುತ್ತದೆ. ಇಂತಹ




ಸಂದರ್ಭದಲ್ಲಿ ನಮ್ಮ ಮೌಲ್ಯಗಳನ್ನು ಪರಿಗಣಿಸುತ್ತಿರುವುದೇ ಭಾರತದಲ್ಲಿ ಬದಲಾವಣೆಗೆ ಸ್ಪಂದಿಸುತ್ತಿರುವ ಸಂಕೇತ, ಬಂಡಾಯ, ದಲಿತ ಸಾಹಿತ್ಯಗಳೂ ಹೊಸಕಾಲದ ದಾಖಲೆಯಾಗುವ ಸಾಧ್ಯತೆ ಇದೆ. ಕಾರಂತ, ಕುವೆಂಪುರವರ ಸಾಹಿತ್ಯಗಳು ಇಂದಿನ ಜ್ಞಾನ ಶಾಖೆಗೆ ಸ್ಪಂದಿಸಿದರೆ, ತತ್ವ ಜ್ಞಾನದ ಶಾಖೆಗೆ ಸ್ಪಂದಿಸಿದ ಡಿ.ವಿ.ಜಿ. ಸಾಹಿತ್ಯ ಲೋಕದಲ್ಲಿ ಮಿನುಗಿದ್ದಾರೆ ಎಂದರು.

ಎರಡನೆಯ ದಿನ ಉಪನ್ಯಾಸದಲ್ಲಿ ಮಾರ್ಗದೇಶಿಯ ಬಗ್ಗೆ ವಿವರವಾಗಿ ಹೇಳುತ್ತಾ ಮನೆಯ ಮುಂದಿನ ಜಗುಲಿಯಂತೆ ಮಾರ್ಗ ವಿದ್ಯಾಭ್ಯಾಸದ ಮೂಲಕ ಸಾರ್ವತ್ರಿಕತೆ ಪಡೆದರೆ, ಮನೆಯ ಹಿತ್ತಲಿನಂತೆ ದೇಶಿ, ವಿಶಿಷ್ಟತೆ, ಆತ್ಮೀಯತೆಗೆ ಎಡೆಕೊಟ್ಟಿರುವುದನ್ನು ತಮ್ಮ ಬಾಲ್ಯದ ನೆನಪಿನೊಂದಿಗೆ ನೀಡಿದರು. ಮಾರ್ಗಕ್ಕೆ ಹಿತ್ತಲಿಲ್ಲ. ನಮ್ಮ ಕನ್ನಡ ಭಾಷೆಗೆ ವಿಶಾಲವಾದ ಹಿತಲಿದೆ, ಎಂದು 'ಅಡಿಗರ structure ಮಾರ್ಗವಾದರೂ texture ದೇಶಿ ಎಂದು ಉದಾಹರಿಸಿದರು. ಕನ್ನಡಕ್ಕೆ ಮಹಾನಗರ ಎಲ್ಲಿ ಎಂದು ಹೇಳುತ್ತಲೇ ಮುಂಬಯಿ ಹೊರ ಜಗತ್ತಿಗೆ ಅನುಸಂಧಾನ ನಡೆಸುವ ವಿಷಯದಲ್ಲಿ ಕನ್ನಡಕ್ಕೆ ಉಗ್ರಾಣವಾಗಿದೆ ಎಂದು ಮೆಚ್ಚುಗೆಯ ಮಾತನಾಡಿದರು.

ಭಾರತೀಯ ಅನುಸಂಧಾನ್ದ ಮನಸ್ಸು ನಾಶವಾಗುವ ಆಪಾಯದ ಸೂಚನೆಯನ್ನು ನೀಡುತ್ತಾ, ಏಕ ಭಾಷೆಯ ಒತ್ತಡ ಅತಿಯಾದಾಗ, ಅನೇಕ ಭಾಷೆಗಳಿಗೆ ಕಾರಣವಾಗುಅದೆ. ಹಾಗೆ ಅನೇಕತೆ ಅತಿ ಆದಾಗ ಏಕತೆ (globalization) ಯ ಸಾಧ್ಯತೆಯೂ ಇದೆ ಎಂದು ಭಾಷೆಯ ಭವಿಷ್ಯದ ಬಗ್ಗೆ ಚಿಂತೆ ವ್ಯಕ್ತಪಡಿಸಿದರು.

ಉಪನ್ಯಾಸದ ಅನಂತರ ಸಂವಾದ ಇದ್ದುದರಿಂದ ಕೇಳುಗರ ಸಂಶಯಗಳು ವ್ಯಕ್ತವಾಗಲು ಅನುಕೂಲವಾಯಿತು. ಜಗುಲಿ, ಹಿತ್ತಿಲಿನ ಸಂದರ್ಭವನ್ನು ಸೂಚಿಸುತ್ತಾ ಡಾ. ಮಂಜುನಾಥ್‌ರವರು ಈಗಿನ ಲೇಖಕರಿಗೆ ಹಿತ್ತಿಲ ಹಿನ್ನೆಲೆ ಸಾಧ್ಯವಿಲ್ಲ ಎಂಬ ಮಾತಿಗೆ ಉತ್ತರವಾಗಿ ಅದು ನನ್ನ ಸಮಸ್ಯೆಯೂ ಆಗಿದೆ ಎಂದು ನಕ್ಕು ನುಡಿದರು.

ಮಂಜುನಾಥ್‌ರ (ಮುಂಬಯಿಗರ ವಿಶಿಷ್ಟತೆ – ನೇರಮಾತು) ಲೇಖಕನ ಪ್ರಾಮಾಣಿಕತೆಯ ಸತ್ಯನಿಷ್ಠೆಯ ಪ್ರಶ್ನೆಗೆ ಉತ್ತರಿಸುತ್ತಾ ಮನುಷ್ಯರ ಎಲ್ಲಾ ಸಾಧ್ಯತೆಗಳನ್ನು ಅರಿಯುವುದರಲ್ಲಿ ಲೇಖಕ ಪ್ರಾಮಾಣಿಕನಾಗಿರುತ್ತಾನೆ ಎನ್ನುವ ಹಾರಿಕೆ ಉತ್ತರ ನೀಡಿದರು. ಪರಿಹಾರ ಸಿಗದ ಪ್ರಶ್ನೆಯಾಗಿ ಉಳಿದದ್ದು ಡಾ.ರಘುನಾಥ್‌ರವರದ್ದು. ಕನ್ನಡದ ಅನುಸಂಧಾನದ ಬಗ್ಗೆ (ವಚನ ಸಾಹಿತ್ಯವನ್ನು ಹೊರತುಪಡಿಸಿ) ಒಪ್ಪದೆ ಅವರ ನಿಲುವು, ಪಂಪನ ಮಾರ್ಗದಲ್ಲಿ ತಳ್ಳುವುದು ಬೇರೆಯೇ ರೀತಿಯ ಆಯಾಮ ಪಡೆದು ವಿವಾದಾರ್ಥಗಳ ಎಡೆ ಮಾಡಿಕೊಟ್ಟಿತು.

ಒಟ್ಟಿನಲ್ಲಿ ಮುಂಬಯಿಯಲ್ಲಿ ನಡೆಯುತ್ತಿರುವ ಕನ್ನಡದ ಚಟುವಟಿಕೆಗಳನ್ನು ಕಂಡು, ಮೈಸೂರಿನಲ್ಲಿ ಕನ್ನಡ ಅಳಿದರೂ ಮುಂಬಯಿಯಲ್ಲಿ ಉಳಿದಿರುತ್ತದೆ ಎನ್ನುವ ಮೆಚ್ಚುಗೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

# ದತ್ತಿ ಉಪನ್ಯಾಸ – ಜನವರಿ 2000

## ಹಾ.ಮಾ.ನಾಯಕರವರ ಉಪನ್ಯಾಸ

ಮೈಸೂರು ಅಸೋಸಿಯೇಷನ್ ಮತ್ತು ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಸೇರಿ ನಡೆಸುವ ಎರಡು ದಿನಗಳ ಮೈಸೂರು ಅಸೋಸಿಯೇಷನ್ನಿನ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮದ ಅಂಗವಾಗಿ ತಾ. 17.12.1999 ಹಾಗೂ 18.12.1999 ರಂದು ಹಾ. ಮಾ. ನಾಯಕರವರಿಂದ **'ಬದುಕು–ಬರಹ'** ಎಂಬ ಶೀರ್ಷಿಕೆಯಡಿಯಲ್ಲಿ ಪ್ರಾತಃ ಸ್ಮರಣೀಯರೆನಿಸಿರುವ 'ತಳುಕಿನ ವೆಂಕಣ್ಣಯ್ಯ'ನವರನ್ನು ಕುರಿತು ಉಪನ್ಯಾಸ ನಡೆಯಿತು.

ಮೈಸೂರು ಅಸೋಸಿಯೇಷನ್ನಿನಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿಯವರು ಅತಿಥಿಗಳನ್ನು ಸ್ವಾಗತಿಸಿದರು. ಸ್ವಾಗತ ಭಾಷಣ ಮಾಡುತ್ತಾ ನಮ್ಮ ಅಸೋಸಿಯೇಷನ್ನಿಗೆ ಹೆಸರಾಂತ ಸಾಹಿತಿಗಳು ವಿದ್ವಾಂಸರು, ನಾಟಕಕಾರರು ಮುಂತಾದ ಅನೇಕ ದಿಗ್ಗಜರು, ನಾಟಕಕಾರರು ಬಂದು ಉಪನ್ಯಾಸ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ. ಇದು ನಮ್ಮ ಅಸೋಸಿಯೇಷನ್ನಿಗೆ ಒಂದು ಹೆಮ್ಮೆಯ ವಿಷಯವಾಗಿದೆ. ಈ ದಿನ ಕನ್ನಡದ ಹಿರಿಯ ಸಾಹಿತಿಗಳೂ, ವಿದ್ವಾಂಸರೂ, ವಿಮರ್ಶಕರೂ ಆದ ಹಾಗೂ ಗುಲ್ಬರ್ಗಾದ ವಿಶ್ವವಿದ್ಯಾಲಯದಲ್ಲಿ ಉಪಕುಲಪತಿಗಳಾಗಿ ಕೆಲಸ




ಮಾಡಿರುವ ಶ್ರೀ ಹಾ. ಮ. ನಾಯಕ ಅವರನ್ನು ಸ್ವಾಗತಿಸುತ್ತೇನೆ. ಇದು ನನಗೊಂದು ಹೆಮ್ಮೆಯ ವಿಷಯವಾಗಿದೆ. ನನ್ನ ವಿದ್ಯಾರ್ಥಿ ಜೀವನದ ಒಂದು ಘಟನೆ ನನಗೀಗ ಜ್ಞಾಪಕಕ್ಕೆ ಬರುತ್ತಿದೆ. ತುಮಕೂರಿನಲ್ಲಿ ಅಂತರ್‌ಕಾಲೇಜು ಭಾಷಣ ಸ್ಪರ್ಧೆಯಲ್ಲಿ ಒಮ್ಮೆ ನಾನೂ ಭಾಗವಹಿಸಿದ್ದೆ. ಆಗ ವಿದ್ಯಾರ್ಥಿಯಾಗಿ ದ್ದಾಗಿನಿಂದಲೇ ಪ್ರತಿಭಾವಂತರಾಗಿದ್ದವರು. ನನ್ನ ದೊಡ್ಡಪ್ಪನವರಾದ ಡಿ.ವಿ.ಜಿ.ಯವರ ಸಾಹಿತ್ಯಗಳಿಗೆ ಟಿಪ್ಪಣಿಗಳನ್ನು ಬರೆದಿದ್ದಾರೆ. ನನ್ನ ಸೋದರರಾದ ಬಿ.ಜಿ.ಎಲ್.ಸ್ವಾಮಿಯವರ ಮೈಸೂರು ಡೈರಿಗೆ ಮುನ್ನುಡಿ ಬರೆದಿದ್ದಾರೆ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆಯಲ್ಲಿ ದುಡಿದಿದ್ದಾರೆ. ಹೋದ ವರ್ಷವೇ ಬರಬೇಕಾಗಿದ್ದರು. ಅನಿವಾರ್ಯ ಕಾರಣದಿಂದ ಬರಲಿಲ್ಲ. ಈ ವರ್ಷ ಒಪ್ಪಿ ಬಂದದ್ದು ನಮ್ಮ ಅಹೋಭಾಗ್ಯವೆಂದು ಹೇಳಿದರು.

ಅತಿಥಿಗಳನ್ನು ಸಭೆಗೆ ಪರಿಚಯಿಸಿದವರು ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಪ್ರಾಧ್ಯಾಪಕರಾಗಿರುವ ಶ್ರೀ ವಸಂತ ಕುಮಾರ ತಾಳ್ತಜೆಯವರು. ಇವರು ಮಾತನಾಡುತ್ತಾ ಮೈಸೂರು ಅಸೋಸಿಯೇಷನ್ನು ತನ್ನ ಬಂಗಾರ ಹಬ್ಬದ ಸನ್ನಿವೇಶದಲ್ಲಿ ಸ್ಥಾಪಿಸಿದ ದತ್ತಿ ನಿಧಿಯ ಸಹಕಾರ ಮುಂಬೈ ವಿಶ್ವವಿದ್ಯಾನಿಲಯಕ್ಕೆ ಸತತವಾಗಿ ದೊರೆಯುತ್ತಿದೆ. ಅಂತೆಯೇ ಈ ದತ್ತಿ ಉಪನ್ಯಾಸ ಕಾರ್ಯಕ್ರಮ ಅವ್ಯಾಹಿತವಾಗಿ ನಡೆದುಬಂದಿದೆ. ಮೊಟ್ಟಮೊದಲು ದತ್ತಿನಿಧಿಯನ್ನು ಮುಂಬೈನಲ್ಲಿ ಶ್ರೀ ಚಿದಂಬರ ದೀಕ್ಷಿತರ ಪ್ರಯತ್ನದಿಂದ ಮೈಸೂರು ಅಸೋಸಿಯೇಷನನ್ನು ಸ್ಥಾಪಿಸಿತು. ಇಂದು ಮುಂಬೈನಲ್ಲಿ 5 ದತ್ತಿ ನಿಧಿಗಳು ಸ್ಥಾಪಿತವಾಗಿವೆ. ಈ ವೇದಿಕೆಯಲ್ಲಿ ಕನ್ನಡದ ಹೆಸರಾಂತ ಸಾಹಿತಿಗಳನ್ನು

ಬರಮಾಡಿಕೊಂಡಿದ್ದೇವೆ. ರಂ. ಶ್ರೀ. ಮುಗಳಿ, ಶ್ರೀ. ಬೇಂದ್ರೆ, ಶ್ರೀ. ಶಿವರಾಮ ಕಾರಂತ, ಡಾ. ಶಿವರುದ್ರಪ್ಪ ಮುಂತಾದವರನ್ನು ಈ ವೇದಿಕೆ ಬರಮಾಡಿಕೊಂಡಿದೆ. ಇಂದು ಹಾ. ಮಾ. ನಾಯಕರಂತಹ ಕನ್ನಡದ ಹಿರಿಯ ಸಾಹಿತಿಗಳನ್ನು ಬರಮಾಡಿಕೊಂಡಿದ್ದೇವೆ. ಇಂದು ಕನ್ನದ ಪಾತಃಸ್ಮರಣೀಯರಾದ ಶ್ರೀ ತಳುಕಿನ ವೆಂಕಣ್ಣಯ್ಯನವರ ಬಗ್ಗೆ 'ಬದುಕು-ಬರಹ' ಎಂಬ ಶೀರ್ಷಿಕೆಯ ಮೇಲೆ 2 ದಿನ ಮಾತನಾಡುತ್ತಿದ್ದಾರೆ. ಎ. ಆರ್. ಕೃಷ್ಣಶಾಸ್ತ್ರಿಗಳು ಹಾಗೂ ವೆಂಕಣ್ಣಯ್ಯನವರು 'ಅಶ್ವಿನಿದೇವತೆಗಳು' ಎಂದು ಗುರುತಿಸಲ್ಪಟ್ಟಿರುವವರು. ಟಿ. ಎಸ್. ವೆಂಕಣ್ಣಯ್ಯ ಬಹಳ ಎತ್ತರದ ಮನುಷ್ಯರು. ಅವರು ವೀಸೀಯವರ ಮನೆಗೆ ಬಂದಾಗ, ಬಹಳ ಕುಳ್ಳಗಿದ್ದ ಬಾಗಿಲನ್ನು ದಾಟಲು ಬಹಳ ತಲೆ ತಗ್ಗಿಸಬೇಕಿತ್ತಂತೆ. ವೀ.ಸೀ.ಯವರಿಗೆ ಇಂತಹ ಭವ್ಯ ವ್ಯಕ್ತಿತ್ವದ ವ್ಯಕ್ತಿ ತಲೆ ತಗ್ಗಿಸಿ ಬರುವುದು ಸರಿಬೀಳದೆ ತಮ್ಮ ಮನೆಯ ಬಾಗಿಲನೇ ಬದಲಾಯಿಸಿ ಎತ್ತರದ ಬಾಗಿಲು ಮಾಡಿಸಿದರಂತೆ. ಇಂತಹ ವ್ಯಕ್ತಿಯನ್ನು ಕುರಿತು ಮಾತನಾಡಲಿದ್ದಾರೆ ಹಾ. ಮ. ನ. ಮುಂಬೈ ಕನ್ನಡ ವಿಭಾಗಕ್ಕೆ ಶ್ರೀರಕ್ಷೆಯಂತಿದ್ದಾರೆ. ವಿಮರ್ಶಕರೂ, ಲೇಖಕರೂ ಹಾಗೂ ಅಂಕಣ ಬರಹಗಾರರು. ತಮ್ಮ ಅಂಕಣ ಬರಹದ ಮೂಲಕ ಭಾರತೀಯ ಕ್ಷೇತ್ರದಲ್ಲಿ ಏನಾಗುತ್ತಿದೆ, ಏನಾಗಿದೆ ಎಂಬುದನ್ನು ತಿಳಿಸುವವರು ಹಾಗೂ ಅಂಕಣದ ಸಾರ್ವಭೌಮರೆನಿಸಿರುವವರು. ಮೈಸೂರು ವಿಶ್ವವಿದ್ಯನಿಲಯದಲ್ಲಿ ಬಿ.ಎ. ಪದವೀಧರರಾಗಿ, ಕಲ್ಕತ್ತಾ ವಿಶ್ವವಿದ್ಯಾನಿಲಯದಿಂದ ಎಂ.ಎ ಮಾಡಿ ಅಮೆರಿಕೆಯ ಇಂಡಿಯಾನಾದಿಂದ ಪಿ.ಎಚ್.ಡಿ. ಪದವಿ ಪಡೆದು ವಿಶ್ವದ ಯಾವ ಭಾಗವೂ ಯಾವ ದೇಶವೂ ತಮಗೆ ಹೊರತಲ್ಲಾ ಎಂದು ತೋರಿಸಿಕೊಟ್ಟಿರುವವರು ಎಂದು ಹಾ.ಮ.ನಾ. ರವರ ವ್ಯಕ್ತಿ ಪರಿಚಯ ಮಾಡಿಕೊಟ್ಟರು.


'ತಳುಕಿನ ವೆಂಕಣ್ಣಯ್ಯನವರ ಬದುಕು-ಬರಹ'ದ ಬಗ್ಗೆ ಹಾ. ಮ. ನಾ. ರವರು ಮಾತನಾಡುತ್ತಾ ಕಳೆದ ವರ್ಷದ ತೊಂದರೆಗಳು ಈಗಲೂ ಇದೆ. ಮುಂಬೈನ ನನ್ನ ಅಭಿಮಾನಿಗಳು ಕಳೆದ ವರ್ಷದಿಂದ ನನ್ನನ್ನು ಕರೆಯುತ್ತಿದ್ದರಿಂದ ನಾನು ಇಲ್ಲವೆನ್ನಲಾರದೆ, ಮುಂಬೈ ಕನ್ನಡಿಗರ ಸ್ನೇಹ ನನಗೆ ತುಂಬಾ ಸಂತೋಷದಾಯಕವಾದದ್ದು ಜೊತೆಗೆ ಪ್ರಾತಃಸ್ಮರಣೀಯರಾದ ಟಿ. ಎಸ್. ವೆಂಕಣ್ಣಯ್ಯನವರಿಗೆ ನಾನು ಸಲ್ಲಿಸಬಹುದಾಗ ಒಂದು ಗೌರವ ಇದೆಂದು ಭಾವಿಸಿ ಬಂದೆ. ಅವರು ನಮ್ಮನ್ನಗಲಿ ವರ್ಷಗಳೇ ಕಳೆದುಹೋಗಿದೆ. ನಾನು ಅವರನ್ನು ನೋಡಿಲ್ಲ. ಅವರು ಏನು ಬರೆದಿದ್ದಾರೆ? ಎಂಬ ಪ್ರಶ್ನೆಗೆ ಏನೂ ಬರೆದಿಲ್ಲಾ ಎಂದೇ ಹೇಳಬೇಕು. ಆದರೆ ಅವರು ಕೃತಿಗಳನ್ನು ರಚಿಸಲಿಲ್ಲ. ಆದರೆ 'ಆಕೃತಿಗಳನ್ನು ಕೆತ್ತಿದರು'. ಅವರ ನಿಧನಾ ನಂತರ ವರ್ಷಗಳಾದ ಮೇಲೆ ಅವರ ಲೇಖನದ ಒಂದು ಪುಸ್ತಕ ತರಲಾಯಿತು. ಅದು ಅವರ ಉಪೋದ್ಘಾತ ಇದೇ 'ಕನ್ನಡ ಸಾಹಿತ್ಯ ಮತ್ತು ಇತರ ಪ್ರಬಂಧಗಳು'. ಈ ಪ್ರಬಂಧಗಳಲ್ಲಿ ಅವರ ಅಪಾರವಾದ ಸಾಹಿತ್ಯಶಕ್ತಿ ಕೆನೆಗಟ್ಟಿ ನಿಂತಿದೆ. ಕನ್ನಡದ ಜನಪ್ರಿಯ ಕವಿ ಎಸ್. ನರಸಿಂಹಸ್ವಾಮಿಯವರು, ಟಿ.ಎಸ್. ವೆಂಕಣ್ಣಯ್ಯನವರನ್ನು ಕಲ್ಪವೃಕ್ಷಕ್ಕೆ ಹೋಲಿಸಿ ಬರೆದಿರುವ ಕವಿತೆಯನ್ನು ಉದಾಹರಿಸಿದರು. ವೆಂಕಣ್ಣಯ್ಯನವರ ವ್ಯಕ್ತಿತ್ವ ಎಂತಹದೆಂದು ಕವಿತೆ ಇಂದಿಗೂ ಸಾರುತ್ತಿದೆ ಎಂದು ಹೇಳುತ್ತಾ ವೆಂಕಣ್ಣಯ್ಯನವರ ಜೀವನದ ಅನೇಕ ಘಟನೆಗಳನ್ನು ತಿಳಿಸಿದರು.

ಅವರ ಎತ್ತರವನ್ನು ಕುರಿತಂತೆ ಕುಳ್ಳಗಿದ್ದ ಸಿದ್ದವ್ವನಹಳ್ಳಿ ಕೃಷ್ಣಶರ್ಮರ ಮಾತು. (ಸ್ವರ್ಗ ಮೇಲಿದೆ ಅಲ್ಲಿಯವರೆಗೂ ಬೆಳೆದು ನಿಂತಿದ್ದ ವೆಂಕಣ್ಣಯ್ಯನವರನ್ನು ಕುರಿತು)

ಸಿದ್ಧವನಹಳೀ: ಏನು ಸ್ವರ್ಗದಲ್ಲಿ ಎಲ್ಲರೂ ಸೌಖ್ಯವೋ?"

ವೆಂಕಣ್ಣಯ್ಯ: 'ಹುಂ ಎಲ್ಲರೂ ಸೌಖ್ಯ. ನನ್ನನ್ನು ಪಾತಾಳದಲ್ಲಿ (ಕುಳ್ಳರು) ಇರುವವರು ಹೇಗಿರುವರೆಂದು ನೋಡಿಬರಲು ಕಳಿಸಿದ್ದಾರೆ" ಎಂದು ಹಾಸ್ಯ ಚಟಾಕಿ ಹಾರಿಸುತಿದ್ದರು.

ತಳಕು ವೆಂಕಣ್ಣಯ್ಯನವರ ಸ್ಥಳವಲ್ಲ. ತಳುಕಿಗೆ ವೆಂಕಣ್ಣಯ್ಯನವರ ಅಜ್ಜಿ ಹನುಮಕ್ಕ ತಂದೆ ಸುಬ್ಬಣ್ಣ ಅತ್ತೆ ಅಚ್ಚಮ್ಮ ಮತ್ತು ಸುಬ್ಬಣ್ಣನವರ ತಮ್ಮ ಇವರುಗಳು ತಳುಕಿನ ದೇವಾಲಯವೊಂದರಲ್ಲಿ ರಾತ್ರಿ ಆಶ್ರಯ ಪಡೆದಿದ್ದರು.



ತಳುಕಿನ ಪಾಟೀಲ ಉಜ್ಜುಗಪ್ಪ ಅವರು ಯಾರೆಂದು ವಿಚಾರಿಸಿದಾಗ ಪರಶುರಾಮ ಪುರದಲ್ಲಿ ಶೇಕದಾರರಾಗಿದ್ದು ಜನೋಪಕಾರಿಗಳಾಗಿದ್ದ ವೆಂಕಣ್ಣಯ್ಯ (ಟಿ. ಎಸ್. ವೆಂಕಣ್ಣಯ್ಯನವರ ತಾತ) ತೀರಿ ಹೋದ್ದರಿಂದ ಅವರ ಕುಟುಂಬ ನಿರಾಶ್ರಿತರಾಗಿ ಬಂದಿರುವ ವಿಷಯ ತಿಳಿದು ಪಾಟೀಲ ಊರ ಸಭೆ ಸೇರಿಸಿ ಈ ಕುಟುಂಬಕ್ಕೆ ತಳುಕಿನಲ್ಲಿ ವಸತಿ ಕಲ್ಪಿಸಿದ. ಸುಬ್ಬಣ್ಣ 2 ರೂ. ಸಂಬಳಕ್ಕೆ ಶ್ಯಾನುಭೋಗರಲ್ಲಿ ಕೆಲಸ ಮಾಡಲಾರಂಭಿಸಿದರು. ಈ ಊರಿಗೆ ತಳುಕು ಎಂದು ಹೆಸರು ಬಂದದ್ದಕ್ಕೆ ಒಂದು ಐತಿಹ್ಯ. ಎರಡು ಹೋರಿಗಳು ತಮ್ಮ ಕೊಂಬುಗಳಿಗೆ ತಳುಕು ಹಾಕಿಕೊಂಡು ಹೋರಾಡಿದ್ದರಿಂದ ಈ ಊರಿಗೆ ತಳುಕು ಎಂದು ಹೆಸರಾಯ್ತಂತೆ. ಕಾಲಕ್ರಮದಲ್ಲಿ ಸುಬ್ಬಣ್ಣನವರಿಗೆ ವಿವಾಹವಾಗಿ 1-10-1881 ರಲ್ಲಿ ವೆಂಕಣ್ಣಯ್ಯನವರ ಜನನವಾಯ್ತು. ವೆಂಕಣ್ಣಯ್ಯ ಬಾಲ್ಯದಿಂದಲೇ ಪ್ರತಿಭಾನ್ವಿತರಾಗಿದ್ದರು. ಅವರು ಎಲ್.ಎಸ್. ಪರೀಕ್ಷೆಗೆ ಕಟ್ಟಿದ್ದಾಗಿನ ಒಂದು ಘಟನೆ, ಮಕ್ಕಳನ್ನೆಲ್ಲಾ ದೇವಸ್ಥಾನಕ್ಕೆ ಕರೆದೊಯ್ದರು. ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಲು ದೇವರು ಬುದ್ಧಿ ಕೊಡಲಿ ಎಂದು ಆದರೆ ವೆಂಕಣ್ಣಯ್ಯ ದೇವಸ್ಥಾನದಲ್ಲಿ ಕಾಣಲಿಲ್ಲ. ಹೊರಗೆ ಬಂದು ನೋಡಿದಾಗ ಹೊರಗೆ ಕೂತಿದ್ದ ವೆಂಕಣ್ಣಯ್ಯನನ್ನು ಕಂಡ ಉಪಾಧ್ಯಾಯರಿಗೆ ತುಂಬಾ ಸಿಟ್ಟುಬಂತು, ಎಂದೂ ಬಯ್ಯದ ಮೇಷ್ಟ್ರು "ಏನಿದು ಕಪಿ ಚೇಷ್ಟೆ ದೇವಾಲಯಕ್ಕೆ ಏಕೆ ಬರಲಿಲ್ಲ?" ಎಂದಾಗ ವೆಂಕಣ್ಣಯ್ಯ ಉತ್ತರಿಸಿದರು "ದೇವರಲ್ಲಿ ಯಾವುದನ್ನೂ ಬೇಡಬಾರದು" ದೇವರಿಗೆ ಹಣ್ಣುಕಾಯಿ ಮಾಡಿಸಿದವರೆಲ್ಲಾ ನಾಪಾಸಾದರು. ವೆಂಕಣ್ಣಯ್ಯ ಪಾಸಾದರು. ಈ ಗುಂಪಿನಲ್ಲಿ ಸದಾ ಓದುತ್ತಿದ್ದ ವೆಂಕಣ್ಣಯ್ಯನವರ ಭಾವನೂ ಒಬ್ಬರು ಇದನ್ನು ಕಂಡಿದ್ದ. ಇವರ ತಾಯಿ ಪ್ರಶ್ನಿಸಿದಾಗ ವೆಂಕಣ್ಣಯ್ಯ ಕೊಟ್ಟ ಉತ್ತರ "ಬರೀ ಓದಿದರೆ ಪ್ರಯೋಜನ ಇಲ್ಲಮ್ಮ ಸರಿಯಾಗಿ ಗ್ರಹಿಸಬೇಕು" ವೆಂಕಣ್ಣಯ್ಯ ಬಿ. ಎ. ಪಾಸು ಮಾಡಿದಾಗ ಇಡೀ ಊರಿಗೆ ಊರೇ ಹಬ್ಬ ಆಚರಿಸಿ ಸಂಭ್ರಮ ಪಟ್ಟರಂತೆ. ಮೊದಲ ವರ್ಷದ ಎಂ.ಎ. ಮುಗಿಸಿ ಮುಂಬೈಗೆ ಬಂದು ಅಂಚೆ ಕಛೇರಿಯಲ್ಲಿ ಕೆಲಸಕ್ಕೆ ಸೇರಿದರು. ಇವರೊಬ್ಬರೇ ಕನ್ನಡಿಗರು ಮಿಕ್ಕವರೆಲ್ಲಾ ಮರಾಠಿಗಳಾಗಿದ್ದು, ಇವರನ್ನು ಬಹಳ ಹೀನಾಯವಾಗಿ ಕಾಣುತ್ತಿದ್ದರು. ಇದನ್ನು ಸಹಿಸದ ವೆಂಕಣ್ಣಯ್ಯ ಅಂಚೆ ಕಛೇರಿ ಯಜಮಾನನೊಂದಿಗೆ ಜಗಳಾಡಿ ಮದ್ರಾಸಿಗೆ ಬಂದು ತಮ್ಮ ಎಂ.ಎ. ಪೂರ್ತಿಮಾಡಿದರು. ಬೊಂಬಾಯಿಯಲ್ಲಿದ್ದಾಗ ಮರಾಠಿ ಜನಗಳಿಂದ ಅನುಭವಿಸಿದ ಅವಮಾನ ಇವರಲ್ಲಿನ ಕನ್ನಡ ಅಭಿಮಾನವನ್ನು ಜಾಗೃತಗೊಳಿಸಿತು.

ವೆಂಕಣ್ಣಯ್ಯನವರು ಹಾಗೂ ಎ. ಆರ್. ಕೃಷ್ಣಶಾಸ್ತ್ರಿಗಳು. ಇಬ್ಬರನ್ನೂ ಜನ ಇವರ ಸ್ನೇಹಕ್ಕಾಗಿ ಅಶ್ವಿನಿದೇವತೆಗಳೆಂದು ಕರೆಯುತ್ತಿದ್ದರು. ಎ. ಆರ್. ಕೃಷ್ಣಶಾಸ್ತ್ರಿಗಳು ಪ್ರಾಚ್ಯ ಸಂಶೋಧಕರಾಗಿ ಕೆಲಸ ಮಾಡುತ್ತಿದ್ದರು.

ವೆಂಕಣ್ಣಯ್ಯನವರು ಪ್ರಬುದ್ಧ ಕರ್ನಾಟಕವನ್ನು ವಹಿಸಿಕೊಂಡಾಗ ವೆಂಕಣ್ಣಯ್ಯನವರ ಆಪ್ತರುಗಳು ಪ್ರಬುದ್ಧ ಕರ್ನಾಟಕಕ್ಕಾಗಿ ಕೆಲಸ ಮಾಡುತ್ತಿದ್ದ

ವೈಖರಿಯನ್ನು ಎ. ಆರ್. ಕೃಷ್ಣಶಾಸ್ತ್ರಿಗಳು. ಹೀಗೆ ಬರೆದಿದ್ದಾರೆ. ವೆಂಕಣ್ಣಯ್ಯ ಬೆಲ್ಲ, ಬೆಲ್ಲಕ್ಕೆ ಇರುವೆ ಗೊದ್ದ ಯಾವಾಗಲೂ ಮುತ್ತಿಯೇ ಇರುತ್ತವೆ. ಈ ಪಿಪೀಲಿಕಸೇನೆ ವೆಂಕಣ್ಣಯ್ಯನವರ ಸುತ್ತಾ ಕೆಲಸ ಮಾಡುತ್ತಿದ್ದ ರೀತಿಯೇ ಅಸಾಧ್ಯ. ಒಂದುಕಡೆ ಪತ್ರಿಕೆಗೆ ಕಾಗದ ಸುತ್ತುವ ಕೆಲಸ ಮತ್ತೊಂದು ಕಡೆ ಅವಕ್ಕೆ ವಿಳಾಸ ಬರೆಯುವ ಕೆಲಸ ಮತ್ತೊಂದು ಕಡೆ ಸ್ಟ್ಯಾಂಪ್ ಅಂಟಿಸುವ ಗದ್ದಲ ಹೀಗೆ ಕಾಗದ, ಸ್ಟ್ಯಾಂಪು, ಪೇಸ್ಟುಗಳೊಂದಿಗೆ ಪಿಪೀಲಕಗಳು ಕೆಲಸ ಮಾಡಿದ್ದೂ ಮಾಡಿದ್ದೇ! ಕನ್ನಡ ಸಾಹಿತ್ಯ ಪರಿಷತ್ತು 1915 ರಲ್ಲಿ ಸ್ಥಾಪಿತವಾಯ್ತು. ಪರಿಷತ್ತಿನ ಸ್ಥಾಪನೆಯಲ್ಲಿ ಮುಂಚೂಣಿಯಲ್ಲಿದ್ದ ವೆಂಕಣ್ಣಯ್ಯ ಎಂದೂ ಅಧ್ಯಕ್ಷರಾಗಲಿಲ್ಲ. ಯಾರಾದರೂ ಆ ಸಲಹೆ ಮಾಡಿದರೆ, ನನಗಿಂತ ದೊಡ್ಡವರಿದ್ದಾರೆ. ಅವರದೆಲ್ಲಾ ಆಗಲಿ ಎಂದು ವಿನಯದಿಂದ ಜಾರಿಕೊಳ್ಳುತ್ತಿದ್ದರು. ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರ ಹುದ್ದೆಗೆ ಟಿ. ಎಸ್. ವೆಂಕಣ್ಣಯ್ಯನವರು ಯೋಗ್ಯರೆಂದು ವಿಶ್ವವಿದ್ಯಾನಿಲಯ ಹಾಗೂ ಎಂ. ಎಸ್. ಸುಬ್ಬರಾಯರು ಅಭಿಪ್ರಾಯ ಪಟ್ಟಿದ್ದರೂ ವೆಂಕಣ್ಣಯ್ಯನವರು ಆ ಹುದ್ದೆಗೆ ಅರ್ಜಿ ಹಾಕದೆ ನಮ್ಮ ಕೃಷ್ಣ (ಎ. ಆರ್. ಕೃಷ್ಣ ಶಾಸ್ತ್ರಿಗಳು) ಆ ಜಾಗಕ್ಕೆ ಹೆಚ್ಚು ಯೋಗ್ಯ ಅವನೇ ಹಾಕಲಿ ಎಂದು ಸುಮ್ಮನಿದ್ದರು. ಕೊನೆಯ ತಾರೀಖು ಬಂದರೂ ವೆಂಕಣ್ಣಯ್ಯ ಅರ್ಜಿಹಾಕಲಿಲ್ಲ. ಆಗ ಪ್ರಿನ್ಸಿಪಾಲ್ರಾಗಿದ್ದ ಶ್ರೀ ಷಿಟ್‌ಕಾಫ್‌ರವರು ವೆಂಕಣ್ಣಯ್ಯನವರನ್ನು ಕರೆಕಳಿಸಿ ಅವರಿಂದ ಅರ್ಜಿಗಳನ್ನು ತೆಗೆದುಕೊಂಡು ಅವರಿಗೆ ಆ ಹುದ್ದೆ ಕೊಟ್ಟರು. ಈ ಹುದ್ದೆಯನ್ನಲಂಕರಿಸಿದ ಮೇಲೆ ಹುಟ್ಟಿದ ಮೊದಲ ಸಂಘ 'ಯೂನಿವರ್ಸಿಟಿ ಟೀಚರ್ ಅಸೋಸಿಯೇಷನ್' ಅದರ ಪ್ರಥಮ ಅಧ್ಯಕ್ಷರು ವೆಂಕಣ್ಣಯ್ಯನವರು. ಎ. ಎನ್. ಮೂರ್ತಿರಾಯರ ಶಬ್ದದಲ್ಲಿ ಹೇಳಬೇಕೆಂದರೆ ನಮ್ಮೆಲ್ಲರ ಕಾಮನ್ ರೂಮ್ ವಶಪಡಿಸಿಕೊಂಡರು. ಇಲ್ಲಿ ಕೆಲಸ ಮಾಡುತ್ತಾ ಹರಿಶ್ಚಂದ್ರ ಕಾವ್ಯ ಸಂಪಾದಿಸಿ ಪರಿಷ್ಕರಿಸಿ ಬೆಳಕಿಗೆ ತಂದರು. ಮೂಲಕೃತಿಗಳನ್ನು ಪರಿಷ್ಕರಿಸಿದ ಕೀರ್ತಿ ಇವರದೇ. ತಾವು ಹಿಂದೆ ನಿಂತು ಪ್ರೇರೇಪಿಸಿ ಅನೇಕರಿಂದ ಉತ್ತಮ ಕೆಲಸಗಳನ್ನು ಮಾಡಿಸಿದ್ದಾರೆ.

ಇವರ ಪಟ್ಟ ಶಿಷ್ಯರಾದ ಕೆ. ವಿ. ಪುಟ್ಟಪ್ಪನವರ ಶಬ್ದಗಳಲ್ಲೇ ಹೇಳಬೇಕೆಂದರೆ "ನಾನು ವೆಂಕಣ್ಣಯ್ಯನವರ ವ್ಯಕ್ತಿತ್ವದಿಂದ ಆಕರ್ಷಿತವಾದಂತೆ ಮತ್ಯಾರಿಂದಲೂ ಆಕರ್ಷಿತನಾಗಲಿಲ್ಲ. ಅವರ ವ್ಯಕ್ತಿತ್ವವೆ ಅಂತಹುದು, ಅವರ ಭಂಗಿಯೇ ಅಂತಹುದು, ಅವರ ವ್ಯಕ್ತಿತ್ವ ಸೂರ್ಯನ ಬೆಳಕಿನಂತೆ ಪ್ರಖರವಾದದ್ದಲ್ಲ, ಚಂದ್ರಕಾಂತಿಯಂತೆ ಆಹ್ಲಾದವೂ ಆಕರ್ಷಣೀಯವೂ ಆದದ್ದು. ಅವರು ರೋಗಿಷ್ಟ ರೆಂಬೆಗಳನ್ನು ಕಡಿದು ಕಿತ್ತುಹಾಕಿ ಆರೋಗ್ಯಕರ ರೆಂಬೆಗಳನ್ನು ಬೆಳೆಸಿದರು."

ಒಮ್ಮೆ ಯೋಜನ ಸಮ್ಮೇಳನದಲ್ಲಿ ಕು.ವೆಂ.ಪು. ಮಾಡಿದ ಭಾಷಣಕ್ಕೆ ಆಕ್ಷೇಪಣೆಗಳೆದ್ದು ಇದರ ವಿಚಾರಣೆಗೆ ವೆಂಕಣ್ಣಯ್ಯವನವರನ್ನು ವಿಚಾರಣಾ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಯ್ತು. ಆಗ ವೆಂಕಣ್ಣಯ್ಯನವರು ಹೇಳಿದ ಮಾತು "ನನ್ನ ಮಗನಿಗೆ ಬುದ್ಧಿ ಹೇಳಬೇಕೆಂದರೆ ಇದಕ್ಕಿಂತ ಹೆಚ್ಚಿಗೆ ಏನನ್ನೂ ಹೇಳಲಾರೆ".

ಎಸ್. ವಿ. ರಂಗಣ್ಣನವರನ್ನು ಕುಮಾರವ್ಯಾಸ ಭಾರತದ ಕಡೆಗೆ ತಿರುಗಿಸಿದ ಕೀರ್ತಿ ಹಾಗೂ ಎಂ. ವಿ. ಸೀತಾರಾಮಯ್ಯನವರ ಕಲಾಭ್ಯಾಸಕ್ಕೆ ಸಹಾಯ ಮಾಡಿದ ಕೀರ್ತಿ ವೆಂಕಣ್ಣಯ್ಯನವರದ್ದು. ಒಮ್ಮೆ ಎ. ಎಸ್. ಮೂರ್ತಿರಾಯರು ಯಾವುದೋ ತೊಂದರೆಗೆ ಸಿಕ್ಕಿ ತೊಳಲಾಡುತ್ತಾ ಕುಕ್ಕನಹಳ್ಳಿ ಕೆರೆದಂಡೆಯಲ್ಲಿ ಕುಳಿತಿದ್ದಾಗ ವೆಂಕಣ್ಣಯ್ಯನವರು ಹೇಳಿದ ಮಾತು. "ದೇವರೇನು ನಮ್ಮನ್ನು ಸದಾ ಸುಖವಾಗಿಡುವೆನೆಂದು ಬಾಂಡು ಬರೆದು ಕೊಟ್ಟೀದಾನೆಯೇ? ಏಳಿ ಏನು ಬಂದರೂ ಎದುರಿಸಬೇಕು" ಎಂದು ಅವರಿಗೆ ವಾಸ್ತವದ ಅರಿವು ಮೂಡಿಸಿದರಂತೆ. ಬಿ. ಎಂ. ಶ್ರೀಯವರ ಹೆಸರಿನ ಸ್ಕಾಲರ್‌ಶಿಪ್ ತಮ್ಮ ಶ್ಯಾಮರಾಯರಿಗೆ ಬಂದಾಗ ಅದನ್ನು ಹಿಂತಿರುಗಿಸಿ ತಮ್ಮ ಕೇಳಿದಾಗ ತಮ್ಮನಿಗೆ ಕೊಟ್ಟ ಉತ್ತರ. ನನ್ನಂತಹ ಅಣ್ಣನಿರುವಾಗ ಆ ನೂರು ರೂಪಾಯಿನ ಸ್ಕಾಲರ್‌ಶಿಪ್‌ನಿಂದ ಏನಾಗಬೇಕಾಗಿದೆ? ಅದು ಯಾರಾದರೂ ಬಡವರಿಗೆ ಸಿಕ್ಕಲಿ' ಎಂದು ತಮ್ಮನಿಗೆ ಸಮಾಧಾನ ಹೇಳಿದರಂತೆ. ಒಮ್ಮೆ ಮನೆಗೆ ಸಾಮಾನು ತರುವ ಕಿರಾಣಿ ಅಂಗಡಿಯಲ್ಲಿ ಸಾಲ ಏರಿ ರೂ. ಮುಟ್ಟಿದಾಗ ಬ್ಯಾಂಕಿನಲ್ಲಿ ರೂ. ಸಾಲ ಮಾಡಿದರು. ಇವರ ವರ್ಚಸ್ಸಿನಿಂದ ಸಾಲ ಜಾಗ್ರತೆ ಮಂಜೂರಾಯ್ತು. ಆ ಹಣ ಮನೆಗೆ ತಂದ ದಿನವೇ ಪರಿಚಯಸ್ಥರೊಬ್ಬರು ಬಂದು ಬಹಳ ಸಂಕೋಚದಿಂದ 'ತಾಯಿ ತೀರಿ ಹೋದರು ದಿನಾ ಕಾಲವಾಗಬೇಕಿದೆ ಹಣದ ಅಡಚಣೆ ಎಂದರಂತೆ' ಎಷ್ಟು ಹಣ ಬೇಕು? ಎಂದು ಕೇಳಿದರು ವೆಂಕಣ್ಣಯ್ಯ 'ಸುಮಾರು ಇನ್ನೂರೈವತ್ತು ಬೇಕಾಗುತ್ತದೆ. ಮತ್ತೆಲ್ಲಾದರೂ ಪ್ರಯತ್ನಿಸುವೆ' ಎಂದಾಗ ತಾವು ಬ್ಯಾಂಕಿನಿಂದ ತಂದಿದ್ದ ರೂಪಾಯಿ ಕೈಯಲ್ಲಿಟ್ಟು "ಸಧ್ಯಕ್ಕೆ ನನ್ನಲ್ಲಿ ಇಷ್ಟಿದೆ. ಇದರಲ್ಲಿ ಕೆಲಸ ನಡೆದರೆ ಸಂತೋಷ' ವೆಂದು ಹೇಳಿ ಕಳಿಸಿದ ಧಾರಾಳಿಗಳು.

ಒಮ್ಮೆ ಖಾದೀ ಅಂಗಡಿಯಲ್ಲಿ ರುಮಾಲು (ಪೇಟ) ಕೊಳ್ಳಲು ಹೋದಾಗ "ಖಾದೀ ಅಂಗಡಿಯಲ್ಲಿ ಗೋರೂರು ರಾಮಸ್ವಾಮಿ ಅಯ್ಯಂಗಾರರು ಕೆಲಸ ಮಾಡುತ್ತಿದ್ದರು. ಅವರೊಂದಿಗೆ ವೆಂಕಣ್ಣಯ್ಯ, ಅಲ್ಲ. ರುಮಾಲಿಗೆ ಉದ್ದಕ್ಕೂ ಜರಿ ಇಟ್ಟು ಬೆಲೆ ಬಹಳ ಇಟ್ಟಿದ್ದೀರಿ. ಮುಂದೆ ಮಾತ್ರ ಜರಿ ಕಾಣುತ್ತದೆ. ಮಿಕ್ಕಿದ್ದೆಲ್ಲಾ ಮುಚ್ಚಿ ಹೋಗುತ್ತದೆ. ಮುಂದೆ ಕಾಣುವಷ್ಟು ಮಾತ್ರ, ಜರಿ ಇಟ್ಟು ಮಿಕ್ಕ ಭಾಗದ ಜರಿ ಕಡಿಮೆ ಮಾಡಿ ಬೆಲೆಯನ್ನೂ ಏಕೆ ಇಳಿಸಬಾರದು"? ಎಂದು ಸಲಹೆ ಕೊಟ್ಟರು.

ಗೋರೂರು ನಿಮ್ಮ ಸಲಹೆ ನಮ್ಮ ಶ್ಯಾನುಭೋಗರ ಲೆಕ್ಕದ ರೀತಿ ಇದೆ. ವೆಂಕಣ್ಣಯ್ಯ "ನೀವು ಬರೀ ಮಾರಿದ್ದೀರಿ ರುಮಾಲುಗಳನ್ನು ನನ್ನಂತೆ ಕೊಂಡಿದ್ದರೆ ನಿಮಗೂ ಗೊತ್ತಾಗುತ್ತಿತ್ತು". ಒಮ್ಮೆ ವೆಂಕಣ್ಣಯ್ಯನವರು ತರಗತಿಯಲ್ಲಿ ತಮ್ಮ ಮೆಲುವಾದ, ಸಮ್ಮೋಹನವಾದ ದನಿಯಲ್ಲಿ ಕಾವ್ಯ ಓದುತ್ತಿದ್ದಾರೆ. ನಿಃಶಬ್ದದಿಂದ ವಿದ್ಯಾರ್ಥಿಗಳು ಕೇಳುತ್ತಿದ್ದಾರೆ. ಆಗ ಒಬ್ಬ ವಿದ್ಯಾರ್ಥಿ ಎದ್ದು ನಿಂತು "ಸ್ವಲ್ಪ ಗಟ್ಟಿಯಾಗಿ ಓದಿ ಕೇಳುವುದಿಲ್ಲಾ" ಎಂದ. ವ್ಯತ್ಯಯವಾಯ್ತು ತಲೆ ಎತ್ತಿ ನೋಡಿದರು. ಸಿಟ್ಟಿಲ್ಲ, ಸಿಡುಕಿಲ್ಲ, ಬೇಸರವಂತೂ ಇಲ್ಲವೇ ಇಲ್ಲ. ಗಂಭೀರ ಮೆಲುದನಿಯಲ್ಲಿ ಬಂತು ಉತ್ತರ "ನಾನು ಸಾವಿರಾರು ಜನರಿರುವ ಸಭೆಯಲ್ಲಿ ಕೂಡ ಇದೇ ದನಿಯಲ್ಲಿ ಮಾತನಾಡುತ್ತೇನೆ. ಕೇಳುವ ಅಭಿಲಾಷೆ ಇದ್ದಲ್ಲಿ ಕೇಳುತ್ತದೆ" ಎಂದು ಪಾಠ ಅದೇ ದನಿಯಲ್ಲಿ ಮುಂದುವರಿಯಿತು. ಗುಲ್ಬರ್ಗಾದ ಸಾಹಿತ್ಯ ಸಮ್ಮೇಳನದ ಸಂದರ್ಭ; ಡಿ.ಎಲ್.ನರಸಿಂಹಾಚಾರ್, ವೆಂಕಣ್ಣಯ್ಯ, ಕುವೆಂಪು ಎಲ್ಲರೂ ಇದ್ದರು. ಕುವೆಂಪುರವರ ನಶ್ಯ ತೀರಿ ಹೋಗಿ ಪಜೀತಿಯಾಗಿದೆ. ವೆಂಕಣ್ಣಯ್ಯನವರಲ್ಲಿ ಕೇಳಲಾರರು, ಬಿಡಲಾರರು. ಆದರೆ ಕೇಳದೆ ವಿಧಿಯಿಲ್ಲ. ಕೇಳಿದವರು "ನನ್ನ ಟ್ರಂಕಿನಲ್ಲಿ ತುಂಬಿಕೊಳ್ಳಿ ಎಂದರು" ವೆಂಕಣ್ಣಯ್ಯ ನೋಡಿದ ಒಂದು ದೊಡ್ಡ ಟನ್ನಿನ ಡಬ್ಬಿ ತುಂಬಾ ಇದೆ. ಕುವೆಂಪು ತಮ್ಮ ಡಬ್ಬಿಗೆ ತುರುಕಿ, ತುರಿಕಿಕೊಂಡು ಕೈಯಲ್ಲಿ ಒಂದು ದೊಡ್ಡ ಚಿಟಕಿ ಹಿಡುಕೊಂಡೇ ಹೊರಟಿದ್ದು.

ಡಿ.ವಿ.ಜಿ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಸನ್ನಿವೇಶ ವೆಂಕಣ್ಣಯ್ಯನವರು ಎ. ಆರ್. ಕೃಷ್ಣಶಾಸ್ತ್ರಿಗಳು ಎಲ್ಲರೂ ಇದ್ದಾರೆ. ಯಾವುದೋ ಗಹನ ಚರ್ಚೆ ನಡೆದಿದೆ. ಬಗೆ ಹರಿಯುತ್ತಿಲ್ಲ. ನಾಳೆ ನೋಡೋಣ ಎಂದು ಏಳಬೇಕು. ಅಷ್ಟರಲ್ಲಿ ಒಳಗಿಂದ ಬೆಲ್ಲದ ದೋಸೆ, ಸೀಕರಣೆ, ಬೇಲದ ಹಣ್ಣಿನ ಪಾನಕ ಬಂತು. ಡಿ.ವಿ.ಜಿ ಹೇಳಿದರು "ಒಂದು ಚೂರು ದೋಸೆ ಮುರಿಯಿರಿ, ಸೀಕರಣೆಯನ್ನು ಕೊಂಚ ಸೇರಿಸಿಕೊಂಡು ಬಾಯಿಗಿಟ್ಟು ಮೇಲೆ ಬೇಲದ ಹಣ್ಣಿನ ಪಾನಕ ಗುಟುಕರಿಸುತ್ತಾ ಸಾಗಿ, ಆಗ ಸಮಸ್ಯೆಗೆ ಪರಿಹಾರ ದೊರೆಯುತ್ತದೆ". ಮುಂದೆ ಡಿ.ವಿ.ಜಿ. ಹೇಳಿದಂತೆಯೇ ಆಯ್ತು. ಡಿ.ವಿ.ಜಿ. ಯಾವಾಗಲೂ ತಿಂಡಿಗಳ ಬಗ್ಗೆ ಮಾತನಾಡುವುದು ಸಲಹೆ ಕೊಡುವುದು ಜಾಸ್ತಿ. ಕನ್ನಡ ಸಾಹಿತ್ಯ ಪರಿಷತ್ತಿನ ಮೀಟಿಂಗುಗಳು ಸೇರುತ್ತಿದ್ದಾಗ ಮಾಡುತ್ತಿದ್ದ ತಿಂಡಿಗಳಿಗೆ ಡಿ.ವಿ.ಜಿ.ಯವರ ಸಲಹೆ ಸದಾ ಇರುತ್ತಿತ್ತು. ಹಸಿ ಅವರೆಕಾಯಿ ಕಾಲದಲ್ಲಿ

ಸೊಗಸಾದ ಅವರೆ ಕಾಳು ಹಾಕಿ ಮಾಡಿದ ಉಪ್ಪಿಟ್ಟಿಗೆ ಮಧ್ಯೆ ಮಧ್ಯೆ ಒಂದೊಂದು ಮೆಣಸಿನಕಾಳು ಸಿಕ್ಕುತ್ತಿದ್ದರೆ, ಪಿಡಿಚೆ ಮಾಡಿದ್ದರೆ ಬಹಳ ಸೊಗಸು. ಆಂಬೊಡೆಗೆ ಮಧ್ಯೆ ಮಧ್ಯೆ ಒಂದೊಂದು ಚೂರು ಹಸಿ ಶುಂಠಿ ಸಿಕ್ಕುತ್ತಿದ್ದರೆ ಚೆನ್ನ ಹೀಗೆ ಸಾಗುತ್ತಿತ್ತು ಅವರ ಸಲಹೆಗಳು.

ವೆಂಕಣ್ಣಯ್ಯ ಬಹಳ ಉದ್ದದ ಮನುಷ್ಯರಾಗಿದ್ದರಿಂದ ಕಾಲು ಮಡಿಸಿ ಕೂಡಲು ಸಾಧ್ಯವಿಲ್ಲದೆ ಅವರೆಂದೂ ಮುಂದಿನ ಸಾಲಿನಲ್ಲಿ ಕೂರುತ್ತಿರಲಿಲ್ಲ. ಒಮ್ಮೆ ಮುಂದಿನ ಸಾಲಿನಲ್ಲಿ ಕುಳಿತಿದ್ದ ಹುಡುಗ ವೆಂಕಣ್ಣಯ್ಯ ತನಗೆ ಕಾಲು ತಾಗಿಸಿದರೆಂದು ದೂರಿದಾಗ ಕ್ಲಾಸು ತೆಗೆದುಕೊಂಡಿದ್ದ ಪ್ರಿನ್ಸಿಪಾಲ ಗ್ರೇವಿಯರ್‌ಗೆ ಅಸಾಧ್ಯ ನಗು ಬಂತಂತೆ. ಇವರನ್ನು ಜೇಡನ ಕಾಲಿನ ಮನುಷ್ಯನೆಂದು ಹಾಸ್ಯ ಮಾಡಿ ನಕ್ಕನಂತೆ.

ತಮ್ಮ ಅಭಿಮಾನಿಗಳು ಮತ್ತು ಸ್ನೇಹಿತರಿಂದಲೂ ತಮ್ಮ ಉದ್ದ ಕಾಲಿನ ಬಗ್ಗೆ ಮಾತು ಕೇಳುತ್ತಿದ್ದರು. ವೆಂಕಣ್ಣಯ್ಯ ಹಾಳು ಮನುಷ್ಯ ನಮ್ಮೆಲ್ಲರಿಗೂ ಪೀಡೆಯಾಗಿ ಇಷ್ಟುದ್ದವಾಗಿದ್ದಾನೆ ಎನ್ನುತ್ತಿದ್ದರು ಅಭಿಮಾನಿಗಳು. ವೆಂಕಣ್ಣಯ್ಯನವರ ತಮ್ಮ ಶ್ಯಾಮರಾವ್ ಪರೀಕ್ಷೆಗೆ ಕುಳಿತಿದ್ದಾರೆ. ಅವರ ಉತ್ತರ ಪತ್ರಿಕೆಯನ್ನು ಪ್ರಾಧ್ಯಾಪಕರಾಗಿ ವೆಂಕಣ್ಣಯ್ಯ ಪರೀಕ್ಷಿಸಬೇಕಾಗಿದೆ. ವೆಂಕಣ್ಣಯ್ಯ ಉತ್ತರಪತ್ರಿಕೆ ಪರಿಶೀಲಿಸಿದರು. ನಂಬರು ಹಾಕಲಿಲ್ಲ. ಅದನ್ನು ಬೇರೊಂದೆಡೆ ಗುರುತು ಮಾಡಿಟ್ಟುಕೊಂಡು ಬೇರೆ ಅಧ್ಯಾಪಕರಲ್ಲಿಗೆ ಇದನ್ನು ಕಳಿಸಿಕೊಟ್ಟು, ಅವರಿಂದ ಪರಿಶೀಲಿಸಿ ನಂಬರನ್ನೂ ಹಾಕಿಸಿ ಪೇಪರಿನ ಮೇಲೆ ಅವರ ಸಹಿಯನ್ನೂ ಪಡೆದರು. ತಮ್ಮನೆಂದು ಜಾಸ್ತಿ ನಂಬರು ಕೊಟ್ಟರೇ!? ಇಲ್ಲ ಕೊಟ್ಟನೆಂದು ಜನ ತಿಳಿದರೆ?" ಎಂಬ ಭಾವನೆ ನಾವು ಪ್ರಾಮಾಣಿಕರಾಗಿದ್ದರೆ ಸಾಲದು, ನಾವು ಪ್ರಾಮಾಣಿಕರೆಂದು, ಇನ್ನೊಬ್ಬರಿಗೂ ತಿಳಿಯಬೇಕು ಇದು ಅವರ ಅಭಿಪ್ರಾಯ.

ಶ್ಯಾಮರಾವ್ ಒಮ್ಮೆ "ನೀವೇಕೆ ಬರೆಯಬಾರದು? ಶ್ರೀ ಕೃಷ್ಣನನ್ನು ಕುರಿತು ಬರೆಯಿರಿ" ಎಂದಾಗ ವೇದ ದೃಷ್ಟಾರರಾದ ನಮ್ಮ ಮಹರ್ಷಿಗಳೇ ತಾವ್ಯಾರೆಂದು ಹೇಳಿಕೊಂಡಿಲ್ಲ. ನಾನ್ಯಾವ ದೊಡ್ಡ ಮನುಷ್ಯ? ಅಬ್ಬಾ! ಎಂದರೆ ನಾನು ಬರೆದದ್ದನ್ನು ವರ್ಷ ಜನ ಜ್ಞಾಪಿಸಿಕೊಂಡಾರು ನಂತರ ಯಾರು ಕೇಳಬೇಕು? ಇದವರ ವಿನೀತ ಭಾವ. ಕುವೆಂಪುರವರ ಮಾತಿನಲ್ಲಿ ಹೇಳಬೇಕೆಂದರೆ ಅವರು ಬರೆಯಲಿಲ್ಲ. ನನ್ನಂಥ ಸೃಷ್ಟಿಕರ್ತರನ್ನು ಸೃಷ್ಟಿಸಿದರು. ಕುವೆಂಪು, ಪು.ತಿ.ನ, ಡಿ. ಎಲ್. ನರಸಿಂಹಾಚಾರ್, ಪರಮೇಶ್ವರ ಭಟ್ಟ, ವೆಂಕಟಸುಬ್ಬಯ್ಯನವರಂತಹ ಲೇಖಕರ ಹಿಂಡನ್ನೇ ಸೃಷ್ಟಿಸಿದರು.

ಕುವೆಂಪುರವರ ಒಂದು ಕೃತಿಯನ್ನು ಓದಿದವರೊಬ್ಬರು ವೆಂಕಣ್ಣಯ್ಯನವರ ತಮ್ಮ ಶ್ಯಾಮರಾಯರಲ್ಲಿ, ಪುಟ್ಟಪ್ಪನವರು ಸ್ಮಾರ್ತರೋ ವೈಷ್ಣವರೋ" ಎಂದಾಗ ಶ್ಯಾ:–"ಪುಟ್ಟಪ್ಪನವರು ಒಕ್ಕಲಿಗರು" ಎಂದರಂತೆ. ಅಲ್ಲೇ ಇದ್ದ ವೆಂಕಣ್ಣಯ್ಯನವರು "ಪುಟ್ಟಪ್ಪ ಆಣೆ ಬ್ರಾಹ್ಮಣರು, ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಹೇಳಿಲ್ಲವೆ?" "ಚಾತುರ್ವರ್ಣಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ" ಎಂದರಂತೆ ವಿಶಾಲ ಮನೋಭಾವದ ವೆಂಕಣ್ಣಯ್ಯ. ಅವರು ಬಸವರಾಜ ದೇವರ ರಗಳೆಯನ್ನು ಶೋಧಿಸಿ ಪ್ರಕಾಶಕ್ಕೆ ತಂದಾಗ ಅವರ ಪರಿಚಯದವರೊಬ್ಬರು "ಬಸವಣ್ಣನನ್ನು ಏಕೆ ತಲೆ ಮೇಲೆ ಹೊತ್ತು ಕುಣಿಸುತ್ತೀರಿ? ಅದರ ಬದಲು ರಾಮಾಯಣವನ್ನೋ ಮಹಾ ಭಾರತವನ್ನೋ ತರಬಾರದೇ?" ಎಂದಾಗ ವೆಂಕಣ್ಣಯ್ಯ "ಗುಣಕ್ಕೆ ಮತ್ಸರವೇ"? ಎಂದರಂತೆ. ಕುವೆಂಪು, ಟಾಲ್‌ಸ್ಟಾಯ್, ಹಾರ್ಡಿ, ರೋಮೆರೋಲ ಮುಂತಾದವರ ಕೃತಿಗಳನ್ನು ಓದಿ ಸ್ಫೂರ್ತಿ ಪಡೆದು ವೆಂಕಣ್ಣಯ್ಯನವರನ್ನು "ಉತ್ತರನ ಸಾಹಸ ಕಥನ, ಕಾರಣ, ವರ್ಣನ ಮೂರು ಇದೆ. ಒಂದು ಕಾದಂಬರಿ ಬರೆದು ಬಿಡಿ" ಎಂದು ಪ್ರಾರ್ಥಿಸಿದಾಗ ಅವರಿಂದಲೇ ಎರಡು ಬೃಹತ್ ಕಾದಂಬರಿಗಳನ್ನು ಬರೆಯಿಸಿದರಂತೆ. ಅವರು ಬಳ್ಳಾರಿ ಸಾಹಿತ್ಯ ಸಮ್ಮೇಳನದಲ್ಲಿ ಭಾವಹಿಸಿದ್ದೇ ಕೊನೆಯಾಯ್ತು. ತಾ.24.02.1939 ರಂದು ಕಲ್ಪವೃಕ್ಷದಂತಹ ಪರೋಪಕಾರಿ ಉನ್ನತ ವ್ಯಕ್ತಿತ್ವದ ವೆಂಕಣ್ಣಯ್ಯನವರು ಇನ್ನಿಲ್ಲವಾದರು. ಅಂದು ರಾತ್ರಿ 10–30 ರ ಸಮಯ ಕುವೆಂಪು ಒಂಟಿಕೊಪ್ಪಲಿನ ತಮ್ಮ ಕೊಠಡಿಯಲ್ಲಿ ಬರೆಯುತ್ತಾ ಕುಳಿತಿದ್ದರು. ತಮ್ಮ ಪ್ರಿಯ ಶಿಷ್ಯನಿಗೆ ತಾವು ಹೋದದ್ದು ಸೂಚಿಸಿದರಂತೆ. ಎರಡು ಬಾರಿ ಬಾಗಿಲು ತಟ್ಟಿದ ಸದ್ದುಕೇಳಿ ಹೊರಬಂದ ಕುವೆಂಪು ಯಾರನ್ನೂ ಕಾಣಲಿಲ್ಲ. ಮಾರನೇ ದಿನ ತಮ್ಮ ಗುರುಗಳ ನಿಧನವಾರ್ತೆ ಕೇಳಿದರು.

ವೆಂಕಣ್ಣಯ್ಯನವರು ತಂದ ಕೃತಿಗಳು:

ಬಂಗಾಲಿ ಅನುವಾದ ಗ್ರಂಥಗಳು (ರಾಮಕೃಷ್ಣಾಶ್ರಮದ ಸಂಸರ್ಗದಿಂದ)

(1) ರಾಮ ಕೃಷ್ಣ ಲೀಲಾ ಪ್ರಸಂಗ

(2) ರಾಮಕೃಷ್ಣ ಪರಮಹಂಸ

(3) ಪ್ರಾಚೀನ ಸಾಹಿತ್ಯ

ಕನ್ನಡ ಗ್ರಂಥ ಮಾಲೆಯನ್ನಾರಂಭಿಸಿ

(1) ಹರಿಶ್ಚಂದ್ರ ಕಾವ್ಯ ಸಂಗ್ರಹ (ಎ.ಆರ್.ಕೃಷ್ಣ ಶಾಸ್ತ್ರಿಗಳ ಸುದೀರ್ಘ ಮುನ್ನುಡಿ ಇದೆ)

(2) ಶಬ್ದ ಕೋಶ ಸಂಗ್ರಹ

(3) ಕಾದಂಬರಿ ಸಂಗ್ರಹ (ಇದರ ಬಗ್ಗೆ ಒಂದು ಹೇಳಿಕೆ ಇದೆ ) ಬಾಣ ಭಟ್ಟ ಮತ್ತು ನಾಗವರ್ಮರದು ಒಂದು ದಟ್ಟ ಅರಣ್ಯವಾದರೆ, ವೆಂಕಣ್ಣಯ್ಯನವರದು ಒಂದು ಸುಂದರ 'ನಂದನವನ'

(4) ಬಸವರಾಜ ದೇವರ ರಗಳೆ (ಹರಿಹರನ ಮೂಲ ಪ್ರಾಚೀನ ಕೃತಿಯನ್ನು ಅಧ್ಯಯನ ಮಾಡಿ ತಂದದ್ದು. ಇದರ ನಂತರ ಬಸವಪುರಾಣ ಇತ್ಯಾದಿ ಬಂದಿದೆ)

ಅವರು ತೀರಿಹೋದ ಅನೇಕ ವರ್ಷದ ನಂತರ ಬಂದ ಮಹತ್ವದ ಗ್ರಂಥ 1958 ರಲ್ಲಿ ಪ್ರಕಟಿಸುವಾಗ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಇತರ ಲೇಖನಗಳು. ಇದು 9 ಲೇಖನಗಳನ್ನು ಒಳಗೊಂಡಿದ್ದು ಹೊಸ ರೀತಿಯ ವಿಮರ್ಶೆಗೆ ಹೊಸ ದಾರಿಯನ್ನು ತೋರಿಸಿದವು.

"ಕನ್ನಡ ಸಾಹಿತ್ಯ ಮತ್ತು ಚರಿತ್ರೆ" ಇದೊಂದು ಸಾಹಿತ್ಯ ಸಂಶೋಧನಾತ್ಮಕ ಲೇಖನ ವಿದ್ವತ್ ಪೂರ್ಣವಾಗಿಯೂ, ನಿಷ್ಪಕ್ಷತೆಯಿಂದಲೂ, ಸೋಪಜ್ಞತೆಯಿಂದಲೂ ಕೂಡಿದ್ದು ಗಹನ ಸಮಸ್ಯೆಗಳನ್ನು ಆರಿಸಿ ಸ್ವಲ್ಪವೂ ಗಡಿಬಿಡಿ ಇಲ್ಲದ ನಿರೂಪಣಾ ವಿಧಾನ ಅವರದಾಗಿದೆ.

ಕವಿರಾಜ ಮಾರ್ಗದ ಕರ್ತೃ ಯಾರು? ಕನ್ನಡ ಸಾಹಿತ್ಯ ಸೃಷ್ಟಿಯ ಆದಿಯನ್ನು ಇವರು ಕ್ರಿಸ್ತಶಕ 1 ರಿಂದಲೇ ಗುರುತಿಸುತ್ತಾರೆ. ಜೈನಕವಿ (ಆದಿಕವಿ ಪಂಪ) ಗಳಿಗೂ ಮುಂಚೆಯೇ ಕನ್ನಡ ಸಾಹಿತ್ಯ ಸೃಷ್ಟಿಸಿದವರು. ಬ್ರಾಹ್ಮಣರು, ಬೌದ್ಧರಿರಬೇಕೆಂದು ಇವರು ಪ್ರತಿಪಾದಿಸುತ್ತಾರೆ. ಎಂ. ವಿ. ಸೀತಾರಾಮಯ್ಯನವರು ಕವಿರಾಜ ಮಾರ್ಗವನ್ನು ಶ್ರೀವಿಜಯ ಬರೆದದ್ದರೆಂದು ಪ್ರತಿಪಾದಿಸಿದ್ದಾರೆ.

ಪಂಪಭಾರತ: ವಿಕ್ರಮಾರ್ಜನೀಯದ ಗುಣದೋಷ ಕುರಿತು ವಿಚಾರ ಮಾಡಿದ್ದಾರೆ 10ನೇ ಶತಮಾನದ ಸಾಹಿತ್ಯ ಚರಿತ್ರೆ.

ಬಸವರಾಜ ದೇವರ ರಗಳೆ: ಬಸವಣ್ಣನವರ ಜೀವನ ಚರಿತ್ರೆ, ವಿಶ್ಲೇಷಣೆ, ವಿಮರ್ಶೆ ಇತ್ಯಾದಿ ಇದರಲ್ಲಿ ಹದವಾದ ಶೈಲಿ, ಮುಕ್ತ ಮನಸ್ಸು ವೈಶಿಷ್ಟ್ಯ ಪೂರ್ಣ ದೃಷ್ಟಿಯಿಂದ ಕೂಡಿದ್ದಾಗಿದೆ.


ಬಿಜ್ಜಳ ಜೈನನೇ? 12,13 ನೇ ಶತಮಾನದ ಸಾಹಿತ್ಯ ಚರಿತ್ರೆ: ಜೈನ, ವೈಷ್ಣವ, ವೀರಶೈವರ ಭೋಗಲಾಲಸೆ ಮುಂತಾದದರ ಕುರಿತಿದ್ದು.

ಕಾದಂಬರಿ ಸಂಗ್ರಹ: ಬಾಣಭಟ್ಟ, ನಾಗವರ್ಮರ ಕಾದಂಬರಿ ಕುರಿತದ್ದು ಕನ್ನಡ ಇಲಾಖೆಗೆ ಮತ್ತು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಧೈರ್ಯ, ಭರವಸೆ ನೀಡಿದ ವೆಂಕಣ್ಣಯ್ಯನವರು 12 ವರ್ಷ ಕೆಲಸ ಮಾಡಿದ ಜಾಗದಲ್ಲಿ ನಾನು ಕೆಲಸ ಮಾಡಿದೆ. ಇದೇ ನನ್ನ ಆಹೋಭಾಗ್ಯವಾಗಿದೆ. ಇಂತಹ ಪ್ರಾತಃ ಸ್ಮರಣೀಯರಾದ ವೆಂಕಣ್ಣಯ್ಯನವರು ನನಗೆ ಆದರ್ಶ ಮೂರ್ತಿಗಳು ನನ್ನಿಂದ ಯಾವುದೇ ಒಳ್ಳೆಯ ಕೆಲಸವಾಗಿದ್ದರೂ ಅದು ಅವರಿಂದಲೇ ಆದದ್ದು ಎಂದು ಎರಡು ದಿನದ ಉಪನ್ಯಾಸ ನೀಡಿದ ಹಾ.ಮಾ.ನಾಯಕರವರು ಅಭಿಪ್ರಾಯ ವ್ಯಕ್ತಪಡಿಸಿದರು.

## ದತ್ತಿ ಉಪನ್ಯಾಸ – ಡಿಸೆಂಬರ್ 2001

### ಪ್ರೊ. ಎಸ್.ಕೆ. ರಾಮಚಂದ್ರರಾಯರ ಉಪನ್ಯಾಸ

ವಿದ್ಯಾಲಂಕಾರ ಪ್ರೊ. ಎಸ್. ಕೆ. ರಾಮಚಂದ್ರ ರಾವ್ ಅವರು ಭಾರತೀಯ ಸಾಹಿತ್ಯ, ವಿಮರ್ಶೆ, ಸಂಶೋಧನೆ ಅನುವಾದ ಕಾರ್ಯದಲ್ಲಿ ಖ್ಯಾತನಾಮರು. ನಮ್ಮ ನಾಡಿನ ಬೆರಳಣಿಕೆಯ ಪ್ರಕಾಂಡ ಪಂಡಿತರಲ್ಲಿ ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್ ಅವರೂ ಒಬ್ಬರು. ತಮ್ಮ ವಿದ್ವತ್ತಿಗೆ, ಸರಳ ನಿರಾಡಂಬರ ಶುಚಿ ಜೀವನಕ್ಕೆ ಹೆಸರಾಗಿರುವ ಅವರು ಬಹುಭಾಷಾ ವಿಶಾರದರು. ಕನ್ನಡ, ತಮಿಳು, ಇಂಗ್ಲೀಷ್, ಪಾಲಿ, ಲ್ಯಾಟಿನ್, ಜರ್ಮನ್, ಗ್ರೀಕ್, ಅರ್ಧಮಾಗದಿ, ಹಿಂದಿ, ಸಂಸ್ಕೃತ, ನೇಪಾಳಿ ಹೀಗೆ ಜಗತ್ತಿನ ಹದಿನೈದಕ್ಕಿಂತ ಹೆಚ್ಚು ಭಾಷೆಗಳಲ್ಲಿ ಸಲೀಸಾಗಿ ವ್ಯವಹರಿಸಬಲ್ಲ ಹಿರಿಮೆಗೆ ಪಾತ್ರರಾಗಿದ್ದಾರೆ. ವಿದ್ವಾಂಸರೆಂದರೆ ಇವರು ಎಂದು ನಾವು ಧೈರ್ಯದಿಂದ ಹೆಸರೆತ್ತಿ ಕರೆಯಲು ಅರ್ಹತೆ ಪಡೆದವರು. ಪ್ರೊ. ಎಸ್. ಕೆ. ರಾಮಚಂದ್ರರಾವ್, ಕನ್ನಡ ಕವಿಯೊಬ್ಬ "ವ್ಯಾಕರಣ ಪರಿಣತನ್, ಅಲಂಕಾರ ಪರಿಚಿತನ್ ಅನೇಕ ರಸ ನಿಪುಣನ್,




ಅಭಿದಾನ ಪ್ರವೀಣನ್ ಸಕಲ ಕಲಾಕುಶಲನೆನಿಪಾತಂ ಕವೀಶನ್" ಎಂದಿದ್ದಾನೆ. ಈ ಮಾತನ್ನು ನಾವು "ಪ್ರೊ. ಸಾಕೃರಾ" ಅವರಿಗೂ ಚೆನ್ನಾಗಿ ಅನ್ವಯಿಸಬಹುದು. ಅವರು ಒಳ್ಳೆಯ ಸಂಗೀತ ತಜ್ಞರು. ಉತ್ತಮ ಚಿತ್ರಕಲಾವಿದರು. ಅಪ್ರತಿಮವಾಗ್ಮಿಯೂ ಹೌದು. ಬಹುಮುಖ ಪ್ರತಿಭೆಯ ರಾಯರು ನಮ್ಮ ನಾಡಿನ, ಭುವನದ ಭಾಗ್ಯ. ಕನ್ನಡ ನಾಡು ನುಡಿ ಸಾಹಿತ್ಯ ಸಂಸ್ಕೃತಿಗಾಗಿ ಶ್ರಮಿಸಿದ್ದಾರೆ. ಬಹುಕಾಲ ಉಳಿಯಬಲ್ಲ ಅನೇಕ ಕೃತಿಗಳನ್ನು ಅವರು ಕನ್ನಡ ವಾಙ್ಮಯಕ್ಕೆ ನೀಡಿದ್ದಾರೆ. ಭಾರತದ ದೇವಾಲಯಗಳ ನೆಲೆ ಹಿನ್ನೆಲೆ, ದಾಸ ಸಾಹಿತ್ಯ ಪರಂಪರೆ, ಕರ್ನಾಟಕದ ಕಲೆಗಳು, ಮೂರ್ತಿ ಶಿಲ್ಪ, ಪ್ರಾಚೀನ ಸಂಸ್ಕೃತಿ, ಶ್ರೀಕೃಷ್ಣನ ವ್ಯಕ್ತಿತ್ವ, ಆಳವಾರರ ನುಡಿ ಮುತ್ತುಗಳು, ಭಾರತೀಯ ದೇವಾಲಯದ ಜನಪದಮೂಲ, ಶ್ರೀಸೂಕ್ತ, "Development of psychological thought in India" , ಶ್ರೀ ತತ್ವನಿಧಿ ಮುಮ್ಮಡಿ ಕೃಷ್ಣರಾಜ ಒಡೆಯರ್, ತಿರುಪತಿ ತಿಮ್ಮಪ್ಪ ಮೊದಲಾದ ಕೃತಿಗಳ ಮೂಲಕ ನಮ್ಮ ಸಂಸ್ಕೃತಿಯ ಆಳ–ಅಗಲಗಳನ್ನು ನಾಡಿಗೆ, ನಾಡಿಗರಿಗೆ ಪರಿಚಯಿಸಿದ ಕೀರ್ತಿಗೂ ಅವರು ಭಾಜನರಾಗಿದ್ದಾರೆ. ನಮ್ಮ ನಾಡಿನ ಪರಂಪರೆ, ತತ್ವಶಾಸ್ತ್ರ, ಪುರಾಣ, ಈಜಿಪ್ಟಿನ ಪಿರಮಿಡ್ಡಿನಿಂದ ಹಿಡಿದು ನಾಗಾರಾಧನೆ ಭೂತಾರಾಧನೆಯವರೆಗೂ ಅಧಿಕೃತವಾಗಿ ಮಾತನಾಡಬಲ್ಲ, ಚಿಂತನೆಗೀಡು ಮಾಡಬಲ್ಲ, ನಮ್ಮ ದೃಷ್ಟಿ ತಿದ್ದಬಲ್ಲ ಪಾಂಡಿತ್ಯ ಅವರಿಗಿದೆ. ಪ್ರೊ. ಎಸ್.ಕೆ. ಆರ್. ಅವರಂತಹ ಜನ ಸಮಾಜದಲ್ಲಿ ನಡೆದಾಡುವ ದೀಪಗಳು. ಅವರು ಬಂದೆಡೆ ವೈಶಾಖದಲ್ಲಿ, ಸುಗಂಧವನ್ನು ಹೊತ್ತ ತಂಗಾಳಿ ಬೀಸಿದಂತೆ. ಒಂದು ಸಮಾಜದ ಅರೋಗ್ಯಕರ ವಾತಾವರಣವನ್ನು ಉಳಿಸಿಕೊಂಡು ಬರುವ ಮಾನವ ವೃಕ್ಷಗಳು ಇಂತಹ ಜನ ಎಂದರೆ ಅದು ಎಳ್ಳಷ್ಟೂ ಅತ್ಯುಕ್ತಿಯಲ್ಲ. ಅವರ ನುಡಿ, ಅವರ ನಡೆ, ಅವರ ಸಾಹಿತ್ಯ, ಹೊರಗಿನ ಕೆಲಸ ಎಲ್ಲವೂ ಸದ್ದಿಲ್ಲದ ಸಮಾಜದ ಕಲ್ಯಾಣ ಕಾರ್ಯಗಳು. ಬೌದ್ಧಿಕತೆ, ಹೃದಯವಂತಿಕೆ, ಸೂಕ್ಷ್ಮ ದೃಷ್ಟಿಕೋನ, ಜೀವನ ಪ್ರೇಮ, ಉತ್ಸಾಹ, ಬತ್ತದ ಅಸಕ್ತಿಯಿಂದಾಗಿ ಅವರು ನಡೆದಾಡುವ ವಿಶ್ವಕೋಶವಾಗಿ ರೂಪುಗೊಂಡಿದ್ದಾರೆ.

ಸಂದರ್ಶನ: **ಡಾ. ಜಿ. ಎನ್. ಉಪಾಧ್ಯ ಮತ್ತು ಶ್ರೀಮತಿ ಸುಮಾ ದ್ವಾರಕಾನಾಥ್**

ಇಂತಹ ಶ್ರೀಮಂತ ವ್ಯಕ್ತಿತ್ವದ ಪ್ರೊ. ಎಸ್. ಕೆ. ರಾಮಚಂದ್ರರಾವ್ ಅವರು ಈ ಬಾರಿಯ ಮೈಸೂರು ಅಸೋಸಿಯೇಶನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ ನೀಡಲು ಮುಂಬಯಿಗೆ ಆಗಮಿಸಿದ್ದರು. ಸಹೋದರಿ ಸುಮಾ ದ್ವಾರಕಾನಾಥ್ ಹಾಗೂ ನಾನು ನ್ಯಾಯಧೀಶ ಬಿ.ಎನ್.ಶ್ರೀಕೃಷ್ಣ ಅವರ ಮನೆಯಲ್ಲಿ ಪ್ರೊ. ಎಸ್. ಕೆ. ರಾವ್. ಅವರೊಂದಿಗೆ ನಡೆಸಿದ ಸಂವಾದದ ಕೆಲವು ವಿವರವನ್ನು ಇಲ್ಲಿ ಕಲೆ ಹಾಕಿದ್ದೇವೆ.

**ಪ್ರಶ್ನೆ:** ಭಾರತೀಯ ಸಂಸ್ಕೃತಿ ಇವತ್ತು ಒಂದು ರೀತಿಯ ಅಪಾಯದ ಅಂಚಿನಲ್ಲಿದೆ ಎನಿಸುವುದಿಲ್ಲವೇ?

**ಉತ್ತರ:** ಖಂಡಿತ ಇಲ್ಲ. ಶತಮಾನಗಳಿಂದ ಸಾಗಿ ಬಂದ ಈ ಸಂಸ್ಕೃತಿಯ ಪ್ರವಾಹ ನಿರಂತರವಾದುದು. ಸಂಸ್ಕೃತಿ ಚಲನಶೀಲವಾದುದು. ಪರಸ್ಪರ ಅದಾನ ಪ್ರಧಾನ ಇಲ್ಲಿ ಸಹಜ. ನಮ್ಮ ನಗರಗಳು ಹೆಚ್ಚಾಗಿ ಪರಿವರ್ತನೆಯ ಕಡೆಗೆ ಮುಖ ಮಾಡಿವೆ. ಆದರೂ ನಮ್ಮದೇ ಆದ ಮೌಲ್ಯಗಳನ್ನು ನಾವು ಬಿಟ್ಟುಕೊಟ್ಟಿಲ್ಲ. ನಮ್ಮ ಸಂಸ್ಕೃತಿ ನಿಜವಾಗಿಯೂ ಉಳಿದು ಬೆಳೆದು ಬಂದುದು ಹಳ್ಳಿಗಳಲ್ಲಿ, ಕಲೆ, ಸಾಹಿತ್ಯ, ಸಂಗೀತ ಆರಾಧನೆಯ ಬಗೆಗೆ ಅವರ ಶ್ರದ್ಧೆ, ಇಂದಿಗೂ ಕಡಿಮೆಯಾಗಿಲ್ಲ. ಯಂತ್ರ ಯುಗದಲ್ಲಿ ಅದು ಸ್ವಲ್ಪ ಬದಲಾದಂತೆ ಕಂಡು ಬಂದರೂ ನಮ್ಮದಾಗಿ ಬದಲಾಗುತ್ತದೆ. ಕಾಲದ ಅಗತ್ಯವನ್ನು ಯಾರೂ ಕಡೆಗಣಿಸುವಂತಿಲ್ಲ. ಜಗತ್ತಿನ ಯಾವ ಸಂಸ್ಕೃತಿಯನ್ನೇ ತೆಗೆದುಕೊಳ್ಳಿ ಅಲ್ಲಿ ಒಳ್ಳೆಯ ಅಂಶ, ಒಳ್ಳೆಯದು ಮೈನಾರಿಟಿಯಾಗಿರುವುದು ಕಂಡು ಬರುತ್ತದೆ. ನಮ್ಮ ಮಹಾಭಾರತದಲ್ಲಿಯೂ ಇದನ್ನು ನಾವು ಕಾಣುತ್ತೇವೆ. ಧರ್ಮದ ಕಡೆಗಿದ್ದ ಪಾಂಡವರು ಐವರು. ಆದರೆ ಕೌರವರು ನೂರು ಮಂದಿ. ಒಳ್ಳೆಯದನ್ನು ಸ್ವೀಕಾರ ಮಾಡುವ ಪ್ರವೃತ್ತಿಯನ್ನು ನಾವು ಬೆಳೆಸಿಕೊಳ್ಳಬೇಕಾಗಿದೆ.

**ಪ್ರಶ್ನೆ:** ಭಾರತೀಯ ಸಾಹಿತ್ಯ, ವೇದ ವೇದಾಂತಗಳ ಕುರಿತು ನಮ್ಮಲ್ಲಿ ಆಸಕ್ತಿ, ಕಡಿಮೆಯಾಗುತ್ತಿದೆ. ಈ ಕುರಿತು ನಿವೇನಂತಿರಿ?

**ಉತ್ತರ:** ಸ್ವಲ್ಪ ಮಟ್ಟಿಗೆ ನಿಜ. ಇವತ್ತು ಹಣ ಸಂಪಾದನೆಯೊಂದೇ ಮುಖ್ಯವಾಗಿಬಿಟ್ಟಿದೆ. ನಮ್ಮ ಸಾಹಿತ್ಯ ಕೃತಿಗಳಲಿರುವ ಸಾರವನ್ನು ಉಣಬಡಿಸುವ



ತಿಳಿಹೇಳುವ ಕೆಲಸಗಳು ಅಷ್ಟಾಗಿ ಆಗುತ್ತಿಲ್ಲ ಎಂಬುದು ಬೇಸರದ ಸಂಗತಿ.

ಪ್ರಶ್ನೆ: ನಮ್ಮ ಸಾಹಿತ್ಯ ಸಂಶೋಧನೆಯ ಕುರಿತು ಏನಾದರೂ ಹೇಳಬಹುದೆ?


ಉತ್ತರ: ಅನೇಕ ವಿಚಾರಗಳು ಲೋಕಮುಖಕ್ಕೆ ತಿಳಿಯುವಂತಾಗಿವೆ. ವಿದೇಶಿ ವಿದ್ವಾಂಸರು ಆರಂಭದಲ್ಲಿ ಕೈಗೊಂಡ ಸಂಶೋಧನೆಗಳಲ್ಲಿ ಅಧ್ಯಯನಗಳಲ್ಲಿ ಸಾಕಷ್ಟು ಲೋಪದೋಷಗಳಿವೆ. ನಮ್ಮ ಸಂಸ್ಕೃತಿಯ ಸ್ವಾರಸ್ಯವನ್ನು ಅವರು ಹೊರಗಿನಿಂದ ನೋಡಿದರು. ಈ ಸಂಸ್ಕೃತಿ ಅವರಿಗೆ ರಕ್ತಗತವಾಗಿ ಬಂದುದಲ್ಲ. ಅವರ ಸಂಸ್ಕೃತಿಯ ನೆರಳಲ್ಲಿ ನಮ್ಮ ಸಂಸ್ಕೃತಿಯನ್ನು ಅರ್ಥೈಸಿದರು. ಪ್ರವಾಸಿಗರಂತೆ ಅವರು ಕಂಡರು. ಯಾವುದನ್ನೇ ಆಗಲಿ ವಸ್ತುನಿಷ್ಠ ದೃಷ್ಟಿಕೋನದಿಂದ ನೋಡಬೇಕು, ಸರಿ, ಆದರೆ ನಮ್ಮ ತಾಯಿಯನ್ನು ದೂರನಿಂತು ಹೇಗೆ ನೋಡುವುದು? ಒಡಲಿಗೆ ಹತ್ತಿರವಾದುದನ್ನು ಆ ಹಿನ್ನೆಲೆಯಲ್ಲಿ ನೋಡಬೇಕು. ಉದಾಸೀನಭಾವದಿಂದ, ತಟಸ್ಥ ಭಾವದಿಂದ ಮಾಡಿದ ಸಂಶೋಧನೆಗೆ ಏನು ಬೆಲೆಯಿದೆ? ಎಲ್ಲವೂ ಮತೀಯ ಸಾಹಿತ್ಯ ಎಂಬ ಆಕ್ಷೇಪಗಳನ್ನೂ ಒಪ್ಪುವುದು ಕಷ್ಟ. ಧರ್ಮ ಎಂಬುದನ್ನು ಸಂಕುಚಿತ ಅರ್ಥದಲ್ಲಿ ಅರ್ಥೈಸಿದರೆ ತೊಂದರೆಯಾಗುತ್ತದೆ. ನಮ್ಮ ದೃಷ್ಟಿಕೋನವೂ ಅದೇ ದಾರಿ ಹಿಡಿಯುತ್ತದೆ.

ಪ್ರಶ್ನೆ: ನೀವು ದಾಸ ಸಾಹಿತ್ಯ ಸಂಪಾದನೆಯಲ್ಲಿಯೂ ಕೆಲಸ ಮಾಡಿದವರು, ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯಗಳು ವಿಶ್ವ ಸಾಹಿತ್ಯಕ್ಕೆ ಕನ್ನಡದ ಕೊಡುಗೆ ಎಂಬ ಮಾತಿದೆ. ಇದು ಸಮಂಜಸವೇ?

ಉತ್ತರ: ಸಾಹಿತ್ಯ ಎಂಬ ಪರಿಕಲ್ಪನೆಯೇ ಅಷ್ಟು ಸರಿಯಾಗಿ ಕಾಣುತ್ತಿಲ್ಲ. ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿರುವ ಷೇಕ್ಸ್‌ಪಿಯರ್‌ನ ಹೆಸರು ಕೇಳದ ರಾಷ್ಟ್ರಗಳೂ ಇವೆ. ಆಯಾಯ ರಾಷ್ಟ್ರಗಳಿಗೆ ಅಲ್ಲಿನ ಸಾಹಿತಿಗಳು, ಕವಿಗಳು ಮುಖ್ಯರಾಗುತ್ತಾರೆ. ಭಿನ್ನ ಭಿನ್ನ ಭಾಷೆ, ಭಿನ್ನ ಭಿನ್ನ ಸಂಸ್ಕೃತಿಯಲ್ಲಿ ರಚನೆಗೊಂಡ ಸಾಹಿತ್ಯವನ್ನು ಜಾಗತಿಕರಣದ ನೆಲೆಯಲ್ಲಿ ನಿಲ್ಲಿಸಿ ಹೆಚ್ಚು ಕಡಿಮೆ ಎಂಬಂತೆ ಮಾತನಾಡಲು ಸಾಧ್ಯವೇ? ಕಾಳಿದಾಸ, ಭಾಸ, ಬಸವಣ್ಣ, ಪುರಂದರ ದಾಸ, ಮೊದಲಾದವರು ಮಾಡಿರುವ ಸಾಧನೆ ನಮ್ಮ ಮಟ್ಟಿಗಂತೂ ಮಹತ್ವದ್ದೇ. ನಾಲ್ಕು ಕಾಲ ಉಳಿಯಬಲ್ಲ, ಕಲಾತ್ಮಕ, ಚಿರಂತನ ಸಾಹಿತ್ಯವನ್ನು ಇವರು ನಿರ್ಮಿಸಿದರು.

ಪ್ರಶ್ನೆ: ನಮ್ಮ ಯುವ ಜನಾಂಗ ಹಾದಿ ತಪ್ಪುತ್ತಿದೆ ಎಂಬ ಮಾತು ಕೇಳಿ ಬರುತ್ತಿದೆಯಲ್ಲ?

ಉತ್ತರ: ನಮ್ಮಲ್ಲಿ ಬದಲಾವಣೆ ಭರದಿಂದ ಸಾಗಿದೆ. ಮಕ್ಕಳಿಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬುದನ್ನು ತಿಳಿಹೇಳುವುದು ಮಕ್ಕಳ ಕಲ್ಯಾಣದ ಕಡೆಗೆ ಗಮನ ಕೊಡುವುದು ಈಗ ಜರೂರಿನ ಸಂಗತಿ. ಒಳ್ಳೆಯ ಸಂಸ್ಕಾರ ಸುಸಂಸ್ಕೃತ ವಿಚಾರಗಳನ್ನು ಪೋಷಿಸಬಲ್ಲದು. ಕುತೂಹಲವಿರಬೇಕು. ಜೀವನೋತ್ಸಾಹವನ್ನು ನಾವು ಎಂದೂ ಕಳೆದುಕೊಳ್ಳಬಾರದು. ಆಸಕ್ತಿ ಪ್ರಯತ್ನವಿದ್ದರೆ ಏನನ್ನೂ ಸಾಧಿಸಲು ಸಾಧ್ಯ. ಎಲ್ಲವನ್ನೂ ಶಾಲಾ ಶಿಕ್ಷಣದಿಂದ ಗಳಿಸಿಕೊಳ್ಳಲು ಸಾಧ್ಯವಿಲ್ಲ



ಅಸೋಸಿಯೇಶನ್‌ಗೆ ಭೇಟಿ ಕೊಟ್ಟ, ರಾಮಚಂದ್ರ ರಾವ್ ಅವರು ಸಂದರ್ಶಕರ ಡೈರಿಯಲ್ಲಿ ಬರೆದ ಹಸ್ತಾಕ್ಷರ

## ದತ್ತಿ ಉಪನ್ಯಾಸ – ಫೆಬ್ರುವರಿ 2002–2003

### ಪ್ರೊ. ಲಕ್ಷ್ಮೀ ತಾತಾಚಾರ್ಯರಿಂದ ಉಪನ್ಯಾಸ

ವಿಶಿಷ್ಟಾದ್ವೈತ ಸಿದ್ಧಾಂತದ ತತ್ವಗಳು ಇಂದಿಗೂ ಎಂದಿಗೂ ಪ್ರಸ್ತುತ

ವಿಶಿಷ್ಟಾದ್ವೈತ ಸಿದ್ಧಾಂತ ನಮ್ಮ ಬದುಕಿಗೆ ಬಹಳ ಹತ್ತಿರವಾದುದು. ಅದು ಸಮಭಾವ, ಸಮತತ್ವ ಸಮಾನತೆ, ಶರಣಾಗತಿ, ಪರಸ್ಪರ ಗೌರವ ಮೊದಲಾದ ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ ರೂಪುಗೊಂಡಿದೆ. ಅಹಂಭಾವ ರಹಿತ ವ್ಯಕ್ತಿಗಳ ಸೃಷ್ಟಿಗೆ ಮನ್ನಣೆ ನೀಡಿದ ದರ್ಶನ ಇದಾದುದರಿಂದ ಇದು ಸಮಕಾಲೀನವೂ ಸಾರ್ವತ್ರಿಕವೂ ಆಗಿದೆ ಎಂದು ನಾಡಿನ ನಾಮಾಂಕಿತ ಅಕಾಡೆಮಿಯ ನಿರ್ದೇಶಕ ಪ್ರೊ. ಎಂ. ಎ. ಲಕ್ಷ್ಮೀತಾತಾಚಾರ್ಯ ಅವರು ಅಭಿಪ್ರಾಯಪಟ್ಟರು.




ಅವರು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಹಾಗೂ ಮೈಸೂರು ಅಸೋಸಿಯೇಷನ್ ಮುಂಬಯಿ ಇವರು ಸಂಯುಕ್ತವಾಗಿ ಆಯೋಜಿಸಿದ್ದ ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮ ಮಾಲಿಕೆ 2002–2003 ರ ಅನ್ವಯ ಉಪನ್ಯಾಸ ನೀಡಿದರು. ಮನುಷ್ಯನ ಎಲ್ಲ ತೊಂದರೆಗಳಿಗೂ ಅಹಂಕಾರವೇ ಮೂಲ ಕಾರಣ. ನಮ್ಮ ಸುತ್ತಲಿನ ಬದುಕು ಇಂದು ಸಹ್ಯವಾಗದಿರುವುದಕ್ಕೂ ಇದೇ ಕಾರಣ. ಆದ್ದರಿಂದ ಅಹಂಕಾರವನ್ನು ಹೋಗಲಾಡಿಸುವ ಪ್ರಯತ್ನವನ್ನು ಈ ದರ್ಶನ ಮಾಡಿದೆ. ಈ ಪ್ರಪಂಚವನ್ನು ಸಮಗ್ರದೃಷ್ಟಿಯಿಂದ ನೋಡುವುದೇ ದರ್ಶನ. ವಿಶಿಷ್ಟಾದ್ವೈತದಲ್ಲಿ ಬರುವ ನಾರಾಯಣ ಒಂದು ಪರಿಕಲ್ಪನೆ. ಜಡವಸ್ತುವಿನಲ್ಲೂ ಚೈತನ್ಯವಿದೆ. ಒಂದು ವ್ಯವಸ್ಥೆಯಾಗಿ ಪರಿಗಣಿಸಬೇಕೆಂದು ಈ ದರ್ಶನ ಹೇಳುತ್ತದೆ. ಜ್ಞಾನಕ್ಕೆ ವಿಶೇಷವಾದ ಮನ್ನಣೆಯನ್ನು ರಾಮಾನುಜಾಚಾರ್ಯರು ನೀಡಿದರು. ಜಾತಿಯಲ್ಲಿ ಹೀನ ಎಂಬ ತಿರಸ್ಕಾರಕ್ಕೆ ಒಳಗಾಗಿದ್ದ ನಮ್ಮಾಳ್ವಾರರ ಕೃತಿಯನ್ನು ಎತ್ತಿ ಹಿಡಿದು ಜಾತ್ಯಾತೀತ ಧೋರಣೆಯನ್ನು ಅವರು ಮೊದಲಿಗೆ ಚಾಲ್ತಿಗೆ ತಂದರು. ದಿವ್ಯ ಪ್ರಬಂಧಕ್ಕೆ ವೇದದ ಸ್ಥಾನಮಾನವನ್ನು ರಾಮಾನುಜಾಚಾರ್ಯರು ಕೊಟ್ಟು ಗೌರವಿಸಿದರು. ಅವರ ಪ್ರಗತಿಪರ ದೃಷ್ಟಿಕೋನ ಸಾಮಾಜಿಕ ವ್ಯವಸ್ಥೆಯಲ್ಲಿ ಹೊಸ ಆಂದೋಲನವನ್ನೇ ಮಾಡಿತು ಎಂದವರು ಹೇಳಿದರು. ಶ್ರೀ ವೈಷ್ಣವ ದರ್ಶನದಲ್ಲಿ ಬರುವ ಶರಣಾಗತಿ ತತ್ವದಲ್ಲಿ ಪ್ರೀತಿ ವಿಶ್ವಾಸವಿದೆ. ಭಗವಂತನ ಸೇವೆಯನ್ನು ಗುಲಾಮಗಿರಿ ಎಂದು ಇಂದಿನ ಅರ್ಥದಲ್ಲಿ ಅರ್ಥೈಸಬಾರದು. ಧರ್ಮ ಎಂಬುದಕ್ಕೆ ವಿಶಾಲವಾದ ಅರ್ಥವಿತ್ತು. ಇಂದು ನಾವು ಬೌದ್ಧಿಕವಾಗಿ ವಿಕಾಸಗೊಂಡರೂ ಸಂಕುಚಿತ ಪ್ರವೃತ್ತಿಯವರಾಗುತ್ತಿದ್ದೇವೆ ಎಂದವರು ಹೇಳಿದರು. ಸಂಸ್ಕೃತಿ ಭಾಷೆ ಸಾಹಿತ್ಯ ಯಾರ ಧರ್ಮದ ಜಾತಿಯ ಭಾಷೆಯಲ್ಲ. ಅಲ್ಲಿ ಸಮೃದ್ಧವಾದ ಶಾಸ್ತ್ರ ಸಾಹಿತ್ಯವಿದೆ. ಅದನ್ನು ನಾವು

ಸದುಪಯೋಗ ಪಡಿಸಿಕೊಳ್ಳಬೇಕು. ನಮ್ಮದನ್ನು ನಾವು ಪಶ್ಚಿಮ ಮುಖಿಗಳಾಗಬಾರದು. ಮನುಕುಲದ ಹಿತವನ್ನು ಬಯಸಿದ ವಿಶಿಷ್ಟಾದ್ವೈತ ಎಂದು ಲಕ್ಷ್ಮೀತಾತಾಚಾರ್ಯ ಅವರು ನುಡಿದರು.

ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷ ಶ್ರೀ ದೊರೆಸ್ವಾಮಿ ಅವರು ಅತಿಥಿಗಳನ್ನು ಸ್ವಾಗತಿಸಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಜಿ.ಎನ್.ಉಪಾಧ್ಯ ಅವರು ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ನಿಧಿಯ ಹಿನ್ನೆಲೆಯಲ್ಲಿ ಮಾತನಾಡಿದರು. ಶ್ರೀಮತಿ ಶ್ಯಾಮಲ ರಾಧೇಶ್ ಅವರು ಸ್ವಾಗತ ಗೀತೆ ಹಾಡಿದರು. ಅನಂತರ ನಡೆದ ಕಾರ್ಯಕ್ರಮದಲ್ಲಿ ಶ್ರೀ. ರಾಘವೇಂದ್ರ ಉಪಾಧ್ಯಾಯ, ಶ್ರೀ. ಎಂ. ಎ. ಎಸ್. ಪ್ರಸಾದ್, ಶ್ರೀ. ಎಸ್. ನಾರಾಯಣ, ಶ್ರೀ. ಜೆ.ಎನ್.ಭಟ್ ಮೊದಲಾದವರು ಪಾಲ್ಗೊಂಡರು.

ಮೈಸೂರು ಅಸೋಸಿಯೇಷನ್ನಿನ ಕಾರ್ಯದರ್ಶಿ ಶ್ರೀ. ಎಂ. ಎ. ಎಸ್. ಪ್ರಸಾದ್ ಅವರು ವಂದಿಸಿದರು.

●

---

## ದತ್ತಿ ಉಪನ್ಯಾಸ – ಫೆಬ್ರವರಿ 2005

### ಶತಾವಧಾನಿ ಡಾ. ಆರ್. ಗಣೇಶ್ ಅವರ ಉಪನ್ಯಾಸ




ಮೈಸೂರು ಅಸೋಸಿಯೇಷನ್ ಸುವರ್ಣ ಮಹೋತ್ಸವದ ದತ್ತಿ ಉಪನ್ಯಾಸ ಸಂದರ್ಭದಲ್ಲಿ ಉಪನ್ಯಾಸಕಾರರಾದ ಡಾ. ಗಣೇಶ್ ಮತ್ತು ಡಾ. ತಾಳ್ತಜೆ ವಸಂತಕುಮಾರ್, ಡಾ. ಎಚ್. ಎಸ್. ಶ್ರೀನಿವಾಸ್ ಮತ್ತು ಎಮ್.ಎ.ಎಸ್. ಪ್ರಸಾದ್

ಭಾರತೀಯ ಪರಂಪರೆಯಲ್ಲಿ ವ್ಯಾಸ, ವಾಲ್ಮೀಕಿ, ಅವರ ಬಳಿಕ ಇನ್ನೊಬ್ಬ ಕವಿ ಕಾಳಿದಾಸ. ಕಾಳಿದಾಸನ ದಾರಿ ಸೊಗಸಾದ, ದಿಟ್ಟವಾದ ಹೆಜ್ಜೆ. ಅವನ ಮಾತಿನ ಪ್ರಪಂಚ ಯಾವ ಕಾಲಕ್ಕೂ ಉಳಿಯುವಂತದ್ದು. ಕಾಳಿದಾಸ ಎಲ್ಲ ಪ್ರಾಂತ್ಯಗಳವರ ಹೃದಯ ಸಂವಾದದ ಸಾಧ್ಯತೆಯ ಕವಿ. ಬೌದ್ಧಿಕವಾಗಿ, ಭೌತಿಕವಾಗಿ, ಭಾವನಾತ್ಮಕವಾಗಿ ಅನುಭವಿಸಿದ ಕವಿ. ಅವನ ರೀತಿ ವಾಲ್ಮೀಕಿಯದ್ದು, ನೀತಿ ವ್ಯಾಸರದ್ದು. ಇಬ್ಬರ ಸಮಾಗಮ ಕಾಳಿದಾಸ. ಇಡಿಯಾಗಿ ನೋಡಿದರೂ ಸಂಪೂರ್ಣ, ಬಿಡಿಯಾಗಿ ನೋಡಿದರೂ ಸಂಪೂರ್ಣ, ಭಾರತೀಯ ಹೃದಯವನ್ನು ಸುಂದರವಾಗಿ, ಸತ್ವಯುತವಾಗಿ ಸಾರ್ವಕಾಲಿಕವಾಗಿ ದರ್ಶಿಸಿದವನು ಕಾಳಿದಾಸ. ಸಂಕ್ಷೇಪದಲ್ಲಿ ಪರಮಾರ್ಥತೆ ಹೇಳುವವನು ಕಾಳಿದಾಸ ಎಂದು ಖ್ಯಾತ ಶತಾವಧಾನಿ ಡಾ. ಆರ್. ಗಣೇಶ್ ಅಭಿಪ್ರಾಯಪಟ್ಟರು.

ಅವರು ಮೈಸೂರು ಅಸೋಸಿಯೇಷನ್‌ನಲ್ಲಿ ಮುಂಬಯಿ ವಿ. ವಿ. ಕನ್ನಡ ವಿಭಾಗದ ಸಹಯೋಗದಿಂದ ಅಸೋಸಿಯೇಷನ್ನಿನ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ಅಭಿಜ್ಞಾನ ಶಾಕುಂತಲಂ' ವಿಷಯದ ಕುರಿತು ಉಪನ್ಯಾಸ ನೀಡಿದರು. ಕಾಳಿದಾಸನ "ರಘುವಂಶ' ಪುರುಷಾರ್ಥ ಮಹಾಕಾವ್ಯ. ಬದುಕನ್ನು ಸಂಪೂರ್ಣವಾಗಿ ಗ್ರಹಿಸಿದ ಕವಿ. ಆತನ ಪ್ರಕಾರ ನಾಟಕ ಕಣ್ಣಿಗೆ ಕಾಣುವ ಯಜ್ಞ, ಎಲ್ಲ ದಾನಕ್ಕಿಂತಲೂ ಮಿಗಿಲಾದುದು ಸಂತೋಷ ದಾನ. ಇದನ್ನು ನಾಟಕ ನೀಡುತ್ತದೆ. ಭಾರತೀಯ ನಾಟಕ ಪರಂಪರೆ ಸಾಂಕೇತಿಕವಾದುದು. ನಾಟ್ಯಶಾಸ್ತ್ರದ ಸಂಪೂರ್ಣ ದರ್ಶನ ಯಕ್ಷಗಾನದಲ್ಲಿದೆ. ಕಾವ್ಯ ಪ್ರಪಂಚದಲ್ಲಿ ಉಪಮೆಗಳನ್ನು ಪರಿಪೂರ್ಣವಾಗಿ ನೀಡಿದ ಕವಿ ಕಾಳಿದಾಸ ಎಂದು ಡಾ. ಗಣೇಶ್ ನುಡಿದರು. ಪದ್ಮನಾಭ ಸಿದ್ಧಕಟ್ಟೆ ಸ್ವಾಗತಗೀತೆ ಹಾಡಿದರು. ಅಸೋಸಿಯೇಷನ್ ಉಪಾಧ್ಯಕ್ಷ ಡಾ. ಎಚ್. ಎಸ್. ಶ್ರೀನಿವಾಸ ಸ್ವಾಗತಿಸಿದರು. ಡಾ. ತಾಳ್ತಜೆ ವಸಂತ ಕುಮಾರ್ ಪ್ರಸ್ತಾವನೆಗೈದರು. ಡಾ. ಜಿ. ಎನ್. ಉಪಾಧ್ಯ ಕಾರ್ಯಕ್ರಮ ನಿರೂಪಿಸಿದರು. ಎಂ. ಎ. ಎಸ್. ಪ್ರಸಾದ್ ವಂದಿಸಿದರು.

**ಮೈಸೂರು ಅಸೋಸಿಯೇಷನ್ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ ಸಂದರ್ಭದಲ್ಲಿ ಮಾಡಿದ ಉಪನ್ಯಾಸದ ಮೊದಲ ಭಾಗ**

ಕಾಳಿದಾಸ ಎಲ್ಲರಿಗೂ ಪರಮ ಪ್ರಿಯನಾದ ಕವಿ. ಅವನ ಸಾಹಿತ್ಯ ಘನವಾಗಿ ಅರಿಯಲು ಅನೇಕ ವರ್ಷಗಳ ತಪಸ್ಸು ಮಾಡಬೇಕಾಗುತ್ತದೆ.

ನಮ್ಮ ಭಾರತದ ಕಾವ್ಯ ಪರಂಪರೆಯಲ್ಲಿ ವಾಲ್ಮೀಕಿ ವ್ಯಾಸರ ನಂತರ ಶ್ರೇಷ್ಠತೆ ಪಡೆಯುವ ರಸಋಷಿ ಎಂದರೆ ಕಾಳಿದಾಸ. ಅವನ ಮಟ್ಟದ ರಸಋಷಿ ಇಂದಿನ ತನಕವೂ ಹುಟ್ಟಿಲ್ಲ ಎನ್ನಬಹುದು. ಸಾವಿರದೈನೂರು ವರುಷಗಳ ಹಿಂದಿನ ಕಾಲ ಕಾಳಿದಾಸನದು. ಅವನು ಅಖಂಡ ಭಾರತ ಸಂಚರಿಸಿ ಎಲ್ಲರಲ್ಲಿ ಹೃದಯ ಸಂವಾದ ಬೆಳೆಸಿದ ರವಿಕುಲಗುರು. ರವೀಂದ್ರನಾಥ ಠಾಕುರರು, ಕುವೆಂಪು, ಬೇಂದ್ರೆ, ವಿಶ್ವನಾಥ ಸತ್ಯನಾರಾಯಣ, ವಲ್ಲಭ, ಕುಮಾರವ್ಯಾಸ ಸುಬ್ರಹ್ಮಣ್ಯ ಭಾರತಿ ಇಂತಹ ಭಾರತದ ವಿವಿಧ ರಾಜ್ಯ ಭಾಷೆಗಳಿಗೆ ಸೇರಿದ ಕವಿಗಳು ಹೆಚ್ಚಿನ ಮಟ್ಟದಲ್ಲಿ ಪ್ರಾದೇಶಿಕವಾಗಿಯೇ ಉಳಿದರು. ಆದರೆ ಕಾಳಿದಾಸ ಭಾರತದ ವಿವಿಧ್ಯಗಳನ್ನು ಗಮನಿಸಿ, ಭೌತಿಕ, ಬೌದ್ಧಿಕ, ಮತ್ತು ಭಾವುಕ ನೆಲೆಯಲ್ಲಿ ತನ್ನ ಕಾವ್ಯ, ನಾಟಕ ಬರೆದು ರಾಷ್ಟ್ರಕವಿ ಎನಿಸಿದ್ದಾನೆ. ಕನ್ನಡದ ಸಾಯಣಾಚಾರ್ಯರು "ಪದವೀ ಕಾಳಿದಾಸಸ್ಯ ಲಲಿತಾಂ ಮೃದುಲೈ ಪದ್ಯೈಃ" ಎಂದು ಹೇಳಿದಂತೆ ಕಾಳಿದಾಸನು ತನ್ನ ಸುಕುಮಾರ ಹೆಜ್ಜೆಗಳಿಂದ ನಡೆದ ದಾರಿ ಎಲ್ಲರಿಗೂ ತೋರುತ್ತಿದೆ. ಆದರೆ ಅನುಸರಿಸುವುದು ಕಷ್ಟ. "ಲಲಿತಾಂಮೃದುಲೈ ಪದ್ಯೈ!" ಎಂದರೆ ಸುಕುಮಾರ, ಲಾಲಿತ್ಯ ಪೂರ್ಣವಾದ ಪದಗಳ ಪ್ರಯೋಗ ಎಂದೂ ಆಗುತ್ತದೆ. ಅವನ ಲಾಲಿತ್ಯ ಪೂರ್ಣವಾದ ಮಾತಿನ ಪ್ರಪಂಚ ಅದ್ಭುತವಾಗಿದೆ.

ಕಾಳಿದಾಸನ ರೀತಿ ವಾಲ್ಮೀಕಿಯದ್ದು, ನೀತಿ ವ್ಯಾಸರದ್ದು. ಸಂಸ್ಕೃತ ಸಾಹಿತ್ಯದ ಬಾಣಭಟ್ಟ ಪರವಶನಾಗಿ ಬರೆಯುತ್ತಾನೆ. ಆದರೆ ಕಾಳಿದಾಸನ ನಿಖರ, ನಿಷ್ಠುರ ಮೌಲ್ಯ ಪ್ರಜ್ಞೆ ಇಲ್ಲ. ಭವಭೂತಿ ಭಾವೋತ್ಕಟತೆಯಿಂದ ಬರೆಯುತ್ತಾನೆ. ಆದರೆ ಕಾಳಿದಾಸನ ಸೂಕ್ಷ್ಮ ಪರಿಶೀಲನೆ ಇಲ್ಲ. ವಿಶಾಖದತ್ತ ವಾಸ್ತವ ಮತ್ತು ಜಟಿಲತೆಗೆ ಮೀರಿದ ಕವಿ. ಆದರೆ ಕಾಳಿದಾಸನ ದರ್ಶನ ದೃಷ್ಟಿ ಇಲ್ಲ. ಕಾಳಿದಾಸನಲ್ಲಿ ಆಶ್ಚರ್ಯಕರವಾದ ಪರಿಪೂರ್ಣತೆ ಇದೆ. ಬಿಡಿಯಾಗಿರಲಿ, ಇಡಿಯಾಗಿರಲಿ, ಎಲ್ಲೆಲ್ಲೂ ಪರಿಪೂರ್ಣತೆಯ ಹರಹು. ಬಸವಣ್ಣ ಹೇಳಿದಂತೆ "ನುಡಿದರೆ ಮುತ್ತಿನ ಹಾರದಂತಿರಬೇಕು". ಅಂತೆಯೇ ಕಾಳಿದಾಸ ಒಂದು ಮುಕ್ತವಾಗಿಯೂ ಚೆನ್ನ, ಮುತ್ತಿನ ಹಾರವಾಗಿಯೂ ಚೆನ್ನ. ಸಾಹಿತ್ಯದಲ್ಲಿ ಸ್ವಾರಸ್ಯ ಮತ್ತು ಘನತೆ ಕಾದಿರಿಸಿಕೊಳ್ಳುತ್ತಾನೆ.

ಭಾರತದ ಸಂಸ್ಕೃತಿಯನ್ನು ತಿಳಿಯಬೇಕು ಅನ್ನುವವರು ರಾಮಾಯಣ, ಮಹಾಭಾರತ ಓದಬೇಕು. ಕಡೇ ಪಕ್ಷ ಕಾಳಿದಾಸನ ರಘುವಂಶ ಓದಲೇ ಬೇಕು. ರಘುವಂಶದ ಮೂಲಕೃತಿ ಓದಿದರೆ ಉತ್ತಮ ಪಕ್ಷ, ಇಲ್ಲ ಅನುವಾದವಾದವಾದರೂ ಓದಲೇ ಬೇಕು.

ಇಪ್ಪತ್ತನೇ ಶತಮಾನದ ವಿ. ರಾಘವನ್ ಪಂಡಿತನು ಹೇಳುತ್ತಾನೆ 'ಕಾಳಿದಾಸನು ಭಾರತೀಯ ಪರಂಪರೆಯನ್ನು ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಏಕಮೇವ ಪ್ರತಿನಿಧಿ' ಎಂದು. ಅದೂ ಅವನು ಸುಂದರವಾಗಿ, ಸತ್ವಯುತವಾಗಿ ಮತ್ತು ಸಾರ್ವಕಾಲಿಕವಾಗಿ ಪ್ರತಿನಿಧಿಸುತ್ತಾನೆ.

ಒಮ್ಮೆ ಒಳ್ಳೆ ಕವಿ ಯಾರೆಂದು ನಿರ್ಣಯಿಸಲು ಕಿರು ಬೆರಳು ಮಡಚಿ ಕಾಳಿದಾಸನೆಂದು ಎಣಿಸಿದರು. ಎರಡನೇ ಬೆರಳು ಮಡಚುವ ಹೆಸರೇ ಸಿಗಲಿಲ್ಲವಂತೆ. ಅದಕ್ಕೇ ಆ ಬೆರಳಿಗೆ ಅನಾಮಿಕಾ ಎಂದು ಹೆಸರು ಬಿತ್ತು ಎನ್ನುತ್ತಾರೆ. ಕಾಳಿದಾಸ ಬಗೆಗೆ ಹೊಸದೃಷ್ಟಿ ನೀಡುವ ಶ್ರೇಷ್ಠ ಕನ್ನಡ ಗ್ರಂಥಗಳು, ಎರಡು ಇವೆ. ಒಂದನೆಯದಾಗಿ ಆದ್ಯ ರಂಗಾಚಾರ್ಯರು ಬರೆದ 'ಕಾಳಿದಾಸ' ಎರಡನೆಯದು ಬಟವಾಡಿ ರಾಜಗೋಪಾಲಚಾರ್ಯರು ಬರೆದ 'ಕಾಳಿದಾಸನ ಉಪಮೆಗಳು'. ಕಾಳಿದಾಸನಲ್ಲಿ ಅಪೂರ್ವವಾದ ಗುಣಗಳಿವೆ. ಒಂದನೆಯದಾಗಿ ಅವನಲ್ಲಿ ವಿನಯವಿತ್ತು. ನಯ ಎಂದರೆ that which lead ಅರ್ಥಾತ್ ಯಾವುದು ವಿಶೇಷವಾಗಿ ಮುಂದುವರಿಸುತ್ತದೋ ಅದು, ಎಂದು. ಸುಕುಮಾರ ಪದಲಾಲಿತ್ಯ ಅವನ ವೈಶಿಷ್ಯ.

ಕಾಳಿದಾಸನ ಗುರಿ ದೊಡ್ಡದು. ದೊಡ್ಡ ಗುರಿ ಇಟ್ಟವರಿಗೆ ತಮ್ಮಲ್ಲಿ ಕೊರತೆ ಕಾಣಿಸುವುದು ಸಹಜ. ಕಾಳಿದಾಸನಿಗೆ ತನ್ನ ಕಾವ್ಯ ತುಂಬ ತಿಳಿದವರಿಗೆ ತೃಪ್ತಿಕೊಡಬೇಕು ಎಂಬುದೇ ಆಶಯ. ಕಾಳಿದಾಸನಲ್ಲಿ ಅಬ್ಬರ ಇಲ್ಲವೇ ಇಲ್ಲ. ಅತಿಶಯೋಕ್ತಿಯೂ ಇಲ್ಲ. ರಘುವಂಶದಲ್ಲಿ ಸಾವಿರದಿನ್ನೂರು ಶ್ಲೋಕಗಳಲ್ಲಿ ಇಪ್ಪತ್ತೊಂಭತ್ತು ರಾಜರ ಕತೆ ಹೇಳಿದ್ದಾನೆ. ಶಬ್ದಗಳ ದುಂದುವೆಚ್ಚ ಇಲ್ಲ. ಕೇವಲ ಐನೂರು ಶ್ಲೋಕಗಳಲ್ಲಿ ಇಡೀ ರಾಮಕಥೆ ಹೇಳಿದ್ದಾನೆ. ಕುವೆಂಪುರವರ 'ಶ್ರೀ ರಾಮಾಯಣ ದರ್ಶನಂ'ದಲ್ಲಿ ಹನುಮಂತನ ಸಮುದ್ರ ದಾಟುವ ಕತೆ ಓದುವಾಗ ಸಮುದ್ರದ ಹರಹು, ವಿಸ್ತಾರದ ಅರಿವಾಗುತ್ತದೆ. ವಾಲ್ಮೀಕಿ ಹೇಳಿದ 200 ಶ್ಲೋಕಗಳ ಈ ಕತೆಗೆ ಕಾಳಿದಾಸ ಎಂದು ಅಕ್ಷರಗಳಲ್ಲಿ ವರ್ಣಿಸುವನು. ಮಾರುತಿಃ ಸಾಗರಂ ಜೀರ್ಣ ಸಂಸಾರಮಿವ ನಿರಗಮ': ಅರ್ಥಾತ್ ಮಾರುತಿ ಸಂಸಾರ ಸಾಗರದಂತೆ ಸಾಗರ ದಾಟಿದನು' ಎನ್ನುತಾನೆ.

ಸಮುದ್ರ ದಾಟುವಾಗ ಆದಿ ಭೂತ, ಆದಿ ದೈವಿಕ, ಆದಿ ಆತ್ಮಿಕ ತೊಂದರೆಗಳು ಬರುತ್ತವೆ. ಹನುಮಂತನು ವೈನಾಕ ಪರ್ವತವನ್ನು ಸ್ನೇಹದಿಂದಲೂ, ದೇವತೆಗಳ ಅಡ್ಡಿಯನ್ನು ಜಾಣ್ಮೆಯಿಂದಲೂ, ಸಿಂಹಿಕೆಯ ನೆರಳು ಹಿಡಿದು ದಾಟಿ ಅವಳ ಸಂಹಾರ ಮಾಡುತ್ತಾನೆ. ಇಲ್ಲಿ ಅಹಂಕಾರ ತ್ಯಜಿಸಿ ಪಾರದರ್ಶಕತನ ಪಡೆಯುತ್ತಾನೆ. ಇಲ್ಲಿ ದರ್ಶನದ ಧ್ವನಿ ಇದೆ. ಸಂಸಾರ ಸಾಗರ ದಾಟುವಲ್ಲಿ ಎಷ್ಟೇ ತೊಂದರೆಗಳು ಬಂದರೂ ಸ್ನೇಹ, ಜಾಣ್ಮೆ, ನಿರಹಂಕಾರಿಯಾಗಿದ್ದರೆ ದಾಟಲು ಕಷ್ಟವಿಲ್ಲ.

ಕಾಳಿದಾಸನಿಗೆ ಸಣ್ಣದು ದೊಡ್ಡದು ಎಂಬ ಭೇದ ಭಾವವಿಲ್ಲ. ಅಜ ಮಹಾರಾಜ ವಿದರ್ಭ ದೇಶದ ರಾಜಕುಮಾರಿಯ ಸ್ವಯಂವರಕ್ಕೆ ಬಂದಾಗ ಅವನ ಶಯ್ಯಾಗಾರಕ್ಕೆ ಹೂವಿನ ಮಾಲೆ ಕಟ್ಟಿದ್ದರು. ಅಜ ಮಹಾರಾಜನನ್ನು ಬೆಳಿಗ್ಗೆ ಎಚ್ಚರಿಸಲು ವಂದಿಮಾಗಧರು 'ಕೌಸಲ್ಯಾ ಸುಪ್ರಜಾರಾಮ' ಹಾಡುತ್ತಾರೆ. ಆಗ ಶಯ್ಯಾಗಾರಕ್ಕೆ ಕಟ್ಟಿದ ಹೂಮಾಲೆ ಒಣಗಿ ಹೂವು ದೂರದೂರವಾಗಿರುವುದನ್ನು ವರ್ಣಿಸುತ್ತಾರೆ. ಇಂತಹ ಸೂಕ್ಷ್ಮ ಕಾಳಿದಾಸನ ವರ್ಣನೆಗಳಲ್ಲಿದೆ. ಅಷ್ಟೇ ಅಲ್ಲ. ಮೇಘ ದೂತದಲ್ಲಿ ಮೋಡಗಳಿಗೆ ಉದ್ದೇಶಿಸಿ, "ಮೋಡಗಳೇ, ಭೂಮಿ ಬಂಜೆ ಅಲ್ಲ. ನೀವು ಭೂಮಿಗೆ ಬರುವಾಗ ಒಮ್ಮೆ ಗುಡುಗಿದಾಗಲೇ ಭೂಮಿಯಲ್ಲಿ ನಾಯಿಕೊಡೆಗಳು ಹುಟ್ಟುತ್ತವೆ" ಹೀಗೆ ನಾಯಿ ಕೊಡೆಗಳಂತಹ ಅತಿ ಸಣ್ಣ ವಿಷಯಗಳನ್ನು ವರ್ಣಿಸುತ್ತಾನೆ. ಹಾಗೇ ಅರಳೀ ಮರಗಳಲ್ಲಿ ಮಳೆಗಾಲ ಬರುವ ಸೂಚನೆ ಕಂಡು ಕಾಗೆಗಳು ಗೂಡು ಕಟ್ಟಲು ಜಗಳಾಡುತ್ತ ಸದ್ದು ಗದ್ದಲ ಮಾಡುತ್ತದೆ ಎನ್ನುತ್ತಾನೆ. ಕಾಳಿದಾಸ ಪ್ರಕೃತಿ ಪರಿವೇಷವನ್ನು ಎಲ್ಲೂ ಬಿಡದೆ ವರ್ಣಿಸಿದ್ದಾನೆ. ಪ್ರಪಂಚದ ಪ್ರೀತಿಯಲ್ಲಿ ಎಷ್ಟು ಮುಳುಗಿದ್ದನೋ ಅಷ್ಟೇ ಪ್ರೀತಿಯಿಂದ ದೂರವೂ ಇದ್ದಾನೆ. ಇದ್ದೂ ಇಲ್ಲದಂತೆ. ಏಕೆಂದರೆ ಅವನ ಹೇಳಿಕೆಯಂತೆ ಈ ಬದುಕು ಬಹಳ ಸುಂದರ, ಆದರೆ ಇನ್ನೊಂದು ಜನ್ಮ ಬೇಡ' ಎನ್ನುತ್ತಾನೆ.

ಕಾಳಿದಾಸ ಜೀವನದ ನಿರಾಸಕ್ತಿಯನ್ನು ರಘುವಂಶದ ಮೊದಲ ರಾಜ ದಿಲೀಪನ ವರ್ಣನೆಯಲ್ಲಿ ಹೇಳುತ್ತಾನೆ. ಮೂವತ್ತೆರಡು ಅಕ್ಷರಗಳ ಶ್ಲೋಕದಲ್ಲಿ ಜೀವನದ ಅದ್ಭುತ ತತ್ವ ಹೇಳಿದ್ದಾನೆ. ರಾಜಾ ದಿಲೀಪನಿಗೆ – ಸಾವಿನ ಹೆದರಿಕೆ ಇಲ್ಲ. ಆದರೆ ಶರೀರ ಚೆನ್ನಾಗಿ ಕಾಪಾಡಿದ್ದಾನೆ. ಸ್ವರ್ಗ ನರಕದ ಹೆದರಿಕೆ ಇಲ್ಲ. ಆದರೆ ಸತ್ಕರ್ಮ ತುಂಬಾ ಮಾಡುತ್ತಾನೆ. ದುರಾಶೆ ಇಲ್ಲ. – ಧನ ತುಂಬಾ ಸಂಪಾದಿಸುತ್ತಾನೆ. ಮೋಹ ಇಲ್ಲ – ಸುಖ ತುಂಬಾ ಅನುಭವಿಸುತ್ತಾನೆ.

ಹೀಗೆ ಇದ್ದೂ ಇಲ್ಲದಂತಿರುವ ಹೋಲಿಕೆಗಳು ಇಡೀ ಭಾರತೀಯ ಸಾಹಿತ್ಯದಲ್ಲೇ ಇಲ್ಲ. ಇದೇ ಜೀವನದ ದರ್ಶನ. ಇದನ್ನು ಕಾಳಿದಾಸ ತನ್ನ ಆರಾಧ್ಯದೇವ ಶಿವನಿಂದ ಪಡೆದಿದ್ದಾನೆ. ಎಲ್ಲರಿಗೂ ಐಶ್ವರ್ಯ ಕೊಡುವವನೇ ಈಶ್ವರ. ಆದರೆ ತಾನು? ಚರ್ಮಾಂಬರಧಾರಿ. ಒಮ್ಮೊಮ್ಮೆ ದಿಗಂಬರನೂ ಹೌದು. ಅರ್ಧ ನಾರೀಶ್ವರನಾಗಿ ಹೆಂಡತಿಯನ್ನು ಮೈಯಲ್ಲೇ ತುಂಬಿಸಿದರೂ, ತಾನು ವೈರಾಗ್ಯ ಶಿಖಾಮಣಿಯಾಗಿದ್ದಾನೆ.

ಕಾಳಿದಾಸ ಅರ್ಧನಾರೀಶ್ವರ ರೂಪವನ್ನು ಚೆನ್ನಾಗಿ ಪರಿಚಯಿಸಿದ್ದಾನೆ.

ಉಟ್ಟಬಟ್ಟೆ ಸಡಿಲಾಗಿಲ್ಲ
ಪರಸ್ಪರ ಮುಖ ನೋಡುವ ಹಾಗಿಲ್ಲ
ತುಟಿಗೆ ತುಟಿ ಹಚ್ಚಲಾಗುವುದಿಲ್ಲ
ಕಣ್ಣಿಗೆ ಕಣ್ಣೂ ನೋಟ ಬೆರಸುವಂತಿಲ್ಲ
ತೋಳಿಗೆ ತೋಳು ಹಚ್ಚುವಂತಿಲ್ಲ.
ಇದು ವಿಯೋಗವೇ? ಸಂಯೋಗವೇ?

ಶಿವ ಅಂಟಿಯೂ ಅಂಟದಂತೆ ಇರುವ ದೇವ. ತನ್ನ ಎಂಟು ರೂಪಗಳಾದ – ಪಂಚ ಭೂತಗಳು, ಸೂರ್ಯ, ಚಂದ್ರ ಸೋಮಾಯಾಜಿಗಳಿಂದ ಜಗತ್ತನ್ನು ಕಾಯುತ್ತಾನೆ. ಆದರೆ ಗರ್ವವಿಲ್ಲ. ಎಲ್ಲ ತಪಸ್ಸುಗಳಿಗೆ ಫಲ ಕೊಡುವ ಶಿವನೇ ಅದೇಕೆ ತಪಸ್ಸು ಮಾಡುತ್ತಾನೋ ಎಂಬುದೇ ಕಾಳಿದಾಸನ ಪ್ರಶ್ನೆ. ಕುಮಾರ ಸಂಭವದಲ್ಲಿ ಯಾವುದನ್ನು ಅದಕ್ಕಾಗಿ ಮಾಡುತ್ತಾರೋ ಅದೇ ಮೌಲ್ಯ ಬೇರೆಯದಕ್ಕಾಗಿ ಮಾಡಿದರೆ ಮೌಲ್ಯ ಇಲ್ಲ. ಅನನ್ಯವಾಗಿ ಮಾಡುವುದು ಮೌಲ್ಯ. ನೀರು ಬಾಯಾರಿಕೆ ಇಂಗಿಸುತ್ತದೆ ಆದ್ದರಿಂದ ಅದಕ್ಕೆ ಮೌಲ್ಯವಿದೆ.

ಡಿ.ವಿ.ಜಿ.ಯವರ ಹೇಳಿಕೆಯಂತೆ 'ಹೊರಗೆ ಲೋಕಾಸಕ್ತಿ ಒಳಗೆ ವಿರಕ್ತಿ' ಕಾಳಿದಾಸನ ಆದರ್ಶಗಳು. ಅಥರ್ವ ವೇದದಲ್ಲಿ ಬರುವ ಸುಂದರ ಹೇಳಿಕೆ – ನೂರು ಕೈಯಿಂದ ಸಂಪಾದಿಸುವಂತಾಗಲಿ, ಸಾವಿರ ಕೈಗಳಿಂದ ವಿತರಿಸುವಂತಾಗಲಿ ಹಾಗೆ ರುದ್ರ ಛಾಯೆಯಲ್ಲಿ ಹೇಳಿದಂತೆ ತಿನ್ನುವಾಗ ನನ್ನೊಡನೆ ಗೆಳೆಯನೊಬ್ಬನಿರಲಿ, ಕುಡಿಯುವಾಗ ಜೊತೆಗಾರನೊಬ್ಬನಿರಲಿ, ಜೀವನದ ಉತ್ಕಟ ಪ್ರೀತಿ ಇಲ್ಲಿ ತುಂಬಿ ತುಳುಕುತ್ತಿದೆ. ಪ್ರೀತಿಯ ಉದಾತ್ತತೆ ಕಾಳಿದಾಸನ ಜೀವನದ ದರ್ಶನ.

ಕಾಳಿದಾಸನ ಕೃತಿಗಳು: 1. ಋತು ಸಂಹಾರ 2) ಮಾಳವಿಕಾಗ್ನಿ ಮಿತ್ರಂ. 3) ವಿಕ್ರಮೋರ್ವಶ್ರೀಯಂ 4) ಮೇಘದೂತ 5) ಕುಮಾರ ಸಂಭವ 6) ಶಾಕುಂತಲ 7) ರಘುವಂಶ

ಕಾಳಿದಾಸನು ಈ ಏಳು ಕೃತಿಗಳನ್ನು ಬರೆದಿದ್ದಾನೆ. ಆದರೆ ಕೃತಿಗಳ ವಿಕಾಸಕ್ರಮ ಊಹೆಯಷ್ಟೆ. ಜಗತ್ತಿಗೆ ಭಾರತೀಯರ ದೊಡ್ಡ ಕೊಡುಗೆ ಎಂದರೆ . . . .


ಪುರುಷಾರ್ಥ ಚತುಷ್ಟಯ ಧರ್ಮ, ಕಾಮ, ಅರ್ಥ ಮೋಕ್ಷ. ಜಗತ್ತಿನ ಬೇರೆ ಬೇರೆ ದೇಶಕಾಲಗಳಲ್ಲಿ ಕಾಮದ ಚಿಂತನೆ ನಡೆದಿದೆ. ಎಲ್ಲ ಬಯಕೆಗಳ ಮೂಲ ಕೊರತೆ. ಕೊರತೆಗಳ ಮೂಲ ಅಜ್ಞಾನ. ಈ ಕೊರತೆಗಳನ್ನು

ಹೋಗಲಾಡಿಸುವ ಪರಿಕರವೇ ಅರ್ಥ. ಅವಿದ್ಯೆಯಿಂದ ಕಾಮ, ಕಾಮದಿಂದ ಬಯಕೆ, ಅರ್ಥವು ಸಾಧನ, ಬಾಯಾರಿಕೆ ಕಾಮವಾದರೆ ನೀರು ಅರ್ಥವಾಗುತದೆ. ಧರ್ಮ – ನೀರು ಬೇಕಷ್ಟು ಕುಡಿ, ಆದರೆ ಉಳಿದ ನೀರನ್ನು ಒಯ್ಯುತ್ತೇನೆ ಅನ್ನುವುದು ಧರ್ಮವಲ್ಲ. ಜಗತ್ತಿನೊಂದಿಗೆ ಹೊಂದಾಣಿಕೆ ಬೇಕು. ಇದೇ ವೈಶ್ವಿಕ ನಿಯಮ. ಇದೇ ಧರ್ಮ. ಧರ್ಮವೆಂದರೆ ವಿವಿಧ ಮತಗಳ.. religious ಅಲ್ಲ. ಡಿಮಾಂಡ್ ಆಂಡ್ ಸಪ್ಲಾಯ್‌ಗಳ ಚಕ್ರದಲ್ಲಿ detachment ಮೋಕ್ಷ ಬಯಕೆಗಳನ್ನು ಸೀಮಿತದಲ್ಲಿಟ್ಟರೆ ಮಿಕ್ಕಿದ್ದು ತಾನೇ ಸರಿಹೋಗುತ್ತದೆ. ಕಾಳಿದಾಸನ ಏಳು ಕೃತಿಗಳಲ್ಲೂ ಕಾಮದ ಬಗೆಗೆ ಚಿಂತನೆ ಇದೆ. ನಾನು ನನ್ನ ಜೊತೆಗಾರ್ತಿ, ನನ್ನ ಮನೆ, ನಾವಾಗಿ ಹಾಯಾಗಿ ಎಂಬೀ ವಿಚಾರಗಳನ್ನು ಕಾಳಿದಾಸ ಚಿತ್ರಿಸಿದ್ದು 'ಋತು ಸಂಹಾರದಲ್ಲಿ' ಇದು ಒಂದು ಕಾವ್ಯ. ಆರೂ ಋತುಗಳ ಸೌಂದರ್ಯ ನೋಡಿದ. ಋತು ಸಂಹಾರದಲ್ಲಿ ಸಾಮಾನ್ಯರನ್ನೇ ಚಿತ್ರಿಸಿದ್ದಾನೆ. ಕಾಳಿದಾಸ ನಂತರ ಬರೆದಿರಬೇಕು. ನಾಟಕ ಮಾಳವಿಕಾಗ್ನಿಮಿತ್ತ ಇದು ರಾಜನ ಕತೆ. ಅಗ್ನಿಮಿತ್ರ ರಾಜ. ನಾಯಕ ಮಾಲವಿಕಾ ನಾಯಕಿ. ಅಗ್ನಿಮಿತ್ರ ರಾಜನಾದುದರಿಂದ ಹತ್ತು ಹೆಂಡಂದಿರು. ಬಯಕೆಯ ಸಾಕಾರ ರೂಪವಾಗಿ ಹೆಣ್ಣು ಪ್ರತೀಕವಾಯಿತು. ಅಗ್ನಿಮಿತ್ರ ರಾಜನಾಗಿ ಸಾಕಷ್ಟು ಸಂಪತ್ತು, ಅಧಿಕಾರ, ಯೌವನ, ಭೌತಿಕ ಸುಖ ಇದ್ದರೂ ಸಂತೋಷ ಇಲ್ಲ. ಕಾಳಿದಾಸ ಮುಂದಿನ ನಾಟಕದಲ್ಲಿ ದೇವಾಂಶ ಸೇರಿದ 'ವಿಕ್ರಮೋರ್ವಶಿಯಂ' ಬರೆದ. ಪುರೂರವ ಭೂಮಿಯ ಪುತ್ರ ಅರ್ಧ ದೇವ, ಅರ್ಧ ಮಾನವ ಕಾರಣ ದಯ ಪರಂಪರೆ. ಊರ್ವಶಿ ದೇವಲೋಕದ ಅಪ್ಸರೆ. ಅಲ್ಲಿಯೂ ಕಾಮಕ್ಕೆ ಪೂರ್ಣ ಉತ್ತರ ಸಿಗಲಿಲ್ಲ. ಜೀವನ ಪರಿಪೂರ್ಣತೆ ಅನುಭವಕ್ಕೆ ಬಂದಿಲ್ಲ. ಕಾಳಿದಾಸನ ಮುಂದಿನ ಕೃತಿ 'ಮೇಘದೂತ' ಕಾವ್ಯ. ನಾಯಕ, ನಾಯಕಿ ಇಬ್ಬರ ದೇವಾಂಶ ಸಂಭೂತರು. ರಾಮಟೇಕದಿಂದ ಅಲಕಾ ನಗರಿ ತನಕವೂ ಆಗುತಿರುವ ಮಳೆ – ಮಳೆಗಾಲದ ವರ್ಣನೆ ಅದ್ಭುತ! ಕವಿಗಳು 'ಮಾಘೇ ಮೇಘೇ ಗತಂ ವಯ' ಎಂಬ ಉದ್ಗಾರ ತೆಗೆದರು. ಇಡೀ ವಯಸ್ಸು ಮೇಘದೂತ ಓದುವುದರಲ್ಲೇ ಕಳೆಯಿತು ಎಂದು. ಮೇಘದೂತದ ಯಕ್ಷರು, ಕಾಲಾತೀತ ಸೌಂದರ್ಯವನ್ನು ನೋಡಿದರು. ಅಲಕಾನಗರಿಯ ಹೆಂಗಳೆಯರು ವರ್ಷವಿಡೀ ದೊರಕುವ ಹೂಗಳನ್ನು ಏಕಕಾಲದಲ್ಲಿ ಧರಿಸಿ ಕಾಲಾತೀತತೆಯನ್ನು ತೋರಿಸುತ್ತಾರೆ. ಅವರ ಅಲಂಕಾರವೇ ಹೂಗಳು. ಆ ಹೆಂಗಳೆಯರು. .. ಕೈಗಳಲ್ಲಿ ಶರತ್ಕಾಲದ ಹೂವು ಕಮಲವನ್ನು ಮುಂಗುರಳಲ್ಲಿ ಹೇಮಂತ ಋತುವಿನ ಸೂಜಿ ಮಲ್ಲಿಗೆಯನ್ನು ಮುಖದಲ್ಲಿ ಶಿಶಿರ ಋತುವಿನ ಪುಷ್ಪ ಲೋಧ್ರದ ಪರಾಗ ಅಂದ ಹೆಚ್ಚಿಸಲು ಬಳಿದುಕೊಳ್ಳುತ್ತಾರೆ.

ಜಡೆಯ ಹಿಂದೆಲೆಯಲ್ಲಿ ವಸಂತ ಋತುವಿನ ಪುಷ್ಪಗಳನ್ನು ಕರ್ಣ ಕುಂಡಲಗಳಂತೆ, ಗ್ರೀಷ್ಮ ಋತುವಿನ ಶಿರೀಷ ಪುಷ್ಪವನ್ನು ಬೈ ತಲೆಯಲ್ಲಿ ಮಳೆಗಾಲದ ಕದಂಬ ಪುಷ್ಪವನ್ನು ಏಕಕಾಲದಲ್ಲಿ ಧರಿಸುತ್ತಾರೆ. ಕಾಳಿದಾಸನ ಮುಂದಿನ ಕೃತಿಯೇ – 'ಕುಮಾರಸಂಭವ'

ಶಿವ ಪಾರ್ವತಿ ಜಗತ್ತಿನ ಮಾತಾಪಿತರ ಬಗೆಗೇ ಬರೆಯುತ್ತಾನೆ. ಇದರಲ್ಲಿ ಕಾವ್ಯ ಮೀಮಾಂಸೆಯ ಪರಮಾವಧಿ ಕಂಡು ಬರುತದೆ. ಶಿವ ತಪಸ್ಸಿಗೆ ಕುಳಿತಿರುವಾಗ ಅವನ್ನು ಒಲಿಸಲು ಪಾರ್ವತಿ ಪರಿಚರ್ಯೆ ಮಾಡುತಾಳೆ. ಬಳಲಿಕೆ ಬಂದಾಗ ಶಿವನು ಚಂದ್ರನ ಬಳಿ ನಿಂತು ಬಳಲಿಕೆ ನಿವಾರಿಸುತ್ತಾಳೆ. ಶಿವ ತನ್ನ ಎಂಟು ರೂಪಗಳಲ್ಲಿ ಒಂದಾದ ಅಗ್ನಿ ಹೋತ್ರಕ್ಕೆ ಆಹುತಿ ನೀಡಲು ಪಾರ್ವತಿ ಹವಿಸ್ಸನ್ನು ತರುತ್ತಾಳೆ. ಹೆಣ್ಣು ಇಲ್ಲ ಪ್ರತೀಕವಾಗುತ್ತಾಳೆ. ಜೀವನಕ್ಕೆ ಉತ್ತೇಜನ ನೀಡುವವಳೂ, ಜೀವನದ ಸಂಕಷ್ಟಗಳನ್ನು ನಿವಾರಿಸುವವಳೂ ಆಗುತ್ತಾಳೆ. ಹೆಣ್ಣನ್ನು ಅರ್ಥಮಾಡಿಕೊಂಡರೆ ಜೀವನ ಸುಗಮ ಎನ್ನುತ್ತಾರೆ ಕಾಳಿದಾಸ. ಪಾರ್ವತಿ ತನ್ನ ಸೊಂಟಕ್ಕೆ ಅನೇಕ ಕಮಲಗಳಿರುವ ಬಳ್ಳಿಗಳನ್ನು ಸುತ್ತಿಕೊಂಡಿರುವುದನ್ನು ಕಂಡು ಮನ್ಮಥನು ಅದನ್ನೇ ಬಿಲ್ಲಾಗಿ ಮಾಡಿ ಪಾರ್ವತಿಯನ್ನು ಅಸ್ತ್ರವನ್ನಾಗಿ ಉಪಯೋಗಿಸುತ್ತಾನೆ. ಮುಕ್ಕಣ್ಣ ಕಣ್ಣು ತೆರೆದಾಗ ಪಾರ್ವತಿಯ ತೊಂಡೆ ಹಣ್ಣಿನಂತಹ ಕೆಂದುಟಿಗಳನ್ನು ನೋಡಿ ಅವನ ಬೆಂಕಿಕಣ್ಣು ತಣ್ಣಗಾಯಿತು. ಚಂದ್ರೋದಯದಿಂದ ಸಮುದ್ರ ಹೊಯ್ದಾಡುವಂತೆ ಶಿವ ಅಧೀರನಾದ. ಮತ್ತೆ ಕ್ರೋಧ ಪ್ರಜ್ವಲಿಸಿ ಅಂತರಂಗದಲ್ಲಿರುವ ಮನ್ಮಥನನ್ನು ಸುಟ್ಟುಬಿಟ್ಟ, ಹೊರಗಿನ ಮನ್ಮಥ ಬೂದಿಯಾಗಿದ್ದ. ಹರಿಹರ ಶಿವನ ಕ್ರೋಧವನ್ನೇ ಅತುಲವಾಗಿ ವರ್ಣಿಸಿದ್ದಾನೆ. ಅದರೆ ಕಾಳಿದಾಸನ ಔಚಿತ್ಯ ಪ್ರಜ್ಞೆ ಮನ್ಮಥನನ್ನು ತಕ್ಷಣ ಸುಡುವುದರಲ್ಲಿ ಕಂಡು ಬರುತ್ತದೆ. ಪಾರ್ವತಿ ತನ್ನ ಚರ್ಮದಾಳದ ಸೌಂದರ್ಯದ ವ್ಯರ್ಥತೆ ತಿಳಿದು ತಪಸಿಗೆ ಹೋಗುತ್ತಾಳೆ. ತಪಸ್ಸಿಗೆ ಮೆಚ್ಚಿದ ಶಿವ ಪಾರ್ವತಿಯನ್ನು, ಹಿಮವಂತನ, ಸಪ್ತರ್ಷಿಗಳ ಒಪ್ಪಿಗೆಯ ಮೇರೆಗೆ ಮದುವೆಯಾಗುತ್ತಾನೆ. ನಂತರ ಕಾಮ ಪುನಃ ಹುಟ್ಟುತಾನೆ. ಆದರೆ ಅನಂಗ. ರತಿ ಮಾತ್ರ ನೋಡಬಲ್ಲಳು. ಕಾಮವೆಂದರೆ ಅನಂಗನು ಶರೀರವನ್ನು ಮೀರಿಹೋಗಬಾರದು. ಯಾವುದೇ ಆಶೆಗೆ ಮಿತಿ ಇದೆ. 'ಗೃಹಸ್ಥಾಶ್ರಮ ಸರ್ವಾಶ್ರಮ ರಕ್ಷಣ' ಎಂಬಂತೆ ಗೃಹಸ್ಥನು ಕ್ರಮವಾಗಿ ಮುಂದಿನ ಏಳಿಗೆಯನ್ನು ಸಾಧಿಸುತ್ತಾನೆ ಎನ್ನುತ್ತಾನೆ ಕಾಳಿದಾಸ.

ಕಾಳಿದಾಸನ ಮುಂದಿನ ನಾಟಕ 'ಶಾಕುಂತಲ' ನಾಯಕ ಒಂದು ಚಾಕ್ಷುಷ ಯಾಗ. ಇದನ್ನು ಪಂಚಮವೇದವೆಂದೂ ಕರೆದಿದ್ದಾರೆ. 'ಶಾಕುಂತಲ' ಈ ನಾಟಕದಲ್ಲಿ ಮನುಷ್ಯಲೋಕವನ್ನೇ ಪ್ರಧಾನವಾಗಿಟ್ಟು ದುಷ್ಯಂತ – ಶಕುಂತಲೆಯರ ರಸ, ಭಾವಪೂರ್ಣವಾದ ಕತೆ ಚಿತ್ರಿಸಿದ್ದಾನೆ. ನಾಟಕ ಧ್ವನಿಪೂರ್ಣವಾಗಿದ್ದು ಅಪರೋಕ್ಷವಾಗಿ ಸಂದೇಶ ಕೊಡುತ್ತದೆ. ಕಾಳಿದಾಸನ ಮುಂದಿನದು ಮಹಾಕಾವ್ಯ'. ಅದೇ ರಘುವಂಶ. ಇದರಲ್ಲಿ ಪುರುಷಾರ್ಥ ಚತುಷ್ಟಯಕ್ಕೂ, ನಾಲ್ಕು ಆಶ್ರಮ ಶೈಶವ, ಯೌವನ (ಗೃಹಸ್ಥ), ವಾರ್ಧಕ್ಯ ಮತ್ತು ಸಂನ್ಯಾಸ ಇವುಗಳ ಕರ್ತವ್ಯಗಳನ್ನು ಹೇಳಿದ್ದಾನೆ. ಶೈಶವದಲ್ಲಿ ವಿದ್ಯೆ, ಯೌವನದಲ್ಲಿ (ಗೃಹಸ್ಥ) ಸುಖ, ವಾರ್ಧಕ್ಯದಲ್ಲಿ ವಾನಪ್ರಸ್ಥ ಮತ್ತು ಸನ್ಯಾಸ ಇವುಗಳು ಇರಬೇಕು ಎನ್ನುತ್ತಾನೆ. ರಘುವಂಶದ ರಾಜರು ಯೋಗದಿಂದ ಶರೀರ ಬಿಟ್ಟರೇ ಹೊರತು ರೋಗದಿಂದಲ್ಲ. ಅವರು ಯುದ್ಧ ಮಾಡುವಾಗ ರಥದಲ್ಲಾದರೂ ಪ್ರಾಣ ಬಿಟ್ಟಿರಬಹುದು. ಇಲ್ಲ ದರ್ಭೆಯ ಮೇಲೆ ಪ್ರಾಣ ಬಿಟ್ಟಿರಬಹುದು. ಹೀಗೆ ಕಾಳಿದಾಸನು ಬದುಕಿಗೆ ಒಂದು ಬಹುದೊಡ್ಡ ಮೌಲ್ಯ ಕಲ್ಪಿಸುತ್ತಾನೆ, ಕೊಡುತ್ತಾನೆ. ಕಾಳಿದಾಸನನ್ನು ಶೃಂಗಾರ ಕವಿ ಎನ್ನುತ್ತಾರೆ. 'ಶೃಂಗೇ ರೀಯತೆ ಇತಿ ಶೃಂಗಾರ; ಅರ್ಥಾತ್ ಶಿಖರಕೊಯ್ಯುವ ಭಾವ. ಕಾಳಿದಾಸನು ಶೃಂಗಾರವೆಂದರೆ ವಿಶ್ವವನ್ನು ನಮ್ಮೊಳಗೆ ಉಂಟು ಮಾಡುವ ವಿಭಾವ ಎಂದು ಅರ್ಥೈಸುತ್ತಾನೆ. ಆದುದರಿಂದ ಕಾಳಿದಾಸನು ದೊಡ್ಡವನು.



ಅಸೋಸಿಯೇಶನ್‌ಗೆ ಭೇಟಿ ಕೊಟ್ಟ ಹಾ. ಮಾ. ನಾಯಕ ಅವರು ಸಂದರ್ಶಕರ ಡೈರಿಯಲ್ಲಿ ಬರೆದ ಹಸ್ತಾಕ್ಷರ

## ದತ್ತಿ ಉಪನ್ಯಾಸ – ಫೆಬ್ರವರಿ 2006

### ಪ್ರೊ. ಎಂ. ಎಚ್. ಕೃಷ್ಣಯ್ಯ ಅವರ ಉಪನ್ಯಾಸ


ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಮೈಸೂರು ಅಸೋಸಿಯೇಷನ್ ಮುಂಬಯಿ ಮತ್ತು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಡಿ.ವಿ.ಜಿ. ಸಂಸ್ಮರಣೆಯ ಮುಖ್ಯ ಉಪನ್ಯಾಸವನ್ನು ಪ್ರೊ. ಎಂ. ಎಚ್. ಕೃಷ್ಣಯ್ಯ ಪ್ರಸ್ತುತ ಪಡಿಸುತ್ತಾ ಅವರಿಗೆ ಗಹನವಾದ ತತ್ವಗಳನ್ನು ಬಾಳಿನೊಳಗಿನ ಸಂಘರ್ಷ ದ್ವಂದ್ವಗಳನ್ನು ಸರಳ ಆದರೂ ಪರಿಣಾಮಕಾರಿಯಾಗಿ ಹೇಳುವ ಕಲೆಯು ಡಿ.ವಿ.ಜಿ.ಯವರಿಗೆ ಕರಗತವಾಗಿತ್ತು. 'ವಿರಕ್ತ ರಾಷ್ಟ್ರಕ' ಎಂಬ ವಿಶೇಷಣವು ಅವರಿಗೆ ಚೆನ್ನಾಗಿ ಹೊಂದಿಕೆಯಾಗುತ್ತದೆ ಎಂದು ವಿಶ್ಲೇಷಿಸಿದರು. ಇನ್ನೊಬ್ಬ ಉಪನ್ಯಾಸಕರಾಗಿದ್ದ ಬೆಂಗಳೂರಿನ ಎಸ್. ಆರ್. ಆರ್. ರಾಮಸ್ವಾಮಿಯವರು ಡಿ.ವಿ.ಜಿ.ಯವರ ಸಾರ್ವಜನಿಕ ಜೀವನದ ಬಗೆಗಿನ ಮಾಹಿತಿಗಳನ್ನು ಅನನ್ಯ ಸಂಘ ಸಂಸ್ಥೆಗಳ ಸಂಸ್ಥಾಪಕ ಹಾಗೂ ಸಂಘಟಕರಾಗಿ ಡಿ.ವಿ.ಜಿ.ಯವರ ಕಾರ್ಯವೈಖರಿಗಳ ಸಮಗ್ರ ಪರಿಚಯವನ್ನು ಮಾಡಿಕೊಟ್ಟರು.

ಇನ್ನೊಬ್ಬ ಉಪನ್ಯಾಸಕರಾಗಿ ಉಡುಪಿಯ ಡಾ. ಪಾದೇಕಲ್ ವಿಷ್ಣು ಭಟ್‌ರು ಡಿ.ವಿ.ಜಿ.ಯವರ "ಜೀವನ ಧರ್ಮ ಯೋಗ" ಕೃತಿಯ ಸಂರಚನೆ ವರ್ಗೀಕರಣ ವಿಧಾನ ಹಾಗೂ ವೈಶಿಷ್ಟ್ಯಗಳನ್ನು ಉದಾಹರಣೆಗಳೊಂದಿಗೆ ವಿವರಿಸಿದರು.

ಮುಂಬಯಿಯ ಡಾ. ರಘುನಾಥ್ ಅವರು ಡಿ.ವಿ.ಜಿ.ಯವರ "ಜ್ಞಾಪಕ ಚಿತ್ರ ಶಾಲೆ"ಯ ಹಲವು ಒಳ ಹೊರ ಅಂಗಣಗಳ ರೂಪು ರೇಷೆಗಳನ್ನು ನಿರೂಪಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀಮತಿ ಗೀತಾ ನಾಗಭೂಷಣ ಅವರು "ಮಹಿಳಾ ಸಾಹಿತಿಗಳಿಗೆ ಧ್ವನಿ ನೀಡುವ, ಅವರ ಸಾಧನೆಗಳನ್ನು ಸಾಹಿತ್ಯ ಚರಿತ್ರೆಗಳಲ್ಲಿ ಗುರುತಿಸುವ ಕೆಲಸಗಳು ಅಗತ್ಯವಾಗಿದೆ ಹಾಗೂ ಡಿ.ವಿ.ಜಿ.ಯವರ ಬರಹಗಳು ಮರು ಮುದ್ರಣ ಮತ್ತು ಮೌಲ್ಯ ಮಾಪನಗಳು ನಡೆಯಬೇಕಾಗಿದೆ" ಎಂದರು.

ಮೈಸೂರು ಅಸೋಸಿಯೇಷನ್ನಿನ ನೇಸರು ತಿಂಗಳೋಲೆಯ ಡಿ.ವಿ.ಜಿ. ವಿಶೇಷ ಸಂಚಿಕೆಯನ್ನು ಗೀತಾ ನಾಗಭೂಷಣ ಅವರು ಬಿಡುಗಡೆಗೊಳಿಸಿದರು. ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ತಾಳ್ತಜೆ ವಸಂತ ಕುಮಾರರು "ಕನ್ನಡ ಸಾಹಿತ್ಯದ ಶಿಖರ ಸ್ಥಾನದಲ್ಲಿರುವ ಡಿ.ವಿ.ಜಿ.ಯವರ ಸಂಸ್ಮರಣೆಯು ಕನ್ನಡಿಗರೆಲ್ಲರಿಗೂ ಉಪದೇಶವೇ ಆಗಿದೆ. ಪರಂಪರೆ ಮತ್ತು ಆಧುನಿಕತೆಗಳನ್ನು ಬೆರೆಸಿಕೊಂಡು ಬದುಕಿದ ಅವರಂತವರ ಮಾದರಿಗಳು ಅನುಸರಣ ಯೋಗ್ಯವಾಗಿದೆ" ಎಂದರು.

ಅಸೋಸಿಯೇಷನ್ನಿನ ಅಧ್ಯಕ್ಷರಾದ ಹಾಗೂ ಡಿ.ವಿ.ಜಿ.ಯವರ ತಮ್ಮನ ಮಕ್ಕಳಾದ ಶ್ರೀ. ಎಸ್. ದೊರೆಸ್ವಾಮಿಯವರು ಸಮಾರಂಭದ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ●



ಅಸೋಸಿಯೇಶನ್‌ಗೆ ಭೇಟಿ ಕೊಟ್ಟ ಚಿದಾನಂದ ಮೂರ್ತಿ ಅವರು ಸಂದರ್ಶಕರ ಡೈರಿಯಲ್ಲಿ ಬರೆದ ಹಸ್ತಾಕ್ಷರ

## ದತ್ತಿ ಉಪನ್ಯಾಸ – ಜನವರಿ 2007

### ಪ್ರೊ. ಎಲ್. ಎಸ್. ಶೇಷಗಿರಿರಾಯರ ಉಪನ್ಯಾಸ


ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯ ಹಾಗೂ ಮೈಸೂರು ಅಸೋಸಿಯೇಷನ್ ಮುಂಬೈ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಮೈಸೂರು ಅಸೋಸಿಯೇಷನ್ ಸ್ವರ್ಣ ಮಹೋತ್ಸವ ಸ್ಮಾರಕ ದತ್ತಿ ಕಾರ್ಯಕ್ರಮದಲ್ಲಿ ಕನ್ನಡದ ಖ್ಯಾತ ವಿಮರ್ಶಕ ಎಲ್.ಎಸ್. ಶೇಷಗಿರಿರಾಯರು ಕನ್ನಡ ಕಾದಂಬರಿಗಳಲ್ಲಿ ಸಾಮಾಜಿಕ ಮೌಲ್ಯ ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ●

## ದತ್ತಿ ಉಪನ್ಯಾಸ – ಜನವರಿ 2008

### ಡಾ. ಎಸ್. ಎಲ್. ಭೈರಪ್ಪ ಅವರ ಉಪನ್ಯಾಸ

**ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯ ಹಾಗೂ ಮೈಸೂರು ಅಸೋಸಿಯೇಷನ್ ಮುಂಬೈ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ದತ್ತಿ ಉಪನ್ಯಾಸ ಕಾರ್ಯಕ್ರಮ (೨೦೦೮)ದಲ್ಲಿ ಕನ್ನಡದ ಖ್ಯಾತ ಸಾಹಿತಿ, ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರು ಸಾಹಿತ್ಯ ಮತ್ತು ಜೀವನದ ಇತರ ಮೌಲ್ಯಗಳ ಕುರಿತು ಸ್ವಾರಸ್ಯಪೂರ್ಣವಾದ ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ಭೈರಪ್ಪ ಅವರ ಕಾದಂಬರಿ ಆಧಾರಿತ ಚಲನಚಿತ್ರ ತಬ್ಬಲಿಯು ನೀನಾದೆ ಮಗನೆ ಪ್ರದರ್ಶನ ಆಯೋಜಿಸಲಾಗಿತ್ತು.**

**ದಿನಾಂಕ(೧೯/೦೧/೨೦೦೮) ೨೦/೦೧/೨೦೦೮ ರಂದು ಡಾ.ಭೈರಪ್ಪ ಅವರು ವಿವಿಧ ಭಾಷೆಗಳ ಸಾಹಿತಿಗಳೊಂದಿಗೆ ಸಂವಾದದಲ್ಲಿ ಪಾಲ್ಗೊಂಡು ಸಮಕಾಲೀನ ಸಾಹಿತ್ಯದ ಬಗೆಗೆ ಮಾತನಾಡಿದರು.** ●




ಅಸೋಸಿಯೇಶನ್‌ಗೆ ಭೇಟಿ ಕೊಟ್ಟ ಯು. ಆರ್. ಅನಂತಮೂರ್ತಿ ಅವರು ಸಂದರ್ಶಕರ ಡೈರಿಯಲ್ಲಿ ಬರೆದ ಹಸ್ತಾಕ್ಷರ

## ದತ್ತಿ ಉಪನ್ಯಾಸ – ಜನವರಿ 2009

### ಡಾ. ಚೆನ್ನವೀರ ಕಣವಿ ಅವರ ಉಪನ್ಯಾಸ

ಮೈಸೂರು ಅಸೋಸಿಯೇಷನ್, ಮುಂಬಯಿ ಮತ್ತು ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ ಇವರ ಸಂಯುಕ್ತ ಆಶ್ರಯದಲ್ಲಿ ಜನವರಿ 17, 2009 ರಂದು ಮೈಸೂರು ಅಸೋಸಿಯೇಷನ್ ಕಿರು ಸಭಾಗೃಹದಲ್ಲಿ ನಡೆದ ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ



ಮೈಸೂರು ಅಸೋಸಿಯೇಶನ್ ದತ್ತಿಉಪನ್ಯಾಸ ಕಾರ್ಯಕ್ರಮದಲ್ಲಿ ಚೆನ್ನವೀರ ಕಣವಿಯವರು.

ಕಾರ್ಯಕ್ರಮಕ್ಕೆ ಕನ್ನಡದ ಹೆಸರಾಂತ ಕವಿ ನಾಡೋಜ. ಡಾ. ಚೆನ್ನವೀರ ಕಣವಿಯವರು ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ್ದರು. ಅವರು "ವರಕವಿ ಬೇಂದ್ರೆ ಮತ್ತು ನಾನು: ಒಂದು ಸೃಜನಶೀಲ ಪ್ರತಿಕ್ರಿಯೆ" ಎಂಬ ವಿಷಯದ ಬಗ್ಗೆ ಮಾತನಾಡುತ್ತಾ, ಬೇಂದ್ರೆ ಮತ್ತು ತಮ್ಮ ನಡುವಿನ ಕೊಡು ಕೊಳ್ಳುವಿಕೆಗೆ ಬೇಂದ್ರೆಯವರು ಸ್ವತಃ ದೊಡ್ಡ ಪ್ರತಿಭಾವಂತ ಕವಿಯಾಗಿದ್ದರು. ಬೇಂದ್ರೆಯವರು ಕೇವಲ ಕವಿಗಳನ್ನು ಮಾತ್ರ ಸೃಷ್ಟಿಸಲಿಲ್ಲ, ವಿಮರ್ಶಕರನ್ನು ಕೂಡ ಬೆಳೆಯುವಂತೆ ಮಾಡಿದರು ಹಾಗೆಯೇ ಬೇಂದ್ರೆಯವರ ಕಾವ್ಯರಚನೆ ಯಾವ ರೀತಿಯಲ್ಲಿ ತಮ್ಮ ಹಾಗೂ ತಮ್ಮ ಸಹ ಬಳಗದವರ ಕಾವ್ಯರಚನೆಗೆ ಪ್ರೇರಣೆಯನ್ನು ಒದಗಿಸಿತು. ಅದರಂತೆ ತಮ್ಮದೇ ಆದ ರೀತಿಯಲ್ಲಿ ಕಾವ್ಯವನ್ನು ಹೇಗೆ ರಚಿಸಿದೆವು ಎಂಬುವುದನ್ನು ಬಹಳಷ್ಟು ಅರ್ಥಗರ್ಭಿತವಾಗಿ ಹೇಳಿ, ತಮ್ಮ ಭಾವಕೋಶವನ್ನೆ ನಮ್ಮ ಮುಂದೆ ತೆರೆದಿಟ್ಟರು. ಹಾಗೆಯೇ ತಮ್ಮ ಹಾಗೂ ತಮ್ಮ ಜೊತೆಯಲ್ಲಿ ಬೆಳೆದ ಕವಿಗಳ ಕವನಗಳನ್ನು ನಿದರ್ಶನವಾಗಿ ಕೊಡುವುದರ ಮೂಲಕ ಬೇಂದ್ರೆಯ ಕವಿತೆಯ ಬಗೆಗಿನ ತಮ್ಮ ಮನೋಭಾವವನ್ನು, ಇನ್ನೊಂದು ಕವಿತೆಯನ್ನು ರಚಿಸುವುದರ ಮೂಲಕ ಹೇಗೆ ವ್ಯಕ್ತಪಡಿಸಿದ್ದೆವು ಎಂಬುದನ್ನು ತಿಳಿಸಿದರು. ಒಬ್ಬರಿಗೊಬ್ಬರು ಆರೋಗ್ಯಕರ ಪ್ರತಿಸ್ಪರ್ಧೆಯನ್ನು ನಡೆಸುವುದರ ಮೂಲಕ ನವ್ಯಯುಗದಲ್ಲಿ ಒಳ್ಳೆಯ ಮೌಲ್ಯಯುತ ಕವನಗಳು ಬೆಳಕಿಗೆ ಬಂದವು. ತಮ್ಮ ಪ್ರತಿಯೊಂದು ಕವಿತೆಯ ರಚನೆಯ ಮೂಲಕ ಬೇಂದ್ರೆಯವರ ನೆನಪನ್ನು ಅಚ್ಚಳಿಯದೆ ಉಳಿಯುವಂತೆ ಮಾಡಿದ ಕಣವಿಯವರ ಕಾವ್ಯರಚನೆ ಅಭಿನಂದನಾರ್ಹವಾದುದು.

## ದತ್ತಿ ಉಪನ್ಯಾಸ – ಮಾರ್ಚ್ 2010

### ಡಾ. ಕಮಲಾ ಹಂಪನಾ ಮತ್ತು ಡಾ. ಹಂಪನಾ ನಾಗರಾಜ ಅವರ ಉಪನ್ಯಾಸ

ಕಾಲ್ಕಾಚಾರ್ಯ, ಹರಿಭದ್ರ ಸೂರಿ ಹಾಗೂ ಚಂದ್ರಾಚಾರ್ಯ ಈ ಆಚಾರ್ಯತ್ರಯರು ಮಹಿಳೆಯರಲ್ಲಿ ಅನಾಥ ಪ್ರಜ್ಞೆ ಕಾಡಿದ ಸಂದರ್ಭದಲ್ಲಿ ಅವರು ಕೈಗೊಂಡ ನಿರ್ಣಯಗಳು ಆಶ್ಚರ್ಯ ಹುಟ್ಟಿಸುತ್ತವೆ ಎಂದು ನಾಡೋಜ ಡಾ. ಕಮಲಾ ಹಂಪನಾ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೈಸೂರು ಅಸೋಸಿಯೇಷನ್ ಮುಂಬಯಿ ಹಾಗೂ ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಜಂಟಿ ಆಯೋಜನೆಯಲ್ಲಿ ಮಾ. 7, 2010 ರಂದು ಪೂರ್ವಾಹ್ನ ಮಾಟುಂಗ ಪೂರ್ವದ ಮೈಸೂರು ಅಸೋಸಿಯೇಷನ್



ನಾಡೋಜ ಡಾ. ಹಂಪನಾ ನಾಗರಾಜಯ್ಯ ಸಭಿಕರೊಂದಿಗೆ ಸಂವಾದ

ಸಭಾಗೃಹದಲ್ಲಿ ನಡೆದ ಅಸೋಸಿಯೇಷನ್ ಬಂಗಾರದ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಆಚಾರ್ಯತ್ರಯರು ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದ ಅವರು ಆಪತ್ತಿಗೆ ಸಿಲುಕಿಕೊಂಡ ಮಹಿಳೆಯರನ್ನು ಅವರು ರಕ್ಷಿಸಿದರು. ಕಾಲ್ಕಾಚಾರ್ಯನೆಂಬ ಆಚಾರ್ಯ ಸರಸ್ವತಿ ಎಂಬ ಸನ್ಯಾಸಿನಿಯನ್ನು ರಾಜನ ಹಿಡಿತದಿಂದ ಪಾರು ಮಾಡಿದರೆ, ಹರಿಭದ್ರ ಸೂರಿ ಎಂಬ ಆಚಾರ್ಯನು ಯಾಕಿನಿ ಮಹತ್ತರಳೆಂಬ ವಿದ್ವಾಂಸೆಗೆ ವಾದದಲ್ಲಿ ಸೋತು ಯಾಕಿನಿ ಮಹತ್ತರ ಸೂನು ಎಂದು ಹೆಸರು ಬದಲಾಯಿಸಿಕೊಳ್ಳುತ್ತಾನೆ. ಗಂಡು ಮಕ್ಕಳಿಲ್ಲದೆ ವಿಧವೆಯರು ಆಸ್ತಿಯ ಹಕ್ಕಿನಿಂದ ವಂಚಿತರಾದಂತಹ ಸಂದರ್ಭದಲ್ಲಿ ಅಂತಹ ಶಾಸನವನ್ನು ರದ್ದುಗೊಳಿಸುವಲ್ಲಿ ಹೇಮಚಂದ್ರಾಚಾರ್ಯರು ಕಾರಣರಾಗುತ್ತಾರೆ. ಹೀಗೆ ಮಹಿಳೆಯರ ಬದುಕಿಗೆ ಒಂದು ಅಸ್ತಿತ್ವವನ್ನು ಗಟ್ಟಿಗೊಳಿಸಿರುವುದು ಅಲ್ಲದೆ ಅವರ ವಿದ್ವತ್ತು ಮತ್ತು ಪ್ರತಿಭೆ ಬೆಳಕಿಗೆ ಬರಲು ಕಾರಣರಾಗುತ್ತಾರೆ ಎಂದು ಸೋದಾಹರಣವಾಗಿ ವಿವರಿಸಿದರು.

ಇದೇ ಸಂದರ್ಭದಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ. ಸುನೀತಾ ಶೆಟ್ಟಿ, ಡಾ. ಗಿರಿಜಾ ಶಾಸ್ತ್ರಿ, ಸೃಜನಾ ಬಳಗದ ಅಧ್ಯಕ್ಷೆ ಶ್ಯಾಮಲಾ ಮಾಧವ್, ಡಾ. ರಘುನಾಥ್, ಕೃಷ್ಣಮೂರ್ತಿ ಕಲಮುರ್ಗಿ, ಭರತ್ ಪೊಲಿಪು, ಈಶ್ವರ ಅಲೆವೂರು ಮುಂತಾದವರು ಪಾಲ್ಗೊಂಡಿದ್ದರು. ಕಾರ್ಯಕ್ರಮದ ವೇದಿಕೆಯಲ್ಲಿ ಡಾ. ಜಿ. ಎನ್. ಉಪಾಧ್ಯ, ಮೈಸೂರು ಅಸೋಸಿಯೇಷನ್ ಅಧ್ಯಕ್ಷ ರಾಮಭದ್ರ, ಸಾಹಿತಿ ಡಾ. ಹಂಪನಾ ಅವರು ಉಪಸ್ಥಿತರಿದ್ದರು. ನಾರಾಯಣ ನವಿಲೇಕರ್ ಅವರು ಕಾರ್ಯಕ್ರಮ ನಿರ್ವಹಿಸಿದರು. ಡಾ. ಮಂಜುನಾಥ್ ವಂದಿಸಿದರು, ಪದ್ಮನಾಭ ಸಿದ್ಧಕಟ್ಟೆ ಪ್ರಾರ್ಥನೆಗೈದರು.

# ದತ್ತಿ ಉಪನ್ಯಾಸ – ಜನವರಿ 2011

## ಪ್ರೊ. ಕೆ. ಎಸ್. ನಿಸ್ಸಾರ್ ಅಹಮದ್ ಅವರ ಉಪನ್ಯಾಸ

ಕನ್ನಡ ಸಾಹಿತ್ಯಕ್ಕೆ ಹಿನ್ನೆಲೆಯಾಗಿರುವುದು ವಚನ ಸಾಹಿತ್ಯ ಮತ್ತು ಜನಪದ ಸಾಹಿತ್ಯ. ಜನಪದ ಕವಿಗಳು ಹಾಗೂ ಸರ್ವಜ್ಞನಲ್ಲಿರುವ ಬದುಕಿನ ಬಗ್ಗೆ ಇರುವ ಸೂಕ್ಷ್ಮ ಸಂವೇದನೆ ನಮ್ಮ ಆಧುನಿಕ ಕವಿಗಳಾದ ಕುವೆಂಪು, ಬೇಂದ್ರೆ, ಅಡಿಗ, ಪುತಿನ, ನರಸಿಂಹಸ್ವಾಮಿ ಮೊದಲಾದವರ ಕವಿಗಳ ಕಾವ್ಯಗಳಲ್ಲಿ ಕಂಡುಬರುತ್ತದೆ. ನಮ್ಮ ಸಮಕಾಲೀನ ಸಮಸ್ಯೆಗಳಿಗೆ ಉತ್ತರ ಮತ್ತು ಪರಿಹಾರ ಪ್ರಾಚೀನ ಕಾವ್ಯದಲ್ಲಿ ದಾಖಲಾಗಿದೆ ಎಂಬುದನ್ನು ನಾಡೋಜ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಅಭಿಪ್ರಾಯಪಟ್ಟರು. ಅವರು ಇತ್ತೀಚೆಗೆ ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಮತ್ತು ಮೈಸೂರು ಅಸೋಸಿಯೇಷನ್, ಮುಂಬಯಿ ಇವರ ಜಂಟಿ ಆಶ್ರಯದಲ್ಲಿ ನಡೆದ ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಾ ಕನ್ನಡ ನಾಡು ಸಂಸ್ಕೃತಿಯನ್ನು ಮತ್ತೆ ಕಟ್ಟುವ ಕೆಲಸವನ್ನು ಆಧುನಿಕ ಕವಿಗಳು ಮಾಡಿದರು. ಇದರಿಂದ ಪರೋಕ್ಷವಾಗಿ ಭಾಷೆಯ ಬಗ್ಗೆ ಅಭಿಮಾನ



ತಳೆಯುವಂತಹ ವಾತಾವರಣ ನಿರ್ಮಾಣವಾಯಿತು. ತಂತ್ರಾಭಿವ್ಯಕ್ತಿ ಸಾಹಿತ್ಯದ ಭಾಷೆಯಲ್ಲಿ ಆಗಿದೆಯೇ ಹೊರತು ವಿಷಯದಲ್ಲಿ ಇನ್ನೂ ಆಗಿಲ್ಲ. ಲೋಕಾನುಭವ ನಿಜವಾದ ಭಾವಾನುಭವವಾಗಬೇಕು. ಇತ್ತೀಚಿನ ಕವಿಗಳು ಬದುಕಿನ ವೈವಿಧ್ಯತೆಯನ್ನು ಕಟ್ಟಿಕೊಡುವಲ್ಲಿ ಸೋತಿದ್ದಾರೆ. ಮೇಳಗಾನದಿಂದ ಕನ್ನಡ ಕಾವ್ಯ ಶ್ರೀಮಂತವಾಗದುಎಂದು ಅಭಿಪ್ರಾಯಪಟ್ಟ ಅವರು ನಾವಿಂದು ಆಧುನಿಕ ತಂತ್ರಜ್ಞಾನವನ್ನು ಸಾಹಿತ್ಯದೊಳಗೆ ಸಮನ್ವಯಗೊಳಿಸಿ ನೋಡಬೇಕಾದ ಅಗತ್ಯವಿದೆ ಎಂದು ಹೇಳಿದರು. ಹೊಸ ತಂತ್ರಜ್ಞಾನವನ್ನು ಕನ್ನಡ ನುಡಿಯಲ್ಲಿ ವ್ಯಕ್ತಪಡಿಸಬೇಕು. ಅನುಭವದ ಎಲ್ಲಾ ಕ್ಲಿಷ್ಟತೆಯನ್ನು ಪರಂಪರೆಯ ಹಿನ್ನೆಲೆಯಲ್ಲಿ ಇಟ್ಟುಕೊಂಡು ಕಾವ್ಯ ರಚನೆಯಾಗಬೇಕೆಂದು ಅವರು ಆಶಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ತಮ್ಮ ಸಾಹಿತ್ಯರಚನೆಗೆ ಪ್ರೇರಕವಾದ ಬಾಲ್ಯದ ಘಟನೆಗಳನ್ನು ನೆನಪಿಸಿಕೊಂಡರು. ಕನ್ನಡದ ಅನೇಕ ಪ್ರಸಿದ್ಧ ಕವಿಗಳು, ಲೇಖಕರು ನಿಸ್ಸಾರ್ ಅಹಮದ್ ಅವರ ಸಾಹಿತ್ಯದ ಮೇಲೆ ಗಾಢವಾದ ಪ್ರಭಾವ ಬೀರಿದ್ದರು. ಅವರೆಲ್ಲರ ಸಾಹಿತ್ಯ ನಿಸಾರ್ ಅವರ ಭಾವಕೋಶದಲ್ಲಿ ಬೆರೆತು ಹೋಗಿವೆ. ಕನ್ನಡದ ಪ್ರಸಿದ್ಧ ಕವಿಗಳೂ, ನಿಸಾರ್ ಅವರ ಗುರುಗಳೂ ಆಗಿರುವ ಜಿ.ಪಿ. ರಾಜರತ್ನಂ ಅವರೊಂದಿಗೆ ಕಳೆದ ಕ್ಷಣಗಳನ್ನು ಮತ್ತೊಮ್ಮೆ ನೆರೆದ ಸಭಿಕರ ಮುಂದೆ ತೆರೆದಿಟ್ಟರು. ವಚನ ಸಾಹಿತ್ಯ, ಜಾನಪದ ಸಾಹಿತ್ಯದಿಂದ ಹಿಡಿದು ಆಧುನಿಕ ಸಾಹಿತ್ಯದವರೆಗೆ ಕಂಡುಬರುವ ಜೀವನದರ್ಶನಗಳಿಗೆ ಹಲವಾರು ನಿದರ್ಶನಗಳನ್ನು ನೀಡಿ ಮನಮುಟ್ಟುವಂತೆ ವಿವರಿಸಿದರು. ಆಧುನಿಕ ಕಾವ್ಯದ ಮೇಲೆ ಆದ ಪಾಶ್ಚಾತ್ಯ ಸಾಹಿತ್ಯದ ಪ್ರಭಾವವನ್ನು ಆಯಾಯ ಕವಿಗಳ ಕಾವ್ಯಗಳ ಹಿನ್ನೆಲೆಯಲ್ಲಿ ವಿವರಿಸಿದರು ಇಂಗ್ಲೀಷ ಶಬ್ದಗಳನ್ನು ಕನ್ನಡಕ್ಕೆ ತರ್ಜುಮೆ ಮಾಡುವಾಗ ಕೆಲವೊಮ್ಮೆ ಉಂಟಾಗುವ ಆವಾಂತರಗಳನ್ನು ಉದಾಹರಣೆ ಸಮೇತ ಮನೋಜ್ಞವಾಗಿ ವಿವರಿಸಿದರು. ಇಂಗ್ಲೀಷ್ ವ್ಯಾಮೋಹಕ್ಕೆ ಒಳಗಾಗುತ್ತಿರುವ ಇಂದಿನ ಕನ್ನಡಿಗರ ದು:ಸ್ಥಿತಿಯ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ಕನ್ನಡದ ಆಧುನಿಕ ಸಾಹಿತ್ಯವನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ತಮ್ಮ ಸ್ವರಚಿತ ಕವನಗಳನ್ನು ವಿಶ್ಲೇಷಣೆ ಮಾಡಿದರು. ಆ ಮೂಲಕ ಸಾಹಿತ್ಯವಲಯದಲ್ಲಿ ತಮ್ಮನ್ನು ಗುರುತಿಸಿಕೊಂಡ ಬಗೆಯನ್ನು ಸೋದಾಹರಣ ವಾಗಿ ಹೇಳಿದರು.

ಆನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ನೆರೆದ ಸಭಿಕರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಮಾತನಾಡಿದ ಅವರು ವಿಜ್ಞಾನ, ತಂತ್ರಜ್ಞಾನದಿಂದಾಗಿ ಇಂದು



ಎಲ್ಲಾ ಕ್ಷೇತ್ರದಲ್ಲೂ ಸ್ಪರ್ಧಾತ್ಮಕತೆ ಬೆಳೆಯುತ್ತಿದೆ. ಇದರಿಂದಾಗಿ ಸಂಕೀರ್ಣವಾದ ಜಗತ್ತಿನ ನಿರ್ಮಾಣವಾಗುತ್ತಿದೆ. ಈ ಸಂಕೀರ್ಣತೆ ಕಾವ್ಯದ ಮೇಲೂ, ಜನರ ಜೀವನದ ಮೇಲೂ ಪರಿಣಾಮ ಬೀರುತ್ತಿದೆ. ಒಟ್ಟಾರೆಯಾಗಿ ಕಾವ್ಯ ಒಂದು ಶಬ್ದ ಶಿಲ್ಪ. ಕಾವ್ಯ ತನ್ನ ಸ್ವಧರ್ಮವನ್ನು ಗೌರವಿಸಲಿಕ್ಕೆ ಆರಂಭ ಮಾಡಿದ್ದನ್ನು ನವ್ಯ ಕಾವ್ಯಗಳಲ್ಲಿ ಕಾಣಬಹುದು. ಭಾವೈಕ್ಯತೆಯ ಹೆಸರಿನಲ್ಲಿ ಒಂದೇ ಸಂಸ್ಕೃತಿಯನ್ನು ನೆಚ್ಚಿಕೊಂಡರೆ ಒಂದು ರೀತಿಯ ಏಕತಾನತೆ ಉಂಟಾಗುತ್ತದೆ. ಹಾಗಾಗಿ ಬಹು ಸಂಸ್ಕೃತಿಯನ್ನು ನೆಚ್ಚಿಕೊಂಡರೆ ಒಂದು ರೀತಿಯ ಸಾಮರಸ್ಯ ಜನರಲ್ಲಿ ಬೆಳೆಯುತ್ತದೆ ಎಂದು ನುಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವಿಭಾಗದ ಮುಖ್ಯಸ್ಥರು ಡಾ. ಜಿ. ಎನ್. ಉಪಾಧ್ಯ ಅವರು ಕನ್ನಡ ವಿಭಾಗ ಮತ್ತು ಮೈಸೂರು ಅಸೋಸಿಯೇಷನ್ ಜಂಟಿಯಾಗಿ ನಡೆಸುತ್ತಿರುವ ಈ ದತ್ತಿ ಉಪನ್ಯಾಸ ಕಾರ್ಯಕ್ರಮದ ಮೂಲಕ ನಾಡಿನ ಅನೇಕ ಲೇಖಕರ ಸಾಹಿತ್ಯವನ್ನು ಜನರಿಗೆ ಪರಿಚಯಿಸುವ ಕಾರ್ಯವನ್ನು ಮಾಡುತ್ತಾ ಬಂದಿದೆ ಎಂದು ನುಡಿದರು. ಕನ್ನಡದ ಬಗ್ಗೆ ನಿರಭಿಮಾನವಿರುವ ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವಿರುವಾಗ ದೂರದ ಮುಂಬಯಿಯಲ್ಲಿರುವ ಕನ್ನಡಿಗರು ಕನ್ನಡಕ್ಕೆ ಕೊಟ್ಟಿರುವ ಪ್ರಾಶಸ್ತ್ಯವನ್ನು ಕಂಡು ನಾಡೋಜ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಹರ್ಷವ್ಯಕ್ತಪಡಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ನಿಸ್ಸಾರ್ ಅಹಮದ್ ಅವರ ಜೊತೆಯಲ್ಲಿ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಡಾ. ಸುನೀತಾ ಶೆಟ್ಟಿ, ಡಾ. ರಘುನಾಥ್, ಡಾ. ಗಿರಿಜಾ ಶಾಸ್ತ್ರಿ, ವಿವೇಕ್ ಶಾನುಭಾಗ್, ಡಾ. ಮಂಜುನಾಥ್, ಮಂಜುನಾಥಯ್ಯ ಮೊದಲಾದವರು ಭಾಗವಹಿಸಿದರು. ಎರಡು ದಿನ ನಡೆದ ಈ ಕಾರ್ಯಕ್ರಮದಲ್ಲಿ ಕನ್ನಡದ ಹೆಸರಾಂತ ಕವಿ ನಿಸಾರ ಅಹಮದ್ ಅವರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಜ್ಯೋತಿ ದೇವಾಡಿಗ ನಿರ್ವಹಿಸಿದರು. ಡಾ. ಮಂಜುನಾಥ್ ಹಾಗೂ ಪದ್ಮನಾಭ್ ಇವರು ಪ್ರಾರ್ಥನೆಗೈದರು. ನಾರಾಯಣ ನವಿಲೇಕರ್ ವಂದಿಸಿದರು.

# ದತ್ತಿ ಉಪನ್ಯಾಸ – ಜನವರಿ 2012

## ಪ್ರೊ. ಚಿದಾನಂದಮೂರ್ತಿ ಅವರ ಉಪನ್ಯಾಸ

ಪ್ರಾಕೃತಿಕ ಸೌಂದರ್ಯ, ಐತಿಹಾಸಿಕ ಮಹತ್ವ, ಸಾಂಸ್ಕೃತಿಕ ಪಾವಿತ್ರ್ಯ ಇವೆಲ್ಲದರ ಸಮ್ಮಿಲನ ನಮ್ಮ ಹಂಪಿ ಕ್ಷೇತ್ರ. ಹಂಪಿಗೆ ಈ ಹೆಸರು ಬಂದಿದ್ದು ಪಂಪಾ ಸರೋವರದಿಂದ. ಇದಕ್ಕೆ ಹಂಪಿ ಹೊಳೆ ಎಂದು ಕರೆಯುತ್ತಾರೆ. ಸಾಂಸ್ಕೃತಿಕವಾಗಿ ಹಂಪಿಗೆ ವಿಶೇಷ ಮಹತ್ವವಿದೆ ಎಂಬುದಾಗಿ ನಾಡಿನ ಖ್ಯಾತ ಸಂಶೋಧಕ ಡಾ. ಚಿದಾನಂದಮೂರ್ತಿ ಅವರು ಅಭಿಪ್ರಾಯಪಟ್ಟರು. ಅವರು ಇತ್ತೀಚೆಗೆ ಕನ್ನಡ ವಿಭಾಗ ಮತ್ತು ಮೈಸೂರು ಅಸೋಸಿಯೇಷನ್ ಇದರ ಜಂಟಿ ಆಶ್ರಯದಲ್ಲಿ ನಡೆದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಆದಿಕವಿ ಪಂಪನಿಗೆ ಈ ಹೆಸರು ಬರಲು ಕಾರಣ ಹಂಪಿಯಿಂದ, ಏಕೆಂದರೆ ಅವನು ಹುಟ್ಟಿದ್ದು ಹಂಪಿಯ ಸಮೀಪದ ಅಣ್ಣಿಗೇರಿಯಲ್ಲಿ. ಹಂಪಿಯ ಅಧಿದೈವ ಪಂಪಾಂಬಿಕೆ. ಹಂಪಿಯ ಒಡೆಯ ವಿರೂಪಾಕ್ಷ. ಹರಿಹರ ತನ್ನ ಕಾವ್ಯದಲ್ಲಿ ಎಲ್ಲಿಯೂ



ಭುವನೇಶ್ವರಿಯ ಪ್ರಸ್ತಾಪವನ್ನು ಮಾಡುವುದಿಲ್ಲ. ಹರಿಹರನ ಕೃತಿಗಳಲ್ಲಿ ಇವೆಲ್ಲದರ ಉಲ್ಲೇಖ ಸಿಗುತ್ತದೆ. ಮೊತ್ತ ಮೊದಲು ಪ್ರಭುತ್ವದ ವಿರುದ್ಧ ಧ್ವನಿ ಎತ್ತಿದವನು ಹರಿಹರ. ವಚನಕಾರ ಅಕ್ಕವಳ್ಳಿಯ ಹಂಪಯ್ಯ ಹಂಪಿಯವನು. ಈತ ವಿರೂಪಾಕ್ಷನನ್ನು ದೇವರಾಯ ಅಂತ ಕರೆದಿದ್ದಾನೆ ಎಂಬುದಾಗಿ ಚಿದಾನಂದ ಮೂರ್ತಿಯವರು ಕರ್ನಾಟಕದ ಸಾಂಸ್ಕೃತಿಕ





ಹಿರಿಮೆಯನ್ನು ತೆರೆದಿಟ್ಟರು. ಹಂಪಿ, ಕಾಶಿ ಹಾಗೂ ವ್ಯಾಟಿಕನ್ ಸಿಟಿ ಇವು ಜಗತ್ತಿನ ಇತಿಹಾಸದಲ್ಲಿ ತಮ್ಮದೆ ಆದಂತಹ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಸ್ಮಿತೆಯನ್ನು ಹೊಂದಿವೆ. ಇಂತಹ ತಾಣಗಳನ್ನು ತೌಲನಿಕವಾಗಿ ಅಧ್ಯಯನ ಮಾಡಬಹುದಾಗಿದೆ ಎಂಬುದಾಗಿ ಅವರು ಸೋದಾಹರಣವಾಗಿ ವಿವರಿಸಿದರು.

ಬೃಹತ್ ಕರ್ನಾಟಕದ ಕುರಿತು ಮಾತನಾಡುತ್ತಾ ದೂರದ ನೇಪಾಳದ ಭಕ್ತಪುರದ ಜಂಗಮಮಠದಲ್ಲಿ ಕನ್ನಡದ ಎರಡು ಶಾಸನಗಳು ದೊರೆತಿರುವುದು ಅಚ್ಚರಿಯನ್ನು ಮೂಡಿಸಿವೆ. ಆ ಶಾಸನದಿಂದ ಕರ್ನಾಟಕಕ್ಕೂ ನೇಪಾಳಕ್ಕೂ ಇರುವ ಸಾಂಸ್ಕೃತಿಕ ಸಂಬಂಧ ತಿಳಿದು ಬರುತ್ತದೆ. ನೇಪಾಳವನ್ನು ಕರ್ನಾಟಕದ ಅರಸರೇ ಬಹುಕಾಲ ಆಳಿದ್ದನ್ನು ನೋಡಬಹುದು. ನೇಪಾಳಕ್ಕೂ ತುಳಜಾಪುರಕ್ಕೂ ಸಂಬಂಧವಿದೆ. ಇಂದಿಗೂ ಕರ್ನಾಟಕದ ಅರ್ಚಕರೇ ನೇಪಾಳದ ಪಶುಪತಿನಾಥನ ಪೂಜೆಯನ್ನು ಮಾಡುತ್ತಾ ಇದ್ದಾರೆ. ನೇಪಾಳದಲ್ಲಿ ಕುಮಾರಿ ಪಟ್ಟವನ್ನು ಕಟ್ಟಿ ನೇಪಾಳದ ದೊರೆ ಮುಂದಿನ ಒಂದು ವರ್ಷದ ಅವಧಿಗೆ ಅಧಿಕಾರ ನಡೆಸಿಕೊಂಡು ಹೋಗುತ್ತೇನೆಂದು ಕುಮಾರಿಯ ಬಳಿ

ಆಶೀರ್ವಾದವನ್ನು ಪಡೆಯುತ್ತಾನೆ. ಇಂದಿಗೂ ಸಹ ಈ ಆಚರಣೆ ನಡೆದುಕೊಂಡು ಬಂದಿದ್ದು, ಈ ದೇವತೆ ಕರ್ನಾಟಕ ಮೂಲದ್ದಾಗಿದೆ ಎಂದು ಚಿದಾನಂದ ಮೂರ್ತಿ ಅವರು ಹೇಳಿದರು.

ಇದೇ ಸಂದರ್ಭದಲ್ಲಿ ಚಿದಾನಂದ ಮೂರ್ತಿಯವರ ಕುರಿತ ವಿಶೇಷ ಸಂಚಿಕೆ ನೇಸರು ಮಾಸಿಕವನ್ನು ಬಿಡುಗಡೆಗೊಳಿಸಲಾಯಿತು. ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ. ಎನ್. ಉಪಾಧ್ಯ ಅವರು ಪ್ರೊ. ಚಿದಾನಂದ ಮೂರ್ತಿಯವರು ಕರ್ನಾಟಕದ ಸಂಸ್ಕೃತಿಯನ್ನು ರೂಪಿಸಿದ ಮಹಾನ್ ಸಂಶೋಧಕ. ಅವರ ನುಡಿಸೇವೆ ನಾಡಿಗೆ ಮಾದರಿ ಎಂಬುದಾಗಿ ಕೊಂಡಾಡಿದರು. ಅನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಡಾ. ರಘುನಾಥ್, ಡಾ. ಸುನೀತಾ ಶೆಟ್ಟಿ, ಡಾ. ಗಿರಿಜಾ ಶಾಸ್ತ್ರಿ, ನಾರಾಯಣ ನವಿಲೇಕರ್, ಡಾ. ಲೀಲಾ, ವಿವೇಕ್ ಶ್ಯಾನುಭಾಗ್, ನಿರಂಜನ್ ಸಿ. ಎಸ್. ಮೊದಲಾದ ವರು ಪಾಲ್ಗೊಂಡರು. ಕಾರ್ಯಕ್ರಮವನ್ನು ವಿಭಾಗದ ಸಂಶೋಧನ ಸಹಾಯಕರು ಜ್ಯೋತಿ ದೇವಾಡಿಗ ಅವರು ನಿರೂಪಿಸಿದರು. ಮೈಸೂರು ಅಸೋಸಿಯೇಷನ್‌ನ ಪದಾಧಿಕಾರಿಗಳಾದ ಮಂಜು ದೇವಾಡಿಗ ಮತ್ತು ನಾರಾಯಣ ನವಿಲೇಕರ್ ಅವರು ವಂದಿಸಿದರು. ●


AME. ADDRESS. REMARK.

**ಅಸೋಸಿಯೇಶನ್‌ಗೆ ಭೇಟಿ ಕೊಟ್ಟ ಪ್ರೊ. ಕೆ.ಎಸ್. ನಿಸಾರ್ ಅಹಮದ್ ಅವರು ಸಂದರ್ಶಕರ ಡೈರಿಯಲ್ಲಿ ಬರೆದ ಹಸ್ತಾಕ್ಷರ**

## ದತ್ತಿ ಉಪನ್ಯಾಸ – ಫೆಬ್ರವರಿ 2013

### ಡಾ. ಎಚ್. ಎಸ್. ವೆಂಕಟೇಶಮೂರ್ತಿ ಅವರ ಉಪನ್ಯಾಸ

ಕನ್ನಡವನ್ನು ಹೇಗೆ ಉಳಿಸಬೇಕೆಂದರೆ ಮಕ್ಕಳಿಗೆ ಕನ್ನಡ ಕವಿತೆಗಳು ತಲುಪುವಂತೆ ಮಾಡಬೇಕು. ಒತ್ತಾಯವಿಲ್ಲದೆ ಕನ್ನಡ ಸಾಹಿತ್ಯದ ಬಗ್ಗೆ ಮಕ್ಕಳಲ್ಲಿ ಪ್ರೀತಿಯನ್ನು ಬೆಳೆಸಬೇಕು. ಕನ್ನಡ ನಾಟಕಗಳಲ್ಲಿ ಮಕ್ಕಳನ್ನು ಅಭಿನಯಿಸುವಂತೆ ಮಾಡಬೇಕು. ಕನ್ನಡದ ದೊಡ್ಡ ಶಕ್ತಿ ಕಾವ್ಯ ಶಕ್ತಿ. ಆದರೆ ನಾವಿಂದು ಗದ್ಯಪ್ರಿಯರಾಗಿದ್ದೇವೆ. ಕರ್ನಾಟಕವೆನ್ನುವ ಶಕ್ತಿ ಮುಂಬಯಿಯಲ್ಲಿ ತನ್ನ ಆತ್ಮವನ್ನಿಟ್ಟಿದೆ ಎನ್ನಬಹುದು. ಯಾಕೆಂದರೆ ಕನ್ನಡ ತಾಯಿ ಭುವನೇಶ್ವರಿಯ ರಥವನ್ನು ನಾವು ಎಲ್ಲಿದ್ದರೂ ಎಳೆಯಬೇಕು. ಭೌಗೋಳಿಕ ಮಿತಿಯನ್ನು ದಾಟಿದ ಸಾಂಸ್ಕೃತಿಕ ಆವರಣ ಮುಂಬಯಿ ಕನ್ನಡಿಗರದ್ದು. ಕನ್ನಡದ ಸಂಸ್ಕೃತಿಯ ನಂದಾದೀಪವನ್ನು ನಿರಂತರವಾಗಿ ಬೆಳಗಿಸಿದವರು, 'ನಗರ'ವನ್ನು ಕನ್ನಡ ಸಾಹಿತ್ಯಕ್ಕೆ ತಂದವರು ಮುಂಬಯಿ ಲೇಖಕರು ಎಂದು ಬೆಂಗಳೂರಿನ ಖ್ಯಾತ ಕವಿ ಡಾ. ಎಚ್. ಎಸ್. ವೆಂಕಟೇಶ ಮೂರ್ತಿ ಅವರು ನುಡಿದರು.




ಅವರು ಇತ್ತೀಚೆಗೆ ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಮತ್ತು ಮೈಸೂರು ಅಸೋಸಿಯೇಷನ್ ಮುಂಬಯಿ ಇವರ ಜಂಟಿ ಆಶ್ರಯದಲ್ಲಿ ನಡೆದ ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ, 'ಆಧುನಿಕ ಕನ್ನಡ ಕಾವ್ಯ' ಎಂಬ ವಿಷಯದ ಬಗ್ಗೆ ಮಾತನಾಡುತ್ತಾ, ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದಾಗಿ ನಮ್ಮ ಕನ್ನಡದ ಕವಿಗಳನ್ನು ಮರೆತಿದ್ದೇವೆ. ವ್ಯಾಸರಾಯ ಬಲ್ಲಾಳ, ಅರವಿಂದ ನಾಡಕರ್ಣಿ, ಯಶವಂತ ಚಿತ್ತಾಲ ಮೊದಲಾದವರು ಮುಂಬಯಿ ನಗರದ ಸ್ಪಂದನವನ್ನು ತಮ್ಮ ಬರಹಗಳಲ್ಲಿ ಮೂಡಿಸಿದ್ದಾರೆ. ದೇಶದ ಐಕ್ಯಮತ್ಯವನ್ನು ಸಾಧಿಸುವ ಒಂದು ಪರೋಕ್ಷ ಪರಿ ಇದಾಗಿದೆ. ಭೌಗೋಳಿಕವಾಗಿ ದಾಟಿ ಸಾಂಸ್ಕೃತಿಕವಾಗಿ ಕನ್ನಡತ್ವ ಬೆಳೆಯಬೇಕು. 12ನೇ ಶತಮಾನ ಮತ್ತು 20ನೇ ಶತಮಾನ ಕನ್ನಡ ಕಾವ್ಯದ ಸಂದರ್ಭದಲ್ಲಿ ಮಹತ್ವವಾದುದು. ಇಡೀ ಜಗತ್ತಿಗೆ ವಿಶಿಷ್ಟವಾದ ಕನ್ನಡದ ಕಾಣಿಕೆ ಅಂದರೆ ಅದು ವಚನ ಸಾಹಿತ್ಯ. ಸಮೃದ್ಧವೂ, ಗುಣಾತ್ಮಕವೂ ಕನ್ನಡಕ್ಕೆ ಹೊಸನೆಲೆಯನ್ನು ಕಲ್ಪಿಸಿದ ಸಾಹಿತ್ಯ ಅದು ವಚನ ಸಾಹಿತ್ಯ. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಎಲ್ಲ ಸಾಹಿತ್ಯವು ಧರ್ಮಬದ್ಧವಾಗಿಯೇ ಮೂಡಿಬಂದಿದೆ. ಕುವೆಂಪು, ಬೇಂದ್ರೆ, ಮಾಸ್ತಿ, ಪುತಿನ, ಕೆ.ಎಸ್. ನರಸಿಂಹಾಚಾರ್, ಅಡಿಗರ ಕಾವ್ಯದ ಸ್ವಾರಸ್ಯವನ್ನು ನಮ್ಮ ಮುಂದೆ ಮನೋಜ್ಞವಾಗಿ ತೆರೆದಿಟ್ಟರು. ಮೈಸೂರು ಅಸೋಸಿಯೇಷನ್ನಿನ ವಿಶ್ವಸ್ಥರಾದ ಕೆ. ಮಂಜುನಾಥಯ್ಯ ಪ್ರಾಸ್ತಾವಿಕವಾಗಿ ಮಾತನಾಡಿ, ಅತಿಥಿಗಳನ್ನು ಸ್ವಾಗತಿಸಿದರು. ಆರಂಭದಲ್ಲಿ ಎನ್.ಕೆ.ಇ.ಎಸ್. ಶಾಲಾ ಮಕ್ಕಳಿಂದ ಕಾವ್ಯನೃತ್ಯ ನಡೆಯಿತು. ಮೈಸೂರು ಅಸೋಸಿಯೇಷನ್ನಿನ ಕೋಶಾಧಿಕಾರಿ ಮಂಜು ದೇವಾಡಿಗ ಅವರು ವಂದನಾರ್ಪಣೆ ಗೈದರು.

ಮರುದಿನ ನಡೆದ ಕಾರ್ಯಕ್ರಮದಲ್ಲಿ "ನಾನು ಮತ್ತು ನನ್ನ ಸಮಕಾಲೀನರು" ಎಂಬ ವಿಷಯದ ಕುರಿತು ಮಾತನಾಡುತ್ತಾ ಆಧುನಿಕ ಸಾಹಿತ್ಯದಲ್ಲಿ ಪ್ರಕಟಗೊಂಡಿರುವ ರಾಮನ ವಿಭಿನ್ನ ನೆಲೆಗಳನ್ನು ಚರ್ಚಿಸಿದರು. ಗೋಪಾಲಕೃಷ್ಣ




ಅಡಿಗರಿಗೆ ಶ್ರೀರಾಮನನ್ನು ಪುರುಷೋತ್ತಮನನ್ನಾಗಿ ಕಾಣಿಸುವ ಬಯಕೆಯಾದರೆ, ಮಾಸ್ತಿಯವರಿಗೆ ಅವನನ್ನು ಸಾಮಾನ್ಯ ಮನುಷ್ಯನನ್ನಾಗಿ ಕಾಣುವ ಆಸೆ, ಮಾಸ್ತಿಯವರ 'ರಾಮ ನವಮಿಯ ದಿನ' ಕಥನ ಕಾವ್ಯಕ್ಕೆ ಪ್ರತಿಕ್ರಿಯೆಯಂತೆ ಅಡಿಗರು ತನ್ನ 'ಶ್ರೀ ರಾಮನವಮಿಯ ದಿನ' ಕವಿತೆಯನ್ನು ರಚಿಸಿದರು, ಎಂದು ಹೇಳುತ್ತಾ ತಮ್ಮ ಕವಿತೆಯಲ್ಲಿ ರಾಮ ಕುಟುಂಬ ವತ್ಸಲನಾಗಿ ಮೆರೆಯುವುದನ್ನು ಸ್ವಾರಸ್ಯವಾಗಿ ವಿವರಿಸಿದರು.

ಇದೇ ಸಂದರ್ಭದಲ್ಲಿ ನಾಡೋಜ ಚೆನ್ನವೀರ ಕಣವಿ ಅವರ; "ಬೇಂದ್ರೆ ಕಾವ್ಯದ ಕುಹೂಕುಹೂ" ಹಾಗೂ ಡಾ. ಗಿರಿಜಾ ಶಾಸ್ತ್ರಿ ಅವರ "ಪುಸ್ತಕ ಮತ್ತು ನವಿಲು ಗರಿ" ಎಂಬ ಕೃತಿಗಳನ್ನು ಡಾ. ಎಚ್. ಎಸ್. ವೆಂಕಟೇಶ ಮೂರ್ತಿ ಅವರು ಲೋಕಾರ್ಪಣೆ ಮಾಡುತ್ತಾ ಕೆಲವರು ಒತ್ತಾಯದಿಂದ ಕವಿತೆಯನ್ನು ಕಟ್ಟುತ್ತಾರೆ. ಬೇಂದ್ರೆ ಹುಟ್ಟು ಕವಿ. ಕಟ್ಟುವ ಕವಿಗೂ ಹುಟ್ಟುವ ಕವಿಗೂ ವ್ಯತ್ಯಾಸವಿದೆ. ಕನ್ನಡ ಕಾವ್ಯದ ಎರಡು ಕಣ್ಣುಗಳು ಬೇಂದ್ರೆ ಮತ್ತು ಅಡಿಗರು. ಕವಿತೆ ಬರೆಯುವುದು ಮುಖ್ಯವಲ್ಲ ಕವಿತೆ ಏನು ಹೇಳುತ್ತದೆ ಎಂಬುದು ಮುಖ್ಯವಾಗುತ್ತದೆ. ಕಾವ್ಯದಲ್ಲಿ ಘನತೆಯನ್ನು ಮೂಡಿಸಬೇಕಾದರೆ ಗಾಢವಾದ ಅಧ್ಯಯನ, ಸಂಯಮ, ನಿಷ್ಠೆ ಇರಬೇಕು. ಸತತವಾದ ಬರವಣಿಗೆ ತುಂಬಾ ಅಗತ್ಯ. ಆಗ ನಿಮ್ಮನ್ನು ನೀವು ತಿದ್ದಿಕೊಳ್ಳಲು ಸಾಧ್ಯವಾಗುತ್ತದೆ. ಹಳೆಯ ಸ್ವರಗಳನ್ನು ಬಳಸಿ ಹೊಸ ಸಂಗೀತವನ್ನು ಸೃಷ್ಟಿಸಬೇಕು. ಆ ಕೆಲಸ ಆಗಬೇಕಾಗಿದೆ. ನಮ್ಮ ಕಾವ್ಯದ ಸಂದರ್ಭದಲ್ಲಿ ಯಾವ ರೀತಿ ಕವಿತೆ ರಚನೆ ಆಗುತಿತ್ತು ಎನ್ನುವುದರ ಕುರಿತು ವಿವೇಚಿಸಿದರು.

ಕೃತಿಕಾರರಾದ ಡಾ. ಗಿರಿಜಾ ಶಾಸ್ತ್ರಿ ಅವರು ತಮ್ಮ ಕೃತಿರಚನೆಯ ಹಿನ್ನೆಲೆಯ ಕುರಿತು ಮಾತನಾಡಿದರು. ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯಾಭಿಮಾನಿಗಳು ಉಪಸ್ಥಿತರಿದ್ದರು.

ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಇವರು ಪ್ರಾಸ್ತಾವಿಕವಾಗಿ ಮಾತನಾಡಿದರು. ನಾಡಿನ ಹಿರಿಯ ಸಾಹಿತಿಗಳು ಈ ದತ್ತಿ ಉಪನ್ಯಾಸದ ಮಾಲಿಕೆಯಲ್ಲಿ ಭಾಗವಹಿಸಿ ಉಪನ್ಯಾಸ ನೀಡಿರುವುದು ಹೆಮ್ಮೆಯ ವಿಷಯ. ಆ ಪ್ರಯುಕ್ತ ಇಂದು ನಾಡಿನ ಹಿರಿಯ ಕವಿ ಡಾ. ಎಚ್. ಎಸ್. ವೆಂಕಟೇಶ ಮೂರ್ತಿಯವರು ನಮ್ಮೊಂದಿಗಿದ್ದು, ಉಪನ್ಯಾಸವನ್ನು ನೀಡಿರುವುದು ನಾವೆಲ್ಲರೂ ಖುಷಿಪಡಬೇಕಾದ ಸಂಗತಿ ಎಂದು ಹೇಳಿದರು. ಡಾ. ಮಂಜುನಾಥರು ಪ್ರಾರ್ಥನೆಗೈದರು. ಶ್ರೀಮತಿ ಜ್ಯೋತಿ ಸತೀಶ್ ಕಾರ್ಯಕ್ರಮ ನಿರ್ವಹಿಸಿದರು. ಕೆ. ಮಂಜುನಾಥಯ್ಯ ಅವರು ವಂದಿಸಿದರು.

# ಬೇಂದ್ರೆ ಕಾವ್ಯದ ಕುಹುಕ್ಕುಹೂ
# – ಡಾ ಚನ್ನವೀರ ಕಣವಿ

'ವರಕವಿ ಬೇಂದ್ರೆ ಮತ್ತು ನಾವು (ಕವಿ ಮಿತ್ರರು) : ಒಂದು ಸೃಜನಾತ್ಮಕ ಪ್ರತಿಕ್ರಿಯೆ'.
(ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ದತ್ತಿ ಉಪನ್ಯಾಸದ ಟಿಪ್ಪಣಿಗಳು)

ವರಕವಿ ಬೇಂದ್ರೆಯವರು 1981ನೇ ಇಸ್ವಿ ಅಕ್ಟೋಬರ 26 ರಂದು ಸೋಮವಾರ ಮುಂಬಯಿಯ ಹರಕಿಶನ್‌ದಾಸ ಆಸ್ಪತ್ರೆಯಲ್ಲಿ ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ನಿಧನರಾದರು. ಮರಣಕಾಲಕ್ಕೆ ಅವರಿಗೆ 86 ವರ್ಷ ವಯಸ್ಸಾಗಿತ್ತು. ಮುಂಬಯಿ ಶಿವಾಜಿ ಪಾರ್ಕ ರುದ್ರಭೂಮಿಯಲ್ಲಿ ಅಂದೇ ಸಂಜೆ ಅವರ ಅಂತ್ಯಕ್ರಿಯೆ ನೆರವೇರಿತು. ಹನ್ನೊಂದು ದಿನಗಳ ನಂತರ ಅವರ ಚಿತಾಭಸ್ಮವನ್ನು ನವೆಂಬರ 6 ರಂದು ಧಾರವಾಡಕ್ಕೆ ತರಲಾಯಿತು. ಅಂದು ಸಂಜೆ ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಡಾ. ಡಿ.ಎಂ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಧಾರವಾಡದ ಕಡಪಾ ಮೈದಾನದಲ್ಲಿ ಬೃಹತ್ ಪ್ರಮಾಣದ ಸಾರ್ವಜನಿಕ ಸಭೆ ನಡೆದು ಶ್ರದ್ಧಾಂಜಲಿ ಸಲ್ಲಿಸಲಾಯಿತು. ಅಂದು ಮಾತನಾಡಿದವರಲ್ಲಿ ನಾನೂ ಒಬ್ಬನಾಗಿದ್ದೆ.

ಬೇಂದ್ರೆಯವರ ಸ್ಮರಣಾರ್ಥ ಅವರ ಜನ್ಮದಿನವನ್ನು 'ಕವಿದಿನ' ಎಂದು ಆಚರಿಸಿ ಅವರ ಕಾವ್ಯ ಹಾಗೂ ಸಾಹಿತ್ಯ ಕುರಿತು ವಿದ್ವಾಂಸರಿಂದ ವಿಶೇಷೋಪನ್ಯಾಸವನ್ನೇರ್ಪಡಿಸಿ ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆಂಬ ನಮ್ಮ ಪ್ರಸಾರಾಂಗದ ಯೋಜನೆಯನ್ನು ವಿಶ್ವವಿದ್ಯಾಲಯ ಮಾನ್ಯ ಮಾಡಿತು. ಮೊಟ್ಟ ಮೊದಲಿನ ವರ್ಷವೇ ಡಾ. ವಿ. ಕೃ. ಗೋಕಾಕರು ಪುಟ್ಟಪರ್ತಿ ಪ್ರಶಾಂತ ನಿಲಯದಿಂದ (ಕುಲಪತಿಯಾಗಿದ್ದಾಗ) ಧಾರವಾಡಕ್ಕೆ ಬಂದು 1983 ಜನವರಿ 31ರಂದು ನಮ್ಮ ಕಾರ್ಯಕ್ರಮದ ಪ್ರಾರಂಭೋತ್ಸವವನ್ನು ನೆರವೇರಿಸಿ 'ಬೇಂದ್ರೆಯವರ ಕಾವ್ಯಗುಣ ಹಾಗೂ ಪ್ರಯೋಗಶೀಲತೆ' ಎಂಬ ವಿಷಯವನ್ನು ಕುರಿತು ಉಪನ್ಯಾಸವಿತ್ತರು. ನಾನು ಅದೇ ವರ್ಷದ ಕೊನೆಗೆ ಪ್ರಸಾರಾಂಗದ ನಿರ್ದೇಶಕ ವೃತ್ತಿಯಿಂದ ನಿವೃತ್ತನಾದೆ. ಅಂದಿನಿಂದ ಪ್ರತಿವರ್ಷ ತಪ್ಪದಂತೆ ಈ ಕಾರ್ಯಕ್ರಮ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನಡೆದುಕೊಂಡು ಬರುತ್ತಿದೆ.

ಈ ಮಾತುಗಳನ್ನು ಇಲ್ಲಿ ಏಕೆ ಪ್ರಸ್ತಾಪಿಸಿದೆನೆಂದರೆ ಬೇಂದ್ರೆಯವರು ಎಂ.ಎ. ಪದವಿ ಪಡೆದದ್ದು (1935) ಮುಂಬಯಿ ವಿಶ್ವವಿದ್ಯಾಲಯದಿಂದ. ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಇಲ್ಲಿ ಅವರಿಗೆ ಆತ್ಮೀಯವಾದ ಸನ್ಮಾನ ನಡೆದದ್ದುಂಟು. ಅವರು ತೀರಿಕೊಳ್ಳುವ ಮೊದಲು ಅವರ ಕೊನೆಯ ಸಂದರ್ಶನ ಮುಂಬಯಿ ಆಕಾಶವಾಣಿಯಿಂದ ಪ್ರಸಾರವಾಯಿತು (ಸಂಖ್ಯಾಶಾಸ್ತ್ರ ಕುರಿತು). ಆದ್ದರಿಂದ ಮುಂಬಯಿಯ ಪ್ರಮುಖ ಸಂಸ್ಥೆಗಳಲ್ಲಿ ಒಂದಾದ 'ಮೈಸೂರು ಅಸೋಸಿಯೇಷನ್' ಮುಂಬಯಿ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಿರುವ ದತ್ತಿನಿಧಿ ಉಪನ್ಯಾಸಕ್ಕೆ ಬೇಂದ್ರೆಯವರ ಕಾವ್ಯಕ್ಕೆ ಸಂಬಂಧಪಟ್ಟ ವಿಷಯವನ್ನೇ ಆರಿಸಿಕೊಂಡೆ. ಬೇಂದ್ರೆ ಕಾವ್ಯ ಕುರಿತು ಈಗಾಗಲೇ ಐದಾರು ಥೀಸಿಸ್‌ಗಳು ಬಂದಿವೆ. ಅನೇಕ ವಿಮರ್ಶಕರು ಪ್ರೌಢವಾದ ವಿಮರ್ಶಾ ಗ್ರಂಥಗಳನ್ನು ಬರೆದಿದ್ದಾರೆ. ಮುಂಬಯಿ ನಿವಾಸಿಗಳಾದ ಕವಿಮಿತ್ರ ಡಾ ಜಿ.ವಿ. ಕುಲಕರ್ಣಿಯವರು ತಮ್ಮ'ನಾ ಕಂಡ ಬೇಂದ್ರೆ : ಜೀವನ ಮತ್ತು ಸಾಹಿತ್ಯ' ಗ್ರಂಥಕ್ಕೆ ನನ್ನಿಂದ ಮುನ್ನುಡಿ ಬರೆಸಿದುಂಟು. ಈ ಸಂದರ್ಭದಲ್ಲಿ ವಿಷಯದ ಪುನರುಕ್ತಿಯಾಗದಂತೆ ನನ್ನ ಉಪನ್ಯಾಸದ ವಿಷಯದ ಬಗ್ಗೆ ಆಲೋಚನೆ ಮಾಡಬೇಕಾಯಿತು. ಕೊನೆಗೆ 'ಬೇಂದ್ರೆ ಮತ್ತು ನಾವು : ಒಂದು ಸೃಜನಾತ್ಮಕ ಪ್ರತಿಕ್ರಿಯೆ' ಅಥವ ಸೃಜನಶೀಲ ಕೊಳುಕೊಡೆ ಅಡಿಜಚಿಣುತಜ ಎಟಣಡಿಚಿಭಿಣುಠಿಟ – ಎಂಬ ಶೀರ್ಷಿಕೆಯನ್ನು ಕೊಡಲಾಯಿತು.

ಇಲ್ಲಿ 'ನಾವು' ಎಂದರೆ ನಾನು ಮತ್ತು ನನ್ನ ಕೆಲವು ಕವಿಮಿತ್ರರು. ಬೇಂದ್ರೆಯವರ ಒಡನಾಟದಿಂದ, ಅವರ ಕಾವ್ಯದ ಅಭ್ಯಾಸದಿಂದ ಸಂವಾದ, ಕಾವ್ಯವಾಚನ ಭಾಷಣಗಳಿಂದ ನಮಗುಂಟಾದ ಪ್ರೇರಣೆಗಳು, ಅದಕ್ಕೆ ನಾವು ನಮ್ಮ ಕೃತಿಗಳ ಮೂಲಕ ತೋರಿಸಿದ ಸೃಜನಾತ್ಮಕ ಪ್ರತಿಕ್ರಿಯೆಗಳು, ಈ ಬಗ್ಗೆ ಕೆಲವು ವಿಚಾರಗಳನ್ನು ಇಲ್ಲಿ ಹಂಚಿಕೊಳ್ಳಬಯಸಿದ್ದೇನೆ. ಬೇಂದ್ರೆಯವರ ಕಾವ್ಯವನ್ನು ಸಾಧ್ಯವಾದಷ್ಟು ಅರಗಿಸಿಕೊಂಡು ನಮ್ಮನ್ನು ನಾವು ಕಂಡುಕೊಂಡ ರೀತಿಯೂ ಇದಾಗಬಹುದು. ಡಾ. ಶಂಕರ ಮೊಖಾಶಿಯವರು ಹೇಳಿದಂತೆ "ಒಂದು ಪೂರ್ಣ ಆಯುಷ್ಯವನ್ನು ಸಾರ್ಥಕವಾಗಿ ಸಫಲವಾಗಿ ಯಾರ ಕಾವ್ಯದ ಅಭ್ಯಾಸಕ್ಕಾಗಿ ಮೀಸಲಿಡಬಹುದೋ ಅಂಥ ಕನ್ನಡ ಕವಿಗಳಲ್ಲಿ ಬೇಂದ್ರೆಯವರು ಅತ್ಯಾಧುನಿಕರು". ನಿಜ–ಇಪ್ಪತ್ತನೆಯ ಶತಮಾನದಲ್ಲಿ ಇಂಥ ಒಬ್ಬ ಕವಿ ಕನ್ನಡದಲ್ಲಿರುವುದು ಕನ್ನಡ ಭಾಷೆಯ ಸುದೈವವೆಂದೇ ಹೇಳಬಹುದು.

ಆಧುನಿಕ ಕಾಲದಲ್ಲಿ ಕನ್ನಡದಲ್ಲಿ ಒಳ್ಳೆಯ ಕಾವ್ಯ ಬಹುಮುಖವಾಗಿ ಬೆಳೆದಿದೆ. ಒಳ್ಳೆಯ ಕವಿಗಳಿಗೂ ಕೊರತೆಯಿಲ್ಲ. ಆದರೆ ಸರ್ವತೋಪರಿ ವಿಶಾಲಗೊಂಡು ನಮ್ಮ ವಿಮರ್ಶಾ ಬಲವನ್ನು ವಿಧವಿಧವಾಗಿ ಮೂದಲಿಸಬಲ್ಲ, ಹೇಡಿಗೊಳಿಸಬಲ್ಲ ಕಾವ್ಯ ಬೇಂದ್ರೆಯವರದ್ದು. ಅವರ ಕಾವ್ಯದ ಘನತೆಯನ್ನು ಒಂದೆರಡೇ ಮನಸ್ಸುಗಳಿಂದ ಅಳೆಯುವದೂ ಅಪರಿಪೂರ್ಣ.

ಕನ್ನಡ ನವೋದಯದ ಕಾವ್ಯ ಎಂದರೆ ಪುನರುಜ್ಜೀವನಗೊಂಡ ಹೊಸಗನ್ನಡ ಕಾವ್ಯದ ಪ್ರಬಲವಾದ ಮೊದಲನೇ ಹಂತ. ಈ ನವೋದಯ ಕಾವ್ಯದ ಉಳಿದ ಪ್ರಮುಖ ಕವಿಗಳನ್ನು ಸಮಕಾಲೀನರಾದ ನಾವು ಸಾಧ್ಯವಿದಷ್ಟುಓದಿಕೊಂಡಿದ್ದೆವು. ಅದರಲ್ಲಿಯೂ ವೈಯುಕ್ತಿಕವಾಗಿ ನನ್ನ ಮೇಲೆ ಪ್ರಭಾವ ಬೀರಿದ ಕವಿಗಳೆಂದರೆ ಬೇಂದ್ರೆ, ಕುವೆಂಪು ಹಾಗೂ ಮಧುರಚೆನ್ನರು. ಹೀಗೆ ನನ್ನ ಕಾವ್ಯ ಸಂಸ್ಕಾರ ಇದ್ದುದರಲ್ಲಿ ಸ್ವಲ್ಪ ವಿಸ್ತಾರವಾದದ್ದು. ಅದನ್ನು ಮೈಗೂಡಿಸಿಕೊಂಡು ನನ್ನ ದಾರಿಯನ್ನು ಕಂಡುಕೊಳ್ಳಲು ಪ್ರಯತ್ನಿಸಿದೆ. 'ಪ್ರಭಾವ', 'ಪ್ರೇರಣೆ' ಪದಗಳ ಅರ್ಥದಲ್ಲಿ ಸ್ವಲ್ಪ ಸೂಕ್ಷ್ಮ ವ್ಯತ್ಯಾಸವಿದೆ. 'ಪ್ರಭಾವ' ಎನ್ನುವುದು ಒಂದು ರೀತಿಯ ಘನತೆ, ಕಲಾಹಿರಿಮೆ, ವರ್ಚಸ್ಸು ಇತ್ಯಾದಿ ಅರ್ಥವುಳ್ಳದ್ದು. ಆದರೆ 'ಪ್ರೇರಣೆ' ನಮ್ಮನ್ನು ಮುನ್ನುಗ್ಗಿಸುವ, ಪ್ರಚೋದಿಸುವ ಶಕ್ತಿಯಾಗಿ ಕೆಲಸ ಮಾಡುವಂಥದ್ದು.

1916ರ ಸುಮಾರಿಗೆ ಕನ್ನಡದಲ್ಲಿ ಸಾಹಿತ್ಯಕೃಷಿಯನ್ನು ಪ್ರಾರಂಭಿಸಿದ ಬೇಂದ್ರೆಯವರು 1932 ರಲ್ಲಿಪ್ರಕಟವಾದ 'ಗರಿ' ಎಂಬ ತಮ್ಮ ಪ್ರಥಮ ಸಂಕಲನದಿಂದಲೇ 'ವರಕವಿ' ಎಂದು ಪ್ರಸಿದ್ಧರಾದರು. ಜೊತೆಗೆ ವಿಮರ್ಶೆ, ಚಿಂತನೆ, ಸಂಶೋಧನೆ, ಪ್ರಬಂಧ, ನಾಟಕ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಹಲವಾರು ಪ್ರಭಾವಿ ಕೃತಿಗಳನ್ನು ರಚಿಸಿದ ಬೇಂದ್ರೆ ಸವ್ಯಸಾಚಿಯಾಗಿದ್ದರೂ ಅವರ ಮುಖ್ಯ ಮತ್ತು ಬಹುಕಾಲ ನಿಲ್ಲಬಲ್ಲ ಸಾಹಿತ್ಯದ ಕೆಲಸ ನಡೆದದ್ದು ಕಾವ್ಯಕ್ಷೇತ್ರದಲ್ಲಿಯೇ– ಅದರಲ್ಲೂ ಭಾವಗೀತಗಳಲ್ಲಿಯೇ ಎಂಬುದು ನಿರ್ವಿವಾದ. ಅವರು ನಮ್ಮ ಕಾಲದ ಮತ್ತು ನಮ್ಮ ದೇಶದ ಅತ್ಯಂತ ಉಚ್ಚ ಮತ್ತು ಸೂಕ್ಷ್ಮ ಭಾವಗೀತಕಾರರಾಗಿದ್ದರಷ್ಟೇ ಅಲ್ಲದೆ ಕೆಲವು ಪರಿಣತ ಕಾವ್ಯ ವಿಮರ್ಶಕರ ಪ್ರಕಾರ ಇಡೀ ಪ್ರಪಂಚದ ಉಚ್ಚತಮ ಹಾಗೂ ಸೂಕ್ಷ್ಮತಮ ಭಾವಗೀತಕಾರರಲ್ಲಿ ಒಬ್ಬರೆನಿಸಿದ್ದಾರೆ. ಸೂರ್ಯನಿಗೆ ಬೆಳಕು ಹೇಗೆ ಸಹಜ, ಚಂದ್ರನಿಗೆ ಬೆಳುದಿಂಗಳು ಹೇಗೆ ಸಹಜ, ಬೇಂದ್ರೆಯವರಿಗೆ ಕಾವ್ಯ ಎಂದರೆ ಅಷ್ಟೇ ಸಹಜ.

ಧಾರವಾಡದಲ್ಲಿ ಹಾಯಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೇ ಕಾವ್ಯದಲ್ಲಿ ಆಸಕ್ತಿ ತಳೆದಿದ್ದ ನನಗೆ ಬೇಂದ್ರೆಯವರ ವ್ಯಕ್ತಿತ್ವ, ಅವರ ಕಾವ್ಯವಾಚನದ ವೈಖರಿ ನನ್ನನ್ನು ವಿಶೇಷವಾಗಿ ಆಕರ್ಷಿಸಿತು. ಅವರ ಆಕಾರ, ರೂಪ, ಉಡುಗೆ–ತೊಡುಗೆ, ಕವಿತೆಯ ನಾಟ್ಯಾಂಶವನ್ನು ಎತ್ತಿಕಾಣಿಸುತ್ತಿದ್ದ ಅವರ ಕಣ್ಣ ಹೊಳಪಿನ ನೋಟ, ತಲೆಯ ಒಲೆದಾಟ, ಕೈ ತಿರುಗಿಸುವ ಮಾಟ ಮತ್ತು ಅವರದೇ ಆದ ಭಾವಪೂರ್ಣ ಧಾಟಿ – ಹೀಗೆ ಅವರ ಕಾವ್ಯವಾಚನ ಇಡೀ ಸಭೆಯ ಮೇಲೆ ಒಂದು ವಿಲಕ್ಷಣ ಪರಿಣಾಮ ಬೀರುತ್ತಿತ್ತು. ಮುಂದೆ ಪುಸ್ತಕಗಳಲ್ಲಿ ಅವರ ಕವಿತೆ ಓದುವಾಗಲೂ ನಾನು ಅದನ್ನೇ ಭಾವಿಸಿಕೊಂಡು ಓದತೊಡಗಿದೆ. ಇಂದು ಸುಗಮ ಸಂಗೀತಕಾರರಲ್ಲಿ ಹಲವಾರು ಇವೇ ಕವಿತೆಗಳನ್ನು ಬಹಳ ಚೆನ್ನಾಗಿ ಹಾಡುತ್ತಾರೆ. ಆದರೂ ಈ ಹಾಡುಗಾರಿಕೆ

ಕವಿಯ ಸ್ವಂತ ಹಾಡಿನ ಮೋಡಿಯನ್ನು ಮೀರಿಸಲಾರದೆಂದೇ ನನ್ನ ಅನಿಸಿಕೆ. ಕವಿತೆ ಪ್ರಧಾನವಾಗಿ 'ಶ್ರವ್ಯ' ಎನ್ನುವದು ಕೇವಲ 'ಲಕ್ಷಣ'ದ ಮಾತಲ್ಲ. ಅದರ ಮುಖ್ಯ ಲಕ್ಷಣವೇ ಎನ್ನುವದು ಅವರ ಕಾವ್ಯವಾಚನದಿಂದ ಸ್ಪಷ್ಟವಾಯಿತು. ಅವರ ಕಂಠದ ಈ ಜೀವಂತಿಕೆ ಕೊನೆಯವರೆಗೂ ಕುಗ್ಗಿರಲಿಲ್ಲ. ಬೇಂದ್ರೆ ಮತ್ತು ನನ್ನ ಅಥವಾ ನಮ್ಮ ಪರಸ್ಪರ ಸೃಜನಾತ್ಮಕ ಕೊಳು-ಕೊಡುಗೆಗೆ ಅವರ ಕಾವ್ಯವಾಚನವೇ ನಾಂದಿಯಾಯಿತು ಎಂಬುದಕ್ಕೆ ಇಷ್ಟೆಲ್ಲ ಉಪೋದ್ಘಾತ.

ಇದಕ್ಕೆ ಸಂಬಂಧಪಟ್ಟಂತೆಯೇ ಇಲ್ಲಿಯೇ ಒಂದು ಪ್ರಸಂಗವನ್ನು ಹೇಳಿ ಬಿಡಬಹುದು. ಗೋಕಾಕರು ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರಾಗಿದ್ದಾಗ 1958ರ ಸುಮಾರು ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಂಟಟ India English Teacher's Conference ನಡೆಯಿತು. ಆ ಸಂದರ್ಭದಲ್ಲಿ ಒಂದು ಸಂಜೆ ಬೇಂದ್ರೆಯವರ ಕಾವ್ಯವಾಚನದ ಏರ್ಪಾಡಾಗಿತ್ತು. ಅದೇ ವರ್ಷ ಅವರ 'ಅರಳು-ಮರಳು' ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಬಂದಿತ್ತು.

ಬೇಂದ್ರಯವರು ತಮ್ಮ ಕವನವನ್ನು ವಾಚಿಸಿದಂತೆ ಗೋಕಾಕರು ಅದರ ಇಂಗ್ಲೀಷ್ ಭಾಷಾಂತರ ಓದುತ್ತಿದ್ದರು. ಬೇರೆ ಬೇರೆ ಮಾತೃಭಾಷೆಗಳ ಮೂಲದಿಂದ ಬಂದಿದ್ದ ಇಂಗ್ಲೀಷ್ ಅಧ್ಯಾಪಕರಿಗೆ ಬೇಂದ್ರೆಯವರ ಕನ್ನಡ ಕಾವ್ಯವಾಚನವೇ ಹೆಚ್ಚು ಪ್ರಭಾವ ಬೀರಿದಂತೆ ಕಂಡುಬಂದಿತು, ಅವರು ಅಂದು ಓದಿದ ಕವಿತೆಗಳಲ್ಲಿ ಒಂದು ಇನ್ನೂ ನನ್ನ ಕಿವಿಯಲ್ಲಿ ಅನುರಣನಗೊಳ್ಳುತ್ತಿದೆ. ಆ ಕವಿತೆಯ ಹೆಸರುಳ್ಳ 'ಸಹಸ್ರತಂತ್ರೀ ನೀಃಸ್ವನದಂತೆ' ('ಹೃದಯ ಸಮುದ್ರ' ಸಂಕಲನದ ಕೊನೆಯ ಕವಿತೆ) ಅದರ ಮೊದಲ ನುಡಿ ಹೀಗೆದೆ:

ಸಹಸ್ರ ತಂತ್ರೀ ನೀಃಸ್ವನದಂತೆ
ಮಾತರಿಶ್ವನಾ ಘನಮನದಂತೆ
ಗುಡುಗಾಡುತ್ತಿದೆ ಗಗನದ ತುಂಬ
ಪ್ರಣವ ಪ್ರವೀಣನ ನಾದಸ್ತಂಭ

ಕೊನೆಯ ನುಡಿ ಇದು :

ಧರ್ಮ ಮೇಘವೇ ವರ್ಷಿಸಿವಂತೆ
ಸತ್ಯದ ಸತ್ವವ ಸ್ಪರ್ಶಿಸುವಂತೆ
ಧರಣಿಯ ಕೆಚ್ಚಲ ಹರ್ಷಿಸುವಂತೆ
ಸಹಸ್ರತಂತ್ರೀ ನೀಃಸ್ವನದಂತೆ.

ಬೇಂದ್ರಯವರ ಕವಿತೆಗಳಲ್ಲೇ ಇದು ಸಂಸ್ಕೃತ ಭೂಯಿಷ್ಠವಾದದ್ದು.

ಬೇಂದ್ರೆಯವರು ಈ ಕವಿತೆ ರಚಿಸಿದ್ದು ಅವರು ಪಾಂಡಿಚೇರಿಯಿಂದ ತಿರುಗಿ ಬರುವಾಗ (1956). ಇದಕ್ಕೆ ಪ್ರೇರಣೆ ಅಥವಾ ನೆಪಮಾತ್ರವಾದದ್ದು ಟ್ರೇನಿನಲ್ಲಿ ತಿರುಗುತ್ತಿದ್ದ ಫ್ಯಾನಿನ ಗುಂಯ್‌ಗುಡುವ ನಾದ. ಆದರೆ ವಸ್ತು? ಅರವಿಂದರ ಆಶೀರ್ವಚನ, ಮಾತೆಯವರ ಕರುಣಾಪ್ರಸಾದದಿಂದ ಗಂಗಾವತರಣವಾದಂತೆ ಇಳಿದು ಬರುವಂತೆ ಭಾಸವಾಗಿ ಈ ಕವಿತೆ ಮೂರ್ತಿಗೊಂಡ ಭಾವಗೀತವಾಯಿತು, ಮುಂದೆ 1988ರಲ್ಲಿ, ಅವರು ತೀರಿಕೊಂಡು ಏಳುವರ್ಷದ ನಂತರ ಪಾಂಡಿಚೇರಿ ಆಶ್ರಮದ 'Mother India' ಪತ್ರಿಕೆಯಲ್ಲಿ ಈ ಕವನದ ಮಹತ್ವವನ್ನು ಪ್ರಕಟಿಸುತ್ತ 'Supramental Manifestations'ಗೆ ಸಂಬಂಧಪಟ್ಟ ಅನುಭಾವ ಆಶ್ರಮದ ಹೊರಗಿನ ಪ್ರದೇಶದಲ್ಲಿರುವ ಮೂವರಿಗೆ ಮಾತ್ರ ಸ್ಪಂದಿಸಿತು. ಅವರಲ್ಲಿ ಬೇಂದ್ರೆಯವರು ಒಬ್ಬರು-ಎಂದು ಹೇಳಲಾಗಿತ್ತು. ('ಅರಳು-ಮರಳು' ಮೂರನೇ ಆವೃತ್ತಿಯಲ್ಲಿ ಈ ಟಿಪ್ಪಣಿ ಕೊಡಲಾಗಿದೆ.)

1949ರಲ್ಲಿ ನನ್ನ ಪ್ರಥಮ ಕವನ ಸಂಕಲನ 'ಕಾವ್ಯಾಕ್ಷಿ' - ಧಾರವಾಡಕ್ಕೆ ಬಂದ ಮೇಲೆ ನನ್ನ ಕಾವ್ಯಪ್ರಜ್ಞೆ ಕಣ್ಣು ತೆರೆದಿದ್ದರಿಂದ ಇದು 'ಕಾವ್ಯಾಕ್ಷಿ'ಯಾಯಿತು. ಅದುವರೆಗೆ ಬೇಂದ್ರೆಯವರ ಪ್ರತ್ಯಕ್ಷ ಪರಿಚಯ (Personal Contact) ನನಗಿರದಿದ್ದರೂ ನನ್ನ ಬಿನ್ನಹವನ್ನು ಮನ್ನಿಸಿ ಸೊಲ್ಲಾಪುರದಿಂದಲೇ ಅದಕ್ಕೆ ಮುನ್ನುಡಿಯನ್ನು ಬರೆದು ಕಳಿಸಿದರು. 'ಹೊಸಗನ್ನಡ ಕಾವ್ಯವಾಹಿನಿ ಹರಿಗಡಿದಿಲ್ಲ. ಹೊಸ ಪ್ರವಾಹಗಳನ್ನು ಸೇರಿಸಿಕೊಳ್ಳುತ್ತಲಿದೆ ಎಂಬುದಕ್ಕೆ ಇವರ ಕೃತಿಯೂ ಒಂದು ಪ್ರಮಾಣ' ಇತ್ಯಾದಿ ಕೆಲವು ಮಾತುಗಳು ನನಗೆ ತುಂಬ ಪ್ರೋತ್ಸಾಹದಾಯಕವಾಗಿ ಪರಿಣಮಿಸಿದವು. ತಮ್ಮ ಮುಂದಿನ ಪೀಳಿಗೆಯ ಕವಿಗಳ ಬಗ್ಗೆ ಬೇಂದ್ರೆ ಎಷ್ಟೊಂದು ಆಸ್ಥೆವಹಿಸಿದ್ದರು, ಭರವಸೆ ತಾಳಿದ್ದರು, ಕನ್ನಡ ಕಾವ್ಯಪರಂಪರೆಯ ಬಗ್ಗೆ ಹೇಗೆ ಕಾಳಜಿವಹಿಸಿದ್ದರು ಎನ್ನುವುದು ಈ ಮುನ್ನುಡಿಯಿಂದ ಗೊತ್ತಾಗುತ್ತದೆ. ಇಂದಿನ ಉದಯೋನ್ಮುಖಕವಿಗಳಿಗೆ ನಾನು ಮುನ್ನುಡಿ ಬರೆಯುವ ಪ್ರಸಂಗ ಬಂದಾಗೆಲ್ಲ ಬೇಂದ್ರೆಯವರ ಈ ಮುನ್ನುಡಿ ನನಗೆ ಎಚ್ಚರಿಕೆಯ ಪ್ರೇರಣೆ ನೀಡುತ್ತಿರುತ್ತದೆ.

ಈ ಎಲ್ಲ ಹಿನ್ನೆಲೆಯ ಉದ್ದೇಶವೇನು ಅಂದರೆ, ಬೇಂದ್ರೆ ಸ್ವತಃ ದೊಡ್ಡ ಪ್ರತಿಭಾವಂತ ವ್ಯಕ್ತಿಯಾಗಿದ್ದರೂ ಬೇರೆಡೆ ಪ್ರತಿಭೆಯ ಬೀಜವನ್ನು ಕಂಡಾಗ ಆ ನೆಲವನ್ನು ಹದಗೊಳಿಸಿ ಬೀಜ ಬಿತ್ತುವಕೆಲಸವನ್ನು ಮಾಡಿದರು. ಈಚೆಗೆ ಡಾ. ವಾಮನ ಬೇಂದ್ರೆಯವರುಜೊತೆಗೆ ಮಾತಾಡುತ್ತಿರುವಾಗ ಅವರು ಹೇಳಿದರು: "ಬೇಂದ್ರೆಯವರು Agricultural Creative Writer ಅದಕ್ಕೆ 'ಎದೆಯ ಒಕ್ಕಲಿಗನ ಹಾಡು' ಎಂಬ ಕವಿತೆ ಬರೆದರು." ಈ ಬಗೆಯ ಸೃಜನಶೀಲ ಕಾರ್ಯದಲ್ಲಿ ಬೇಂದ್ರೆ ಅಗ್ರಮಾನ್ಯರೆಂದೇ ಹೇಳಬಹುದು.

ಸೊಲ್ಲಾಪುರದಿಂದ 1956ರಲ್ಲಿ ಅವರು ಧಾರವಾಡಕ್ಕೆ ಬಂದ ಮೇಲೆ ನಮ್ಮ ಒಡನಾಟಕ್ಕೆ ಹೆಚ್ಚಿನ ಅವಕಾಶ ಒದಗಿತು. ಬೇಂದ್ರೆಯವರೊಡನೆ ನನ್ನ ಮತ್ತು ಕೆಲವು ಗೆಳೆಯರ ಸಂಬಂಧ ಸಹೃದಯ ಸಂಬಂಧವಾಗಿತ್ತಲ್ಲದೆ ಸಂಘರ್ಷದ್ದಾಗಿರಲಿಲ್ಲ. ಯಾಕೆಂದರೆ ನಾವು ಅವರಿಂದ ತಿಳಿದುಕೊಳ್ಳುವದು ಬಹಳಷ್ಟಿರುತ್ತಿತ್ತು. ಆದರೆ ಚರ್ಚಗೆ, ಸಂವಾದಕ್ಕೆ ಅವರು ನಿರಾಕರಿಸುತ್ತಿರಲಿಲ್ಲ. ಅಲ್ಲೂ ಅವರ ಮಾತೇ ಪ್ರಮುಖವಾಗಿರುತ್ತಿತ್ತು ಎಂಬುದನ್ನು ಬೇರೆ ಹೇಳಬೇಕಿಲ್ಲ. ಬೇಂದ್ರೆಯವರು ಕೇವಲ ಕವಿಗಳನ್ನು ಸೃಷ್ಟಿಸಲಿಲ್ಲ; ವಿಮರ್ಶಕರನ್ನೂ ತಮ್ಮ ಜೊತೆಗೆ ಬೆಳೆಯುವಂತೆ ಮಾಡಿದರು. ಕುರ್ತಕೋಟಿಯವರು ಹೇಳಿದ್ದಾರೆ: "ನಾನು ಬೆಳೆದು ಬಂದದ್ದೇ ಬೇಂದ್ರೆಯವರ ಕಾವ್ಯದ ಉದ್ದೀಪಕ ವಾತಾವರಣದಲ್ಲಿ. ನನ್ನ ವಿಮರ್ಶೆಯ ಪ್ರಜ್ಞೆ ಮೂಡಿಬಂದದ್ದು ಈ ಕಾವ್ಯದಿಂದ" ('ಬಾರೋ ಸಾಧನಕೇರಿಗೆ'ಯ ಮೊದಲ ಮಾತು). ಕುರ್ತಕೋಟಿಯವರು ಬೇಂದ್ರೆ ಕಾವ್ಯದ ಪ್ರಮುಖ ವಿಮರ್ಶಕರಲ್ಲಿ ಒಬ್ಬರಾಗಿದ್ದರಲ್ಲದೆ ಡಿ.ಆರ್. ನಾಗರಾಜ್ ವಿನೋದವಾಗಿ ಹೇಳಿದಂತೆ ಬೇಂದ್ರೆ ಬಗ್ಗೆ ಒಂದು ರೀತಿ ಪತಿವ್ರತಾ ನಿಷ್ಠೆ ತೋರಿದರು. ಡಾ. ಆಮೂರರು ಬೇಂದ್ರೆಯವರನ್ನು 'ಭುವನದ ಭಾಗ್ಯ'ವಾಗಿ ಭಾವಿಸಿ ಅದನ್ನು ತಮ್ಮ ಸಮತೂಕದ ಸಮಗ್ರ ವಿಮರ್ಶೆಯಿಂದ ತೋರಿಸಿಕೊಟ್ಟರು. ಮೊಖಾಶಿಯವರು 'ಬೇಂದ್ರೆ ಕಾವ್ಯ ಮೀಮಾಂಸೆ'ಯ ಬಗ್ಗೆ ಬರೆದರಲ್ಲದೆ ಒಂದು ಮಹತ್ವದ ಮಾತನ್ನು ಹೇಳಿದರು: "ಬೇಂದ್ರೆಯವರ ಮಾತೃಭಾಷೆ ಕನ್ನಡ, ಇದರರ್ಥವನ್ನು ಬಲ್ಲವರೇ ಬಲ್ಲರು", ಬೇಂದ್ರೆಯವರು ಮಾತಾಡುತ್ತಿದ್ದುದೆಲ್ಲ ನಮಗೆ ಸಂಪೂರ್ಣ ಅರ್ಥವಾಗದೆ ಇರಬಹುದು. ಆದರೆ ಇದೊಂದು ಅಸಾಧರಣಶಕ್ತಿ. ಅಪೂರ್ವ ಚೈತನ್ಯ ಎಂಬ ಅನುಭವ ನಮಗೆ ಉಂಟಾಗದೆ ಇರುತ್ತಿರಲಿಲ್ಲ. ಅವರಲ್ಲಿ ವಿಸಂಗತಿ, ವಿಕ್ಷಿಪ್ತತೆ, ವ್ಯಕ್ತಿ ವೈಲಕ್ಷ್ಯಣಗಳು ಇರಲಿಲ್ಲವೆಂತಲ್ಲ. ನಮಗೆ ಅದು ಮಹತ್ವದಾಗಿ ತೋರಲಿಲ್ಲ. ಅದರ ಬದಲು ವಿಶಿಷ್ಟ ಪ್ರತಿಭೆಯುಳ್ಳ ಮೇಧಾವಿ ವ್ಯಕ್ತಿಯೊಡನೆ ಹೇಗೆ ಸಹನೆಯಿಂದ ವರ್ತಿಸಬೇಕೆಂಬುದನ್ನು ರೂಢಿಸಿಕೊಂಡೆವು.

1965ರಲ್ಲಿ ನನ್ನ ಏಳನೇ ಕವನ ಸಂಕಲನ 'ನೆಲ-ಮುಗಿಲು'ವಿಗೆ ಬರೆದ ಮುನ್ನುಡಿಯಲ್ಲಿ ಬೇಂದ್ರೆ ಒಂದು ಮಾತು ಬರೆದಿದ್ದರು : "ವಿನಯ ಹಳಸುವ ಬದುಕಲ್ಲ, ವಿಷಿಷ್ಟಕ್ಕೆ ತೊಡಕಲ್ಲ; ಇದು ಧಾರವಾಡ ತತ್ವ". ಬೇಂದ್ರೆಯವರ ಸೂತ್ರಪ್ರಾಯವಾದ ಈ ಮಾತಿಗೆ ವಿವರಣೆ ನೀಡುವ ಒಂದು ಪ್ರತ್ಯೇಕ ಲೇಖನವನ್ನೇ ಕುರ್ತಕೋಟಿಯವರು ಬಹಳ ವರ್ಷಗಳ ಮೇಲೆ 1996ರಲ್ಲಿ (31 ವರ್ಷಗಳ ನಂತರ) ಬರೆದು ಅದರಲ್ಲಿ ಅವರು ಹೇಳಿದ್ದೆಂದರೆ "ಕಾವ್ಯತತ್ವ ಜೀವನ ತತ್ವವೂ ಆಗಬೇಕೆಂಬ ಹವ್ಯಾಸ ಬೇಂದ್ರೆಯವರ ಸ್ವಂತಕಾವ್ಯಕ್ಕೆ ಎಂದೂ ತಪ್ಪಲಿಲ್ಲ. ಅಂಥದೇ ಒಂದು ಹವ್ಯಾಸವನ್ನು ಅವರು ಕಣವಿಯವರ ಕಾವ್ಯದಲ್ಲಿ ಕಂಡಿರಬೇಕು".

ಬೇಂದ್ರೆಯವರ ಕಾವ್ಯದಲ್ಲಿ ನಾನು ಮೆಚ್ಚಿಕೊಂಡ ಅಂಶಗಳಲ್ಲಿ ಮುಖ್ಯವಾದದ್ದೆಂದರೆ, ಶಬ್ದ-ನಾದ-ಲಯಗಳ ಮೇಲಿದ್ದ ಅವರ ಪ್ರಭುತ್ವ,

ಧಾರವಾಡ ಬೇಂದ್ರೆಯವರಿಗೆ ಒದಗಿಸಿದ ಮಹಾ ಪ್ರೇರಣೆಗಳನ್ನೇ ನನಗೂ ಒದಗಿಸಿತು ಎನ್ನುವುದನ್ನು ಬೇಂದ್ರೆಯವರೇ ನನ್ನ 'ನೆಲ–ಮುಗಿಲು' ಕವನ ಸಂಗ್ರಹದ ಮುನ್ನುಡಿಯಲ್ಲಿ ಹೇಳಿದ್ದಾರೆ. ಬೇಂದ್ರೆಯವರ ಕಾವ್ಯದ ಅಭ್ಯಾಸ ನನಗೆ ಹೇಗೆ ಸ್ವತಂತ್ರವಾದ ಪ್ರಯೋಗಗಳಿಗೆ ಪ್ರೇರಣೆಯನ್ನು ಒದಗಿಸಿತು, ನಾನು ಹೇಗೆ ಅದಕ್ಕೆ ಸೃಜನಶೀಲವಾಗಿ ಪ್ರತಿಕ್ರಿಯಿಸಿದೆ ಎನ್ನುವುದಕ್ಕೆ ಕೆಲವು ಉದಾಹರಣೆಗಳನ್ನು ನಾನೀಗ ಕೊಡಬಹುದು.

ನನ್ನ ಪ್ರಥಮ ಸಂಕಲನ 'ಕಾವ್ಯಾಕ್ಷಿ' ಕವಿತೆಯ ಪ್ರಾರಂಭ ಹಾಗೂ ಕೊನೆಯ ನುಡಿಗಳು ಹೀಗಿವೆ :

ಆ ಗಿಡಾ ಈ ಗಿಡಾ
ಒಂದೊಂದೂ ಜೇಂಗೊಡಾ
ಬಾಂದೇವಿಗೆ ನೆಲದಾಯಿಯ ಹೂಗೊಂಡೆಯ ಹೊಂಗೊಡಾ

ಕೊನೆಯ ನುಡಿ :

ತನಗೆ ತಾನೆ ತಿಳಿಯದಂತೆ
ತುಳುಕಿತಹಹ ಭಾವನಾ
ಕಮ್ಮಲರಿಗೆ
ಕವಿಗಾಳಿಗೆ
ಕಾವ್ಯಾಕ್ಷಿಗೆ ವಂದನಾ

ಮುಂದೆ ಒಂದು ಸಂದರ್ಭದಲ್ಲಿ 'ಸಖೀಗೀತ' ಸಂಗ್ರಹವನ್ನು ನಾನು ಮತ್ತೊಮ್ಮೆ ಓದುವಾಗ ಅಲ್ಲಿ 'ಚಿರಂತನ' ಪದ್ಯ ಕಣ್ಣಿಗೆ ಬಿತ್ತು. ಅದರ ಪ್ರಾರಂಭ ಹೀಗಿದೆ :

ಆ ಮುಖಾ ಈ ಮುಖಾ
ಯಾವ ಗಂಡೊ
ಯಾವ ಹೆಣ್ಣೊ
ಪ್ರೀತಿಯೆಂಬ ಚುಂಬಕಾ

ನನ್ನ ಮೇಲಿನ ಪದ್ಯದ ಛಂದಸ್ಸಿಗೆ ಇದರಿಂದ ಪ್ರೇರಣೆ ದೊರೆತಿರಬಹುದು. ಆದರೆ ಎರ್ಡರ ವಸ್ತು ಬೇರೆ. ಬೇಂದ್ರೆಯವರ 'ಚಿರಂತನ' ಪದ್ಯ 'ಸಂತತಿಯೆ ಚಿರಂತನಾ' ಎಂಬ ದಾಂಪತ್ಯದ ತತ್ವವನ್ನು ಪ್ರತಿಪಾದಿಸಿದರೆ, 'ಕಾವ್ಯಾಕ್ಷಿ' ಕವಿತೆ ಪ್ರಕೃತಿಯ ಸೌಂದರ್ಯನುಭೂತಿಗೆ ಅಭಿವ್ಯಕ್ತಿ ನೀಡಿದೆ. ಇದರ ಛಂದಸ್ಸಿನಲ್ಲಿಯೂ ಬದಲಾವಣೆಯಾಗಿರುವುದನ್ನು ಕಾಣಬಹುದು.

ಬೇಂದ್ರೆಯವರೇ ಆವಿಷ್ಕಾರ ಮಾಡಿದ 'ಮೇಘದೂತ' ಛಂದಸ್ಸಿನ ಗುಂಗಿನಿಂದ ಪಾರಾಗುವುದು ನಮಗೆಲ್ಲ ಬಹಳ ಕಷ್ಟವಾಗಿತ್ತು. [ಕಾಳಿದಾಸನ ಮಂದಾಕ್ರಾಂತಕ್ಕೆ ಇದು ಬೇಂದ್ರೆಯವರ ಸೃಜನಶೀಲ ಪ್ರತಿಕ್ರಿಯೆ ಎನ್ನಬಹುದೇ?] ನನ್ನ 'ಮೇಘೋಪಾಸನೆ''ತೀರ್ಪು' ಮೊದಲಾದ ಕವನಗಳಿಗೆ ಈ ಛಂದಸ್ಸನ್ನು ಸಮರ್ಥವಾಗಿ ಬಳಸಿಕೊಂಡನೆಂದು ತೋರುತ್ತದೆ. ಆ ಮೇಲೆ ಸ್ವತಃ ಬೇಂದ್ರೆಯವರಲ್ಲದೆ ಇತರ ಕವಿಗಳೂ ಛಂದಸ್ಸಿನಲ್ಲಿ ಬರೆದರು. ಎಕ್ಕುಂಡಿಯವರ 'ಮಹಾಶ್ವೇತೆ' ಪಂದರೀನಾಥಾಚಾರ್ಯ ಗಲಗಲಿಯವರ 'ಗಂಗಾಲಹರಿ', ಬುದ್ದಣ್ಣ ಹಿಂಗಮಿರೆಯವರ 'ಬುದ್ಧದರ್ಶನ' ಮೊದಲಾದವನ್ನು ಇಲ್ಲಿ ಹೆಸರಿಸಬಹುದು. ಛಂದಸ್ಸು ಭಾವದ ನಡಿಗೆಯೇ ಹೊರತು ಅದನ್ನೊಂದು ಚೌಕಟ್ಟು ಮಾಡಿಕೊಳ್ಳಬಾರದು ಎನ್ನುವುದನ್ನು ನಾನು ಮರೆಯಲಿಲ್ಲ.

ಪ್ರಚಲಿತವಿದ್ದ ಶಿಶು ಪ್ರಾಸವೊಂದನ್ನು ಬಳಸಿಕೊಂಡು ಬೇಂದ್ರೆಯವರ 'ಪಾತರಗಿತ್ತಿಪಕ್ಕ'ದಂಥ ಅದ್ಭುತ ರಚನೆ ನನ್ನ 'ಗಿರಿಗಿರಿಗಿಂಡಿ ಇಬತ್ತಿ ಉಂಡಿ' ಕವಿತೆಗೆ ಪ್ರಚೋದನೆ ನೀಡಿತು. ಇದರ ಲಯಮಾತ್ರ 'ಪಾತರಗಿತ್ತಿಪಕ್ಕ'ಕ್ಕಿಂತ ಭಿನ್ನವಾಗಿದ್ದು ಮಕ್ಕಳ ಕವಿತೆಯಾಗಿ ಜನಪ್ರಿಯತೆ ಪಡೆದಿದೆ. ಬೇಂದ್ರೆಯವರ 'ಕರುಳಿನ ವಚನಗಳು'('ಉಯ್ಯಾಲೆ') ವಚನಗಳ ಶಿಲ್ಪದಲ್ಲಿ ರಚಿಸಿದ ವಾತ್ಸಲ್ಯ ಪ್ರಧಾನ ಕವನಗಳು. ನನ್ನ ಐದಾರು ವಾತ್ಸಲ್ಯಗೀತಗಳು ನವೋದಯ ಹಾಗೂ ನವ್ಯದ ಸಂದರ್ಭದಲ್ಲಿ ಬರೆದವು. ಅಭಿವ್ಯಕ್ತಿಯ ರೀತಿಯಲ್ಲಿ ಇವು 'ಕರುಳಿನ ವಚನಗಳು'ಗಿಂತ ಭಿನ್ನವಾಗಿವೆ. ವಾತ್ಸಲ್ಯಭಾವವೊಂದೇ ಸಾಮಾನ್ಯವಾಗಿರುವ ಅಂಶ. 'ಆನಿಬಂತವ್ವ ಆನಿ' ಎಂಬ ಪದ್ಯವನ್ನು ಮಾತ್ರ ಜಾನಪದ ಗತ್ತಿನಲ್ಲಿ ಬರೆದಿದ್ದು ಇದಕ್ಕೆ ಮೂಲ ಪ್ರೇರಣೆ ಜಾನಪದವೇ. ಮಗುವಿನ ಮೇಲಿನ ವಾತ್ಸಲ್ಯದಿಂದ ತಾಯಾದವಳು ತನ್ನ ಮೊಲೆಗಳ ಹೆಗ್ಗಳಿಕೆಯನ್ನು ಹಿಗ್ಗಿನಿಂದ ಹೇಳಿಕೊಳ್ಳುವ ಬೇಂದ್ರೆಯವರ 'ಮೊಲೆ'ಯಂಥ ಕವಿತೆ ಬಹುಶಃ ಬೇರೆ ಯಾವ ಭಾಷೆಯಲ್ಲಿಯೂ ಬಂದಿರಲಾರದೆಂದೇ ನನ್ನ ಎಣಿಕೆ.

ಬೇಂದ್ರೆಯವರ 'ಧಾರವಾಡದ ತಾಯಿ' ಕವಿತೆಯ ಪರಿಣಾಮವನ್ನು ನನ್ನ 'ಭಾವಜೀವಿ' ಕಾವ್ಯದಲ್ಲಿ ಒಂದೆಡೆ ನೆನೆದಿದ್ದೇನೆ :

ಧಾರವಾಡದ ತಾಯ ಮಡಿಲಲ್ಲಿ ಮೊರೆಯಿಟ್ಟ
ದತ್ತವಾಣಿಗೆ ಎದೆಯು ಕೋಡುತಿಹದು;
ಧಾರವಾಡದ ನೆಲದ ಗುಣವೇನೊ ಋಣವೇನೊ
ಕವಿಗಾಳಿ ಸವಿಗಾಳಿ ತೀಡುತಿಹುದು.

ಬೇಂದ್ರೆಯವರ 'ಬಾರೊ ಸಾಧನಕೇರಿಗೆ' ಎಂಬ ಕವಿತೆಯೊಡನೆ ಸಹಜವಾದ ಸೃಜನಾತ್ಮಕ ಸಂಬಂಧವನ್ನು 'ಧಾರವಾಡದಲ್ಲಿ ಮಳೆಗಾಲ' ಎಂಬ ನನ್ನ ಕವಿತೆಯ ನುಡಿಯೊಂದರಲ್ಲಿ ಕಲ್ಪಿಸಿಕೊಳ್ಳಲಾಗಿದೆ:

'ಅರಳು–ಮರಳಿ'ನ ಕವಿಯು ಕರೆದನು 'ಬಾರೊ ಸಾಧನಕೇರಿಗೆ'
ಬಂತು ಶ್ರಾವಣ ಬಳಗದೊಂದಿಗೆ 'ಮಳೆಯು ಎಳೆಯುವ ತೇರಿಗೆ'

ಬೇಂದ್ರೆಯವರು ಕಣ್ಮರೆಯಾದ ಮೇಲೂ ಅವರ ಕಾವ್ಯದೊಡನೆ ನನ್ನ ಪ್ರತಿಕ್ರಿಯೆ ಮುಂದುವರಿದಿರುವುದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು: 1998ರಲ್ಲಿ ನಾನು ಬರೆದ 'ಅತ್ತಿಕೊಳ್ಳದಲ್ಲಿ ಸೂರ್ಯ' (ಸಾನೆಟ್) ಪದ್ಯವನ್ನು ಬೇಂದ್ರೆಯವರ ಶ್ರೇಷ್ಠ ಕವಿತೆಗಳಲ್ಲಿ ಒಂದಾದ 'ಬೆಳಗು' ಕವಿತೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ನೋಡಬಹುದು. 'ಬೆಳಗು' ಕವಿತೆಯ ಭಾವ ಸಂದರ್ಭವನ್ನು ಸೂಚಿಸುತ್ತ 'ಧಾರವಾಡದ ಅತ್ತಿಕೊಳ್ಳದ ಚೆಲುವಿನ ನೋಟದಿಂದ ಪ್ರೇರಿತವಾದದ್ದು' ಎನ್ನಲಾಗಿದೆ. ಈಗ ಆ ಕೊಳ್ಳವನ್ನು ನೋಡಿದರೆ ಅದರ ಪತ್ತೆ ಹತ್ತದೆ ಹೋಗಬಹುದು. ಶ್ರೀರಾಮನಗರ, ಹನುಮಂತನಗರ ಮೊದಲಾದ ಬಡಾವಣೆಗಳು ಅಲ್ಲಿ ಹರಡಿಕೊಂಡಿವೆ. ಆದರೂ ಪ್ಲಾಯ್‌ವುಡ್ ಫ್ಯಾಕ್ಟರಿಯ (ಅದು ಬಂದ್ ಆಗಿ ಬಹಳ ವರ್ಷಗಳಾದವು) ಹಿಂಭಾಗಕ್ಕೆ ಹೋಗಿ ನೋಡಿದರೆ ಆಳವಾದ ಕೊಳ್ಳ ಇಂದಿಗೂ ಹಸಿರಾಗಿರುವುದನ್ನು ನೋಡಬಹುದು. ಇವತ್ತು ಜನಸಂಖ್ಯೆ ಬೆಳೆದು ನಗರಗಳ ಬಡಾವಣೆಗಳು ಹೆಚ್ಚಾಗಿ, ಪ್ರಕೃತಿಯ ಸುಂದರ ತಾಣಗಳು ಅದಕ್ಕೆ ತುತ್ತಾಗುತ್ತಿವೆ. ಇದು ಅನಿವಾರ್ಯ. ಪ್ರಕೃತಿ ಮತ್ತು ನಾಗರಿಕತೆ ಮುಖಾಮುಖಿಯಾಗಿರುವ ಒಂದು ಚಿತ್ರವನ್ನು ಸ್ವಲ್ಪಮಟ್ಟಿನ ವಿಷಾದ ಹಾಗೂ ಹಳಹಳಿಕೆಯಿಂದ ಕೂಡಿದ ನನ್ನ 'ಅತ್ತಿಕೊಳ್ಳದಲ್ಲಿ ಸೂರ್ಯ' ಕವಿತೆ ಕೊಡುತ್ತದೆ.

ಇದೆಲ್ಲ ನನ್ನದಾಯಿತು. ನನ್ನ ಸಮಕಾಲೀನರಲ್ಲಿ ಕೆಲವು ಕವಿಗಳು ತೋರಿದ ಇನ್ನೊಂದು ಬಗೆಯ ಸೃಜನಾತ್ಮಕ ಪ್ರತಿಕ್ರಿಯೆಯ ಬಗ್ಗೆ ಎರಡು ಮಾತು ಹೇಳಬೇಕು. ಅವರು ಕೂಡ ಬೇಂದ್ರೆಯವರ ಕಾವ್ಯದಿಂದ ಪ್ರಭಾವಿತರಾಗಿ ಅವರನ್ನು ಗೌರವಿಸಿದವರೇ. ಆದರೆ ನವೋದಯ ಕಾವ್ಯದ ಭಾವೋದ್ರೇಕತೆ, ಅತಿಯಾದ ಆಧ್ಯಾತ್ಮಿಕತೆ, ವಾಸ್ತವ ದೂರತೆ ಮೊದಲಾದ ಅಂಶಗಳಿಗೆ ಅಣಕ, ವ್ಯಂಗ್ಯ ಹಾಗೂ ವಿಡಂಬನೆಯ ಮೂಲಕ ತೋರಿದ ಪ್ರತಿಕ್ರಿಯೆ ಸ್ವಾರಸ್ಯಕರವಾಗಿದೆ. ಬೇಂದ್ರೆ ಒಬ್ಬರಿಗೇ ಅಂತಲ್ಲ. ಕುವೆಂಪು, ಗೋಕಾಕ, ವಿ.ಸೀ. ಕೆ.ಎಸ್. ನರಸಿಂಹಸ್ವಾಮಿ ಮುಂತಾದವರ ನವೋದಯದ ಉನ್ನತ ಮಟ್ಟದ ಕವಿತೆಗಳಿಗೂ ಅಣಕ ಮತ್ತು ವಿಡಂಬನೆಯ ಮೂಲಕ ಪ್ರತಿಕ್ರಿಯಿಸಿ ಪದ್ಯ ಬರೆದವರಲ್ಲಿ ವಿ.ಜಿ. ಭಟ್ಟ ಅವರು ಪ್ರಮುಖರು. ಭಟ್ಟರು ವಯಸ್ಸಿನಲ್ಲಿ ನನಗಿಂತ ಐದು ವರ್ಷ ಹಿರಿಯರು. ಅವರು ಗೋಕಾಕರ ಶಿಷ್ಯರು ಕೂಡ, ತುಂಟತನ, ಬುದ್ಧಿವಂತಿಕೆ, ಹೊಸ ವಾಸ್ತವದ ಕಡೆಗೆ ಓದುಗರ ಲಕ್ಷ್ಯವನ್ನು ಸೆಳೆಯಲು ಅವರು ಪ್ರಯತ್ನಿಸಿದರು. ಭಟ್ಟರ 'ಆಕಾಶ ಗಂಗೆಗೆ' ಎಂಬ ಕವಿತೆ ಬೇಂದ್ರೆಯವರ 'ಗಂಗಾವತರಣ'ಕ್ಕೆ ಒಂದು ಬಗೆಯಲ್ಲಿ ಪ್ರತ್ಯುತ್ತರ ಕೊಟ್ಟಂತಿದೆ. ಭೂಮಿಯ ಮೇಲಿನ ಜನತೆ ತಾವೇ ತಂದುಕೊಂಡ ದುರವಸ್ಥೆಯನ್ನು ನೀಗಿಸಲು ಅವರೇ

ಯುಕ್ತಿಯನ್ನು ಹುಡುಕಿಕೊಳ್ಳಲಿ, ನೀನು ಇಳಿದು ಬರಬೇಡ ('ಇಳಿದು ಬಾ ತಾಯಿ') ಎಂಬ ಎಚ್ಚರಿಕೆ ಒಂದು ಬಗೆಯ (Anti dote) ಪರಿಹಾರ. 'ಆಕಾಶ ಗಂಗೆ' ಕವಿತೆಯ ಪ್ರಾರಂಭದಲ್ಲಿಯೇ ಕವಿ ಅದನ್ನು ಸೂಚಿಸುತ್ತಾರೆ:

ಕವಿಗಳ ಹಿಂಡೇ ಕರೆದಿದೆ ನಿನ್ನನು
ಭೂಮಿಗೆ ಓ ಗಂಗೆ
ಇಳೆಗಿಳಿಯುವ ಹುಲುಯೋಚನೆಗಳ ಬಿಡು
ಮಾಡಿದರೂ ದಂಗೆ.

ವಿ.ಸೀ. ಯವರ ಅತ್ಯಂತ ಭಾವನಿರ್ಭರವಾದ ರಚನೆ 'ಮನೆ ತುಂಬಿಸುವದು', ವಿ.ಜಿ. ಭಟ್ಟರು ಅದೇ ವಸ್ತುವನ್ನು ಕುರಿತು ಬರೆದ ಪದ್ಯದ ಶೀರ್ಷಿಕೆ 'ಮಗಳನ್ನು ಗಂಡನ ಮನೆಗೆ ನೂಕುವಾಗ'. ಎರಡನೇ ಮಹಾಯುದ್ಧ ಮುಗಿದ ಮೇಲೆ ಕುವೆಂಪು ಅವರು ಬರೆದ 'ಶ್ರೀ ಪಾರ್ಥಿವ ಪುರುಷನಿಗೆ' ತುಂಬ ಗಂಭೀರವಾದ ಹಾರೈಕೆಯ ಪದ್ಯ :

ಮೊದಲ ನುಡಿ ಹೀಗಿದೆ :
ಓಂ! ಹಾಲುಹಳ್ಳ ಹರಿಯಲಿ
ಬೆಣ್ಣೆ ಬೆಟ್ಟವಾಗಲಿ!
ಜೇನುಮಳೆಯು ಸುರಿಯಲಿ
ತೊಟ್ಟಿಲೊಳಿದು ತೂಗಲಿ.

ಇದಕ್ಕೆ ಭಟ್ಟರ Serio-comic ದನಿ (ಗಂಭೀರ-ಹಾಸ್ಯವನ್ನೊಳಗೊಂಡ) 'ಹರಕೆ' ಎಂಬ ಹೆಸರಿನ ಪದ್ಯದಲ್ಲಿ ಒಡಮೂಡಿದ್ದು ಹೀಗೆ :

ಓಂ ಓಂ ಸತ್ ಹೀಗಾಗಲಿ
ಲೋಕದೆಲ್ಲ ಮನೆಯಲಿ
ಓಂ ದೇವ ವಿಶ್ವವೆಲ್ಲ
ನಿನ್ನ ಬಿಡದೆ ನೆನೆಯಲಿ!

Sublime (ಉದಾತ್ತ) ಮತ್ತುಡುಜುಛಿಣಾಟರಣಾ (ಅಪಹಾಸ್ಯಕರ)ಗಳ ಕಲಬೆರೆಕೆಯ ಆಕಸ್ಮಿಕ ವಿಸ್ಮಯವೇ ವಿ.ಜಿ. ಭಟ್ಟರ ಕಾವ್ಯ ಎಂಬ ವಿಮರ್ಶಕರೊಬ್ಬರ ಮಾತು ಇಂಥ ಸಂದರ್ಭದಲ್ಲಿ ನಿಜವೆನಿಸುತ್ತದೆ.

ಆದರೆ ಅದೇ ಭಟ್ಟರು ಈ ರೀತಿಯ ಅಣಕವನ್ನು ಬಿಟ್ಟು, ಬೇಂದ್ರೆಯವರ ಕವಿತೆಯ ಒಂದು ಸಾಲಿನಿಂದ ಪ್ರೇರಿತರಾಗಿ ತಮ್ಮದೇ ರೀತಿಯಲ್ಲಿ ಗಂಭೀರ ಪದ್ಯ ಬರೆದದ್ದೂ ಉಂಟು. ಬೇಂದ್ರೆಯವರ 'ಮನುವಿನ ಮಕ್ಕಳು' ಕವಿತೆಯ ಕೊನೆಯ ನುಡಿ 'ಹತ್ತವತಾರದ ಹೇಡಿತನಕ್ಕೆ ಮನ ಗೋಣಗುಟ್ಟುವದು' ಎಂಬ ಸಾಲುಗಳನ್ನೇ ತೆಗೆದುಕೊಂಡು ತಮ್ಮ ಭಾವನೆಗಳಿಗೆ ಪೋಷಕವಾಗುವಂತೆ 'ಅವತಾರ' ಪದ್ಯವನ್ನು ಪ್ರಾರಂಭಿಸಿ ಹೀಗೆ ಕೊನೆಗೊಳಿಸಿದ್ದಾರೆ:

ಒಂದೊಂದವತಾರದ ತಲೆ ಮೇಲೂ
ಅಣಬೆಯು ಹುಟ್ಟುತ್ತಿದೆ.

ಆದರೆ ಅವತಾರದ ಕಲ್ಪನೆಗೆ ಬೇಂದ್ರೆ ತಾತ್ವಿಕವಾಗಿ ಬದ್ಧರಾಗಿದ್ದರು ಎಂಬುದನ್ನು ನಾವು ಮರೆಯಬಾರದು. ಇದೇ ರೀತಿ ಬೇಂದ್ರೆಯವರ 'ರಾಧೆಯ ಪಾಡು' ಕವಿತೆಯ 'ಮುಂದೇನೆ ಸಖಿ ಮುಂದೇನೆ?' ಎಂಬ ಸಾಲನ್ನೇ ತಮ್ಮದನ್ನಾಗಿ ಮಾಡಿಕೊಂಡು ತಮ್ಮ ಹೆಂಡತಿ ತೀರಿಕೊಂಡ ಮೇಲಿನ ತಮ್ಮ ಸ್ಥಿತಿಯನ್ನು ಆಪ್ತವಾಗಿ ತೋಡಿಕೊಂಡಿದ್ದಾರೆ.

"ಮುಂದೇನೆ ಸಖಿ ಮುಂದೇನೆ?"
ಇಂದಿನವರೆಗೂ ನಾ ಸುರಳೀತಾ ಬಂದೇನೆ
ಎಡವೀ ತಡವೀ ದಾಟಿದೆ ಅಡವೀ
ಎತ್ತಿ ನಡೆಸುತಿದೆ ಕೃಪಾಳು ಪೊಡವೀ
ಉಳಿದಿದೆ ಅನಿಸಿದೆ ಕೆಲವೇ ದಿನಗಳು
ಈತನ ಪಾಲಿಗೆ ಅಂದೇನೇ".

ನವ್ಯಕಾವ್ಯದ ಭರಾಟೆಯಲ್ಲಿ ಅದನ್ನು ಸಮರ್ಥಿಸಿಕೊಳ್ಳಲು ಅಡಿಗರೂ ತಮ್ಮದೇ ಆದ ವ್ಯಂಗ್ಯ ಧ್ವನಿಯ ಮೂಲಕ ಹಿರಿಯ ಕವಿಗಳ ಕಾವ್ಯ ಧೋರಣೆಗೆ ತಮ್ಮ ಪ್ರತಿಕ್ರಿಯೆಯನ್ನು ಸೃಜನಾತ್ಮಕವಾಗಿಯೇ ವ್ಯಕ್ತಪಡಿಸಿದರು. 'ಹಳೆ ಮನೆಯ ಮಂದಿ' 'ಪುಷ್ಪ ಕವಿಯ ಪರಾಕು' ಇವು ಅಂಥ ಪದ್ಯಗಳು. ಆದರೆ ಬೇಂದ್ರೆಯವರ ಪ್ರತಿಭೆ ಮೊದಲೇ ಪ್ರಚಂಡವಾದದ್ದು.


'ಮಧುವಾತಾ ಋತಾಯತೇ' ಮತ್ತು 'ನಾಲ್ಪೇ ಸುಖಮಸ್ತಿ' ಮುಂತಾದ ಕವಿತೆಗಳ ಮೂಲಕ ನವ್ಯರಿಗೆ ಅಥವಾ ನವ್ಯಕಾವ್ಯಕ್ಕೆ ತಮ್ಮದೇ ಆದ ರೀತಿಯಲ್ಲಿ ಪ್ರತಿಕ್ರಿಯಿಸಿರುವುದನ್ನು ಕಾಣುತ್ತೇವೆ.

ನವ್ಯಮಾರ್ಗದ ಮಿತಿಗಳು ಸ್ಪಷ್ಟವಾಗಿ ಕಾಣಿಸತೊಡಗಿದಾಗ ನಾನು 'ಮಣ್ಣಿನ ವಾಸನೆ' 'ವಿನೂತನ ಕವಿಯ ಕೈಫಿಯತ್ತು' 'ಕೃತಾರ್ಥ' ಎಂಬ ಕವಿತೆಗಳ ಮೂಲಕ ಪ್ರತಿಕ್ರಿಯಿಸಿ ನಿರಾಶಾವಾದದ ಕರೆಯನ್ನು ತಿರಸ್ಕರಿಸಿದ್ದುಂಟು. ಈ ಬಗೆಯ ಪ್ರತಿಕ್ರಿಯೆಗಳು ಸಾಹಿತ್ಯ ಲೋಕದಲ್ಲಿ ತಾತ್ಕಾಲಿಕ ಸಂದರ್ಭಗಳನ್ನು ಅವಲಂಬಿಸಿದ್ದರೂ ಅವು ಕಾವ್ಯಾತ್ಮಕ ಪ್ರತಿಕ್ರಿಯೆಗಳಾಗಿ ದಾಖಲೆಗೆ ಯೋಗ್ಯವಾಗಿವೆ ಎನಿಸುತ್ತದೆ.

ಕೆಲವು ಗಣ್ಯ ವಿಮರ್ಶಕರು ಬೇಂದ್ರೆಯವರ ಕಾವ್ಯದ ಬಗ್ಗೆ ದುಡುಕಿನಿಂದ ಆಡಿದ ಮಾತುಗಳನ್ನು, ಅಭಿಪ್ರಾಯಗಳನ್ನು ಆ ಮೇಲೆ ಅವರೇ ತಿದ್ದಿಕೊಂಡದ್ದುಂಟು. 'ಅರಳು-ಮರಳು ಸಂಗ್ರಹಕ್ಕಿಂತ ಹಿಂದಿನ ಬೇಂದ್ರೆ ಮಾತ್ರ ಕನ್ನಡದ ಶ್ರೇಷ್ಠಕವಿ' ಎಂದು ಬರೆದ ಯು.ಆರ್. ಅನಂತಮೂರ್ತಿಯವರು ಆ ಮೇಲೆ ಒಂದು ಸಂದರ್ಭದಲ್ಲಿ ಹೇಳಿದರು: "ಆ ಮಾತನ್ನು ನಾನು ಅವಿವೇಕದಿಂದ ಆಡಿದ್ದು" ಎಂದರಲ್ಲದೆ, 'ತನ್ನ ಸ್ವಭಾವದ ಎಲ್ಲ ಡೊಂಕುಗಳನ್ನು ಮುಚ್ಚಿಡದೆ ಹೊಗೆಯಲ್ಲಿಯೂ ಪ್ರಜ್ವಲಿಸುವ ಕೆಂಡದಂತೆ ಅವರಿದ್ದರು' ಎಂದು ಬರೆದರು. 'ಹಳೆ ಮನೆಯ ಮಂದಿ' ಎಂಬ ಕವಿತೆಯನ್ನು ಬರೆವ ಸಂದರ್ಭ ಅಡಿಗರಿಗೆ ಬಂದಿರಬಹುದು. ಆದರೆ ಬೇಂದ್ರೆಯವರ ಬಗ್ಗೆ ಅವರಿಗಿರುವ ಗೌರವ ಅಪಾರವಾದದ್ದು. ಅವರೇ ಒಂದೆಡೆ ಅದನ್ನು ವ್ಯಕ್ತಿಪಡಿಸಿದ್ದಾರೆ: "ಬೇಂದ್ರೆಯವರು ಕುಮಾರವ್ಯಾಸನ ನಂತರ ಹುಟ್ಟಿಬಂದ ಕನ್ನಡದ ಅತ್ಯಂತ ಶ್ರೇಷ್ಠ ಕವಿಗಳು. ಇಂದು ಕನ್ನಡದಲ್ಲಿ ಕಾವ್ಯರಚಿಸುತ್ತಿರುವ ನಾವುಗಳೆಲ್ಲ- ನಮ್ಮಲ್ಲಿ ಹೆಚ್ಚಿನವರೆಲ್ಲ - ಒಂದರ್ಥದಲ್ಲಿ ಕವಿ ಬೇಂದ್ರೆಯವರ ಸಾಹಿತ್ಯಕ ಮಕ್ಕಳು ಇಲ್ಲವೆ ಮೊಮ್ಮಕ್ಕಳು".

ಮಹಾಕವಿಯೊಬ್ಬ, ಸಾಮಾನ್ಯರಂತೆಯೇ ಓಡಾಡಿಕೊಂಡು ನಮ್ಮ ನಿಮ್ಮೊಡನೆ ಬೆರೆತು, ಜಗಳಾಡಿ, ಮತ್ತೆ ಕೂಡಿ 'ಸಮರಸವೇ ಜೀವನ' ಎಂಬ ತಮ್ಮ ಮಾತಿಗೆ ತಾವೇ ಸಾಕ್ಷಿಯಾಗಿದ್ದುದನ್ನು ಹೃದಯಾರೆ ಅನುಭವಿಸುವ ಭಾಗ್ಯ ನನ್ನ ಹಾಗೂ ನನ್ನ ಅನೇಕ ಸಮಕಾಲೀನ ಕವಿಗಳದಾಗಿತ್ತು.

●




**ಅಸೋಸಿಯೇಶನ್‌ಗೆ ಭೇಟಿ ಕೊಟ್ಟ ಸೂರ್ಯನಾಥ್ ಕಾಮತ್ ಅವರು ಸಂದರ್ಶಕರ ಡೈರಿಯಲ್ಲಿ ಬರೆದ ಹಸ್ತಾಕ್ಷರ**

# ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದದತ್ತಿ ಉಪನ್ಯಾಸಮಾಲೆ

| | | |
|---|---|---|
| ಜನವರಿ 1,1982 | ಡಾ. ಎಚ್. ಕೆ. ರಂಗನಾಥ್ | ಉಪನ್ಯಾಸ ಮಾಲೆಯ ಉದ್ಘಾಟನೆ<br>ಕನ್ನಡ ನಾಟಕ – ವಿಷಯ ಮತ್ತು ಕಲೆ |
| ಜನವರಿ 29, 30, 31 1983 | ಡಾ. ಕೀರ್ತಿನಾಥ್ ಕುರ್ತುಕೋಟಿ | ಬೇಂದ್ರೆಯವರ ಕಾವ್ಯ ಮುಖಗಳು ಮತ್ತು ಬೇಂದ್ರೆ ಹೊನಲು |
| ಜನವರಿ 7, 8,9, 1984 | ಡಾ. ಕೆ. ಶಿವರಾಮ ಕಾರಂತ | ಕನ್ನಡದಲ್ಲಿಜಾನಪದ ಸಾಹಿತ್ಯ ಮತ್ತು ಕಲೆ |
| ಜನವರಿ 5, 6, 1985 | ಡಾ. ಆದ್ಯರಂಗಾಚಾರ್ಯ<br>(ಡಾ. ಶ್ರೀನಿವಾಸ ಹಾವನೂರು) | ಭಾರತೀಯ ನಾಟಕ ಪರಂಪರೆ ಹಾಗೂ ಕನ್ನಡರಂಗಭೂಮಿಯ<br>ಮೇಲೆ ಅದರ ಪ್ರಭಾವ |
| ಮಾರ್ಚ್ 22, 23, 1986 | ಡಾ. ದೇ. ಜವರೇಗೌಡ | ಸ್ಥಳನಾಮಗಳು (ಕರ್ನಾಟಕವನ್ನು ಅನುಲಕ್ಷಿಸಿ) |
| ಮಾರ್ಚ್ 5,6,7, 1988 | ಡಾ. ಚಂದ್ರಶೇಖರಕಂಬಾರ | ಪರಂಪರೆ ಹಾಗೂ ಇಂದಿನ ರಂಗಭೂಮಿ |
| ಜನವರಿ 14, 15, 16, 1989 | ಡಾ. ಸೂರ್ಯನಾಥಕಾಮತ್ | ಭಾರತೀಯ ಪರಂಪರೆ ಸಂರಕ್ಷಣೆಗೆ ವಿಜಯ ನಗರದಕೊಡುಗೆ |
| ಜನವರಿ 4, 5, 6, 1991 | ಡಾ. ಜಿ. ಟಿ. ಸೂರ್ಯನಾರಾಯಣರಾವ್ | ವೈಜ್ಞಾನಿಕ ಮನೋಧರ್ಮ ಮತ್ತು ವಿಶ್ವವಿಕಾಸ |
| 1992 | ಡಾ. ಕೆ. ಕೃಷ್ಣಮೂರ್ತಿ | ಕನ್ನಡ–ಸಂಸ್ಕೃತ ಸಂಬಂಧಕಾವ್ಯ, ನಾಟಕ ಶಾಸ್ತ್ರ |
| 1993 | | |
| ಮಾರ್ಚ್ 19, 20 1994 | ಡಾ. ಎಮ್. ಎಮ್. ಕಲಬುರ್ಗಿ | ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣ, ವಿನಾಶ ಮತ್ತು<br>ನಿರಾಕರಣೆ |
| 1995 | ಡಾ. ಜಿ. ಎಸ್. ಶಿವರುದ್ರಪ್ಪ | ಶ್ರೀ ರಾಮಾಯಣದರ್ಶನ ಒಂದು ಆಧುನಿಕ ಮಹಾಕಾವ್ಯ ಮತ್ತು<br>ಕು.ವೆಂ.ಪು. ವೈಚಾರಿಕತೆ |
| ಮಾರ್ಚ್ 14, 15, 1998 | ಡಾ. ಎನ್. ಎನ್. ಲಕ್ಷ್ಮೀನಾರಾಯಣ ಭಟ್ಟ | ಕನ್ನಡದ ಪ್ರಸಿದ್ಧ ಕವಿ ಸಂತ ಶಿಶುನಾಳ ಶರೀಫರ ಕೃತಿಗಳು |
| ಎಪ್ರಿಲ್ 16, 1999 | ಡಾ. ಯು. ಆರ್. ಅನಂತಮೂರ್ತಿ | ಕನ್ನಡ ಸಂಸ್ಕೃತಿಯ ಆಶೋತ್ತರಗಳು ಮತ್ತು ಮುನ್ನೋಟ |
| ಡಿಸೆಂಬರ್ 17, 18, 1999 | ಡಾ. ಹಾ. ಮಾ. ನಾಯಕ | ತಳುಕಿನ ವೆಂಕಣ್ಣಯ್ಯನವರ ಬದುಕು ಬರಹ |
| ಡಿಸೆಂಬರ್ 21, 22, 2001 | ಡಾ. ಎಸ್.ಕೆ.ರಾಮಚಂದ್ರರಾವ್ | ಸಂಗೀತ, ಶಿಲ್ಪ ಹಾಗೂ ವೇದಾಂತ |
| 2003 | ಡಾ. ಲಕ್ಷ್ಮೀತಾತಾಚಾರ್ | ವಿಶಿಷ್ಟಾದ್ವೈತ |
| 2004 | ಡಾ. ಮತ್ತೂರುಕೃಷ್ಣಮೂರ್ತಿ | ಯಕ್ಷಪ್ರಶ್ನೆ – ಮಹಾಭಾರತದಲ್ಲಿ ಮಾಸ್ಟರ್ ಮೈಂಡ್ |
| 2005 | ಡಾ. ಗಣೇಶ್ | 'ಅಭಿಜ್ಞಾನ ಶಾಕುಂತಲಂ' |
| 2006 | ಪ್ರೊ. ಎಂ. ಎಚ್. ಕೃಷ್ಣಯ್ಯ | ಡಿ.ವಿ.ಜಿ.ಯವರ "ಜೀವನ ಧರ್ಮ ಯೋಗ" |
| 2007 | ಪ್ರೊ. ಎಲ್. ಎಸ್. ಶೇಷಗಿರಿರಾವ್ | ಕನ್ನಡ ಕಾದಂಬರಿಗಳಲ್ಲಿ ಸಾಮಾಜಿಕ ಮೌಲ್ಯ |
| 2008 | ಡಾ. ಎಸ್. ಎಲ್. ಭೈರಪ್ಪ | **ಸಾಹಿತ್ಯ ಮತ್ತು ಜೀವನದ ಇತರ ಮೌಲ್ಯಗಳು** |
| 2009 | ಡಾ. ಚೆನ್ನವೀರಕಣವಿ | "ವರಕವಿ ಬೇಂದ್ರೆ ಮತ್ತು ನಾನು: ಒಂದು ಸೃಜನಶೀಲ ಪ್ರತಿಕ್ರಿಯೆ" |
| 2010 | ಡಾ. ಕಮಲಾ ಹಂಪನಾ ಮತ್ತು ಡಾ. ಹಂಪ | ಆಚಾರ್ಯತ್ರಯರು |
| 2011 | ಪ್ರೊ. ಕೆ. ಎಸ್. ನಿಸಾರ್ ಅಹಮದ್ | ಆಧುನಿಕ ಸಾಹಿತ್ಯ |
| 2012 | ಡಾ. ಚಿದಾನಂದ ಮೂರ್ತಿ | ಆದಿ ಕವಿ ಪಂಪ |
| 2013 | ಡಾ.ಎಚ್.ಎಸ್.ವೆಂಕಟೇಶ ಮೂರ್ತಿ | ಆಧುನಿಕ ಕನ್ನಡ ಕಾವ್ಯ |
| 2014 | ಡಾ. ವಿವೇಕ್ ರೈ | ಶತಮಾನದ ಹಿನ್ನೆಲೆಯಲ್ಲಿ ಶಿವರಾಮ ಕಾರಂತರು ಮತ್ತು 'ಜರ್ಮನಿಯ<br>ಒಳಗಿಂದ – ರಂಗಭೂಮಿ ಮತ್ತು ಸಂಸ್ಕೃತಿ' |
| 2015 | ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ<br>ಮತ್ತು ಡಾ. ರಜನಿ ನರಹಳ್ಳಿ | ಸಮಕಾಲೀನ ಸಾಹಿತ್ಯ ಸಂದರ್ಭ |
| 2016 | ಡಾ. ಜಯಂತ್ ಕಾಯ್ಕಿಣಿ | ಕುವೆಂಪು; ಕವಿ ನೆನಪಿನ ಸವಿಯಾನ |

# ಮಧ್ಯಮವರ್ಗದ ಚರಿತ್ರೆಯನ್ನು ಹೇಳುವ ಕಾವ್ಯ; ಮೈಸೂರು ಮಲ್ಲಿಗೆ – ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ




ಕೆ. ಎಸ್. ನರಸಿಂಹಸ್ವಾಮಿಯವರು ನವೋದಯ, ನವ್ಯ ಪಂಥಗಳಿಗೆ ತಮ್ಮನ್ನು ಸೇರಿಸಿಕೊಳ್ಳದೆ ಭಿನ್ನವಾಗಿ ಬರೆದವರು. ಕೆ.ಎಸ್.ನ ಅವರು ಸಂಯಮಿ ಮತ್ತು ಸ್ವತಂತ್ರ ಬರಹಗಾರರು. ಶ್ರೇಷ್ಠವಾದ ಎಲ್ಲ ಕಾವ್ಯಗಳು ಜನಪ್ರಿಯವಾಗುವುದಿಲ್ಲ ಹಾಗೇನೇ ಜನಪ್ರಿಯವಾದ ಕಾವ್ಯಗಳು ಶ್ರೇಷ್ಠವಾದವುಗಳು ಅನ್ನುವ ಹಾಗಿಲ್ಲ. ಆದರೆ ಕೆ. ಎಸ್.ನ ಅವರ ಕಾವ್ಯ ಶ್ರೇಷ್ಠತೆ ಮತ್ತು ಜನಪ್ರಿಯತೆ ಎರಡನ್ನೂ ಪಡೆದಿದ್ದವು ಎನ್ನುವುದನ್ನು ಗಮನಿಸಬೇಕಾದದ್ದು ಎಂದು ನಾಡಿನ ಖ್ಯಾತ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ನುಡಿದರು. ಅವರು ದಿನಾಂಕ ಮಾರ್ಚ್ 28ರಂದು ಮೈಸೂರು ಅಸೋಸಿಯೇಷನ್ ಮುಂಬಯಿ ಮತ್ತು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯವು ಜಂಟಿಯಾಗಿ ಹಮ್ಮಿಕೊಂಡ ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಕೆ.ಎಸ್. ನರಸಿಂಹಸ್ವಾಮಿಯ ಅವರ ಕಾವ್ಯದ ಕುರಿತು ಮಾತನಾಡಿದರು.

ಕೆ. ಎಸ್. ನ ಅವರು ವಿಮರ್ಶಕರ ಮನ್ನಣೆಯನ್ನು ಪಡೆದ ಕವಿ. ಜನಮಾನಸದಲ್ಲಿ ವಿಶಿಷ್ಟಮನ್ನಣೆಯನ್ನು ಪಡೆದವರು. ಕನ್ನಡದಲ್ಲಿ ಅತ್ಯಂತ ಹೆಚ್ಚು ಮರುಮುದ್ರಣ ಪಡೆದ ಕವನ ಸಂಕಲನವೆಂದರೆ ಕೆ.ಎಸ್.ನ ಅವರು ಬರೆದ ಮೈಸೂರು ಮಲ್ಲಿಗೆ ಕವನ ಸಂಕಲನ. ಈ ಕೃತಿಗೆ 50ವರ್ಷ ತುಂಬಿದ ಸಂದರ್ಭದಲ್ಲಿ ಉತ್ಸವ ಆಚರಿಸಿದ್ದು ಬಹುಶಃ ಇದು ಕನ್ನಡ ಸಾಹಿತ್ಯದಲ್ಲಿ ಮೊದಲ ಬಾರಿಗೆ ನಡೆದ ದಾಖಲೆ ಎಂದು ಪರಿಗಣಿಸಬಹುದು. ಕೆ.ಎಸ್.ನ ಅವರ ಮೈಸೂರು ಮಲ್ಲಿಗೆ ಕವನ ಸಂಕಲನ ಸಿನಿಮಾ, ನಾಟಕಗಳಂತಹ ಬೇರೆ ಬೇರೆ ನೆಲೆಗಳಲ್ಲಿ ಪ್ರಭಾವಿಸಿದ್ದನ್ನು ಕಾಣಬಹುದು. ಕೆ.ಎಸ್.ನ ಅವರು ಶೃಂಗಾರವನ್ನು ಹದಗೆಡದ ರೀತಿಯಲ್ಲಿ ಬಳಸಿದ ಕವಿ. ಆಧುನಿಕ ಸಾಹಿತ್ಯದಲ್ಲಿ ಮೈಸೂರು ಮಲ್ಲಿಗೆಗೆ ಚಾರಿತ್ರಿಕ ಮಹತ್ವವಿದೆ. ಒಂದು ಸಂಧಿಕಾಲದ ಸಾಮಾಜಿಕ, ಸಾಂಸ್ಕೃತಿಕ ಬದುಕನ್ನು ಇದು ಚಿತ್ರಿಸುತ್ತದೆ. ಸಂಪ್ರದಾಯ ಮತ್ತು ಆಧುನಿಕತೆಯ ಬದುಕಿನ ಪಲ್ಲಟವನ್ನು ಈ ಕಾವ್ಯದಲ್ಲಿ ಕಾಣಬಹುದು. ಒಂದು ಕಾಲಘಟ್ಟದ ಚರಿತ್ರೆಯನ್ನು ಕಾವ್ಯದ ಮುಖೇನ ಕಟ್ಟಿಕೊಟ್ಟವರು ಕೆ.ಎಸ್.ನ ಅವರು. ಈ ಕಾವ್ಯ ಮಧ್ಯಮವರ್ಗದ ಚರಿತ್ರೆಯನ್ನು ಹೇಳುವ ಕಾವ್ಯ. ನರಸಿಂಹಸ್ವಾಮಿಯವರಲ್ಲಿ ಪ್ರೀತಿಯೆಂಬುದು ಒಂದು ಕವಿತೆಯಲ್ಲ ಅದು ಜೀವನತತ್ವವಾಗಿತ್ತು. ಸಂಪ್ರದಾಯ ಸಹಜ ಸಂತೋಷವನ್ನು ಹತ್ತಿಕ್ಕುತ್ತದೆ. ಸಮಾಜ ಪ್ರತಿಷ್ಠೆ ಮತ್ತು ಜಾತಿಯ ಹೆಸರಿನಲ್ಲಿ ಸಂತೋಷಕ್ಕೆ ಅಡ್ಡಗಾಲನ್ನು ಇಡುತ್ತದೆ. ಆದರೆ ಪ್ರೀತಿ ಯಾವಾಗಲೂ ಜೀವಪರವಾದುದು. ಪ್ರೀತಿಯನ್ನು ಕನ್ನಡದಲ್ಲಿ ಮೊದಲಬಾರಿಗೆ ಒಂದು ಸಿದ್ಧಾಂತವಾಗಿ ಮಂಡಿಸಿದರು ಕೆ.ಎಸ್.ನ ಅವರು. ಮೊದಲಬಾರಿಗೆ ಸ್ತ್ರೀಬಂಡಾಯದ ಧ್ವನಿಯನ್ನು ನರಸಿಂಹಸ್ವಾಮಿಯವರ ಕವಿತೆಯಲ್ಲಿ ಕಾಣುತ್ತೇವೆ. ಹೆಣ್ಣಿಗೂ ಒಂದು ವ್ಯಕ್ತಿತ್ವವಿದೆ ಅಂತ ಅವರು ತೋರಿಸಿಕೊಟ್ಟಿದ್ದಾರೆ.

ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎನ್. ಉಪಾಧ್ಯ ಪ್ರಾಸ್ತಾವಿಕವಾಗಿ ಮಾತನಾಡುತ್ತ, ನಾಡಿನ ಅನೇಕ ಹಿರಿಯ ಸಾಹಿತಿಗಳು ನಮ್ಮ ಈ ದತ್ತಿ ಉಪನ್ಯಾಸದಲ್ಲಿ ಪಾಲ್ಗೊಂಡಿದ್ದನ್ನು ನೆನಪು ಮಾಡಿಕೊಟ್ಟರು. ನಾಡಿನ ಖ್ಯಾತ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರನ್ನು ಸ್ವಾಗತಿಸಿ, ಅವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತಾದದ್ದು ನಮ್ಮ ಭಾಗ್ಯವೆಂದು ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ವಿದುಷಿ ಶ್ಯಾಮಲಾ ರಾಧೇಶ್ ಅವರ ಪ್ರಾರ್ಥನೆಯೊಂದಿಗೆ ಆರಂಭ ಮಾಡಲಾಯಿತು. ಡಾ. ಜ್ಯೋತಿ ಸತೀಶ್ ಕಾರ್ಯಕ್ರಮ ನಿರೂಪಿಸಿದರು, ನಾರಾಯಣ ನವಿಲೇಕರ್ ಅವರು ವಂದಿಸಿದರು. ಇದೇ ಸಂದರ್ಭದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ, ಸುಮತೀಂದ್ರ ನಾಡಿಗ ಅವರು ರಚಿಸಿರುವ "ಕೆ. ಎಸ್. ನರಸಿಂಹಸ್ವಾಮಿ" ಕೃತಿಯನ್ನು ಡಾ. ಜೀವಿ ಕುಲಕರ್ಣಿಯವರು ಬಿಡುಗಡೆಗೊಳಿಸಿದರು.



ಕಾರ್ಯಕ್ರಮದಲ್ಲಿ ಡಾ. ಮಂಜುನಾಥ್, ಕೆ. ಮಂಜುನಾಥಯ್ಯ, ಎಂ.ಎ.ಎನ್. ಪ್ರಸಾದ್, ಬಿ.ಎಸ್. ಕುರ್ಕಾಲ್, ಡಾ. ರಘುನಾಥ್, ಡಾ. ಗಿರಿಜಾಶಾಸ್ತ್ರಿ, ಶ್ರೀಮತಿ ರಜನಿ ನರಹಳ್ಳಿ, ಮೈಸೂರು ಶ್ರೀಧರ್, ಡಾ. ಮಮತಾರಾವ್, ಶ್ಯಾಮಲ ಮಾಧವ್, ಪೂರ್ಣಿಮಾ ಶೆಟ್ಟಿ, ರಮಾ ಉಡುಪ, ಮಧುಸೂದನ್, ಸುಗಂಧಾ ಸತ್ಯಮೂರ್ತಿ, ಸರೋಜಿನಿ ತರೆ, ಶೀಲಾ, ನಿರಂಜನ್ ಸಿ. ಎಸ್, ಶಿವರಾಜ್, ಪರಸಪ್ಪ ಮೊದಲಾದವರು ಉಪಸ್ಥಿತರಿದ್ದರು.

Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting:10/11th of every month
at Mumbai Patrika Channel Sorting Office G.P.O.

# ಬಂಗಾರ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮ





ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆಯು ಅತ್ಯಂತ ಜನಪ್ರಿಯ ಪ್ರಕಾರವಾಗಿ ಬೆಳೆಯುತ್ತಾ ಬಂದಿದೆ. ತಮ್ಮ ಸಣ್ಣ ಕಥೆಗಳ ಮೂಲಕ ಕನ್ನಡ ಸಾಹಿತ್ಯಲೋಕಕ್ಕೆ ಚಿರಪರಿಚಿತರಾಗಿರುವವರು ಡಾ। ಜಯಂತ ಕಾಯ್ಕಿಣೀಯವರು. ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಮತ್ತು ಮೈಸೂರು ಅಸೋಸಿಯೇಷನ್ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಜನವರಿ 16 ಮತ್ತು 17 ಎರಡು ದಿನ ಬಂಗಾರದ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆದಿತ್ತು.

ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ಖ್ಯಾತ ಸಾಹಿತಿ ಜಯಂತ್ ಕಾಯ್ಕಿಣಿಯವರು "ಕುವೆಂಪು – ಕವಿ ನೆನಪಿನ ಸವಿಯಾನ"ವನ್ನು ನೊದಲ ದಿವಸ ಸೊಗಸಾಗಿ ಮನಮುಟ್ಟುವಂತೆ ಮಾಡಿದರು. ಕುವೆಂಪುರವರ ವ್ಯಕ್ತಿತ್ವ, ಅವರ ರುಚಿಶುದ್ಧಿ, ಅವರ ಆಸಕ್ತಿ, ಅವರ ಮನೋಧರ್ಮ ಒಟ್ಟು ಅವರ ಸಾಹಿತ್ಯ ಚಿಂತನ ಮುಖಾಂತರವಾಗಿ ಕನ್ನಡ ಸಾಹಿತ್ಯದ ಹಿರಿಮೆ ಗರಿಮೆ ಎಲ್ಲವನ್ನು ನಮ್ಮ ಮುಂಡೆ ತೆರೆದು ಇಟ್ಟಿದ್ದರು.

ಡಾ। ಮಮತಾರಾಅವ್ ಅವರ "ಜಯಂತ ಕಾಯ್ಕಿಣೀ ಅವರ ಕಥನಾವರಣ" ಕೃತಿಯನ್ನು ಡಾ।ವ್ಯಾಸರಾಯ ನಿಂಜೂರು ಮತ್ತು ಡಾ। ಜಯಂತ್ ಕಾಯ್ಕಿಣೀಯವರು ಬಿಡುಗಡೆಗೊಳಿಸಿದರು. "ನಾನು ಮತ್ತು ನನ್ನ ಸಾಹಿತ್ಯ"ದ ಬಗ್ಗೆ ಜಯಂತ್ ಕಾಯ್ಕಿಣಿಯವರು ಮಾತನಾಡುತ್ತಾ "ನಾನು ಎಂದೂ ಕಥೆಯನ್ನು ಬರೆಯಬೇಕೆಂದು ಬರೆದವನಲ್ಲ, ದೈನಂದಿನ ಚಟುವಟಿಕೆಗಳಲ್ಲಿ ಸಿಗುವ ವಸ್ತುಗಳೇ ಕೆಲವೊಮ್ಮೆ ಕಥೆಯಾಗಿ ಮಾರ್ಪಾಡುಗೊಳ್ಳುತ್ತಿತ್ತು. ನನ್ನ ತಂದೆ ಡಾ। ಗೌರೀಶ್ ಕಾಯ್ಕಿಣೀಯವರು ತೀರಿದ ನಂತರ ಅವರನ್ನು ಅವರ ಸಾಹಿತ್ಯದಿಂದ ಹುಡುಕಲು ಪ್ರಯತ್ನಿಸಿದಾಗ, ಅವರ ಸಾಹಿತ್ಯ ನನ್ನ ಮೇಲೆ ಪ್ರಭಾವ ಬೀರಿತು" ಎಂದರು.

"ಒಮ್ಮೆ ಬೆಂಗಳೂರಿಗೆ ಸಾಹಿತ್ಯ ಪರಿಷತ್ತಿನ ಸನ್ಮಾನ ಕಾರ್ಯಕ್ರಮದ ನಿಮಿತ್ತ ತಂದೆಯವರನ್ನು ಆಮಂತ್ರಿಸಿದ್ದರು. ಕ್ಷಮಿಸಿ, ನನ್ನ ವಿದ್ಯಾರ್ಥಿಯೊಬ್ಬನ ದೋಣಿಯೊಂದರ ಬಿಡುಗಡೆಯ ಕಾರ್ಯಕ್ರಮಕ್ಕೆ ಹೋಗಲು ಒಪ್ಪಿರುವುದರಿಂದ ಬರಲಾಗುವುದಿಲ್ಲ ಎಂದು ಕಾರ್ಡು ಬರೆದರು. ಅವರು ಯಾವತ್ತೂ ಸಂಘ ಸಂಸ್ಥೆಗಳ ಸನ್ಮಾನವನ್ನು ಬಯಸಿದವರಲ್ಲ. ಜಂಗಮ ಸಂಸ್ಕೃತಿಯನ್ನು ಸದಾ ಮೆಚ್ಚಿದವರು" ಎಂದು ಹೇಳುತ್ತ ತಂದೆಯವರನ್ನು ನೆನೆಸಿಕೊಂಡರು.

"ಪುಸ್ತಕದ ಆಚೆ ಬದುಕಿದೆ ಎಂದು ತಿಳಿಸಿಕೊಟ್ಟವರು ಸೋದರ ಮಾವ ವೆಂಟೇಕರ್ ಸರ್. ಪ್ರಾಥಮಿಕ ಹಂತದಲ್ಲಿಯೇ ವಿಭಿನ್ನವಾದ ಶಿಕ್ಷಣ ಶೈಲಿಯಿಂಡ ಜೀವನವನ್ನು ಹೇಗೆ ರೂಪಿಸಿಕೊಳ್ಳಬೇಕೆಂದು ಉದಾಹರಣೆ ಸಹಿತವಾಗಿ ತಿಳಿಸಿಕೊಡುತ್ತಿದ್ದರು. ಸತ್ಯ ಘಟನೆಗಳನ್ನು ತೋರಿಸುತ್ತಾ, ಅದರ ಕುರಿತು ಪ್ರಬಂಧ ಬರೆಯಲು ತಿಳಿಸಿ, ಅದಕ್ಕೆ ಮಾರ್ಕು ಕೊಡುತ್ತಿದ್ದರು. ಹಾಗೆಯೇ ವರ್ಷದ ಆರಂಭದಲ್ಲಿ ಒಂದು ಖಾಲಿ ಶೀಟು ಕೊಟ್ಟು, ವರ್ಷದ ಅಂತ್ಯದಲ್ಲಿ ಆ ಶೀಟು ಎಷ್ಟು ನೀಟಾಗಿದೆ ಅದರ ಆಧಾರದ ಮೇಲೆ ಮಾರ್ಕು ಕೊಡುತ್ತಿದ್ದರು" ಎಂದು ತನ್ನ ಗುರುಗಳು ಕಲಿಸಿಕೊಡುತ್ತಿದ್ದ ಪಾಠವನ್ನು ಮೆಲುಕು ಹಾಕಿದರು. "ಮತ್ತೆ ನಮ್ಮ ಊರಿನಲ್ಲಿ ವಾಮನ ಪೈ ಇದ್ದ, ಅವನನ್ನು ಎಲ್ಲರೂ ಮಳ್ಳ, ಹುಚ್ಚ ಎಂದು ಕರೆಯುತ್ತಿದ್ದರು. ಆದರೆ ಅವನು ಎಲ್ಲರಿಗಿಂತ ಬುದ್ಧಿವಂತ. ಪ್ರತಿದಿವಸ ಅವನು ಪೂರ್ವದಿಕ್ಕಿಗೆ ಮುಖ ಮಾಡಿ ನಿಲ್ಲು ನಿಂತಿದ್ದ. ನಂತರ ಆಕಾಶ ನೋಡಿ, "ಬಾ, ಬಾ" ಅಂದಾಗ ಸೂರ್ಯ ಬಂದು ಬಿಡೂತ್ತಿದ್ದ. ಸಂಜೆ ಸಮುದ್ರ ದಂಡೆಗೆ ಹೋಗಿ, ಹೋಗಲಿ, get out, I say go" ಎಂದು ಸೂರ್ಯ ಮುಳುಗಿತ್ತಿದ್ದ. ಇಂತಹ ಮುಗ್ಧ ಮನಸ್ಸುಗಳೇ ನನ್ನ ಸಾಹಿತ್ಯದ ಬರವಣಿಗೆಗೆ ಪ್ರೇರಣೆಯಾಯಿತು" ಎಂದು ಹೇಳಿದರು. "ನನ್ನ ಸಾಹಿತ್ಯದಲ್ಲಿ, ಕಥೆಗಳಲ್ಲಿ, ಆಸ್ಪತ್ರೆಯ ಬಗ್ಗೆ ಹೆಚ್ಚು ಹೇಳಿರುತ್ತೇನೆ. ಯಾಕೆಂದರೆ ಒಬ್ಬ ವ್ಯಕ್ತಿಯ ನೋವನ್ನು, ಇನ್ನೊಬ್ಬ ವ್ಯಕ್ತಿ ಅರ್ಥ ಮಾಡಿಕೊಳ್ಳುವುದು ಆಸ್ಪತ್ರೆಯಲ್ಲಿ ಮಾತ್ರ ಸಾಧ್ಯ. ಅದು ನನಗೆ spiritual place ಆಗಿದೆ. ನನಗೆ ಕಾದಾಂಬರಿ, ಬರೆಯಬೇಕೆಂಬ ಕನಸು, ಇದೆ. ಆ ಸಾಧನೆಯನ್ನು ಕೂಡಾ ಮುಂದೆ ಮಾಡುವೆ" ಎಂದು ಜಯಂತರು ತಮ್ಮ ಗುಣಾತ್ಮಕ್ಕೆ ಅಭಿಪ್ರಯವನ್ನು ವ್ಯಕ್ತಪಡಿಸಿದರು.

"ಸಿನಿಮಾ ರಂಗದಲ್ಲಿ ಡಾ। ರಾಜಕುಮಾರರ ವ್ಯಕ್ತಿತ್ವ ನನ್ನ ಮೇಲೆ ತುಂಬಾ ಪ್ರಭಾವ ಬೀರಿತು. ಸಿನಿಮಾ ಗೀತೆಗಳನ್ನು ಬರೆಯುವುದು ತುಂಬಾ ಕಷ್ಟದ ಕೆಲಸ. ಇನ್ನೂ ಅನುವಾದ ಕೆಲಸವನ್ನು ಸ್ವಲ್ಪ ಮಟ್ಟಿಗೆ ಮಾಡಿರುವೆ. ಮರಾಠಿಯಿಂದ ಕನ್ನಡಕ್ಕೂ ಮಾಡಿರುವೆ. ಲೇಖಕರು ತಮ್ಮ ತಮ್ಮ ಬರವಣಿಗೆಯ ಭಾಷೆಯಲ್ಲಿ ಅನುವಾದದ ಕೆಲಸವನ್ನು ಮಾಡಿದರೆ ಉತ್ತಮವಾಗಿರುತ್ತದೆ" ಎಂದು ಕವಿ ಮಾತನ್ನು ತಿಳಿಸಿದರು.

"ಹಕ್ಕಿಗಳಿಗೆ ನೀರಿಲ್ಲ, ಹಕ್ಕಿ ಸಾಯುತ್ತವೆ. ನಿಮ್ಮ ಕಿಟಕಿಯಲ್ಲಿ ಒಂದು ಲೋಟ ನೀರು ಇಡಿ. ಒಂದು ಲೋಟ ನೀರು ಇಡಿ. ಒಂದು ಹಕ್ಕಿ ಬದುಕಿ ಉಳಿಯುತ್ತದೆ ಎಂದು ಬರ್ದು 20 ಜನರಿಗೆ ಪಾರ್ವರ್ಡ್ ಮಾಡುತ್ತಾರೆ. ಅದನ್ನು ಅವರು ಕೆಲವು ಜನರಿಗೆ ಮೆಸೇಜ್ ಮಡುತ್ತಾರೆ. ಪಾರ್ವರ್ಡ್ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋಗುತ್ತದೆ. ಗುಬ್ಬಿಗೆ ತಟ್ಟೆಯಲ್ಲಿ ನೀರಿಡುವವರ ಸಂಖ್ಯೆ ಕಾಣುವುದೇ ಇಲ್ಲ. ಅದರ ಬದಲು ಆ ಕಾರ್ಯವನ್ನು ಕಾರ್ಯರೂಪಕ್ಕೆ ತಂದರೆ ಪ್ರಕೃತಿಗೆ ಒಂದು ಕೊಡುಗೆ ನೀಡಿದಾಗೆ ಆಗುತ್ತದೆ ಎಂದು ಸಮಾಜಕ್ಕೆ ಒಂದು ಸಂದೇಶವನ್ನು ನೀಡಿದರು.

"ಮಾನವೀಯ ಸತ್ಯವನ್ನು ಮನಗಾಣುವುದೇ ಲೇಖಕನ ಧರ್ಮ. ಲೇಖಕ ಯಾವ ಪಕ್ಷಪಾತಕ್ಕೆ ಸೇರಿದವನಲ್ಲ. ಅವನು ಮನುಜ ಪಕ್ಷಪಾತಿ. ಮನುಷ್ಯನಿಗಾಗಿ ಚಿಂತನೆ ಮಾಡುತ್ತಾನೆ" ಎಂದು ಲೇಖಕನ ಮನೋಧರ್ಮವನ್ನು ತಿಳಿಸಿದರು.

"ಇಂದು ಸಂಸ್ಕೃತಿ ತುಂಬಾ ಸುಲಭವಾದ ಶಬ್ಧವಾಗಿದೆ. ವರ್ತಮಾನ ಲೋಕದ ಭಾವ ಪ್ರಪಂಚವೇ ಸಂಸ್ಕೃತಿ" ಎಂದು ಬೇಂದ್ರೆಯವರು ಒಂದು ಕಡೆ ತಿಳಿಸಿರುವರು. ಇವತ್ತಿನ ವ್ಯಕ್ತ – ಅವ್ಯಕ್ತವನ್ನು , ಇವತ್ತಿನ ಶ್ರಾವ್ಯ–ಅಶ್ರಾವ್ಯವನ್ನು, ಇವತ್ತಿನ ದೃಶ್ಯ–ಅದೃಶ್ಯವನ್ನು ಉದ್ದೀಪಸಬೇಕು" ಎಂದು ಸಂಸ್ಕೃತಿಯ ಮಹತ್ವದ ಬಗ್ಗೆ ತಿಳಿಸಿರುವರು.

ಈ ರೀತಿ ಜಯಂತ್ ಕಾಯ್ಕಿಣಿಯವರು ತಮ್ಮ ಸಾಹಿತ್ಯ ಹುಟ್ಟಿ ಬಂದ ರೀತಿ, ಪ್ರೇರಣೆ, ಅನುಭವ, ಅನಿಸಿಕೆಗಳನ್ನು ಹಂಚಿಕೊಂಡರು. "ಸಾಹಿತ್ಯವೆಂದರೆ ಕೇವಲ ಬರವಣಿಗೆ ಮಾತ್ರವಲ್ಲ, ಓದು ಮುಖ್ಯ, ಅಂತ ಮಹತ್ವದ ಒಂದು ಮಾತನ್ನು ಹೇಳುತ್ತಾ ಅಲ್ಲಿ ನೆರೆದಿದ್ದ ಸಾಹಿತ್ಯ ಅಭಿಮಾನಿಗಳಿಗೆ, ಸಾಹಿತ್ಯ ವಿದ್ಯಾರ್ಥಿಗಳಿಗೆ ಹೆಚ್ಚು ಓದುವಂತೆ ಪ್ರೇರೆಪಿಸಿದರು. ಈ ಕಾರ್ಯಕ್ರಮದ ಸ್ವಾಗತ ಪ್ರಸ್ತಾಪನೆಯನ್ನು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಮುಖ್ಯಸ್ಥ ಡಾ। ಜಿ. ಎನ್. ಉಪಾಧ್ಯ ಮಾಡಿದರು. ಡಾ। ಪೂರ್ಣಿಮಾ ಶೆಟ್ಟಿ ಮತ್ತು ಕನ್ನಡ ವಿಭಾಗ ಸಂಶೋಧನಾ ಸಹಾಯಕಿ ರಮಾ ಉಡುಪರವರು ಕಾರ್ಯಕ್ರಮವನ್ನು ನಿರೂಪಣ ಮಾಡಿದರು.

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361